ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಬೆಂಗಳೂರು, ಬುಧವಾರ ೮ನೇ ಜೂನ್ ೧೯೮೮, ಜ್ಯೇಷ್ಠ ೧೮, ೧೯೧೦ ಶಕ

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ ೯ ಗಂಟೆ ೪೨ ನಿಮಿಷಕ್ಕೆ ಸಮಾವೇಶಗೊಂಡಿತು.

ಸಭಾಧ್ಯಕ್ಷರಾದ ಶ್ರೀ ಬಿ.ಜಿ. ಬಣಕಾರ್‌ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು

ವಿತ್ತೀಯ ಕಾರ್ಯಕಲಾಪಗಳು

೧೯೮೮-೮೯ನೇ ಸಾಲಿಗೆ ಸಂಬಂಧಿಸಿದ ಅನುದಾನಗಳ ಬೇಡಿಕೆಗಳ ಮೇಲಿನ ಚರ್ಚೆ

ಅಧ್ಯಕ್ಷರು.—ಈಗ ಮಾನ್ಯ ಸಹಕಾರ ಮಂತ್ರಿಗಳಿಂದ ಉತ್ತರ.

ಶ್ರೀ ಹೆಚ್. ಏಕಾಂತಯ್ಯ (ಸಹಕಾರ ಮಂತ್ರಿಗಳು).—ಸನ್ಮಾನ್ಯ ಸಭಾಧ್ಯಕ್ಷರೇ ಸಹಕಾರ ಇಲಾಖೆಯ ಬೇಡಿಕೆಗಳ ಬಗ್ಗೆ ಚರ್ಚೆಯನ್ನು ಆರಂಭಿಸಿದಂಥ ಹಿರಿಯ ಸಹಕಾರಿಗಳೂ ಹಾಗೂ ಹಿರಿಯ ಸದಸ್ಯರೂ ಆದಂಥ ಶ್ರೀ ಕೆ. ಹೆಚ್. ಪಾಟೀಲರು ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಸರಕಾರದ ಸಾಮಾಜಿಕ ಆರ್ಥಿಕ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಲ್ಲಿ ಸಹಕಾರ ಸಂಘಗಳ, ಸಹಕಾರ ಕ್ಷೇತ್ರದ ಪ್ರಾಮುಖ್ಯತೆ ಬಗ್ಗೆ ಗಾಂಧೀಜಿ ಮತ್ತು ನೆಹರೂರವರ ಮಾತನ್ನು ಹೇಳುತ್ತಾ, ಅನೇಕ ವಿಚಾರಗಳನ್ನು ಅವರು ಪ್ರಸ್ತಾಪ ಮಾಡಿದ್ದಾರೆ. ಅವರು ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ಮಾಡಿದ ಎಲ್ಲ ಅಂಶಗಳನ್ನೂ ನಾನು ನನ್ನ ಭಾಷಣದ ಕೊನೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಮೊದಲನೆಯದಾಗಿ ಮಾತನಾಡಿದಂಥ ಕೆ. ಹೆಚ್. ಪಾಟೀಲರು ಸಹಕಾರ ಮಂತ್ರಿಗಳಾಗಲೀ, ಸಹಕಾರಿ ಅಧಿಕಾರಿಗಳಾಗಲೀ ಕೇವಲ ರೆಕಾರ್ಡ್ ಆಫೀಸರ್‌ಗಳಾಗಬಾರದು, ಅದೇ ರೀತಿ ಪ್ರಾಸಿಕ್ಯೂಟರ್‌ಗಳೂ ಆಗಬಾರದು, ಅದರ ಬದಲಾಗಿ ಅವರು ಸಹಕಾರಿಗಳ ಫ್ರೆಂಡ್, ಫಿಲಾಸಫರ್ ಮತ್ತು ಗೈಡ್ ಆಗಬೇಕೆಂಬ ಮಾತನ್ನು ಹೇಳಿದ್ದಾರೆ. ಈ ಎಲ್ಲಾ ಅಂಶಗಳನ್ನೂ ನಾನು ನನ್ನ ಉತ್ತರದ ಕೊನೆಯ ಭಾಗದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ.

ಸನ್ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಹಿರಿಯ ಸದಸ್ಯರು ಮಾತನಾಡುತ್ತಾ, ೧೯೮೭-೮೮ನೇ ಏನು ಹಣವನ್ನು ಖರ್ಚು ಮಾಡಿದ್ದೇವೆ, ಅದು ಬಹಳ ಕಡಿಮೆ ಇದೆ ಎಂಬ ಮಾತನ್ನು ಹೇಳಿದ್ದಾರೆ. ನಾನು ಈ ವಿಚಾರವಾಗಿ ಮೊದಲು ಪ್ರಸ್ತಾಪ ಮಾಡುತ್ತಾ, ೧೯೮೭-೮೮ನೇ ಸಾಲಿನಲ್ಲಿ ಸಹಕಾರ ಇಲಾಖೆಯಲ್ಲಿ ಖರ್ಚು ಮಾಡಿದ ಹಣ ಏನಿದೆ ಅದರ ಬಗ್ಗೆ ಹೇಳುತ್ತೇನೆ. ಸಹಕಾರ ಇಲಾಖೆಗೆ ೯೪೪ ಲಕ್ಷ ರೂಪಾಯಿಗಳನ್ನು ಇಟ್ಟಿದ್ದು, ಅದರಲ್ಲಿ ೯೩೬ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ, ವ್ಯವಸಾಯ ಆರ್ಥಿಕ ಸಂಸ್ಥೆಗಳಿಗೆ ೨೨೦ ಲಕ್ಷ ರೂಪಾಯಿಗಳನ್ನು ಮೀಸಲಾಗಿ ಇಟ್ಟಿದ್ದರೂ, ೨೩೬ ಲಕ್ಷ ರೂಪಾಯಿಗಳನ್ನು ನಾವು ಖರ್ಚು ಮಾಡಿರುತ್ತೇವೆ. ಕೇಂದ್ರ ವಲಯದ ಯೋಜನೆಯಲ್ಲಿ ೧೫೪ ಲಕ್ಷ ರೂಪಾಯಿಗಳ ಪೈಕಿ ಕೇವಲ ೩೪.೫೫ ಲಕ್ಷ ರೂಪಾಯಿಗಳನ್ನು ನಾವು ಖರ್ಚು ಮಾಡಿದ್ದೇವೆ ಎಂಬ ಮಾತನ್ನು ಹೇಳಿದ್ದಾರೆ.

ಈ ತಪ್ಪು ನಮ್ಮಿಂದ ಆಗಿಲ್ಲ. ಏತಕ್ಕೆ ಹಣ ಖರ್ಚು ಮಾಡಿಲ್ಲವೆಂದರೆ ನಾವು ಕೇಂದ್ರ ಸರ್ಕಾರದ ಮಂಜೂರಾತಿಗಾಗಿ ಸುಮಾರು ೩೯ ಪ್ರಸ್ತಾವನೆಗಳನ್ನು ಒಟ್ಟು ೭೯.೩೩ ಲಕ್ಷ ರೂಪಾಯಿ

ಗಳಿಗೆ ಕಳುಹಿಸಿಕೊಟ್ಟಿದ್ದರ ಪೈಕಿ ಕೇಂದ್ರ ಸರ್ಕಾರ ಕೇವಲ ೧೮;೫೫ ಲಕ್ಷ ರೂಪಾಯಿಗಳು ಮಾತ್ರ ಬಿಡುಗಡೆ ಮಾಡಿತು ಹಾಗೂ ವ್ಯವಸಾಯ ಸ್ಥಿರೀಕರಣನಿಧಿ ಯೋಜನೆಯಲ್ಲಿ ನಾವು ೧೦೦ ಲಕ್ಷ ರೂಪಾಯಿಗಳ ಒಂದು ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದು ಅದರಲ್ಲಿ ಕೇಂದ್ರ ಸರ್ಕಾರ ಕೇವಲ ೨೦ ಲಕ್ಷ ರೂಪಾಯಿಗಳನ್ನು ಮಾತ್ರ ಬಿಡುಗಡೆ ಮಾಡಿತು. ಆದ್ದರಿಂದ ನಾವು ೩೮,೫೫ ಲಕ್ಷ ರೂಪಾಯಿಗಳನ್ನು ಮಾತ್ರ ನಾವು ಈ ಒಂದು ಯೋಜನೆಯಲ್ಲಿ ಖರ್ಚು ಮಾಡುವುದಕ್ಕೆ ಸಾಧ್ಯವಾಯಿತು ಆದೇ ರೀತಿ ಕೇಂದ್ರ ಪರಿಷ್ಕೃತ ಯೋಜನೆಯಲ್ಲಿ ೬೯.೭೯ ಲಕ್ಷ ರೂಪಾಯಿಗಳಲ್ಲಿ ನಾವು ಖರ್ಚು ಮಾಡಿದ್ದು ಕೇವಲ ೨.೭೫ ಲಕ್ಷ ರೂಪಾಯಿಗಳು ಮಾತ್ರವೆಂದು ತಾವು ಹೇಳಿದಿರಿ, ಅದು ನಿಜ. ನಾವು ಕೇಂದ್ರ ವಲಯ ಯೋಜನೆಯಲ್ಲಿ ಒಟ್ಟು ಎರಡು ಯೋಜನೆಗಳಲ್ಲಿ ೪ ಪ್ರಸ್ತಾವನೆಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದು ಇದರಲ್ಲಿ ೨೦.೧೨ ಲಕ್ಷ ರೂಪಾಯಿಗಳ ಯೋಜನೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದರು ಸಹ ನಮಗೆ ಅಲ್ಲಿಂದ ಹಣ ಬಿಡುಗಡೆ ಆಗಲಿಲ್ಲ, ಈ ವಲಯದಲ್ಲಿ ನಾವು ಹಣ ಖರ್ಚು ಮಾಡುವುದಕ್ಕೆ ಸಾಧ್ಯವಾಗಲಿಲ್ಲವೆಂದು ಮಾನ್ಯ ಕೆ. ಹೆಚ್. ಪಾಟೀಲ್‌ರವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇ ರೀತಿ ಮಾನ್ಯ ಸದಸ್ಯರು ಮಾತನಾಡುತ್ತಾ ಹೇಳಿದರು. ಕೃಷಿ ಸಹಕಾರ ಸಂಘದ ಯೋಜನೆಯಡಿಯಲ್ಲಿ ೭೫ ಲಕ್ಷ ರೂಪಾಯಿಗಳು ಗುರಿ ಇಟ್ಟುಕೊಂಡಿದ್ದೀರಿ ಅದನ್ನು ಸಹ ಸಾಧಿಸಲು ಆಗಲಿಲ್ಲವೆಂದು, ಆದರೆ ನಾವು ಸುಮಾರು ೬೩ ಲಕ್ಷ ರೂಪಾಯಿಗಳನ್ನು ಈ ಯೋಜನೆಯಡಿಯಲ್ಲಿ ಖರ್ಚು ಮಾಡಿದ್ದೇವೆ. ಸುಮಾರು ೪೩ ಪ್ರಸ್ತಾವನೆಗಳನ್ನು ೧೯೩.೨೪ ಲಕ್ಷ ರೂಪಾಯಿಗಳ ಯೋಜನೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೇವೆ. ಆದ್ದರಿಂದ ಇದರಲ್ಲಿ ನಮ್ಮ ಒಂದು ತಪ್ಪು ಏನೂ ಇಲ್ಲ. ಆದರೆ ನಾವು ಹಾಕಿಕೊಂಡಿದ್ದ ಗುರಿ ಸಾಧಿಸಲಾಗಲಿಲ್ಲ ಆದರೂ ಕೆಲಸ ನಿಂತಿಲ್ಲ ಎನ್ನುವ ಮಾತನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ತದನಂತರ ಮಾತನಾಡಿದಂತಹ ಸಂದರ್ಭದಲ್ಲಿ ಕೆಲವು ಮುಖ್ಯವಾದ ವಿಚಾರಗಳನ್ನು ಪ್ರಸ್ತಾಪ ಮಾಡುತ್ತಾ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಸಹಕಾರ ಸಂಘಗಳ ಬಗ್ಗೆ ಮಾನ್ಯ ಸದಸ್ಯರು ಮಾತನಾಡಿದರು. ನಮ್ಮ ರಾಜ್ಯದಲ್ಲಿ ಸುಮಾರು ೪೮೧೧ ಸಹಕಾರ ಸಂಘಗಳಿವೆ. ನಮ್ಮಲ್ಲಿ ಗ್ರಾಮೀಣ ಅಭಿವೃದ್ಧಿ ಸಹಕಾರ ಸಂಘಗಳು ಸಹ ಇವೆ. ಇವು ಎಷ್ಟರ ಮಟ್ಟಿಗೆ ಕೆಲಸ ಮಾಡುತ್ತಿವೆ ಎನ್ನುವ ಮಾತನ್ನು ಹೇಳುತ್ತಾ ಗ್ರಾಮೀಣ ಪ್ರದೇಶದ ಜನರಿಗೆ ಮುಖ್ಯವಾಗಿ ಕೃಷಿಗೆ ಬೇಕಾದಂತಹ ಸಾಲ ಸೌಲತ್ತುಗಳನ್ನು ಸಮರ್ಥ ರೀತಿಯಲ್ಲಿ ಈ ಗ್ರಾಮೀಣ ಪತ್ತಿನ ಸಹಕಾರ ಸಂಘಗಳು ಒದಗಿಸಿಕೊಡುತ್ತಿಲ್ಲವೆನ್ನು ಮಾತನ್ನು ಹೇಳಿದರು. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಸುಮಾರು ೪೮೦೦ ಪ್ರಾಥಮಿಕ ಸಹಕಾರ ಸಂಘಗಳು ಗ್ರಾಮಾಂತರ ಪ್ರದೇಶದಲ್ಲಿರತಕ್ಕ ರೈತರ ಉತ್ಪಾದನೆಗೆ ಅವಶ್ಯಕವಾದ ಹಣವನ್ನು ಕೊಡುವುದಕ್ಕೆ ಸಾಧ್ಯವಾಗಿಲ್ಲ ಇದಕ್ಕೆ ಕಾರಣವೇನು ಎನ್ನುವುದನ್ನು ನಾನು ಈ ಸದನದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಕಳೆದ ಹಲವಾರು ವರ್ಷಗಳಿಂದ ಇದ್ದಂತಹ ಅಭಾವ ಪರಿಸ್ಥಿತಿಯಿಂದ ಸಾಲ ವಸೂಲಾತಿ ಕೆಲಸ ಸಂಪೂರ್ಣವಾಗಿ ನಿಂತು ಹೋಯಿತು. ವಸೂಲಾತಿ ನಿಂತು ಹೋಗಿದ್ದರಿಂದ ಹೆಚ್ಚು ಸಾಲ ವಿತರಣಾಶಕ್ತಿ ಪಡೆದುಕೊಳ್ಳಲು ಆಗಲಿಲ್ಲ ಮತ್ತು ಹೆಚ್ಚು ಸಾಲ ಸೌಲತ್ತುಗಳನ್ನು ಕೊಡಲು ಸಾಧ್ಯವಾಗಲಿಲ್ಲ. ೧೯೭೪-೧೯೭೫, ೧೯೭೫-೧೯೭೬, ೧೯೭೬-೧೯೭೭, ೧೯೭೭ನೇ ಸಾಲಿನಿಂದ ಹಣ ವಿತರಣೆ ಮೊತ್ತವನ್ನು ನಾವು ತೆಗೆದುಕೊಂಡರೆ ಹೆಚ್ಚು ಹಣ ಈ ಪ್ರಾಥಮಿಕ ಪತ್ತಿನ ಸಹಕಾರ ಸಂಘಗಳಿಂದ ಮತ್ತು ಕೃಷಿ ಗ್ರಾಮೀಣ ಅಭಿವೃದ್ಧಿ ಬ್ಯಾಂಕ್‌ಗಳಿಂದ ಕೊಡುವುದಕ್ಕೆ ಸಾಧ್ಯವಾಗಿದೆ. ಆದರೆ ಪ್ರಾಥಮಿಕ ಕೃಷಿ ಅಭಿವೃದ್ಧಿ ಬ್ಯಾಂಕ್‌ಗಳಿಂದ ನಾವು ಸ್ವಲ್ಪ ಮಟ್ಟಿಗೆ ಕಡಿಮೆ ಹಣವನ್ನು ಕೊಟ್ಟಿದ್ದೇವೆನ್ನುವ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ, ಆದರೆ ಒಟ್ಟಾರೆ ಮೊತ್ತವನ್ನು ಗಮನಿಸಿದಾಗ ನಾವು ಪ್ರಾಥಮಿಕ ಸಹಕಾರ ಸಂಘಗಳಿಂದ ಮತ್ತು ಪ್ರಾಥಮಿಕ ಕೃಷಿ ಗ್ರಾಮೀಣ ಅಭಿವೃದ್ಧಿ ಬ್ಯಾಂಕ್‌ಗಳಿಂದ ಹೆಚ್ಚಿನ ಮೊತ್ತದ ಹಣ ಕೊಟ್ಟಿದ್ದೇವೆ. ಈ ಮೊತ್ತ ವರ್ಷೇ ವರ್ಷೇ ಹೆಚ್ಚಾಗಿದೆ. ಸನ್ಮಾನ್ಯ ಅಧ್ಯಕ್ಷರೇ ೧೯೭೮-೭೯ನೇ ಸಾಲನ್ನು ನಾವು ತೆಗೆದುಕೊಂಡಾಗ ಇನ್ನು ಹೆಚ್ಚು ಹಣವನ್ನು ಕೊಡುವಂತಹ ಶಕ್ತಿಯನ್ನು ನಾವು ಪಡೆದುಕೊಂಡಿದ್ದೇವೆ ಸರ್ಕಾರ ಈಗಾಗಲೇ ಜಾರಿ ಮಾಡಿದಂತಹ ಎರಡು ಬಡ್ಡಿ ರಿಯಾಯಿತಿ ಆದೇಶಗಳಿಂದಾಗಿ ರೈತರಿಂದ ನಮಗೆ ಬರಬೇಕಾಗಿದ್ದ ಸಾಲ ಹೆಚ್ಚು ಪ್ರಮಾಣದಲ್ಲಿ ವಸೂಲಾತಿಯಾಗಿದೆ. ಈ ಸಹಾಯವನ್ನು ರೈತರು ಸರಿಯಾಗಿ ಉಪಯೋಗಿಸಿಕೊಂಡಿದ್ದಾರೆ. ಇದರಿಂದ ನಾವು ಈ ಸಾರಿ ರೈತರಿಗೆ ಹೆಚ್ಚು ಸಾಲ ಕೊಡುವಂತಹ ಶಕ್ತಿಯನ್ನು ಸಹಕಾರಿ ಸಂಘಗಳು ಪಡೆದುಕೊಂಡಿವೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸು

ತ್ತೇನೆ. ಇನ್ನು ೧೯೮೭-೮೮ನೇ ಸಾಲಿನ ವಸೂಲಾತಿಯನ್ನು ಗಮನಿಸಿದಾಗ ಸಾಲ ವಸೂಲಾತಿ ಪ್ರಮಾಣ ನಾವು ನಿರೀಕ್ಷಿಸಿದ್ದಕ್ಕಿಂತ ಜಾಸ್ತಿ ವಸೂಲಿಯಾಗಿದೆ. ಅಲ್ಪಾವಧಿ ಮತ್ತು ಮಧ್ಯಮಾವಧಿ ಸಾಲಗಳು ಶೇಕಡ ೫೦ರಷ್ಟು ಈಗಾಗಲೇ ನಾವು ವಸೂಲಿ ಮಾಡಿದ್ದೇವೆ. ದೀರ್ಘಾವಧಿ ಸಾಲವನ್ನು ನಾವು ೩೦-೫-೮೮ಕ್ಕೆ ತೆಗೆದುಕೊಂಡರೆ ಅದು ಸಹ ಶೇಕಡ ೬೮ರಷ್ಟು ಸಾಲ ವಸೂಲಾತಿಯಾಗಿದೆ. ದಿನಾಂಕ ೩೦-೬-೮೮ಕ್ಕೆ ಅಲ್ಪಾವಧಿ ಮತ್ತು ಮಧ್ಯಮಾವಧಿ ಸಾಲ ಇನ್ನು ಹೆಚ್ಚಿನ ಪ್ರಮಾಣದಲ್ಲಿ ವಸೂಲು ಆಗುವ ನಿರೀಕ್ಷೆ ಇದೆ.

ಅದೇ ರೀತಿಯಾಗಿ ಪ್ರಾಥಮಿಕ ಕೃಷಿ ಹಾಗೂ ಗ್ರಾಮೀಣ ಬ್ಯಾಂಕುಗಳು ಏನು ಇವೆ, ಅವುಗಳ ಮುಖಾಂತರ ಕೊಟ್ಟಿರುವ ಸಾಲವನ್ನು ೧೯೮೭-೮೮ನೇ ವರ್ಷದ ಕೊನೆಯಲ್ಲಿ ಕನಿಷ್ಠ ೭೫ ಪರ್ಸೆಂಟ್ ನಷ್ಟಾದರೂ ವಸೂಲು ಮಾಡತಕ್ಕ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ೧೯೮೭-೮೮ನೇ ಸಾಲಿನಲ್ಲಿ ಪ್ರಾಥಮಿಕ ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳು ೪೨ ಕೋಟಿ ರೂಪಾಯಿಗಳಷ್ಟು ಸಾಲವನ್ನು ರೈತರುಗಳಿಗೆ ವಿತರಣೆ ಮಾಡಿದೆ. ಇದಕ್ಕಿಂತ ಹೆಚ್ಚು ಹಣವನ್ನು ಅಂದರೆ ಸುಮಾರು ೭೫ ಕೋಟಿ ರೂಪಾಯಿಗಳನ್ನು ೧೯೮೮-೮೯ನೇ ಸಾಲಿಗೆ ಪ್ರಾಥಮಿಕ ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳ ಮೂಲಕ ಸಾಲವನ್ನು ಕೊಡುವ ಗುರಿಯನ್ನು ಇಟ್ಟುಕೊಳ್ಳಲಾಗಿದೆ. ಸನ್ಮಾನ್ಯ ಅಧ್ಯಕ್ಷರೇ, ೧೯೮೭-೮೮ನೇ ಸಾಲಿನಲ್ಲಿ ಅಲ್ಪಾವಧಿ ಸಾಲ, ಮಧ್ಯಮಾವಧಿ ಸಾಲ ಮತ್ತು ದೀರ್ಘಾವಧಿ ಸಾಲವನ್ನು ಏನು ಕೊಟ್ಟಿದ್ದೇವೆಯೋ ಅದಕ್ಕಿಂಥ ಹೆಚ್ಚಿನ ಸಾಲವನ್ನು ಈ ಸಾಲಿನಲ್ಲಿ ಅಂದರೆ ೧೯೮೮-೮೯ರಲ್ಲಿ ಅಪೆಕ್ಸ್ ಬ್ಯಾಂಕ್ ಮತ್ತು ಜಿಲ್ಲಾ ಕೇಂದ್ರ ಬ್ಯಾಂಕುಗಳ ಹಾಗೂ ಸಹಕಾರ ಸಂಘಗಳ ಮೂಲಕ ಕೊಡುವುದಕ್ಕೆ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ೧೯೮೮-೮೯ನೇ ಸಾಲಿನಲ್ಲಿ ಅಲ್ಪಾವಧಿ ಸಾಲದಲ್ಲಿ ಮಧ್ಯಮಾವಧಿ ಸಾಲದಲ್ಲಿ ಮತ್ತು ದೀರ್ಘಾವಧಿ ಸಾಲದಲ್ಲಿ ೨೫೦ ಕೋಟಿ ರೂಪಾಯಿಗಳಿಗಿಂತಾ ಹೆಚ್ಚು ಸಾಲ ಸೌಲಭ್ಯಗಳನ್ನು ರೈತರುಗಳಿಗೆ ಕೊಡಬೇಕೆನ್ನುವ ಕಾರ್ಯಕ್ರಮವನ್ನು ನಾವು ಹಾಕಿಕೊಂಡಿದ್ದೇವೆ. ಈ ಗುರಿಯನ್ನು ನಾವು ಮುಟ್ಟುತ್ತೇವೆ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಈ ಪ್ರಾಥಮಿಕ ಕೃಷಿ ಹಾಗೂ ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳ ಸ್ಥಿತಿ ಬಹಳ ಚಿಂತಾಜನಕವಾಗಿದೆ ಎಂಬ ಮಾತನ್ನು ಅನೇಕ ಮಾನ್ಯ ಸದಸ್ಯರುಗಳು ವ್ಯಕ್ತ ಮಾಡಿದ್ದಾರೆ ನಿಜ. ಇದುವರೆಗೆ ಪ್ರಾಥಮಿಕ ಕೃಷಿ ಹಾಗೂ ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳ ಮುಖಾಂತರ ಹಾಗೂ ಸಹಕಾರ ಸಂಘಗಳ ಮುಖಾಂತರ ರೈತರುಗಳಿಗೆ ೫೦೦ ಕೋಟಿ ರೂಪಾಯಿಗಳನ್ನು ವಿತರಣೆ ಮಾಡಿದ್ದೇವೆ. ೧೯೮೭-೮೮ರಲ್ಲಿ ೨೯೦ ಕೋಟಿ ರೂಪಾಯಿಗಳಷ್ಟು ಬೇಡಿಕೆ ಇತ್ತು. ಆದರೆ, ಅಷ್ಟು ಹಣವನ್ನು ವಸೂಲಿ ಮಾಡಲಾಗಲಿಲ್ಲ. ಈಗ ನಾವು ಕೊಟ್ಟಿರುವ ೫೦೦ ಕೋಟಿ ರೂಪಾಯಿಗಳಲ್ಲಿ ಈ ವರ್ಷ ಸುಮಾರು ೨೦೦ ಕೋಟಿ ಅಥವಾ ೨೨೫ ಕೋಟಿ ರೂಪಾಯಿಗಳನ್ನು ವಸೂಲಿ ಮಾಡುತ್ತೇವೆಂದು ನಿರೀಕ್ಷೆ ಇಟ್ಟುಕೊಂಡಿದ್ದೇವೆ. ಇಷ್ಟೆಲ್ಲಾ ವ್ಯವಹಾರ ಮಾಡಿದರೂ ಕೂಡ ಪ್ರಾಥಮಿಕ ಕೃಷಿ ಹಾಗೂ ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳನ್ನು ಮತ್ತು ಸಹಕಾರ ಸಂಘಗಳನ್ನು ಆರ್ಥಿಕವಾಗಿ ಬಲಪಡಿಸುವುದಕ್ಕೆ ಇನ್ನೂ ಸಾಧ್ಯವಾಗಿಲ್ಲ ಎನ್ನುವ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ಪ್ರಾಥಮಿಕ ಕೃಷಿ ಹಾಗೂ ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳಲ್ಲಿ ಮತ್ತು ಸಹಕಾರ ಸಂಘಗಳಲ್ಲಿ ನಾವು ಹಾಕಿದ್ದ ಬಂಡವಾಳದಲ್ಲಿ ೫೦ ಕೋಟಿ ರೂಪಾಯಿಗಳಷ್ಟು ಕಡಿಮೆಯಾಗಿದೆ. ಇದಕ್ಕೆ ಕಾರಣ ಏನೆಂದರೆ, ಇವರುಗಳು ವಸೂಲಿ ಮಾಡಿರುವ ಹಣವನ್ನು ಬೇರೆ ರೀತಿಯಲ್ಲಿ ಅಂದರೆ ಅವಶ್ಯಕ ಖರ್ಚು ಆಗಿರಬಹುದು ಅಥವಾ ಅನಾವಶ್ಯಕ ಖರ್ಚಾಗಿರಬಹುದು, ಬಳಸಿಕೊಂಡಿರುವುದರಿಂದ ಈ ವ್ಯತ್ಯಾಸ ಕಂಡು ಬಂದಿದೆ. ಸಹಕಾರ ಸಂಘಗಳಿಂದ ಮತ್ತು ಪ್ರಾಥಮಿಕ ಕೃಷಿ ಹಾಗೂ ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳಿಂದ ಪಡೆದುಕೊಂಡಿದ್ದ ಸಾಲದ ಪೈಕಿ ೪೦ ಕೋಟಿ ರೂಪಾಯಿಯಷ್ಟು ವಸೂಲು ಆಗುವುದಿಲ್ಲವೇನೋ ಅಂದುಕೊಂಡಿದ್ದೆವು. ಆದರೆ, ಆ ಹಣವನ್ನೂ ಸಹ ವಸೂಲಿ ಮಾಡಲಾಗಿದೆ. ನಾನು ಒಂದು ಮಾತನ್ನು ಇಲ್ಲಿ ಹೇಳಬೇಕಾಗುತ್ತದೆ. ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ, ಆಡಳಿತ ವ್ಯವಸ್ಥೆಯಲ್ಲಿ ನಾವು ಕೊಟ್ಟಂತ ಸಾಲವನ್ನು ವಸೂಲಿ ಮಾಡುವುದಕ್ಕೆ ಆಗದೇ ಇರುವಂಥ ಪರಿಸ್ಥಿತಿಯಲ್ಲಿ ನಾವು ಇದ್ದೇವೆ ಎಂಬುದನ್ನು ನಾವು ಒಪ್ಪಿಕೊಳ್ಳಬೇಕಾಗಿದೆ. ಕೃಷಿ ಅಭಿವೃದ್ಧಿಗೆ ಕೊಟ್ಟಿರುವಂಥ ಸಾಲ ಮರುಪಾವತಿ ಆಗದೇ ಇದ್ದರೆ ಪುನಃ ನಾವು ಬೇರೆ ರೈತರುಗಳಿಗೆ ಸಾಲವನ್ನು ಕೊಡುವುದಕ್ಕಾಗುವುದಿಲ್ಲ. ಆದರೆ, ಕೆಲವು ರೈತರುಗಳು ತಾವು ಪಡೆದುಕೊಂಡ ಸಾಲವನ್ನು ಸರಿಯಾಗಿ ಮರುಪಾವತಿ ಮಾಡಿದ್ದಾರೆ. ಇದಕ್ಕಾಗಿ ಅವರನ್ನು ನಾನು ಅಭಿನಂದಿಸುತ್ತೇನೆ.

ಸಾಲ ಮರುಪಾವತಿ ಆಗುವುದಕ್ಕೆ ಸಹಕಾರ ನೀಡಿರುವ ಅಧಿಕಾರಿಗಳು ಮತ್ತು ಅಧಿಕಾರಿಯೇತರರುಗಳಿಗೂ ಸಹ ನಾನೂ ಅಭಿನಂದಿಸುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳನ್ನು ಮತ್ತು ಸಹಕಾರ ಸಂಘಗಳನ್ನು ನಾವು ಉತ್ತಮಪಡಿಸಬೇಕು. ಅವುಗಳನ್ನು ಆರ್ಥಿಕವಾಗಿ ಬಲಗೊಳಿಸಬೇಕು. ಅವುಗಳು ಬಲಗೊಂಡರೆ ರೈತರುಗಳಿಗೆ ಹೆಚ್ಚು ಹೆಚ್ಚು ಸಾಲವನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ. ರಾಷ್ಟ್ರದಲ್ಲಿ ಸಹಕಾರಿ ಕಾಯಿದೆ ಜಾರಿಗೆ ೧೯೦೪ನೇ ಇಸವಿಯಲ್ಲಿ ಬಂದಿತು. ಸಹಕಾರಿ ಕಾಯಿದೆ ಜಾರಿಗೆ ಬಂದು ೭೫ ವರ್ಷಗಳಾದರೂ ಸಹಕಾರ ಇಲಾಖೆಯಲ್ಲಿ ಸರಿಯಾದ ರೀತಿಯಲ್ಲಿ ನಾವು ಸಾಧನೆ ಮಾಡಿಲ್ಲವೆಂದು ಹೇಳಿದ್ದಾರೆ. ನಿಜ. ನಾವು ಇದುವರೆಗೆ ಶೇಕಡ ೧೫ ರಷ್ಟು ಸಹ ಸಹಕಾರ ಕ್ಷೇತ್ರದಿಂದ ರೈತರುಗಳಿಗೆ ಹಣವನ್ನು ಕೊಡಲಿಕ್ಕೆ ಇನ್ನೂ ಸಾಧ್ಯವಾಗಿಲ್ಲ,

೧೧-೦೦ ಎ. ಎಂ.

ಇಂಥ ಒಂದು ಪರಿಸ್ಥಿತಿಯನ್ನು ನಾವು ಇಟ್ಟುಕೊಂಡು ಬಂದಿದ್ದೇವೆ. ಆ ಒಂದು ಪರಿಸ್ಥಿತಿಯನ್ನು ದಾಟಿ ನಾವು ಮುಂದಕ್ಕೆ ಹೋಗಬೇಕಾಗಿದೆ. ಅದನ್ನು ಬದಲಾಯಿಸಬೇಕಾದರೆ, ನಾವು ಹೆಚ್ಚು ಹಣವನ್ನು ಕೃಷಿಕರಿಗೆ ತಮ್ಮ ಉತ್ಪನ್ನವನ್ನು ಹೆಚ್ಚಿಸುವುದಕ್ಕೋಸ್ಕರವಾಗಿ ಮತ್ತು ಉತ್ಪಾದನ ಶಕ್ತಿಯನ್ನು ಹೆಚ್ಚಿಗೆ ಮಾಡುವುದಕ್ಕೋಸ್ಕರವಾಗಿ ಹಣವನ್ನು ಕೊಡುವಂಥ ವ್ಯವಸ್ಥೆಯನ್ನು ಮಾಡುವುದಾದರೆ ಖಂಡಿತವಾಗಿ ಸಹ ಈ ಪ್ರಾಥಮಿಕ ಪತ್ತಿನ ಸಹಕಾರಿ ಸಂಘಗಳನ್ನು ಬಲಪಡಿಸಬಹುದು ಆ ಬಗ್ಗೆ ನಾವು ಈಗಾಗಲೇ ಒಂದು ಯೋಜನೆಯನ್ನು ಹಾಕಿಕೊಂಡಿದ್ದೇವೆ. ಎಲ್ಲೆಲ್ಲಿ ಇವುಗಳು ಆರ್ಥಿಕವಾಗಿ ಲಾಭದಾಯಕವಾಗಿಲ್ಲ, ಅಂಥ ಲಾಭದಾಯಕವಾಗಿಲ್ಲದ ಸಹಕಾರ ಸಂಘಗಳನ್ನು ನಾವು ಅಮಾಲ್ಗಮೇಷನ್ ಸಂಯೋಜನೆಯಿಂದ ಇವೊತ್ತು ಕಡಿಮೆ ಮಾಡಿದ್ದೇವೆ. ಆದರೂ ಸಹ ಇವೊತ್ತು ಅನೇಕ ಸಹಕಾರಿ ಸಂಘಗಳು ೫ ಲಕ್ಷ ರೂಪಾಯಿಗಳನ್ನು ಕೂಡ ತಮ್ಮ ರೈತರಿಗೆ ಸಾಲವಾಗಿ ಕೊಡುವುದಕ್ಕೆ ಸಾಧ್ಯವಾಗಿಲ್ಲ. ಹೀಗೆ ಏತಕ್ಕೋಸ್ಕರವಾಗಿ ಅವರಿಗೆ ಸಾಧ್ಯವಾಗಿಲ್ಲ ? ಈ ಬಗ್ಗೆ ಮಾನ್ಯ ಕೆ. ಎಚ್. ಪಾಟೀಲರವರು ಅನೇಕ ಸಂದರ್ಭಗಳಲ್ಲಿ ಆಡಳಿತ ವರ್ಗ ಸಾಲದ ಬಹುಭಾಗವನ್ನು ತಾನು ಅಥವಾ ತನಗೆ ಹತ್ತಿರದ ಸಂಬಂಧಿಕರಿಗೆ ಕೊಡುವ ಒಂದು ಸಂದರ್ಭ ಬಂದಿದೆ. ಅಪರೂ ಬೇರೆಯಾವರಿಗೆ ಕೊಡುವುದಕ್ಕೆ ಇಷ್ಟಪಡುವುದಿಲ್ಲ ಎಂದು ಹೇಳಿದ್ದಾರೆ. ಅದೇ ರೀತಿಯಲ್ಲಿ ಆಡಳಿತ ವರ್ಗದವರೇ ಹೆಚ್ಚು ಸಾಲವನ್ನು ತೆಗೆದುಕೊಳ್ಳುತ್ತಾರೆ, ಹಾಗೂ ಅದನ್ನು ಅವರು ವಾಪಸ್ಸು ಕೊಡದಿರುವುದರಿಂದಾಗಿ ಉಳಿದ ರೈತರಿಗೆ ಸಾಲವನ್ನು ಕೊಡುವುದಕ್ಕೆ ಆಗುತ್ತಾ ಇಲ್ಲ ಎಂದು ಕೆಲವು ಮಾನ್ಯ ಸದಸ್ಯರುಗಳು ಅಭಿಪ್ರಾಯ ಪಟ್ಟಿದ್ದಾರೆ. ಅನೇಕ ಸಂದರ್ಭಗಳಲ್ಲಿ ಪ್ರಾಥಮಿಕ ಪತ್ತಿನ ಸಹಕಾರಿ ಸಂಘಗಳು ನಿಜವಾಗಿಯೂ ಸಹ ಸಾಲವನ್ನು ಕೊಡುವಂಥ ಕೆಲಸವನ್ನು ಮಾಡದಿರುವುದರಿಂದ ಮತ್ತು ನಿಜವಾಗಿಯೂ ಯಾರಿಗೆ ಬೇಕೋ ಅವರಿಗೆ ಕೊಡುವ ಒಂದು ಕಳಕಳಿಯು ಆಡಳಿತ ವರ್ಗದಲ್ಲಿ ಇಲ್ಲದಿರುವುದರಿಂದ, ಇವೊತ್ತಿನ ಈ ಪರಿಸ್ಥಿತಿಗೆ ಕಾರಣವಾಗಿದೆ ಎಂದು ನಾನು ಭಾವಿಸುತ್ತೇನೆ. ಈ ಪ್ರಾಥಮಿಕ ಪತ್ತಿನ ಸಹಕಾರಿ ಸಂಘಗಳು ಬೆಳೆಯ ಬೇಕಾದರೆ, ಇವುಗಳಿಗಾಗಿ ಒಂದು ಹೊಸ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ಸರಕಾರಕ್ಕೆ ಇಷ್ಟ ಇದೆ. ಈ ದಿಸೆಯಲ್ಲಿ ಖಂಡಿತವಾಗಿ ಸಂಬಂಧಪಟ್ಟವರಿಂದ ನೆರವು ಪಡೆದು ಅವುಗಳನ್ನು ಆರ್ಥಿಕವಾಗಿ ಬಲಗೊಳಿಸಲಿಕ್ಕೆ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡುವುದಕ್ಕೆ ಸರಕಾರವು ಇಷ್ಟಪಡುತ್ತದೆ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಅದೇ ರೀತಿಯಾಗಿ ಈ ಸಂಘಗಳ ಉದ್ದೇಶ ಕೃಷಿಕರಿಗೆ ಮತ್ತಿತರರಿಗೆ ಸಾಲ ಕೊಡುವುದು ಮಾತ್ರವಲ್ಲ. ಕೃಷಿಕಾರ್ಮಿಕರಿಗೆ ತಮ್ಮ ಆರ್ಥಿಕ ಶಕ್ತಿಯನ್ನು ಹೆಚ್ಚಿಸಲಿಕ್ಕೆ ಬೇಕಾದಂಥ ನಾನ್‌ಫಾರ್ಮ್ ಲೋನ್ ಏನಿದೆ ಅದನ್ನು ಕೊಡುವುದು ಮಾತ್ರ ಅಲ್ಲ, ಅದೇ ರೀತಿಯಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಗ್ರಾಹಕರಿಗೆ ಬೇಕಾದಂಥ ದಿನನಿತ್ಯದ ಬಳಕೆ ವಸ್ತುಗಳನ್ನು ಕಡಿಮೆ ಬೆಲೆಯಲ್ಲಿ ಕೊಡುವಂಥ ಒಂದು ವ್ಯವಸ್ಥೆಯನ್ನು ಕೂಡ ಮಾಡಬೇಕಾಗುತ್ತದೆ. ಆ ಎಲ್ಲಾ ಕೆಲಸಗಳನ್ನು ಮಾಡುವುದರ ಜೊತೆಗೆ ಈ ಸಂಘಗಳನ್ನು ಬಲಗೊಳಿಸಬೇಕಾಗಿದೆ. ಆ ದಿಸೆಯಲ್ಲಿ ಸೂಕ್ತ ಕ್ರಮಗಳನ್ನು ಕೈಗೊಳ್ಳಲು ಸರಕಾರ ಯೋಚನೆ ಮಾಡುತ್ತಿದೆ ಎಂದು ಹೇಳಬಯಸುತ್ತೇನೆ.

ಇದಾದಮೇಲೆ, ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್‌ಗಳ ಮೂಲಕ ಕೂಡ ಬಲಗೊಳಿಸಲು ಯೋಜಿಸಲಾಗಿದೆ. ನಮ್ಮಲ್ಲಿ ೧೭೭ ಈ ರೀತಿಯ ಬ್ಯಾಂಕ್‌ಗಳು ಇವೆ. ಅವುಗಳ ಪರಿಸ್ಥಿತಿಯು ಹಿಂದೆ ಅಷ್ಟು ಉತ್ತಮವಾಗಿರಲಿಲ್ಲ. ೧೯೭೭–೭೮ರಲ್ಲಿ ನಾವು ಕೊಟ್ಟಂಥ ಬಡ್ಡಿ

ರಿಯಾಯಿತಿಯನ್ನು ಉಪಯೋಗ ಮಾಡಿಕೊಂಡಿದ್ದರಿಂದ ಮತ್ತು ಅದನ್ನು ಗಮನದಲ್ಲಿ ಇಟ್ಟುಕೊಂಡರೆ ಮತ್ತು ಈಗ ಆಗಿರತಕ್ಕಂಥ ವಸೂಲಿ ಪ್ರಮಾಣವನ್ನು ಗಮನದಲ್ಲಿಟ್ಟುಕೊಂಡರೆ, ಹೋದ ವರ್ಷಕ್ಕಿಂತ ವಸೂಲಿ ಸುಮಾರು ೨೪ ಪರ್ಸೆಂಟ್‌ನಷ್ಟು ಹೆಚ್ಚಿಗೆ ಆಗಿದೆ ಎಂಬುದನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇ ರೀತಿಯಲ್ಲಿ ೩೦-೬-೧೯೮೮ಕ್ಕೆ ಇನ್ನೂ ಹೆಚ್ಚು ಹಣವನ್ನು ವಸೂಲು ಮಾಡುವ ನಿರೀಕ್ಷೆ ಇದೆ. ಇದನ್ನು ಗಮನದಲ್ಲಿಟ್ಟುಕೊಂಡರೆ, ಹೋದ ವರ್ಷಕ್ಕಿಂತ ಅನಿರ್ಬಂಧಿತ ಸಾಲನೀಡುವ ಬ್ಯಾಂಕುಗಳ ಸಂಖ್ಯೆಯನ್ನು ಇನ್ನೂ ಜಾಸ್ತಿ ಮಾಡುವುದಕ್ಕೆ ಸಾಧ್ಯವಾಗಬಹುದು. ಈಗಾಗಲೇ ೬೭ ಬ್ಯಾಂಕ್‌ಗಳು ೭೫ ಪರ್ಸೆಂಟ್‌ಗಿಂತ ಜಾಸ್ತಿ ಹಣವನ್ನು ವಸೂಲು ಮಾಡಿವೆ ಹೀಗೆ ವಸೂಲ ಮಾಡುವಲ್ಲಿ ಶೇಕಡಾ ೫೦ರಿಂದ ೭೫ರ ವರೆಗೆ ೧೦೩ ಬ್ಯಾಂಕ್‌ಗಳು ಇದ್ದು, ಶೇಕಡಾ ೫೦ಕ್ಕಿಂತ ಕಡಿಮೆ ವಸೂಲು ಮಾಡಿದಂಥವುಗಳು ನಮ್ಮ ರಾಜ್ಯದಲ್ಲಿ ಕೇವಲ ೭ ಮಾತ್ರ ಉಳಿದಿವೆ ಎಂದು ಹೇಳಬಯಸುತ್ತೇನೆ. ೧೯೮೭-೮೮ರ ಸಾಲಿನಲ್ಲಿ ಈ ಒಂದು ಗುರಿಯನ್ನು ನಾವು ಮುಟ್ಟಿದ್ದೇವೆ. ಆದರೆ ಖಂಡಿತವಾಗಿ ಅನಿರ್ಬಂದಿತ ಸಾಲವನ್ನು ಪಡೆಯುವುದಕ್ಕೆ ಸುಮಾರು ೧೨೦ ಬ್ಯಾಂಕ್‌ಗಳು ಈ ವರ್ಷ ಅರ್ಹತೆಯನ್ನು ಪಡೆಯುವುದಕ್ಕೆ ಸಾಧ್ಯವಾಗಿದೆ. ಆದರೆ ಮೂಲಕ ಹೆಚ್ಚು ಸಾಲವನ್ನು ಪಡೆಯುವುದಕ್ಕೆ ಸಾಧ ಎಂಬ ಮಾತನ್ನು ಹೇಳಬಯಸುತ್ತೇನೆ. ೧೯೮೩-೮೪ ರಿಂದ ನಾವು ೬೩ ಕೋಟಿ ರೂಪಾಯಿಗಳನ್ನು ನಾವು ಬಡ್ಡಿ ರಿಯಾಯಿತಿಗಾಗಿ ಕೊಟ್ಟಿದ್ದೇವೆ. ಈ ಬಗ್ಗೆ ಇನ್ನೂ ಕೊಡಬೇಕಾದಂಥ ಹಣವು ಕೇವಲ ೪ ಕೋಟಿ ೨೧ ಲಕ್ಷ ರೂಪಾಯಿಗಳು ಮಾತ್ರವಾಗಿದೆ. ಅದು ೧೯೮೬-೮೭ಕ್ಕೆ ಸಂಬಂಧಪಟ್ಟದ್ದು ಇದೆ. ೧೯೮೭-೮೮ರನೇ ಸಾಲಿನಲ್ಲಿ ಸುಮಾರು ೬೨ ಕೋಟಿ ರೂಪಾಯಿಗಳನ್ನು ನಾವು ಈ ಬಡ್ಡಿ ರಿಯಾಯಿತಿ ಬಾಬ್ತು ಸಹಾಯಧನವನ್ನು ಕೊಡುವ ನಿರೀಕ್ಷೆ ಇದೆ. ಕಳೆದ ನಾಲ್ಕು ವರ್ಷಗಳಲ್ಲಿ ಏನು ಹಣವನ್ನು ನಾವು ಕೊಟ್ಟಿದ್ದೇವೆ, ಹೆಚ್ಚು ಕಡಿಮೆ ಅದಕ್ಕೆ ಸಮಾನವಾದ ಹಣವನ್ನು ೧೯೮೭-೮೮ರಲ್ಲಿ ಬಡ್ಡಿ ರಿಯಾಯಿತಿಯಾಗಿ ಈ ದೇಶದ ಕೃಷಿಕರಿಗೆ ಕೊಡುವಂಥ ಒಂದು ಕಾರ್ಯವನ್ನು ಈ ಸರಕಾರವು ಮಾಡಿದೆ ಎಂದು ಹೇಳಬಯಸುತ್ತೇನೆ.

ಇನ್ನು ತಾಲ್ಲೂಕು ಮಾರುಕಟ್ಟೆ ಸಂಸ್ಥೆಗಳು ಏನಿವೆ ಅವುಗಳ ಬಗ್ಗೆ ಮಾನ್ಯ ಕೆ.ಎಚ್. ಪಾಟೀಲ್‌ರವರು ಟೀಕೆ ಮಾಡಿದ್ದಾರೆ. ಅವರ ಟೀಕೆಯು ಸರಿಯಾಗಿದೆ ಎಂದು ನಾನು ಒಪ್ಪಿಕೊಳ್ಳುತ್ತೇನೆ. ಯಾವ ಒಂದು ಮೂಲ ಉದ್ದೇಶ ಸಾಧನೆಗಾಗಿಯೂ ಅವುಗಳು ಕಾರ್ಯನಿರ್ವಹಣೆಯನ್ನು ಮಾಡುತ್ತಿಲ್ಲ ಎಂದು ಹೇಳಿದ್ದಾರೆ ಅದನ್ನೂ ನಾನು ಒಪ್ಪಿಕೊಳ್ಳುತ್ತೇನೆ. ಬೆಳಗಾವಿ ಡಿವಿಜನ್‌ನ ಕೆಲವು ಸಹಕಾರಿ ಸಂಘಗಳನ್ನು ಹೊರತುಪಡಿಸಿದರೆ ರಾಜ್ಯದ ಇತರ ತಾಲ್ಲೂಕು ಮಾರಾಟ ಸಹಕಾರ ಸಂಘಗಳು ಈ ರೈತರ ಕೃಷಿ ಉತ್ಪನ್ನಗಳನ್ನು ಸರಿಯಾದ ಬೆಲೆಗೆ ಮಾರಾಟ ಮಾಡುವುದಕ್ಕೆ ಸಹಾಯವನ್ನು ಮಾಡುತ್ತಿಲ್ಲ ಎಂದು ಹೇಳಿದ್ದಾರೆ. ಈ ಒಂದು ಕೆಲಸವನ್ನು ಮಾಡುವಲ್ಲಿ ಅವುಗಳು ಅಸಾಧ್ಯವಾದ ಪರಿಸ್ಥಿತಿಯಲ್ಲಿವೆ. ಈ ಸಂಘಗಳು ಹೆಚ್ಚುಕಡಿಮೆ ಬಳಕೆದಾರರ ಸಂಘವಾಗಿ ಪರಿವರ್ತನೆಯಾಗಿದೆ ಅಥವಾ ಆ ಸಂಘಗಳ ಕೆಲಸವನ್ನು ಮಾಡುತ್ತಿವೆ ಎಂದು ಹಿರಿಯ ಸದಸ್ಯರು ಹೇಳಿದ್ದಾರೆ. ಅದು ನಿಜವಾಗಿಯೂ ಅತಿಶಯೋಕ್ತಿಯಾಗಲಾರದು ಎಂದು ನಾನು ಹೇಳಬಯಸುತ್ತೇನೆ. ಹಾಗಾದರೆ ಏತಕ್ಕಾಗಿ ಈ ಪರಿಸ್ಥಿತಿಯು ಆಯಿತು? ಯಾವ ಒಂದು ಮೂಲ ಉದ್ದೇಶವನ್ನು ಇಟ್ಟುಕೊಂಡು ರೈತರ ಕೃಷಿ ಉತ್ಪನ್ನವನ್ನು ಸರಿಯಾದಂಥ ಬೆಲೆಗೆ ಮಾರಾಟ ಮಾಡುವ ಉದ್ದೇಶದಿಂದ ಅಥವಾ ಮಾರಾಟ ಸಹಕಾರ ಸಂಘಗಳು ಏಕೆ ಮಾಡಿದ್ದೇವೊ ಅವುಗಳು ತಮ್ಮ ಸೂಚಿತ ಕೆಲಸವನ್ನು ಮಾಡಲಾರದಂಥ ಪರಿಸ್ಥಿತಿಗೆ ತಲುಪಲು ಕಾರಣಗಳು ಏನು? ಇವೊತ್ತು ಅವುಗಳು ಕೇವಲ ಮಾರಾಟ ಸಹಕಾರಿ ಸಂಘಗಳ ಕೆಲಸವನ್ನು ಮಾತ್ರ ಮಾಡಿಲ್ಲ, ಅವುಗಳ ಮುಖಾಂತರ ಸಂಸ್ಕರಣಾ ಘಟಕವನ್ನು ಪ್ರಾರಂಭ ಮಾಡಿದ್ದಾರೆ. ಹತ್ತಿಬೀಜವನ್ನು ತೆಗೆಯುವ ವ್ಯವಸ್ಥೆ ಮುಂತಾದವುಗಳನ್ನು ಮಾಡಿದ್ದಾರೆ, ಲಾರಿಗಳನ್ನು ಇಟ್ಟುಕೊಂಡಿದ್ದಾರೆ. ಎಣ್ಣೆ ಗಿರಣಿಗಳನ್ನು ಪ್ರಾರಂಭ ಮಾಡಿದ್ದಾರೆ. ಇವೇ ಮುಂತಾಗಿ ಕೆಲವು ಕೆಲಸಗಳನ್ನು ಮಾಡಿದ್ದಾರೆ. ಆದರೆ ಅಂಥ ಹೆಚ್ಚಿನ ಕೆಲಸವನ್ನು ಮಾಡುವುದು ಸರಿಯಲ್ಲ ಎಂದು ನಾನು ಹೇಳುತ್ತಾ ಇಲ್ಲ. ಈ ಸಂಘಗಳು ಈ ಕೆಲಸಗಳನ್ನು ಮಾಡಬೇಕು. ಆದರೆ ಅವುಗಳನ್ನು ಪ್ರಾರಂಭ ಮಾಡುವಾಗ ನಮ್ಮಲ್ಲಿ ವಿವೇಚನೆ ಇರಬೇಕು. ಸುಮಾರು ೯೧ ಅಕ್ಕಿ ಗಿರಣಿಗಳು ೮೬ ಮಾರಾಟ ಸಹಕಾರಿ ಸಂಘಗಳ ವ್ಯಾಪ್ತಿಯಲ್ಲಿವೆ. ಅವುಗಳಲ್ಲಿ ಎಷ್ಟು ನಡೆಯುತ್ತಿವೆ? ಅವುಗಳಿಗೆ ಹಾಕಿದಂಥ ಹಣ ಏನಾಯಿತು? ಮಾನ್ಯ ಪಾಟೀಲ್‌ರವರು ಹೇಳಿದ ಹಾಗೆ ಅನೇಕ ಎಣ್ಣೆ ಗಿರಣಿಗಳು ಇವೊತ್ತಿನ ದಿವಸ ನಿಷ್ಕ್ರಿಯವಾಗಿವೆ.

ಪ್ರಾರಂಭ ಮಾಡಿದ ಘಟಕಗಳು ಬಹುತೇಕ ಸಂಸ್ಕರಣ ಘಟಕಗಳು ಇವೊತ್ತು ಕೆಲಸ ಮಾಡುತ್ತಿಲ್ಲ. ಅವುಗಳು ಲಾಭ ನಷ್ಟ ಇಲ್ಲದಂತೆಯೂ ಸೇವೆಯನ್ನು ಮಾಡುವಂಥ ಪರಿಸ್ಥಿತಿಯಲ್ಲಿಯೂ ಕೂಡ ಇಲ್ಲ.

ಈ ವಿಚಾರದಲ್ಲಿ ನಾನು ಹೇಳುವುದು ಇಷ್ಟೇ. ಅನೇಕ ಸಂದರ್ಭಗಳಲ್ಲಿ ಯಾವುದೇ ಸಂಸ್ಕರಣ ಘಟಕ ಇರಬಹುದು, ಅದನ್ನು ತಾಲ್ಲೂಕು ಮಾರಾಟ ಸಂಘಗಳು ಮಾಡಿದಂಥವುಗಳು ಇರಬಹುದು. ಅಥವಾ ತನ್ನದೇ ಆದ ಒಂದು ಪ್ರೊಸೆಸಿಂಗ್ ಸೊಸೈಟಿ ಇರಬಹುದು ಅಥವಾ ತನ್ನ ವತಿಯಿಂದ ಮಾಡಿದ ಘಟಕ ಇರಬಹುದು. ಅವೆಲ್ಲವನ್ನೂ ನಾವು ಸ್ಥಾಪನೆ ಮಾಡುವಾಗ ಒಂದು ಮೂಲಭೂತವಾದಂಥ, ಉತ್ತಮವಾದಂಥ, ನೀತಿಯನ್ನು ನಾವು ಹೊಂದಿಲ್ಲ ಎಂದು ತಿಳಿಯುತ್ತದೆ. ಎಲ್ಲಿ ಕಚ್ಚಾ ಮಾಲು ಸಿಗುವುದಿಲ್ಲ, ಎಲ್ಲಿ ಲಾಭದಾಯಕವಾಗಿ ಘಟಕವನ್ನು ಮಾಡುವುದಕ್ಕೆ ಸಾಧ್ಯವಿಲ್ಲ, ಅಲ್ಲಿ ನಾವು ಸಂಸ್ಕರಣ ಘಟಕಗಳನ್ನು ಮಾಡುವುದಕ್ಕೆ ನಾವು ಹೊರಟಿದ್ದೇವೆ. ನಾವು ಅವುಗಳನ್ನು ಸ್ಥಾಪನೆ ಮಾಡುವಾಗ ಇಟ್ಟುಕೊಂಡಿದ್ದಂಥ ಉತ್ಸಾಹವು ಈಗ ಇಲ್ಲ. ಅನೇಕ ಸಂದರ್ಭಗಳಲ್ಲಿ ಈ ಸಂಸ್ಕರಣಾ ಘಟಕಗಳನ್ನು ನಾವು ಸ್ಥಾಪನೆ ಮಾಡಿದ್ದೇವೆ ಅವುಗಳಿಂದ ನಮ್ಮ ಯೋಜನೆಯ ಪ್ರಕಾರ ಉಪಯೋಗವನ್ನು ಪಡೆಯುವುದಕ್ಕೆ ಸಾಧ್ಯವಾಗಿಲ್ಲ. ನಮ್ಮಲ್ಲಿ ಪರ್ಸೆಂಟೇಜ್ ಆಫ್ ಯುಟಿಲಿಟಿ ಮತ್ತು ಪರ್ಸೆಂಟೇಜ್ ಆಫ್ ಕೆಪಾಸಿಟಿ ಏನಿದೆ, ಅದನ್ನು ತೆಗೆದುಕೊಂಡಾಗಲೂ ಸಹ ಸಾಕಷ್ಟು ಪ್ರಮಾಣದಲ್ಲಿ ಪ್ರಯೋಜನವನ್ನು ತೆಗೆದುಕೊಳ್ಳಲು ಸಾಧ್ಯವಾಗಿಲ್ಲ ಅವುಗಳು ನಷ್ಟದಲ್ಲಿರುವುದಕ್ಕೆ ನಾವೆಲ್ಲರೂ ಕಾರಣಕರ್ತರಾಗಿದ್ದೇವೆ, ಅದರ ಜೊತೆಗೆ ಮಾರಾಟ ಸಹಕಾರಿ ಸಂಘಗಳು ಬೇರೆ ಕೆಲಸವನ್ನು ಮಾಡಲಿಕ್ಕೆ ಬೇಕಾದಂಥ ಹಣ ಸಹಾಯವನ್ನು ನಾವು ಕೊಡುವುದಕ್ಕೆ ಸಾಧ್ಯವಾಗಿಲ್ಲ. ಈ ದಿಸೆಯಲ್ಲಿ ಸರಕಾರ ಆಲೋಚನೆ ಮಾಡುತ್ತಾ ಇದೆ. ನಮ್ಮಲ್ಲಿರುವಂಥ ೧೭೭ ಈ ತರಹದ ಸಂಘಗಳು ಸಹ ಸರಿಯಾದ ಕೆಲಸ ಮಾಡಲಿಕ್ಕೆ ಮೂಲಭೂತ ಉದ್ದೇಶವಾದಂಥ ಕೃಷಿ ಉತ್ಪನ್ನವನ್ನು ಮಾರಾಟ ಮಾಡಲಿಕ್ಕೆ ಸಹಾಯ ಮಾಡಲು ಬೇಕಾದಂಥ ಹಣವನ್ನು ಕೊಡುವಲ್ಲಿ ಅವಶ್ಯಕತೆಯನ್ನು ಮನಗಂಡು. ಇವೊತ್ತಿನ ದಿವಸ ಹೊಸ ಯೋಜನೆಯನ್ನು ರೂಪಿಸಿ, ಸಂಬಂಧಪಟ್ಟವರಿಂದ ಹಣದ ಸಹಾಯವನ್ನು ಪಡೆದು ಆ ಬಗ್ಗೆ ಸಹಕರಿಸಲು ಸರಕಾರ ಪ್ರಯತ್ನ ಮಾಡುತ್ತಾ ಇದೆ. ಈ ದಿಸೆಯಲ್ಲಿ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ ಎಂದು ಹೇಳುವುದಕ್ಕೆ ಬಯಸುತ್ತೇನೆ.

ಇದಾದನಂತರ, ಈ ಮಾರಾಟ ಸಹಕಾರಿ ಸಂಘಗಳ ಆರ್ಥಿಕ ಪರಿಸ್ಥಿತಿಯ ಬಗ್ಗೆ ಮತ್ತು ಅವುಗಳ ಪುನಶ್ಚೇತನ ಕಾರ್ಯಕ್ರಮಗಳ ಬಗ್ಗೆ ಈಗಾಗಲೇ ನಾನು ಹೇಳಿದ್ದೇನೆ. ಈ ಸಂಸ್ಕರಣ ಘಟಕಗಳೂ ಸಹ ಸರಿಯಾಗಿ ಕೆಲಸ ಮಾಡುವಂಥ ರೀತಿಯಲ್ಲಿ ಕೆಲಸ ಮಾಡಿಲ್ಲ ಎಂಬುದನ್ನು ಕೂಡ ನಾನು ಒಪ್ಪಿಕೊಳ್ಳುತ್ತೇನೆ.

ಇಲ್ಲವಾದರೆ ಇವುಗಳನ್ನು ಅನಿವಾರ್ಯವಾಗಿ ಮುಚ್ಚಬೇಕಾದ ಪ್ರಸಂಗ ಬಂದರೆ ಅದನ್ನು ಬೇರೆ ಸಹಕಾರ ಸಂಘಗಳಿಗೆ ಕೊಡುವಂತಹ ಅವಶ್ಯಕತೆ ಕಂಡುಬಂದರೆ ಅದನ್ನು ಸಹ ಸರಕಾರ ಪರಿಶೀಲನೆ ಮಾಡುತ್ತದೆ. ಇನ್ನು ಬಳಕೆದಾರರ ಸಹಕಾರ ಸಂಘಗಳು ಏನು ನಮ್ಮಲ್ಲಿವೆ ಅವು ಬಹಳಷ್ಟು ನಿಷ್ಕ್ರಿಯವಾಗಿದ್ದು ಕೆಲಸ ಮಾಡುತ್ತಿಲ್ಲ ಎಂಬ ಮಾತನ್ನು ನನ್ನ ಮಾನ್ಯ ಸ್ನೇಹಿತರು ಹೇಳಿದ್ದಾರೆ, ಅದನ್ನು ನಾನೂ ಕೂಡ ಒಪ್ಪುತ್ತೇನೆ. ಬಳಕೆದಾರರ ಸಹಕಾರ ಸಂಘಗಳು ಸುಮಾರು ೧೨೮೮ ಇದ್ದರೆ ಅವುಗಳಲ್ಲಿ ಬಹಳಷ್ಟು ಸಹಕಾರ ಸಂಘಗಳು ನಿಷ್ಕ್ರಿಯವಾಗಿವೆ. ದೊಡ್ಡ ದೊಡ್ಡ ಪಟ್ಟಣಗಳು ಇರುವಂತಹ ಕೇಂದ್ರ ಮತ್ತು ಸಗಟು ಸಹಕಾರ ಸಂಘಗಳನ್ನು ಬಿಟ್ಟರೆ ಬೇರೆ ಸಹಕಾರ ಸಂಘಗಳು ಕೆಲಸ ಮಾಡುತ್ತಿಲ್ಲ. ಒಂದು ವೇಳೆ ಕೆಲಸ ಮಾಡಿದರೂ ಸಹ ಲಾಭದಾಯಕವಾಗಿ ಕೆಲಸ ಮಾಡಲಿಕ್ಕೆ ಲಾಭದಾಯಕವಾಗಿ ನಡೆಯಲಿಕ್ಕೆ ಬೇಕಾದಂತಹ ಪ್ರಯತ್ನ ಮಾಡುತ್ತಿಲ್ಲ ಎಂಬ ಮಾತನ್ನು ನಾನೂ ಕೂಡ ಒಪ್ಪುತ್ತೇನೆ. ಈ ಬಳಕೆದಾರರ ಸಹಕಾರ ಸಂಘಗಳು ಏನು ಇವೆ ಇವುಗಳ ಕಾರ್ಯಾಚರಣೆಯಲ್ಲಿ ಅನೇಕ ತಪ್ಪುಗಳನ್ನು ಮಾಡುತ್ತಿವೆ ಅದನ್ನು ಸರಿಪಡಿಸಲಿಕ್ಕೆ ಯೋಗ್ಯವಾದ ಕ್ರಮಗಳನ್ನು ತೆಗೆದುಕೊಳ್ಳಬೇಕಾದುದು ಅವಶ್ಯಕತೆ ಇದೆ ಎಂದು ಹೇಳಿದ್ದಾರೆ. ಸರಕಾರ ಅದರ ಬಗ್ಗೆ ಆಲೋಚನೆ ಮಾಡುತ್ತಿದೆ. ಯಾವುದೇ ಸಹಕಾರ ಸಂಘಗಳ ಕಾರ್ಯಾಚರಣೆ ಏನು ಇದೆ ಅದನ್ನು ಅನುಸರಿಸುತ್ತಿಲ್ಲ. ಅವು ಮಾರಾಟ ಸಹಕಾರ ಸಂಘಗಳೇ ಆಗಿರಬಹುದು ಇಲ್ಲವೇ ಬಳಕೆದಾರರ ಸಹಕಾರ ಸಂಘಗಳೇ ಆಗಿರಬಹುದು, ಅವುಗಳಿಗೆ ಸಂಬಂಧಪಟ್ಟಂತೆ ಒಂದು ಸರಿಯಾದಂತಹ ಕಾರ್ಯಾಚರಣೆಯನ್ನು ಗೊತ್ತುಪಡಿಸಿ ಮೂಲಭೂತವಾದಂತಹ ನೀತಿಯನ್ನು ಅನುಸರಿಸಬೇಕಾಗುತ್ತದೆ.

ಇನ್ನು ಕೃಷಿ ಉತ್ಪನ್ನ ವ್ಯಾಪಾರದ ಬಗ್ಗೆ, ಖರೀದಿ ಮಾಡುವುದರ ಬಗ್ಗೆ ಹೇಳುವುದಾದರೆ ಇದನ್ನು ಯಾವ ಆಧಾರದ ಮೇಲೆ ಮಾಡಬೇಕು ಯಾವ ಸಂದರ್ಭದಲ್ಲಿ ಖರೀದಿ ಮಾಡಬೇಕು ಇದನ್ನು ಖರೀದಿ ಮಾಡುವುದರಿಂದ ಈ ದೇಶದ ಕೃಷಿಕರಿಗೆ ಲಾಭವಾಗುತ್ತದೆಯೋ ಇಲ್ಲವೇ, ಬಳಕೆದಾರರಿಗೆ ಬೇಕಾದಂತಹ ವಸ್ತುಗಳನ್ನು ಖರೀದಿ ಮಾಡುವಾಗ ಅವಶ್ಯಕ ವಸ್ತುಗಳನ್ನು ಪಡೆಯುವಾಗ ನಮಗೆ ಯಾವ ಒಂದು ನೀತಿಯೂ ಇಲ್ಲ. ನಾವು ಇದರ ಬಗ್ಗೆ ಯಾವ ಒಂದು ಗೊತ್ತಾದ ನೀತಿಯನ್ನೂ ಅನುಸರಿಸುತ್ತಿಲ್ಲ. ಆ ವಸ್ತುಗಳನ್ನು ತಂದು ಜನತಾ ಬಜಾರಿನಲ್ಲಿ ಮಾರಾಟ ಮಾಡಿದರೆ ಅದರಿಂದ ಲಾಭವನ್ನು ಗಳಿಸಲಿಕ್ಕೆ ಸಾಧ್ಯವಿಲ್ಲ. ಈ ಕೃಷಿ ಉತ್ಪನ್ನಗಳು ಏನು ಇವೆ ಇವನ್ನು ಕೊಳ್ಳುವ ಮತ್ತು ಮಾರಾಟ ಮಾಡುವ ನೀತಿ ಏನು ಇದೆ ಇದನ್ನು ಪುನರ್ ವಿಮರ್ಶೆ ಮಾಡಬೇಕಾಗಿದೆ ಎಲ್ಲಿ ಉತ್ಪಾದನ ಸ್ಥಳ ಕೇಂದ್ರಗಳು ಇವೆ ಅವು ದೊಡ್ಡ ಮಿಲ್‌ಗಳಾಗಿರಬಹುದು ಇಲ್ಲವೇ ಸಹಕಾರೀ ಸಂಸ್ಥೆಗಳಾಗಿರಬಹುದು ಅದು ಬೇರೆ ವಿಚಾರ ಈ ಎಲ್ಲಾ ಕಡೆಗಳಲ್ಲೂ ಖರೀದಿ ಮಾಡುವಾಗ ಅನುಸರಿಸಬೇಕಾದ ನೀತಿಯನ್ನು ಪುನರ್ ವಿಮರ್ಶೆ ಮಾಡಬೇಕಾಗಿದೆ. ಇನ್ನು ನೇರವಾಗಿ ಸಗಟು ವ್ಯಾಪಾರಿಯ ಮುಖಾಂತರ ಕೆ.ಸಿ.ಸಿ.ಎಫ್ ಅಂದರೆ ಕರ್ನಾಟಕ ಸರಕಾರೀ ಕೇಂದ್ರ ಸಗಟು ಮಾರಾಟ ಮಹಾ ಮಂಡಲಿ ಏನು ಇದೆ ಅವರು ಕೊಳ್ಳುವಂತಹ ಪ್ರಯತ್ನ ಮಾಡಬೇಕೆಂದು ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಅವರ ಬಗ್ಗೆ ಚಿಂತನೆ ಮಾಡುತ್ತೇವೆ ಆ ರೀತಿ ಕೆಲಸ ಮಾಡುವುದಕ್ಕೆ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇವೆ. ಇನ್ನು ಈ ಮಾರಾಟ ಮಹಾ ಮಂಡಲಿಗಳು ಇಲ್ಲವೇ ಬಳಕೆದಾರರ ಮಹಾಮಂಡಲಿಗಳಾಗಿರಬಹುದು ಅವು ಸರಿಯಾಗಿ ಕೆಲಸ ಮಾಡಿಲ್ಲ ಅಲ್ಲಿ ಹೇಗೆ ಕೆಲಸ ಮಾಡಬೇಕು ಯಾವ ಕೆಲಸ ಮಾಡಬೇಕು ಅಲ್ಲಿ ಏನು ನೀತಿ ಇದೆ ಆ ನೀತಿಯನ್ನು ಸರಿಯಾಗಿ ಅನುಸರಿಸುತ್ತಿಲ್ಲವೆಂದು ಏನು ಹೇಳಿದ್ದಾರೆ ಇದನ್ನು ನಾನು ಕೂಡ ಒಪ್ಪುತ್ತೇನೆ ಮಾರಾಟ ಮಹಾ ಮಂಡಲಿ, ಬಳಕೆದಾರರ ಮಹಾ ಮಂಡಲಿ ಇವುಗಳ ಕೆಲಸವೇನು ಇದೆ ಅವುಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ, ಅವುಗಳು ಸರಿಯಾಗಿ ಕೆಲಸ ಮಾಡಲಿ ಎಂದು ಬೇಕಾದಂತಹ ಹಣವನ್ನು ಕೊಟ್ಟಿದ್ದರೂ ಸಹ ತನ್ನ ಸದಸ್ಯರ ಮುಖಾಂತರ ಕೃಷಿಕರಿಗೆ ಬಳಕೆದಾರರಿಗೆ ಬೇಕಾದಂತಹ ಸಹಾಯವನ್ನು ಸಹಕಾರವನ್ನು ನೀಡಲು ಅನುಕೂಲವಾಗುವಂತೆ ಕೆಲಸ ಮಾಡಲಾಗಲಿಲ್ಲ. ಇನ್ನು ಎಲ್ಲಾ ಮಾರಾಟ ಸಹಕಾರ ಸಂಘಗಳೂ ಕೂಡ ಮಾರಾಟ ಮಾಡಲು ಏಜೆಂಟ್ ಆಗಬೇಕು ಮತ್ತು ಪ್ರತಿಯೊಂದು ತಾಲ್ಲೂಕಿಗೂ ಕೂಡ ಕನಿಷ್ಟ ಪಕ್ಷ ಒಂದು ಪ್ರಮುಖವಾದಂತಹ ಬೆಳೆಯನ್ನು ಅಲ್ಲಿ ಮಾರಾಟ ಮಾಡಲಿಕ್ಕೆ ಯೋಗ್ಯವಾದಂತಹ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ಮಾನ್ಯ ಸ್ನೇಹಿತರು ಹೇಳಿದ್ದಾರೆ ಅದನ್ನು ನಾನೂ ಕೂಡ ಒಪ್ಪುತ್ತೇನೆ. ಕೊನೇ ಪಕ್ಷ ೨ ಪ್ರಮುಖ ಬೆಳೆಗಳನ್ನಾದರೂ ಸಹ ಮಾರಾಟ ಮಾಡುವುದಕ್ಕೆ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೇವೆ. ಮಾರಾಟ ಸಹಕಾರ ಸಂಘಗಳ ಮುಖಾಂತರ ಪ್ರತಿಯೊಂದು ತಾಲ್ಲೂಕುಗಳಲ್ಲಿ ವಾಣಿಜ್ಯ ಬೆಳೆಗಳು ಏನು ಇದೆ ಅಥವಾ ಬೇರೆ ರೀತಿಯ ಬೆಳೆಗಳಾದ ಜೋಳ, ಭತ್ತ ಇನ್ನಿತರ ಧವಸಧಾನ್ಯಗಳು ಏನು ಇದೆ ಅಂತಹ ಪ್ರಮುಖವಾದ ಬೆಳೆಗಳನ್ನು ಮಾರಾಟ ಮಾಡಲಿಕ್ಕೆ ಸಹಾಯ ಮಾಡುವಂತಹ ರೀತಿಯಲ್ಲಿ ಕೆಲಸ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ. ಮಾರಾಟ ಮಹಾ ಮಂಡಲಿ ಏನು ಇದೆ ಅದು ಎರಡು ಕೆಲಸ ಮಾಡುತ್ತದೆ. ಒಂದು ಕೃಷಿ ಉತ್ಪನ್ನಗಳನ್ನು ಖರೀದಿ ಮಾಡುವಂತಹ ಕೆಲಸ ಇನ್ನೊಂದು ಕನ್ಸೂಮರ್ ಉತ್ಪನ್ನಗಳನ್ನು ತಾನಾಗಿಯೇ ಮಾರಾಟ ಮಾಡುವಂತಹ ಕೆಲಸ ಮಾಡುತ್ತದೆ ಈ ಎರಡು ಕೆಲಸಗಳಿಗೂ ಸಹ ಗೊತ್ತಾದ ನೀತಿ ಇಲ್ಲವೆಂದು ಮಾನ್ಯ ಪಾಟೀಲರು ಹೇಳಿದ್ದಾರೆ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ ಒಂದು ವೇಳೆ ಮಾಡಿದರೂ ಸಹ ಬಹಳ ಕಡಿಮೆ ಪ್ರಮಾಣದಲ್ಲಿ ಕೃಷಿ ಉತ್ಪಾದನೆಯನ್ನು ಖರೀದಿ ಮಾಡುವಂತಹ ಕೆಲಸ ಮಾಡುತ್ತದೆ. ಇದನ್ನು ಹೇಗೆ ಹೆಚ್ಚಿಸಬೇಕು ಅದರ ವ್ಯವಹಾರವೇನು ಇದೆ ಅದರಲ್ಲಿ ಮೂಲಭೂತವಾಗಿ ಕೃಷಿಕನಿಗೆ ಉಪಯೋಗವಾಗುವ ರೀತಿಯಲ್ಲಿ ತನ್ನ ನೀತಿಯನ್ನು ಬೆಳೆಸಿಕೊಳ್ಳಲಿಕ್ಕೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ಸರಕಾರ ಚಿಂತನೆ ಮಾಡುತ್ತದೆ.

ಸನ್ಮಾನ್ಯ ಸಭಾಧ್ಯಕ್ಷರೇ. ಇದಾದಮೇಲೆ ಈ ಪಟ್ಟಣ ಸಹಕಾರಿ ಬ್ಯಾಂಕುಗಳ ಅಥವಾ ಗೃಹ ನಿರ್ಮಾಣ ಸಹಕಾರ ಸಂಘಗಳ ಬ್ಯಾಂಕ್‌ನ ಕಾರ್ಯನಿರ್ವಹಣೆಯ ಬಗ್ಗೆ ಹೆಚ್ಚು ಪ್ರಸ್ತಾಪವನ್ನು ಮಾಡಿಲ್ಲ ಲಿಕ್ವಿಡೇಷನ್ ಸೊಸೈಟೀಸ್ ಸುಮಾರು ೪೫೫೫ ಸಹಕಾರ ಸಂಘಗಳು ಇವತ್ತಿನ ದಿವಸ ಹೆಚ್ಚು ಕಡಿಮೆ ನಮ್ಮಲ್ಲಿ ಸಮಾಪನ ಸ್ಥಿತಿಗೆ ಒಳಪಟ್ಟಂಥ ಸಹಕಾರ ಸಂಘಗಳು ಇದೆ. ಅದು ಯಾರ ತಪ್ಪೋ ಏನೋ ಗೊತ್ತಿಲ್ಲ. ೪೫೦೦ ಚಿಲ್ಲರೆ ಸುಮಾರು ಐದು ಸಾವಿರ ಸಹಕಾರ ಸಂಘಗಳು ಏನು ಇವೆ ಈ ಸಹಕಾರ ಸಂಘಗಳು ಲಿಕ್ವಿಡೇಷನ್ ಆದಮೇಲೆ ಅನೇಕ ಸಹಕಾರ ಸಂಘಗಳ ಪ್ರಭಾರವನ್ನು ಇವತ್ತಿನ

ದಿವಸದವರೆವಿಗೂ ಪಡೆದುಕೊಳ್ಳಲಿಕ್ಕೆ ಸಾಧ್ಯವಾಗಿಲ್ಲ. ಅದಕ್ಕೋಸ್ಕರವಾಗಿ ನಾವು ಒಂದು ಆದೇಶವನ್ನು ಹೊರಡಿಸಿದ್ದೇವೆ ೩೦-೬-೮೮ ರ ಒಳಗೆ ಕರ್ನಾಟಕ ರಾಜ್ಯದಲ್ಲಿರುವ ಎಲ್ಲಾ ಸಮಾಪನಾ ಸ್ಥಿತಿಗೆ ಒಳಪಟ್ಟಂಥ ಸಹಕಾರ ಸಂಘಗಳ ಪ್ರಭಾರವನ್ನು ಸಂಬಂಧಪಟ್ಟಂಥ ಸಮಾಪನಾಧಿಕಾರಿಗಳು ವಹಿಸಿಕೊಳ್ಳತಕ್ಕಂಥದ್ದು. ಇಲ್ಲದೇ ಹೋದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೇವೆ. ಖಂಡಿತವಾಗಿ ಈ ತಿಂಗಳ ಕೊನೆಯಲ್ಲಿ ಇಡೀ ಕರ್ನಾಟಕ ರಾಜ್ಯದಲ್ಲಿರುವ ಸಮಾಪನಾ ಸ್ಥಿತಿಗೆ ಒಳಪಟ್ಟಂಥ ಸಹಕಾರ ಸಂಘಗಳ ಪ್ರಭಾರವನ್ನು ವಹಿಸಿಕೊಳ್ಳುತ್ತಾರೆ. ಅವರಿಗೆ ಬರಬೇಕಾದಂಥ ಹಣವನ್ನು ವಸೂಲು ಮಾಡುತ್ತಾರೆ ಕೊಡಬೇಕಾದ ಬಾಕಿಯನ್ನು ಕೊಡುವುದಕ್ಕೆ ಪ್ರಯತ್ನವನ್ನು ಮಾಡುತ್ತಾರೆ. ಖಂಡಿತವಾಗಿ ಅವರನ್ನು ಇದೇ ಸ್ಥಿತಿಯಲ್ಲಿ ಮುಂದುವರಿಸಲಿಕ್ಕೆ ಬಿಡುವುದಿಲ್ಲ. ಸಹಕಾರ ಸಂಘಗಳ ನೊಂದಣಿಯನ್ನು ರದ್ದು ಮಾಡಲಿಕ್ಕೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ನಿಷ್ಕ್ರಿಯವಾದ ಸಮಾಪನಾ ಸ್ಥಿತಿಗೆ ಒಳಪಟ್ಟಂಥ ಎಂಟು ಸಾವಿರ ಸಹಕಾರ ಸಂಘಗಳು ಏನು ಇವೆ ಅವುಗಳನ್ನು ಪುನಶ್ಚೇತನಗೊಳಿಸುತ್ತೇವೆ. ಇಲ್ಲದಿದ್ದರೆ ಅವುಗಳನ್ನು ತೆಗೆದುಹಾಕುತ್ತೇವೆ ಎಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಮುಖ್ಯವಾಗಿ ಈ ಫಾರ್ಮಿಂಗ್ ಸೊಸೈಟಿಗಳ ಬಗ್ಗೆ ನಮ್ಮ ಇಲಾಖೆಯವರು ಬಹಳ ಕಷ್ಟಪಟ್ಟು ಅನೇಕ ಸಹಕಾರ ಸಂಘಗಳ ಕಾರ್ಯನಿರ್ವಹಣೆ ಬಗ್ಗೆ ವಿವರವಾದಂಥ ವರದಿಯನ್ನು ಈ ಸಾರಿ ನಾವು ಕೊಟ್ಟಿದ್ದೇವೆ. ಉದ್ದೇಶ ಏನೆಂದರೆ ಇರುವಂಥ ವಸ್ತುಸ್ಥಿತಿಯನ್ನು ಈ ಸದನದ ಮುಂದೆ ಈ ದೇಶದ ಜನಸಾಮಾನ್ಯರ ಮುಂದೆ ಇಡುವ ಮುಖಾಂತರ ಈ ಸಹಕಾರಿ ಆಂದೋಳನದ ಬಗ್ಗೆ ಪರಿಚಯಿಸಲು ಪ್ರಯತ್ನಿಸಿದ್ದೇವೆ. ಅದಕ್ಕೆ ಬೇಕಾದಂಥ ಸಲಹೆ ಸಹಕಾರಗಳನ್ನು ಎಲ್ಲರ ಕಡೆಯಿಂದ ಪಡೆಯಬಹುದು ಎನ್ನುವ ದೃಷ್ಟಿಯಿಂದ ನಾವು ಅದನ್ನು ಕೊಟ್ಟೆವು. ಆದರೆ ಕಾಲ ಕಡಿಮೆ ಇದ್ದ ಪ್ರಯುಕ್ತ ಬೇರೆ ಬೇರೆ ಕಾರಣಗಳಿಂದಾಗಿ ಹೆಚ್ಚು ಹೆಚ್ಚು ಸದಸ್ಯರು ಎಲ್ಲಾ ವಿಷಯಗಳ ಮಾತನಾಡಲಿಕ್ಕೆ ಸಾಧ್ಯವಾಗಿಲ್ಲ. ಆದರೂ ಇವತ್ತಿನ ದಿವಸ ಫಾರ್ಮಿಂಗ್ ಸೊಸೈಟಿಗಳು ಇವೆ, ಅದರಲ್ಲಿ ಕೆಲಸ ಮಾಡುತ್ತಿರತಕ್ಕಂಥ ಸಹಕಾರ ಸಂಘಗಳನ್ನು ತೆಗೆದುಕೊಂಡರೆ ಕೇವಲ ೧೦೦೭ ಅವೂ ಸಹಾ ತೃಪ್ತಿಕರವಾಗಿ ಕೆಲಸ ಮಾಡುತ್ತಿವೆ ಎಂಬ ಮಾತನ್ನು ಹೇಳುತ್ತಿಲ್ಲ. ಇವತ್ತು ೨೫೫೫ ನಿಷ್ಕ್ರಿಯವಾಗಿದೆ, ಅದರಲ್ಲಿ ೨೫೫೫ ಸಮಾಪನಾ ಸ್ಥಿತಿಗೆ ಒಳಪಟ್ಟಂಥವುಗಳು. ಕೇವಲ ೧೦೦೭ ಸಹಕಾರ ಸಂಘಗಳು ಮಾತ್ರ ಉತ್ತಮವಾದ ರೀತಿಯಲ್ಲಿ ಕೆಲಸ ಮಾಡುತ್ತಿವೆ ಎನ್ನತಕ್ಕಂಥ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮಲ್ಲಿ ಸುಮಾರು ೫೨ ಸಾವಿರ ಹೆಕ್ಟೇರ್ ಜಮೀನನ್ನು ಹೊಂದಿದ್ದರೂ ಸಹಾ ಅವುಗಳ ಉಪಯೋಗವನ್ನು ಸಹಕಾರಿ ಸಂಘಗಳ ಸದಸ್ಯರು ಅಥವಾ ಆಡಳಿತ ವರ್ಗದವರು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಳ್ಳದೇ ಇರುವುದು ಬಹಳ ಅಸಮಾಧಾನಗೊಳ್ಳುವಂಥ ಸಂಗತಿಯಾಗಿದೆಯೆಂದು ಭಾವಿಸಿದ್ದೇನೆ. ನಿಜವಾಗಲೂ ಈ ಒಂದು ಬೇಸಾಯ ಸಹಕಾರ ಸಂಘಗಳು ಏನು ಇವೆ, ಅವುಗಳನ್ನು ಸರಿಯಾದ ರೀತಿಯಲ್ಲಿ ನಡೆಸುವುದಕ್ಕೆ ಪ್ರಯತ್ನ ಮಾಡುತ್ತೇವೆ ಇಲ್ಲದೆ ಹೋದರೆ ವಿಸರ್ಜನೆ ಮಾಡಿ ಅವರಿಗೆ ಇರುವಂಥ ಭೂಮಿ ಏನು ಇವೆ, ಅವರಿಗೆ ಕೊಡಬೇಕೇ ಅಥವಾ ಯಾವ ರೀತಿ ಅವರಿಗೆ ವಿಲೇವಾರಿ ಮಾಡಬೇಕು ಎಂಬುದನ್ನು ಸಹಾ ಈ ಸಂದರ್ಭದಲ್ಲಿ ವಿಚಾರ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳುತ್ತೇನೆ. ಇದಾದಮೇಲೆ ಮುಖ್ಯವಾಗಿ ಹತ್ತರಿಂದ ಹದಿನಾರು ರಾಜ್ಯಮಟ್ಟದ ಮಹಾಮಂಡಳಗಳು ನಮ್ಮಲ್ಲಿವೆ. ಈ ೧೬ ಮಹಾ ಮಂಡಳಿಗಳ ಪೈಕಿ ಬಹಳ ಪ್ರಾಮುಖ್ಯತೆಯನ್ನು ಹೊಂದಿರುವಂಥದ್ದು ಅಪೆಕ್ಸ್ ಬ್ಯಾಂಕ್ ಮತ್ತು ಕರ್ನಾಟಕ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್. ಕರ್ನಾಟಕ ಕನ್‌ಸ್ಯೂಮರ್ಸ್ ಕೋ–ಆಪರೇಟಿವ್ ಫೆಡರೇಷನ್ ಮತ್ತು ಮಾರ್ಕೆಟಿಂಗ್ ಫೆಡರೇಷನ್ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಇನ್ನು ಉಳಿದ ಮಹಾಮಂಡಳಗಳಿಗೂ ಸಹಾ ಅಷ್ಟೇ ಪ್ರಾಮುಖ್ಯತೆ ಇದೆ. ಆದರೆ ಅಪೆಕ್ಸ್ ಬ್ಯಾಂಕ್ ಮತ್ತು ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಏನು ಇದೆ, ಇವುಗಳ ಪಾತ್ರ ಬಹಳ ಹಿರಿದಾದುದು.

ಅಪೆಕ್ಸ್ ಬ್ಯಾಂಕ್ ಉತ್ತಮವಾಗಿ ಕೆಲಸವನ್ನು ಮಾಡುತ್ತಿದೆ. ತನ್ನ ೧೯ ಜಿಲ್ಲಾಕೇಂದ್ರ ಬ್ಯಾಂಕ್ ಮುಖಾಂತರ ೪೮೧೧ ಸಹಕಾರ ಸಂಘಗಳ ಪೈಕಿ ಸುಮಾರು ೬೫೮ ಸಹಕಾರ ಸಂಘಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಸಹಕಾರ ಸಂಘಗಳಿಗೆ ಸಹ ಆರ್ಥಿಕ ನೆರವನ್ನು ನೀಡುತ್ತಿದೆ. ಇನ್ನು ೬೫೮ ಸಹಕಾರ ಸಂಘಗಳು ದೇಶದ ವಾಣಿಜ್ಯ ಬ್ಯಾಂಕುಗಳ ಮುಖಾಂತರ ಆರ್ಥಿಕ ನೆರವನ್ನು ಪಡೆಯುತ್ತಿದೆ. ಉಪ ನಾಯಕರಾದ ಮಾನ್ಯ ಖರ್ಗೆಯವರು ಹಾಗೂ ಹಿರಿಯ ಸದಸ್ಯರಾದ ಶ್ರೀ ಮಾನ್ ಪಾಟೀಲ್‌ರವರ ಗಮನಕ್ಕೆ ಒಂದು ವಿಷಯವನ್ನು ತರಲಿಕ್ಕೆ ಬಯಸುತ್ತೇನೆ. ೬೫೮ ಸಹಕಾರ ಸಂಘಗಳಿಗೆ ವಾಣಿಜ್ಯ

ಬ್ಯಾಂಕುಗಳು ಆರ್ಥಿಕ ನೆರವನ್ನು ಕೊಟ್ಟಿದೆ. ಈಗ ಒಂದು ಹೊಸ ಪ್ರವೃತ್ತಿಯನ್ನು ವಾಣಿಜ್ಯ ಬ್ಯಾಂಕುಗಳು ಹೊಂದಿವೆ. ನಾವು ಬಡ್ಡಿ ರಿಯಾಯಿತಿಯನ್ನು ಕೊಟ್ಟಿದ್ದೇವೆ. ಶೇಕಡಾ ೬೦ ರಿಂದ ೭೦ರಷ್ಟು ಹಣ ವಸೂಲು ಮಾಡಿದ್ದೇವೆ. ಪುನಃ ಸಾಲವನ್ನು ಕೊಡಿ ಎಂದು ಬ್ಯಾಂಕ್‌ನವರಿಗೆ ಹೇಳಿದರೆ ಅವರು ಕೊಡುವುದಿಲ್ಲ ಎಂಬ ಮಾತನ್ನು ಹೇಳುತ್ತಾರೆ. ಇದು ನನಗೆ ಅರ್ಥವಾಗುವುದಿಲ್ಲ. ನಮ್ಮ ದೇಶದಲ್ಲಿರತಕ್ಕ ವಾಣಿಜ್ಯ ಬ್ಯಾಂಕ್‌ಗಳು ದೇಶದ ಸಾಮಾನ್ಯ ರೈತ ತನ್ನ ಸಾಲವನ್ನು ಹಿಂತಿರುಗಿಸಿದ ಮೇಲೆ ಮತ್ತೆ ಹಣವನ್ನು ಸಾಲ ರೂಪವಾಗಿ ಪಡೆಯಬೇಕೆಂದು ಇಚ್ಛಿಸಿದರೆ ಈ ಬ್ಯಾಂಕುಗಳು ಕೊಡಲು ಸಾಧ್ಯವಿಲ್ಲವೆಂಬ ಮಾತನ್ನು ಹೇಳಿದ್ದಾರೆ. ಇದು ಅತ್ಯಂತ ದುರದೃಷ್ಟಕರ. ಇದನ್ನು ಸರಿಪಡಿಸಲು ಸರ್ಕಾರ ಸಂಬಂಧಪಟ್ಟವರ ಮೇಲೆ ಒತ್ತಾಯ ಮಾಡುತ್ತದೆ. ಮಾನ್ಯ ಖರ್ಗೆಯವರು ಹಾಗೂ ಪಾಟೀಲ್‌ರವರು ತಮ್ಮ ಪಕ್ಷದ ಸದಸ್ಯರಿಂದ ಈ ಬಗ್ಗೆ ಒತ್ತಾಯ ಮಾಡುತ್ತಾರೆಂದು ತಿಳಿದಿದ್ದೇನೆ. ಯಾವ ಒಂದು ಉದ್ದೇಶ ಸಾಧನೆಗಾಗಿ ಸಹಕಾರ ಸಂಘಗಳನ್ನು ಪ್ರಾರಂಭ ಮಾಡಿದ್ದೇವೆ ಆ ಒಂದು ಉದ್ದೇಶ ಸಾಧನೆ ಆಗದಿದ್ದರೆ ಏನು ಪ್ರಯೋಜನ ? ಬರೇ ಒಂದೆರಡು ಬ್ಯಾಂಕ್‌ಗಳು ಹಣವನ್ನು ವಾಪಸ್ ಕೊಡಲಿಕ್ಕೆ ಪ್ರಯತ್ನ ಮಾಡುತ್ತಿವೆ. ಆದರೆ ಮುಖ್ಯವಾದಂತಹ ಬ್ಯಾಂಕ್‌ಗಳು ಸಾಲವನ್ನು ಮರು ಪಾವತಿ ಮಾಡಿದವನಿಗೆ ಪುನಃ ಸಾಲವನ್ನು ಕೊಡುವುದಕ್ಕೆ ಸಾಧ್ಯವಿಲ್ಲವೆಂದು ಬರವಣಿಗೆಯ ಮೂಲಕ ತಿಳಿಸಿದ್ದಾರೆ. ಇದರ ಬಗ್ಗೆ ಸರ್ಕಾರ ಒಂದು ವ್ಯವಸ್ಥೆ ಮಾಡುತ್ತದೆ, ಮತ್ತೆ ಹಣವನ್ನು ಕೊಡತಕ್ಕಂಥ ವ್ಯವಸ್ಥೆ ಮಾಡುತ್ತೇವೆ. ಇಲ್ಲದಿದ್ದರೆ ಅವರು ಒಂದು ವೇಳೆ ಸಹಕಾರ ಕೊಡದೇ ಇದ್ದರೆ ಈ ಸಹಕಾರ ಸಂಘಗಳನ್ನು ವಾಣಿಜ್ಯ ಬ್ಯಾಂಕ್‌ಗಳಿಂದ ವಾಪಸ್ ಪಡೆಯುತ್ತೇವೆ. ಅಪೆಕ್ಸ್ ಬ್ಯಾಂಕ್ ಮುಖಾಂತರ, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳ ಮುಖಾಂತರ ಮತ್ತು ಪ್ರಾಥಮಿಕ ಸಹಕಾರ ಸಂಘಗಳ ಮುಖಾಂತರ ಆರ್ಥಿಕ ನೆರವನ್ನು ಕೊಡತಕ್ಕ ಪ್ರಯತ್ನವನ್ನು ಮಾಡುತ್ತೇವೆ. ಅದೇ ರೀತಿ ಜಿಲ್ಲಾ ಕೇಂದ್ರ ಬ್ಯಾಂಕ್, ಅಪೆಕ್ಸ್ ಬ್ಯಾಂಕ್ ಇವುಗಳು ಕರ್ತವ್ಯ ನಿರ್ವಹಣೆ ಬಗ್ಗೆ. ಜಿಲ್ಲಾ ಕೇಂದ್ರ ಬ್ಯಾಂಕ್‌ಗಳ ಬಗ್ಗೆ ಹೆಚ್ಚಿಗೆ ಹೇಳಬೇಕಾದ ಅವಶ್ಯಕತೆ ಇಲ್ಲ. ಈಗಾಗಲೇ ನಮ್ಮ ರಾಜ್ಯದಲ್ಲಿರತಕ್ಕ ೧೯ ಡಿ.ಸಿ.ಸಿ ಬ್ಯಾಂಕ್‌ಗಳು ವಿಶೇಷ ಕಾರ್ಯಕ್ರಮದಿಂದ ಬಲಗೊಳಿಸುವ ಕಾರ್ಯಕ್ರಮವನ್ನು ಹಾಕಿಕೊಂಡಿವೆ. ಅದು ಇಂಟಿಗ್ರೇಟೆಡ್ ಕೋ–ಆಪರೇಟೀವ್ ಡೆವಲಪ್‌ಮೆಂಟ್ ಪ್ರಾಜೆಕ್ಟ್ ಆಗಿರಬಹುದು, ಅಥವಾ ಪೈಲಟ್ ಪ್ರಾಜೆಕ್ಟ್ ಆಗಿರಬಹುದು ಅಥವಾ ೧೨ ಪಾಯಿಂಟ್ ಪ್ರೋಗ್ರಾಮ್ ಆಗಿರಬಹುದು. ಎಲ್ಲಾ ಯೋಜನೆಗಳ ಮುಖಾಂತರ ೬ ದುರ್ಬಲ ಬ್ಯಾಂಕ್‌ಗಳನ್ನು ಇವೊತ್ತಿನ ದಿವಸ ಪುನಶ್ಚೇತನಗೊಳಿಸುವಂತಹ ಕಾರ್ಯಕ್ರಮಗಳನ್ನು ಹಾಕಿಕೊಂಡು ಆ ಕಾರ್ಯಕ್ರಮದ ಮುಖಾಂತರ ಜಿಲ್ಲಾ ಕೇಂದ್ರ ಬ್ಯಾಂಕ್‌ಗಳನ್ನು ಬಲಪಡಿಸುತ್ತೇವೆ. ಇದರ ಮುಖಾಂತರ ಪ್ರಾಥಮಿಕ ಸಹಕಾರಿ ಸಂಘಗಳನ್ನು ಬಲಪಡಿಸಿ, ದೇಶದ ಕೃಷಿಕನಿಗೆ ಹೆಚ್ಚಿನ ಸಾಲ ಕೊಡುವಂತಹ ವ್ಯವಸ್ಥೆಯನ್ನು ಮಾಡಲಿಕ್ಕೆ ನಾವು ಪ್ರಯತ್ನ ಮಾಡುತ್ತೇವೆ. ಇನ್ನು ಅತೀ ಮುಖ್ಯವಾದಂತಹ ಮಾರ್ಕೆಟಿಂಗ್ ಮಹಾ ಮಂಡಲದ ಬಗ್ಗೆ ಬಳಕೆದಾರರ ಮಹಾ ಮಂಡಲದ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ. ಆದಾದ ಮೇಲೆ ಅದಕ್ಕಿಂತ ಮುಖ್ಯವಾದಂತಹ ಒಂದು ಮಾತನ್ನು ಮಾನ್ಯ ಪಾಟೀಲ್‌ರವರು ಹೇಳಿದ್ದಾರೆ. ಲೇವಾದೇವಿ ಬಗ್ಗೆ ಕಾಯಿದೆ, ಕಾನೂನು ಇವುಗಳನ್ನು ಕಟ್ಟು ನಿಟ್ಟಾಗಿ ಜಾರಿಗೆ ತರಬೇಕೆಂಬ ಮಾತನ್ನು ಹೇಳಿದ್ದಾರೆ, ಇದಕ್ಕೆ ಖಂಡಿತವಾಗಿ ಪ್ರಯತ್ನ ಮಾಡುತ್ತೇವೆ. ಇವೊತ್ತಿನ ದಿವಸ ನಮ್ಮಲ್ಲಿರುವ ಸಿಬ್ಬಂದಿ ಏನು ಇದೆ ಅದು ಸಾಲದು ಎಂಬ ಕೊರಗು ನಮಗೂ ಇದೆ. ಅನೇಕ ಕರ್ತವ್ಯಗಳನ್ನು ಅವರು ನಿರ್ವಹಿಸಬೇಕಾಗಿದೆ. ಅಧಿಕಾರಿಗಳ ಸಂಖ್ಯೆ ಕಡಿಮೆ ಇರುವುದರಿಂದ ಹೆಚ್ಚು ಕಟ್ಟು ನಿಟ್ಟಾಗಿ ಜಾರಿ ಮಾಡಲಿಕ್ಕೆ ಸಾಧ್ಯವಾಗಿಲ್ಲ. ಆದಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡಬೇಕೆಂಬ ಮಾತನ್ನು ಮಾನ್ಯ ಪಾಟೀಲ್‌ರವರು ಹೇಳಿದ್ದಾರೆ. ಅದನ್ನು ನಾನೂ ಒಪ್ಪುತ್ತೇನೆ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆಂದು ಮಾನ್ಯ ಪಾಟೀಲ್‌ರವರಿಗೆ ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಡೆಟ್ ರಿಲೀಫ್ ಆಕ್ಟ್ ಇದೆ. ಆ ಡೆಟ್ ರಿಲೀಫ್ ಆಕ್ಟ್ ಪ್ರಕಾರ ತಮಗೆ ಗೊತ್ತಿದೆ, ಹಿಂದೆ ೨೦ ಪಾಯಿಂಟ್ ಪ್ರೋಗ್ರಾಮ್‌ನಲ್ಲಿ ಪ್ರತಿಯೊಬ್ಬ ಅಸಿಸ್ಟೆಂಟ್ ಕಮೀಷನರ್‌ರವರಿಗೆ ಇನ್‌ಸ್ಟ್ರಕ್ಷನ್ ಕೊಟ್ಟು ಯಾರದು ೩,೮೦೦ ರೂಪಾಯಿಗಿಂತ ಆದಾಯ ಕಡಿಮೆ ಇದೆ, ಅಂಥವರ ಅಪ್ಲಿಕೇಶನ್ಸ್ ತೆಗೆದುಕೊಂಡು ಅವರಿಗೆ ರಿಲೀಫ್ ಕೊಡಬೇಕು ಎನ್ನತಕ್ಕದ್ದು ಇತ್ತು. ಇವೊತ್ತು ಒಂದು ಕಡೆ ಕೂಡ ಒಂದು ಜಿಲ್ಲೆಯಲ್ಲೂ ರಿವ್ಯೂ ಮಾಡುತ್ತಿಲ್ಲ. ದುರ್ದೈವ ಅಂದರೆ ಈ ಪ್ರಶ್ನೆಯನ್ನು ಮಾನ್ಯ ಜಾಲಪ್ಪನವರಿಗೆ ಎರಡು ಸಲ ಕೇಳಿದ್ದೇನೆ. ಇದು ನನ್ನ ಡಿಪಾರ್ಟ್‌ಮೆಂಟಿಗೆ

ಸೇರುತ್ತದೋ ಅಥವಾ ಇಲ್ಲವೋ ನೋಡುತ್ತೇನೆ ಎಂದರು. ಕೊನೆಗೆ ಅಲ್ಲಿಯೇ ಕುಳಿತಿದ್ದ ರಿಜಿಸ್ಟ್ರಾರ್ ಇದು ನಮ್ಮ ಡಿಪಾರ್ಟ್‌ಮೆಂಟ್‌ಗೆ ಬರುತ್ತದೆ ಎಂದು ಒಪ್ಪಿಕೊಂಡರು. ಮುಂದಿನ ಸಲ ಇದರ ಬಗ್ಗೆ ಹೇಳುತ್ತೇನೆ ಎಂದು ಹೇಳಿದರು, ಆದರೆ ಈಗ ಅವರು ಇಲ್ಲ.

ಶ್ರೀ ಏಕಾಂತಯ್ಯ.—ಕಂದಾಯ ಮಂತ್ರಿಗಳಿಗೆ ಇದು ಬರುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇಲ್ಲ ಬರುವುದಿಲ್ಲ. ಇದರ ಬಗ್ಗೆ ಕಳೆದ ಸಾರಿ ಕರ್ನಾಟಕ ಅಗ್ರಿಕಲ್ಚರಿಸ್ಟ್ ಡೆಟ್ ರಿಲೀಫ್ ಆಕ್ಟ್ ಕೆಳಗಡೆ ಬಡವರಿಗೆ ಸಾಲ ಮಾಫಿ ಮಾಡಿ ಎಂದು ಕೇಳಿದ್ದೆ. ಅಪ್ಲಿಕೇಶನ್ಸ್ ಕೊಟ್ಟಿದ್ದಾರೆ. ಅದನ್ನು ರಿವ್ಯೂ ಮಾಡತಕ್ಕದ್ದು ಕೋ-ಆಪರೇಟೀವ್ ಡಿಪಾರ್ಟ್‌ಮೆಂಟ್‌ಗೆ ಬರುತ್ತದೆ. ಯಾರು ರಿವ್ಯೂ ಮಾಡುತ್ತಾ ಇಲ್ಲ. ಎಷ್ಟು ಅಪ್ಲಿಕೇಷನ್ಸ್ ಬಂದಿವೆ, ಎಷ್ಟು ಜನರಿಗೆ ರಿಲೀಫ್ ಕೊಟ್ಟಿದ್ದಾರೆ. ಇದು ಎಲ್ಲಾ ವಿವರಣೆ ಬೇಕು. ದೇವರಾಜ್ ಅರಸ್ ಕಾಲದಲ್ಲಿ ಡೆಪ್ಯುಟಿ ಕಮೀಷನರ್‌ರವರಿಗೆ ಇನ್‌ಸ್ಟ್ರಕ್ಷನ್ಸ್ ಕೊಟ್ಟು ಎಕ್ಸಿಬಿಟ್ ಮಾಡಿದ್ದು ತಮಗೆ ಗೊತ್ತಿರಬಹುದು.

ಈ ಒಂದು ಆಕ್ಟ್ ಕೆಳಗೆ ಬಡವರಿಗೆ ಸೇರಿದ ಕೋಟ್ಯಾಂತರ ರೂಪಾಯಿಗಳಷ್ಟು ಬೆಲೆ ಬಾಳುವ ವಸ್ತುಗಳನ್ನು ಬಿಡುಗಡೆ ಮಾಡಿದ್ದೇವೆಂದು ಅವರು ಹೇಳಿದ್ದರು. ಬಿಡುಗಡೆ ಆದಂಥದ್ದು ಬಂಗಾರ ಇರಬಹುದು, ಜಮೀನು ಇರಬಹುದು, ಮನೆ ಇರಬಹುದು, ಅಂತೂ ಎಲ್ಲದಕ್ಕೂ ಆಗ ಪರಿಹಾರ ಸಿಕ್ಕಿತು. ಆಗ ಇದರ ಪರಿಹಾರ ಪಡೆಯಲು ವಾರ್ಷಿಕ ೨೪೦೦ ರೂಪಾಯಿಗಳ ವಾರ್ಷಿಕ ವರಮಾನ ಇರಬೇಕೆಂದು ನಿಯಮ ಮಾಡಿದ್ದರು. ಈಗ ಅದನ್ನು ೩೬೦೦ ರೂಪಾಯಿಗಳೆಂದು ಮಾಡಿದ್ದಾರೆ. ಇದರ ಬಗ್ಗೆ ಈಗ ಮತ್ತೆ ಏತಕ್ಕೆ ರಿವ್ಯೂ ಮಾಡುತ್ತಿಲ್ಲ. ಇದು ಬಡವರಿಗೆ ಸಂಬಂಧಪಟ್ಟಿದ್ದು. ಮಾನ್ಯ ಜಾಲಪ್ಪನವರು ಇದು ಕಂದಾಯ ಇಲಾಖೆಗೆ ಸೇರಿದ್ದು ಎಂದು ಹೇಳಿದ್ದರು. ಆದರೆ ಅದು ಸರಿಯಲ್ಲ. ಇದು ಇಲಾಖೆಗೆ ಸಂಬಂಧಪಟ್ಟಿದ್ದು. ಆದ್ದರಿಂದ ನೀವೇ ಈ ಕೆಲಸ ಮಾಡಬೇಕು.

ಶ್ರೀ ಎಚ್. ಏಕಾಂತಯ್ಯ.—ಮಾನ್ಯ ವಿರೋಧಪಕ್ಷದ ಉಪನಾಯಕರು ಹೇಳಿದ್ದನ್ನು ನಾನು ಗಮನಿಸುತ್ತೇನೆ. ಈ ಕರ್ನಾಟಕ ಅಗ್ರಿಕಲ್ಚರಲ್ ಡೆಟ್ ರಿಲೀಫ್ ಆಕ್ಟ್ ಕೆಳಗೆ ನಮ್ಮ ಇಲಾಖೆ ವತಿಯಿಂದ ರಿವ್ಯೂ ಆಗಬೇಕೆಂದು ಹೇಳಿದ್ದಾರೆ. ಇದರ ಬಗ್ಗೆ ಏಷ್ಟೆಷ್ಟು ಕೆಲಸಗಳಾಗಬೇಕು ಎಂಬ ಬಗ್ಗೆ ಸಹ ಹೇಳಿದ್ದಾರೆ. ಇದರ ಬಗ್ಗೆ ನಾನು ಪರಿಶೀಲನೆ ಮಾಡುತ್ತೇನೆ.

ಇನ್ನು ಸನ್ಮಾನ್ಯ ಪಾಟೀಲ್ ಅವರು ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ನಾವು ಈಗ ಕೃಷಿಕರಿಗೆ ಏನು ಸಾಲ ಕೊಡುತ್ತೇವೆ, ಅದು ಕೃಷಿಗೆ ಸಂಬಂಧಪಟ್ಟಂತಹ ಸಾಲ ಮಾತ್ರ ಆಗಬಾರದು. ಕೃಷಿಕರ ಮನೆತನದ ಖರ್ಚಿಗೆ ಬೇಕಾದಂಥ ಹಣವನ್ನು ಸಹ ಸಾಲದ ರೂಪದಲ್ಲಿ ಕೊಡುವಂತಹ ವ್ಯವಸ್ಥೆ ಆಗಬೇಕು ಎಂದು ಸಲಹೆ ಮಾಡಿದ್ದಾರೆ. ಅದು ಅವಶ್ಯವಾಗಿ ಆಗಬೇಕು ಎಂದು ನಾನು ಸಹ ಅಂದುಕೊಂಡಿದ್ದೇನೆ. ಈ ದಿಶೆಯಲ್ಲಿ ರೈತರಿಗೆ ಏನು ಸಹಾಯ ಕೊಡುವುದಕ್ಕೆ ಸಾಧ್ಯವಿದೆ ಎಂಬುದನ್ನು ನಾನು ಪರಿಶೀಲನೆ ಮಾಡುತ್ತೇನೆ.

ಇನ್ನು ರೈತರಿಗೆ ಕೊಡುತ್ತಿರುವ ಸಾಲದ ಮೇಲೆ ವಿಧಿಸುತ್ತಿರುವ ಬಡ್ಡಿಯ ಬಗ್ಗೆ ಹೇಳಿದ್ದಾರೆ. ನಬಾರ್ಡ್‌ನವರು ನಮಗೆ ಕೊಡುತ್ತಿದ್ದ ಸಾಲದ ಮೇಲೆ ಶೇಕಡಾ ೭ರಷ್ಟು ಬಡ್ಡಿಯನ್ನು ವಿಧಿಸುತ್ತಿದ್ದರು. ಈಗ ಇದನ್ನು ಕಡಿಮೆ ಮಾಡಿದ್ದಾರೆ, ಅವರು ನಮಗೆ ಕೊಡುವಂತಹ ಸಾಲದ ಮೇಲೆ ಶೇಕಡಾ ೩ರಿಂದ ಶೇಕಡಾ ೫ರಷ್ಟು ಬಡ್ಡಿಯನ್ನು ವಿಧಿಸಿದರೂ ಸಹ ಅದು ಕೊನೆಗೆ ಸಾಲಗಾರರ ಕೈಗೆ ಹೋಗಿ ಮುಟ್ಟುವಾಗ ಅವರು ಶೇಕಡಾ ೧೦ರಿಂದ ಶೇಕಡಾ ಹದಿನೈದುವರೆಯಷ್ಟು ಕೊಡಬೇಕಾಗುತ್ತದೆಂದು ಹೇಳಿದರು. ನಾವು ಏಳೂವರೆ ಸಾವಿರದವರೆಗೆ ಸಾಲ ಕೊಟ್ಟರೆ, ಅದರ ಮೇಲೆ ಶೇಕಡಾ ೧೦ರಷ್ಟು ಮೀರದಂತೆ ಬಡ್ಡಿ ವಿಧಿಸಬಹುದು. ೨೫೦೦ ರೂಪಾಯಿಗಳಿಂದ ೧೫ ಸಾವಿರ ರೂಪಾಯಿಗಳವರೆಗೆ ಸಾಲ ಕೊಟ್ಟರೆ ಶೇಕಡಾ ಹನ್ನೊಂದುವರೆಯಷ್ಟು, ೧೫ ಸಾವಿರದಿಂದ ೨೫ ಸಾವಿರದವರೆಗೆ ಸಾಲ ಕೊಟ್ಟರೆ ಶೇಕಡಾ ಹನ್ನೆರಡೂವರೆಯಿಂದ ಶೇಕಡಾ ೧೪ರವರೆಗೆ ಹಾಗೂ ೨೫ ಸಾವಿರಕ್ಕಿಂತ ಹೆಚ್ಚು ಸಾಲ ಕೊಟ್ಟರೆ ಶೇಕಡಾ ೧೫ರಷ್ಟು ಬಡ್ಡಿ ವಿಧಿಸಲಾಗುತ್ತಿದೆ. ಈ ಇಂಟರೆಸ್ಟ್ ಮಾರ್ಜಿನ್ ಏನಿದೆ, ಅದು ಶೇಕಡಾ ೩ರಿಂದ ಶೇಕಡ ಹತ್ತರಷ್ಟು ಇರಬಹುದು ಇಲ್ಲವೇ ಶೇಕಡಾ ೫ರಿಂದ ಶೇಕಡಾ ಹತ್ತರಷ್ಟು ಆಗಿರಬಹುದು, ಈ ಮಾರ್ಜಿನ ಹಣವನ್ನು ಯಾರುಯಾರು ಹಂಚಿಕೊಳ್ಳಬೇಕು ಎಂಬ ಬಗ್ಗೆ ಮಾನ್ಯ ಪಾಟೀಲ್ ಅವರು ಹೇಳಿದ್ದಾರೆ. ಅಪೆಕ್ಸ್ ಬ್ಯಾಂಕ್ ವಿಧಿಸುತ್ತಿರುವ ಬಡ್ಡಿ ಪೂರ್ವಾದಿ ಬಡ್ಡಿ ಎಂದು

ಅವರು ಹೇಳಿದರು. ಅಂದರೆ ಇದು ಹೆಚ್ಚಿನ ಬಡ್ಡಿ ಆಗಿದೆ ಎಂಬ ಅರ್ಥದಲ್ಲಿ ಅವರು ಹೇಳಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಕೆ. ಎಚ್. ಪಾಟೀಲ್. ಅಪೆಕ್ಸ್ ಬ್ಯಾಂಕ್‌ನವರು ಕೊಡುವಂತಹ ಸಾಲ ಮೂರು ನಾಲ್ಕು ಜನರ ಕೈದಾಟಿ ರೈತರ ಕೈಗೆ ಮುಟ್ಟುವ ಹೊತ್ತಿಗೆ ಅದು ಮಾರ್ವಾಡಿ ಬಡ್ಡಿಗಿಂತ ಜಾಸ್ತಿ ಆಗಿರುತ್ತದೆಂದು ನಾನು ಹೇಳಿದ್ದೇ ಹೊರತು ಅಪೆಕ್ಸ್ ಬ್ಯಾಂಕ್‌ನವರು ಮಾರ್ವಾಡಿ ಬಡ್ಡಿ ವಿಧಿಸುತ್ತಿದ್ದಾರೆಂದು ನಾನು ಹೇಳಲಿಲ್ಲ.

ಶ್ರೀ ಎಚ್. ಏಕಾಂತಯ್ಯ.—ಅದನ್ನು ನಾನು ಒಪ್ಪುತ್ತೇನೆ. ಈಗ ನಾವು ರೈತರಿಗೆ ೨೫೦ ರಿಂದ ೩೦೦ ಕೋಟಿ ರೂಪಾಯಿಗಳವರೆಗೆ ಸಾಲ ಏನು ಕೊಡುತ್ತಿದ್ದೇವೆ, ಇದರ ಮ್ಯಾನೇಜೀರಿಯಲ್ ಕಾಸ್ಟ್‌ನ್ನು ನಾವು ಕಡಿಮೆ ಮಾಡಬೇಕಾಗುತ್ತದೆ. ಇದನ್ನು ಕಡಿಮೆ ಮಾಡುವ ಬಗ್ಗೆ ಆಲೋಚನೆ ಮಾಡಬೇಕಾಗುತ್ತದೆ. ಈ ಬಗ್ಗೆ ಮಾನ್ಯ ಗುರುಪಾದಪ್ಪನವರು ಸಿಂಗಲ್ ವಿಂಡೋ ಸಿಸ್ಟಮ್ ಜಾರಿಗೆ ತೆಗೆದುಕೊಂಡು ಬನ್ನಿ ಎಂದು ಸಲಹೆ ಮಾಡಿದರು. ಈಗ ಎರಡು ವಿಧದಲ್ಲಿ ಸಹಕಾರಸಂಘಗಳು ಇವೆ. ಫೆಡರಲ್ ಸೊಸೈಟಿ ಆದಂಥ ಅಪೆಕ್ಸ್ ಬ್ಯಾಂಕ್ ಒಂದನೇ ಹಂತವಾದರೆ, ಸೆಂಟ್ರಲ್ ಸೊಸೈಟಿ ಆದಂಥ ಡಿ.ಸಿ.ಸಿ. ಬ್ಯಾಂಕ್‌ಗಳು ಎರಡನೇ ಹಂತವಾಗಿದೆ. ಮೊದಲು ನಬಾರ್ಡ್‌ನವರು ಅಪೆಕ್ಸ್ ಬ್ಯಾಂಕ್‌ನವರಿಗೆ ಸಾಲ ಕೊಡಬೇಕು. ಅನಂತರ ಅಪೆಕ್ಸ್ ಬ್ಯಾಂಕ್‌ನವರು ಡಿ.ಸಿ.ಸಿ. ಬ್ಯಾಂಕ್‌ಗಳಿಗೆ ಸಾಲ ಕೊಡಬೇಕು. ಡಿ.ಸಿ.ಸಿ. ಬ್ಯಾಂಕ್‌ಗಳು ಪ್ರಾಥಮಿಕ ಸಹಕಾರ ಸಂಘಗಳಿಗೆ ಸಾಲ ಕೊಡಬೇಕು. ಈ ಸಹಕಾರ ಸಂಘಗಳು ರೈತರಿಗೆ ಸಾಲ ಕೊಡುವ ಹೊತ್ತಿಗೆ ಅದರ ಮೇಲಿನ ಬಡ್ಡಿ ಜಾಸ್ತಿ ಆಗುತ್ತದೆ. ಈ ಬಡ್ಡಿ ದರವನ್ನು ಕಡಿಮೆ ಮಾಡಬೇಕಾದರೆ, ಈಗಿರುವಂತಹ ಎರಡು ಹಂತಗಳಲ್ಲಿ ಒಂದು ಹಂತವನ್ನು ಕಡಿಮೆ ಮಾಡಬೇಕಾಗುತ್ತದೆ. ಇದರ ಜೊತೆಗೆ ಈ ಬಗ್ಗೆ ಇಡೀ ರಾಷ್ಟ್ರದಲ್ಲಿ ಒಂದು ನೀತಿಯನ್ನು ಅನುಸರಿಸುವುದು ಒಳ್ಳೆಯದೆಂದು ನನ್ನ ಭಾವನೆ. ಬೇರೆ ರಾಜ್ಯಗಳಲ್ಲಿ ಈ ಬಗ್ಗೆ ಯಾವ ರೀತಿ ಮಾಡುತ್ತಿದ್ದಾರೆಂಬುದನ್ನು ಸಹ ನಾವು ನೋಡಬೇಕಾಗುತ್ತದೆ. ಒಟ್ಟಿನಲ್ಲಿ ಈ ಬಡ್ಡಿಯನ್ನು ಕಡಿಮೆ ಮಾಡುವುದಕ್ಕೆ ಸಾಧ್ಯವಿದೆ. ಇದನ್ನು ನಾನು ಪರಿಶೀಲನೆ ಮಾಡುತ್ತೇನೆ. ನಾವು ೨೫೦ ಕೋಟಿ ರೂಪಾಯಿಗಳ ಸಾಲವನ್ನು ವಿತರಣೆ ಮಾಡಬೇಕಾದರೆ ಇದರ ಆಪರೇಷನ್ ಕಾಸ್ಟ್ ಒಂದು ಕೋಟಿ ರೂಪಾಯಿಗಳಾಗುತ್ತದೆ. ಈ ಕಾರಣದಿಂದ ನಿಮಗೆ ಶೇಕಡಾ ೫ರ ಬಡ್ಡಿಯಲ್ಲಿ ಸಿಗುವ ಸಾಲ ರೈತರಿಗೆ ಮುಟ್ಟುವಷ್ಟರಲ್ಲಿ ಬಡ್ಡಿ ದರ ಶೇಕಡಾ ಹತ್ತೂವರೆ ಪರ್ಸೆಂಟ್‌ನಷ್ಟು ಆಗಿರುತ್ತದೆ.

ಶ್ರೀ ಕೆ. ಹೆಚ್. ಪಾಟೀಲ್.—ಈಗ ಸೆಂಟ್ರಲ್ ಬ್ಯಾಂಕ್‌ಗಳು ಅನೇಕ ಬ್ರಾಂಚ್‌ಗಳನ್ನು ಓಪನ್ ಮಾಡಿವೆ. ಇವು ಕೇವಲ ಸಾಲ ಕೊಡುವಂತಹ ಬ್ಯಾಂಕ್‌ಗಳು ಮಾತ್ರ ಆಗಬಾರದು. ರೈತರಿಗೆ ಸಾಲ ವಿತರಣೆ ಮಾಡಿದ ಮೇಲೆ ಸಾಲ ಪಡೆದವರ ಹೊಲದಲ್ಲಿ ಏನೇನು ಬೆಳೆದಿದ್ದಾರೆಂಬುದನ್ನು ಹೋಗಿ ಇವರು ನೋಡಬೇಕು. ಈ ಬಗ್ಗೆ ಇಲ್ಲಿ ಹೆಚ್ಚು ಚರ್ಚೆ ಮಾಡಲು ಸಾಧ್ಯವಾಗುವುದಿಲ್ಲ. ಆದ್ದರಿಂದ ತಮ್ಮ ಚೇಂಬರ್‌ನಲ್ಲಿ ಒಂದು ಮೀಟಿಂಗ್ ಕರೆಯಿರಿ. ಮಾನ್ಯ ಅಧ್ಯಕ್ಷರಿಗೂ ಸಹ ಇದರ ವಿಚಾರ ಗೊತ್ತಿದೆ. ಆದ್ದರಿಂದ ಇದರ ಬಗ್ಗೆ ಪರಿಶೀಲನೆ ಮಾಡಲು ಒಂದು ಮೀಟಿಂಗ್ ಕರೆಯಿರಿ, ಈ ಅಪೆಕ್ಸ್ ಬ್ಯಾಂಕ್ ಮತ್ತು ಡಿಸ್ಟ್ರಿಕ್ಟ್ ಬ್ಯಾಂಕ್‌ಗಳ ಬಗ್ಗೆ ನಾವು ಅಲ್ಲಿ ವಿಚಾರ ಮಾಡೋಣ.

ಶ್ರೀ ಹೆಚ್. ಏಕಾಂತಯ್ಯ. ಆ ಸಲಹೆಯನ್ನು ನಾನು ಒಪ್ಪುತ್ತೇನೆ. ಸನ್ಮಾನ್ಯ ಅಧ್ಯಕ್ಷರು ಲಾಭ ಮಾಡುವುದೇ ನಮ್ಮ ಗುರಿಯಲ್ಲ ಎಂಬ ಮಾತನ್ನು ಏನು ಹೇಳಿದ್ದಾರೆ ಅದನ್ನು ನಾನು ಒಪ್ಪುತ್ತೇನೆ. ಆದರೆ ಲುಕ್ಸಾನು ಮಾಡುವುದೇ ನಮ್ಮ ಗುರಿಯಲ್ಲ. ಲಾಭ ನಷ್ಟವಿಲ್ಲದೆ ಸೇವೆ ಮಾಡಲಿಕ್ಕೆ ಈ ಸಹಕಾರ ಸಂಸ್ಥೆಗಳು ಉಳಿದುಕೊಳ್ಳುವ ರೀತಿಯಲ್ಲಿ ಕಾರ್ಯನಿರ್ವಹಣೆ ಮಾಡತಕ್ಕಂಥಾದ್ದು ನಮಗೆ ಬೇಕಾಗಿದೆ. ಆ ರೀತಿಯಲ್ಲಿ ಆಲೋಚನೆ ಮಾಡುವುದಾದರೆ, ಇವತ್ತಿನ ದಿವಸ ಬಡ್ಡಿ ಮಾರ್ಜಿನ್ ಇದೆ. ಇದನ್ನು ಯಾವ ರೀತಿ ಹಂಚಬೇಕು ಎನ್ನುವುದರ ಬಗ್ಗೆ ನಾವು ಆಲೋಚನೆ ಮಾಡುತ್ತೇವೆ. ಇವತ್ತಿನ ದಿವಸ ಅನೇಕ ಪ್ರಾಥಮಿಕ ಸಹಕಾರ ಸಂಘಗಳಲ್ಲಿ ಸಾಲ ವಿತರಣೆಯಿಂದ ಬಂದಂಥ ಲಾಭ ಇದೆ, ವ್ಯವಹಾರದಿಂದ ಬಂದಂಥ ಲಾಭ ಇದೆ. ಈ ಎರಡು ಲಾಭಗಳನ್ನು, ಆದಾಯಗಳನ್ನು ಸೇರಿಸಿದರೆ ಅಲ್ಲಿರತಕ್ಕಂಥ ಗುಮಾಸ್ತರಿಗೆ ಸಂಬಳ ಕೊಡಲಾರದಂಥ ಪರಿಸ್ಥಿತಿ ಇದ್ದುದರಿಂದ ಇವತ್ತಿನ ದಿವಸ ಸಾಲಗಾರ ಸದಸ್ಯರಿಂದ ಬಂದಂಥ ೭೫ ಕೋಟಿ ರೂಪಾಯಿಗಳಲ್ಲಿ ಬಹುಭಾಗ ನೌಕರರಿಗೆ ಸಂಬಳ ಕೊಡಲಿಕ್ಕೆ ಉಪಯೋಗವಾಗಿದೆ ಎಂಬ ಮಾತನ್ನು ಮಾನ್ಯ ಕೆ. ಹೆಚ್. ಪಾಟೀಲರು ಒಪ್ಪುತ್ತಾರೆ ಎಂದು ನಾನು

ಅಂದುಕೊಂಡಿದ್ದೇನೆ. ಆ ರೀತಿಯಾಗಿ ಆಗದೇ ಇರಲಿಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕೋ ಆ ಕ್ರಮವನ್ನು ತೆಗೆದುಕೊಳ್ಳಲಿಕ್ಕೆ ಈಗಾಗಲೇ ಆಲೋಚನೆ ಮಾಡಿದ್ದೇವೆ. ಇಂಟರೆಸ್ಟ್ ಮಾರ್ಜಿನ್ ಏನಿದೆ ಆ ಮಾರ್ಜಿನ್‌ನಲ್ಲಿ ಯಾರು ಯಾರಿಗೆ ಎಷ್ಟೆಷ್ಟು ಹಣಕೊಡಬೇಕು ಎನ್ನುವುದರ ಬಗ್ಗೆ ಆಲೋಚನೆ ಮಾಡಿ ಅವರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲಿಕ್ಕೆ, ಮುಖ್ಯವಾಗಿ ಬಲಹೀನವಾದಂಥ ಪ್ರಾಥಮಿಕ ಸಹಕಾರ ಸಂಘಗಳ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲಿಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಲಿಕ್ಕೆ ಸರ್ಕಾರ ಪ್ರಯತ್ನ ಮಾಡುತ್ತಿದೆ. ಆ ಬಗ್ಗೆ ಚಿಂತನೆ ಮಾಡುತ್ತಿದೆ ಎಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಕೆ. ಹೆಚ್. ಪಾಟೀಲರು ನಿಮಗೆ ಒಂದು ನೀತಿ ಇದೆಯೋ, ಡಿ. ಸಿ. ಸಿ ಬ್ಯಾಂಕುಗಳನ್ನು ತೆರೆಯಲಿಕ್ಕೆ ಎಂದು ಕೇಳಿದರು. ನಿಜ ನೀತಿ ಇಲ್ಲ. ಯಾರು ಸ್ವಾಮಿ, ನಾನು ತೆಗೆದಿದ್ದೇನೆಯೇ? ಸರ್ಕಾರದ ಪರವಾಗಿ ಅಧಿಕಾರಿಗಳು ಅದಕ್ಕೆ ಅನುಮತಿ ನೀಡಿರಬಹುದು. ಅದು ತಪ್ಪು ಎನ್ನುವ ಮಾತನ್ನು ನಾನು ಒಪ್ಪುತ್ತೇನೆ. ಆದರೆ ತಾವು ಹೇಳುವಂಥ ರೀತಿಯಲ್ಲಿ ಯಾರು ಆಡಳಿತ ಮಂಡಲಿ ಸದಸ್ಯರಿದ್ದೀರಿ. ಅಧ್ಯಕ್ಷರಾಗಿದ್ದೀರಿ ನಿಮಗೆ ಅದರ ಜವಾಬ್ದಾರಿ ಇಲ್ಲವೇ, ಇವತ್ತಿನ ದಿವಸ ಅವರ ಇಚ್ಛಾನುಸಾರವಾಗಿ ಶಾಖೆಗಳನ್ನು ತೆರೆಯುವುದು ಖಂಡಿತವಾಗಲೂ ಸರಿಯಲ್ಲ. ಇದಕ್ಕೆ ನಿಯಂತ್ರಣ ಹಾಕಬೇಕಾದ ಅವಶ್ಯಕತೆ ಇದೆ, ಅಷ್ಟೇ ಅಲ್ಲ ಒಂದು ನೀತಿಯ ಆಧಾರದ ಮೇಲೆ ಶಾಖೆಗಳನ್ನು ಪ್ರಾರಂಭಮಾಡಬೇಕಾಗಿದೆ. ಕೇವಲ ನಿಮಗೆ ಬೇಕಾದಂಥ ಜನರಿಗೆ ನೌಕರಿ ಕೊಡಿಸಲಿಕ್ಕೆ ಅಲ್ಲ, ಯಾರದಾದರೂ ಮನೆ ಇದ್ದರೆ ಅದನ್ನು ಬಾಡಿಗೆಗೆ ತೆಗೆದುಕೊಳ್ಳಲಿಕ್ಕೆ ನಾವು ಶಾಖೆಯನ್ನು ಪ್ರಾರಂಭ ಮಾಡಬೇಕಾದ ಅವಶ್ಯಕತೆ ಇಲ್ಲ ಎನ್ನುವ ಮಾತನ್ನು ನಾನು ಒಪ್ಪುತ್ತೇನೆ. ಇದಕ್ಕೆ ಮೂಲಭೂತ ನೀತಿಯನ್ನು ಗೊತ್ತುಮಾಡಬೇಕಾಗಿದೆ. ಇಡೀ ಕರ್ನಾಟಕದಲ್ಲಿ ೧೯ ಡಿಸಿಸಿ ಬ್ಯಾಂಕುಗಳಿವೆ ಅವುಗಳ ಕಾರ್ಯನಿರ್ವಹಣೆಯ ಆಧಾರದ ಮೇಲೆ, ಅವರಿಗೆ ಏನು ಬಂಡವಾಳ ಇದೆ ಅಥವಾ ಟರ್ನ್‌ಓವರ್ ಇದೆ ಅದರ ಆಧಾರದ ಮೇಲೆ ಇದನ್ನು ಗೊತ್ತುಪಡಿಸಲಿಕ್ಕೆ ಸರ್ಕಾರ ಇಷ್ಟಪಡುತ್ತದೆ, ಖಂಡಿತವಾಗಿಯೂ ಇದರ ಬಗ್ಗೆ ನಿಯಂತ್ರಣ ಹಾಕುತ್ತೇವೆ ಎನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಅಧ್ಯಕ್ಷರೇ ಇದಾದ ಮೇಲೆ ಮಾರಾಟ ಸಹಕಾರ ಸಂಘಗಳ ಬಗ್ಗೆ ಅವರು ಮಾತನಾಡಿದರು. ಈಗಾಗಲೇ ನಾನು ಉತ್ತರ ಕೊಟ್ಟಿದ್ದೇನೆ. ಕೆಲವು ಮಾರಾಟ ಸಹಕಾರ ಸಂಘಗಳನ್ನು ಜಿಲ್ಲಾ ಮಟ್ಟದಲ್ಲಿ ಫೆಡರೇಷನ್ ಮಾಡಬೇಕು ಎನ್ನುವ ಮಾತನ್ನು ಹೇಳಿದ್ದಾರೆ, ಅದನ್ನೂ ಸಹ ಪರಿಶೀಲನೆ ಮಾಡುತ್ತೇವೆ. ಹೆಚ್ಚು ಹೆಚ್ಚು ಸಂಘಗಳನ್ನು ಕೃಷಿ ಉತ್ಪಾದನೆ ಮಾಡುವಂಥ ರೈತರಿಗೆ ಉಪಯೋಗವಾಗುವಂಥ ರೀತಿಯಲ್ಲಿ ಸ್ಥಾಪನೆ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ. ಆದರೆ ಈ ಸ್ಥಾಪನೆ ಕೇವಲ ಸ್ಥಾಪನೆಯಾಗಿ ಉಳಿಯಬಾರದು. ಸ್ಥಾಪನೆಯಾದನಂತರ ಸಂಸ್ಕರಣ ಸಂಘಗಳು ಉಪಯೋಗವಾಗುವಂಥ ಕೆಲಸವನ್ನು ಮಾಡುವಂಥ ರೀತಿಯಲ್ಲಿ ನೋಡಿಕೊಳ್ಳುವ ಜವಾಬ್ದಾರಿ ಮತ್ತು ಹೊಣೆಗಾರಿಕೆ ಅಧಿಕಾರೇತರರು ಏನಿದ್ದಾರೆ ಅವರಿಗೂ ಮತ್ತು ನಮಗೂ ಅದರ ಬಗ್ಗೆ ಕಳಕಳಿ ಇರಬೇಕು ಅಂತಹ ಒಂದು ಪರಿಸ್ಥಿತಿ ಇದ್ದರೆ ಖಂಡಿತವಾಗಿಯೂ ಇವತ್ತು ಉಳಿಯಲಿಕ್ಕೆ ಸಾಧ್ಯವಾಗುತ್ತದೆ ಎಂಬ ಮಾತನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇನ್ನೂ ಅನೇಕ ಸಂಸ್ಕರಣ ಘಟಕಗಳು ಏನಿವೆ ಅವುಗಳನ್ನು ಆಧುನೀಕರಣ ಮಾಡಬೇಕು ಎಂಬ ಮಾತನ್ನು ಹೇಳಿದ್ದಾರೆ. ಖಂಡಿತವಾಗಲೂ ಆಧುನೀಕರಣದ ಅವಶ್ಯಕತೆ ಇದ್ದರೆ ಅಂತಹ ಎಲ್ಲ ಸಲಹೆಗಳನ್ನು ಪ್ರಸ್ತಾಪಗಳನ್ನು ನಾವು ಪರಿಶೀಲನೆ ಮಾಡುತ್ತೇವೆ ಮತ್ತು ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ. ಆದ್ದರಿಂದ ಕೃಷಿ ಉತ್ಪಾದಕನಿಗೆ ಉಪಯೋಗವಾಗುವುದಾದರೆ ಖಂಡಿತವಾಗಲೂ ಆ ಕೆಲಸವನ್ನೂ ಸಹ ಮಾಡುತ್ತೇವೆ. ಇದಾದ ಮೇಲೆ ಮಾನ್ಯ ಗುರುಪಾದಪ್ಪನವರು ಕೆಲವು ವಿಚಾರಗಳನ್ನು ಹೇಳಿದ್ದಾರೆ. ಅದೇ ರೀತಿ ಮಾನ್ಯ ಕೆ. ಹೆಚ್. ಪಾಟೀಲರೂ ಸಹ ಪ್ರಸ್ತಾಪ ಮಾಡಿದ್ದಾರೆ. ಸೆಕ್ಷನ್ ೩೦ಬಿ ಏನಿದೆ ಅದರ ಬಗ್ಗೆ ನನಗೆ ವ್ಯಾಮೋಹ ಇಲ್ಲ. ಖಂಡಿತವಾಗಲೂ ಆ ಭಾಗವನ್ನು ನನ್ನ ಉತ್ತರದ ಕೊನೆಯಲ್ಲಿ ಪ್ರಸ್ತಾಪ ಮಾಡುತ್ತೇನೆ ಈ ಸೆಕ್ಷನ್ ೩೦ಬಿ ಏನಿದೆ ಇದು ಸಹಕಾರಿಗೆ ಅಪಮಾನವಾಗುವಂಥ ರೀತಿಯಲ್ಲಿ ಉಪಯೋಗ ಆಗದಂತೆ ನೋಡಿಕೊಳ್ಳಲಿಕ್ಕೆ ಪ್ರಯತ್ನ ಮಾಡುತ್ತೇನೆ. ಅವಶ್ಯಕತೆ ಬಿದ್ದರೆ ಅದನ್ನು ತೆಗೆದುಹಾಕಲಿಕ್ಕೂ ಸಹ ನಾನು ಪ್ರಯತ್ನ ಮಾಡುತ್ತೇನೆ ಎಂಬ ಮಾತನ್ನು ಹೇಳುತ್ತೇನೆ.

೧೦-೩೧ ಪಿ. ಎಂ.

ಇನ್ನು ಸೂಪರ್-ಸೆಕ್ಷನ್ ಬಗ್ಗೆ ಮಾತನಾಡಿದರು. ನಮ್ಮಲ್ಲಿ ಸುಮಾರು ೨೪,೮೯೮ ಸೊಸೈಟಿಗಳು ಇವೆ. ನಾವು ಎಷ್ಟು ಸೊಸೈಟಿಗಳನ್ನು ಸೂಪರ್‌ಸೀಡ್ ಮಾಡಿದ್ದೇವೆ? ಸುಮಾರು ೨೨೬ ಸೊಸೈಟಿಗಳನ್ನು ಸೂಪರ್‌ಸೀಡ್ ಮಾಡುವುದರಿಂದ, ನಮ್ಮ ಸಹಕಾರಿ ಆಂದೋಲನಕ್ಕೆ ಧಕ್ಕೆಯಾಗಿದೆ ಎನ್ನುವುದಾದರೆ ಅದು ಎಷ್ಟರಮಟ್ಟಿಗೆ ಆಗುತ್ತದೆ. ಶೇಕಡ ಒಂದಕ್ಕಿಂತಲೂ ಕಡಿಮೆ ಸಹಕಾರ ಸಂಘಗಳನ್ನು ಆಡಳಿತ ಸಮಿತಿಗಳನ್ನು ರದ್ದು ಮಾಡಿದ್ದೇವೆಯೇ ಹೊರತು ಹೆಚ್ಚು ಏನೂ ಇಲ್ಲ. ಕೇವಲ ಸೂಪರ್‌ಸೆಷನ್ ಮಾಡುವ ಮುಖಾಂತರ, ಆಡಳಿತ ಸಮಿತಿಗಳನ್ನು ರದ್ದು ಮಾಡುವುದರ ಮುಖಾಂತರ ಏನಾದರೂ ಸಹಕಾರಿ ಚಳುವಳಿಗೆ ಅಥವಾ ಆಂದೋಲನಕ್ಕೆ ಪೆಟ್ಟಾಗಿದೆ ಅಂದರೆ ಅದು ಸರಿಯಲ್ಲ. ಕೇವಲ ೨೨೬ ಸಹಕಾರ ಸಂಘಗಳನ್ನು ಮಾತ್ರ ಇದುವರೆಗೂ ನಾವು ಸೂಪರ್‌ಸೀಡ್ ಮಾಡಿದ್ದೇವೆ. ಆದರಿಂದ, ಈ ಸಹಕಾರ ಸಂಘಗಳ ಬೆಳವಣಿಗೆಗೆ ಕುಂಠಿತವಾಗಿದೆ ಎಂದು ಹೇಳಿದರೆ ಅದು ಸರಿಯಲ್ಲ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಇನ್ನು ಮಾನ್ಯ ಸದಸ್ಯರಾದ ಗುರುಪಾದಪ್ಪನವರು ಮಾತನಾಡುತ್ತಾ ಪೂರ್ಣ ಸಾಲವನ್ನು ಕೊಡುವಂಥ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳಿದ್ದಾರೆ. ಆ ಬಗ್ಗೆ ನಾನು ಆಗಲೇ ಪ್ರಸ್ತಾಪ ಮಾಡಿದ್ದೇನೆ. ಇನ್ನು ಬಡ್ಡಿ ಮನ್ನಾ ವಿಚಾರದ ಬಗ್ಗೆ ಸಹಾಯ ಧನ ಜಾಗ್ರತೆ ಕೊಡಬೇಕೆಂದು ಹೇಳಿದ್ದಾರೆ. ೧೯೮೭-೮೮ನೇ ಸಾಲಿಗೆ ಈಗಾಗಲೇ ಎಲ್ಲ ಹಣವನ್ನು ಕೊಟ್ಟಿದ್ದೇವೆ ಕೇವಲ ೪ ಕೋಟಿ ೨೧ ಲಕ್ಷ ರೂಪಾಯಿ ನಾವು ಕೊಡಬೇಕಾಗಿದೆ ಅದನ್ನು ಜಾಗ್ರತೆ ಬಿಡುಗಡೆ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ. ೧೯೮೮-೮೯ನೇ ಇಸವಿಗೆ ೫೫ ಕೋಟಿ ರೂಪಾಯಿಗಳನ್ನು ಆಯವ್ಯಯದಲ್ಲಿ ಸೇರಿಸಿದ್ದೇವೆ. ಸಾಧ್ಯವಾದಷ್ಟು ಜಾಗ್ರತೆ ಹಣವನ್ನು ಬಿಡುಗಡೆ ಮಾಡಲಿಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆ. ಎನ್ನುವ ವಿಚಾರವನ್ನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಇನ್ನು ನಾಮಕರಣದ ವಿಚಾರದ ಬಗ್ಗೆ ಮಾನ್ಯ ಸದಸ್ಯರಾದ ಕೆ. ಹೆಚ್., ಪಾಟೀಲ್ ಮತ್ತು ಮಾನ್ಯ ಸದಸ್ಯರಾದ ಗುರುಪಾದಪ್ಪನವರು ಈ ದೇಶದಲ್ಲಿ ಒಂದು ಪ್ರವೃತ್ತಿ ನಡೆದು ಬಂದಿದೆ. ನಾವು ಏನನ್ನು ಹೇಳುತ್ತೇವೆ ಆ ರೀತಿ ನಡೆಯುವುದಿಲ್ಲ ಎಂದು ಹೇಳಿದರು.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಹೆಗಡೆಯವರು ಆಗ ಸಹಕಾರಿ ಮಂತ್ರಿಯಾಗಿದ್ದಾಗ ಏನು ಹೇಳಿದ್ದರು ಅಂದರೆ ೨೯ ಸೆಕ್ಷನ್ ಹಾಕುವಾಗ ಏನು ಹೇಳಿದರು ಅಂದರೆ, ಈ ಸೆಕ್ಷನ್ ಇಂಟ್ರಡ್ಯೂಸ್ ಮಾಡಬೇಕಾದರೆ ನಾನು ಬಹಳ ಮನಸ್ಸು ನೊಂದು ಮಾಡುತ್ತಿದ್ದೇನೆ ಎನ್ನುವ ವಿಚಾರವನ್ನು ಹೇಳಿದರು, ಇದರಲ್ಲಿ ೩ ಜನ ಎಂದು ಹೆಸರಿದ್ದರೂ ಸಹ ಅದು ನಾಮಕಾವಸ್ತೆಗೆ ಮಾತ್ರ, ನಾನು ಯಾರನ್ನೂ ಹಾಕುವುದಿಲ್ಲ. ಆಕಸ್ಮಾತ್ ಹಾಕಿದರೆ ಒಬ್ಬರನ್ನು ಮಾತ್ರ ಹಾಕುತ್ತೇನೆಂದು ಹೇಳಿದರು. ಅವರ ಆಶ್ವಾಸನೆ ಅದು ಈಡೇರಬೇಕಾಗುತ್ತದೆ. ಅವರು ಮುಖ್ಯ ಮಂತ್ರಿಗಳಾಗಿ ಎಲ್ಲಿಯವರೆಗೆ ಎಲ್ಲಿಯವರೆಗೆ ಇರುತ್ತಾರೆ ಅಲ್ಲಿಯವರೆಗೆ ಆ ಆಶ್ವಾಸನೆ ಅಧಿಕೃತವಾಗಿ ಇರುತ್ತದೆಂದು ನಾನು ಭಾವಿಸುತ್ತೇನೆ. ಈಗ ನಾಮಿನೇಷನ್ ಮಾಡುವಂತಹದು ಏನು ಇದೆ ಅದನ್ನು ತೆಗೆಯಬೇಕೆಂದು ಹೇಳುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ.—ಈ ಪ್ರವೃತ್ತಿ ಏನು ಇದೆ ಇದರ ಬಗ್ಗೆ ನಾವು ಮಾತನಾಡುತ್ತೇವೆ. ಈ ಪ್ರಕಾರ ಹೇಳುವುದಾದರೆ ಜಿಲ್ಲಾ ಪರಿಷತ್ತುಗಳಲ್ಲೂ ಕೂಡ ನಾಮಕರಣ ಮಾಡಬಾರದು, ಆದರೆ ಮೊನ್ನೆ ದಿವಸ ಚಿತ್ರದುರ್ಗದಲ್ಲಿ ಮಾಡಿದರು. ನಾನು ಯಾರನ್ನೂ ಟೀಕೆ ಮಾಡಲಿಕ್ಕೆ ಹೇಳುತ್ತಿಲ್ಲ. ಎಲ್ಲರೂ ಅವಕಾಶವಾದಿಗಳಾಗಿದ್ದೇವೆ ನಮ್ಮ ಅಭಿಪ್ರಾಯ ಏನು ಇದೆ ಅದರಂತೆ ನಡೆಯುವುದಕ್ಕೆ ನಮಗೆ ಸಾಧ್ಯವಿಲ್ಲ ಒಬ್ಬೊಬ್ಬರು ಇದ್ದರೂ ಸಹ ಈ ಒಂದು ರಾಜಕೀಯ ವ್ಯವಸ್ಥೆಯಲ್ಲಿ ಆ ರೀತಿ ಮಾಡಲಿಕ್ಕೆ ಆಗುವುದಿಲ್ಲ. ಎಲ್ಲಿಯವರೆಗೆ ರಾಜಕಾರಣಿಗಳು ಸಹಕಾರಿಯಾಗಿರುತ್ತಾರೆ ಅಲ್ಲಿಯವರೆಗೆ ಸಹಕಾರದಲ್ಲಿ ರಾಜಕಾರಣ ಬಂದೇ ಬರುತ್ತದೆ ನಾವು ಬೇಡವೆಂದರೂ ಕೂಡ ಬಂದೇ ಬರುತ್ತದೆ. ಆದರೆ ಅದನ್ನು ಸೀಮಿತಗೊಳಿಸುವುದು ಅಗತ್ಯವಿದೆ ನಾಮಕರಣ ಮಾಡುವಾಗ ಜನತಾ ಪಕ್ಷದ ಸದಸ್ಯರನ್ನು ನಾಮಕರಣ ಮಾಡಿದರೆ ಅದು ತಪ್ಪು ಎಂದು ಭಾವಿಸುವುದಿಲ್ಲ.

ಶ್ರೀ ಕೆ. ಹೆಚ್. ಪಾಟೀಲ್.—ನಾವು ನಾಮಕರಣ ಮಾಡಬೇಕಾದರೆ ಜನತಾ ಪಕ್ಷದವರನ್ನೇ ಮಾಡಬೇಕಾಗುತ್ತದೆ. ನಾನು ಆ ಮಾತನ್ನು ಹೇಳಲಿಕ್ಕೆ ಇಷ್ಟಪಡುವುದಿಲ್ಲ. ನೀವು ಸಹಕಾರವನ್ನು ಪವಿತ್ರವಾದ ಖಾತೆಯೆಂದು ತಿಳಿದು ರಾಜಕಾರಣ ದೂರ ಇಟ್ಟು ನಿಷ್ಪಕ್ಷಪಾತವಾಗಿ ವಿಚಾರ ಮಾಡಿದರೆ ಆಗ ನಿಮಗೆ ಗೊತ್ತಾಗುತ್ತದೆ.

ಶ್ರೀ ಹೆಚ್ ಏಕಾಂತಯ್ಯ.—ಈಗ ೨ ವಿಧವಾಗಿ ಇದನ್ನು ಅರ್ಥೈಸಬಹುದು. ಮೊದಲನೆಯ ದಾಗಿ ನಾವು ರಾಜಕಾರಣಕ್ಕೋಸ್ಕರ ನಾಮಕರಣ ಮಾಡುತ್ತೇವೆನ್ನುವುದಾದರೆ ಅದು ಎಷ್ಟರಮಟ್ಟಿಗೆ ಸರಿ ಎಷ್ಟರಮಟ್ಟಿಗೆ ತಪ್ಪು ಅನ್ನುವುದನ್ನು ನಿಮ್ಮ ವಿವೇಚನೆಗೆ ಬಿಡುತ್ತೇನೆ ಈ ದೇಶದಲ್ಲಿ ಸಹಕಾರಿ ಕ್ಷೇತ್ರದಲ್ಲಿರತಕ್ಕ ಒಂದು ವ್ಯವಸ್ಥೆ ಏನು ಇದೆ ಅದರ ಪ್ರಕಾರ ಇಲ್ಲಿ ಎಲ್ಲಾ ವರ್ಗದ ಜನರು ಈ ಒಂದು ಸಹಕಾರ ಸಂಘಗಳಲ್ಲಿ ಸಕ್ರಿಯವಾಗಿ ಭಾಗವಹಿಸಲಿಕ್ಕೆ ಸಾಧ್ಯವಿದೆಯೇ ಎಂದು ಗಮನಿಸಿದರೆ ಈ ದೇಶ ದಲ್ಲಿರತಕ್ಕ ಹಿಂದುಳಿದ ವರ್ಗದವರನ್ನು, ದಲಿತರನ್ನು, ಮಹಿಳೆಯರನ್ನು, ನಾವು ನಾಮಕರಣ ಮಾಡು ವಂತಹ ಉದ್ದೇಶ ಹೊಂದಿರುವುದು ಖಂಡಿತ ಅದು ತಪ್ಪು ಎಂದು ಹೇಳುವುದಕ್ಕೆ ಇಷ್ಟಪಡುವುದಿಲ್ಲ ವಾಸ್ತವಿಕವಾಗಿ ದಿನನಿತ್ಯ ಏನು ನಡೆಯುತ್ತದೆ ಅದನ್ನು ಗಮನಿಸಿದಾಗ ಈ ನಾಮಕರಣ ಬೇಡವೆಂದು ಅನ್ನಿಸಬಹುದು. ಆದರೆ ನಾಮಕರಣ ಮಾಡಬೇಕಾಗುತ್ತದೆ. ಈ ರೀತಿ ನಾಮಕರಣ ಮಾಡುವಾಗ ಒಂದು ನೀತಿಯನ್ನು ಅನುಸರಿಸಿದ್ದೇ ಆದರೆ ಯಾರು ಈ ದೇಶದಲ್ಲಿ ಸಹಕಾರಿ ಕ್ಷೇತ್ರದಲ್ಲಿ ತಮ್ಮ ಪ್ರಾತಿನಿಧ್ಯ ಪಡೆದುಕೊಳ್ಳಲಿಕ್ಕೆ ಸಾಧ್ಯವಿಲ್ಲ ಅಂತಹವರಿಗೆ ಪ್ರಾತಿನಿಧ್ಯ ಕೊಡುವ ಪ್ರಯತ್ನ ಮಾಡುವು ದಾದರೆ ಖಂಡಿತವಾಗಿಯೂ ನಾಮಕರಣ ಮಾಡುವಂತಹದ್ದು ಅವಶ್ಯವಿದೆಯೆಂದು ನಾನು ಹೇಳು ವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಮಾನ್ಯ ಸದಸ್ಯರಾದ ಕೆ. ಹೆಚ್. ಪಾಟೀಲ್‌ರವರು ಮತ್ತು ಗುರುಪಾದಪ್ಪನವರು ಈ ಸಹಕಾರಿ ಕಾಯಿದೆಯ ತಿದ್ದುಪಡಿಯ ಬಗ್ಗೆ ಮಾತನಾಡಿದ್ದಾರೆ. ಸರ್ಕಾರ ಈಗಾಗಲೇ ಸಮಗ್ರವಾದ ತಿದ್ದುಪಡಿಯನ್ನು ತರಬೇಕೆಂಬ ಉದ್ದೇಶದಿಂದ ಇದರ ಬಗ್ಗೆ ಪರಿಶೀಲಿಸಿ ವಿವರವಾದ ವರದಿಯನ್ನು ಕೊಡುವುದಕ್ಕಾಗಿ ಮಾನ್ಯ ಜೈರಾಜ್‌ರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಕ ಮಾಡಿದ್ದೇವೆ ಆ ಸಮಿತಿಯವರು ಈ ತಿಂಗಳ ಕೊನೆಯೊಳಗೆ ಒಂದು ವರದಿಯನ್ನು ಕೊಡುತ್ತಾರೆಂಬ ನಿರೀಕ್ಷೆ ಇದೆ. ಮಾನ್ಯ ಪಾಟೀಲ್‌ರವರು ಹೇಳಿದರು, ಇದ್ದಕ್ಕಿದ್ದಹಾಗೆ ಅಧಿಕಾರಿಗಳ ನೇತೃತ್ವದಲ್ಲಿ ಸಮಿತಿಯನ್ನು ನೇಮಕ ಮಾಡಿದಿರಿ ಎಂದು. ನಾನು ಹೇಳುತ್ತೇನೆ, ಅಧಿಕಾರಿಗಳು ಅಥವಾ ಅಧಿಕಾರೇತರರು ಎಂದು ಭೇದಭಾವವನು ಮಾಡಲಿಕ್ಕೆ ಇಷ್ಟಪಡಲಿಲ್ಲ. ನಿಜವಾಗಿಯೂ ದಕ್ಷ ಮತ್ತು ಸಹಕಾರಿ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಒಬ್ಬ ನುರಿತ ಅಧಿಕಾರಿಯ ಉಪಯೋಗವನ್ನು ಪಡೆದುಕೊಳ್ಳಬೇಕೆಂಬ ದೃಷ್ಟಿಯಿಂದ ನಾವು ಮಾಡಿದ್ದೇವೆ. ಈ ಅಧಿಕಾರಿಯ ನೇತೃತ್ವದಲ್ಲಿ ಒಂದು ಸಮಿತಿಯನ್ನು ನೇಮಕ ಮಾಡಿರ ತಕ್ಕದ್ದು ಹೊಸದೇನೂ ಅಲ್ಲ ಇದು ನಾನು ಮಾಡಿದ ಕೆಲಸವೂ ಅಲ್ಲ ಹಿಂದೆ ಇಂಥ ಸಮಿತಿಗಳನ್ನು ನೇಮಕ ಮಾಡುವಾಗ ಅನೇಕಸಾರಿ ಅಧಿಕಾರಿಗಳ ನೇತೃತ್ವದಲ್ಲಿ ಮಾಡಿದ್ದಾರೆ. ಇದು ಮಾನ್ಯ ಪಾಟೀಲ್ ರವರಿಗೂ ಗೊತ್ತಿದೆ. ವೆಂಕಟಪ್ಪಯ್ಯ ಎನ್ನತಕ್ಕ ಅಧಿಕಾರಿಯೊಬ್ಬರ ನೇತೃತ್ವದಲ್ಲಿ ಒಂದು ಸಮಿತಿ ಯನ್ನು ನೇಮಕ ಮಾಡಿದ್ದರು. ಅವರು ಆ ಸಮಿತಿಯ ನೇತೃತ್ವವನ್ನು ವಹಿಸಿ ಸಮಿತಿಯ ಕೆಲಸ ವನ್ನು ಮಾಡಿದ್ದಾರೆ. ಈ ಸಮಿತಿಯಲ್ಲಿ ನಾವು ನೇಮಕ ಮಾಡಿರತಕ್ಕ ಅಧಿಕಾರಿ ಬಹಳ ನುರಿತಂಥ ಸಹಕಾರಿಗಳಾಗಿದ್ದಾರೆ. ಅವರ ವರದಿ ಬಂದಮೇಲೆ ತಮಗೆ ಗೊತ್ತಾಗುತ್ತದೆ.

ಶ್ರೀ ಕೆ.ಎಚ್. ಪಾಟೀಲ್.—ಅವರ ಎಫಿಷಿಯನ್ಸಿ ಬಗ್ಗೆ ನಾನು ಹೇಳಲಿಲ್ಲ. ಜೈರಾಜ್‌ರವರು ಬಹಳ ಚಲೋ ಅಧಿಕಾರಿ ಇದ್ದಾರೆ. ಅವರಿಗೆ ಇದರಲ್ಲಿ ಆಸ್ತೆ ಇದೆ. ಆದರೆ ನಾನು ಹೇಳಿದ್ದೇನೆಂದರೆ ತಾತ್ವಿಕವಾಗಿ ಒಂದು ಸಮಿತಿಯನ್ನು ನೇಮಕ ಮಾಡಿದರೆ ಅದು ಯಾವರೀತಿ ಇರಬೇಕೆಂಬುದನ್ನು ತಾವು ಯೋಚನೆ ಮಾಡಬೇಕು. ಕೆ. ಹೆಚ್. ಪಾಟೀಲರ ಸಮಿತಿಯಲ್ಲಿ ಜನತಾ ಪಕ್ಷದ ಅನೇಕ ಜನ ಸದಸ್ಯರು ಇದ್ದರು. ಆ ಸಮಿತಿ ಆದಮೇಲೆ ವರದಿಯನ್ನು ತೆಗದುಹಾಕಿದ್ದೇವೆಂದು ಹೇಳಬೇಕು. ಇಲ್ಲದಿದ್ದರೆ ಅದನ್ನು ಸ್ಕ್ರುಟಿನಿ ಮಾಡುವುದಕ್ಕೆ ಅಧಿಕಾರಿಯನ್ನು ನೇಮಕ ಮಾಡಿದರೆ ಅದು ಹೇಗಾಗುತ್ತದೆ ? ಮಂತ್ರಿಗಳು ಆರ್ಡರನ್ನು ಮಾಡಿದ ಮೇಲೆ ಆದರೆ ನಿಮ್ಮ ಆರ್ಡರನ್ನು ಒಬ್ಬ ಡೆಪ್ಯುಟಿ ರಿಜಿಸ್ಟ್ರಾರ್‌ರವರು ಸ್ಕ್ರುಟಿನಿ ಮಾಡಲಿಕ್ಕೆ ಆಗುತ್ತದೆಯೇ ?...

ಶ್ರೀ ಹೆಚ್. ಏಕಾಂತಯ್ಯ.—ಮಾನ್ಯ ಅಧ್ಯಕ್ಷರೆ, ಮಾನ್ಯ ಕೆ. ಎಚ್. ಪಾಟೀಲ್‌ರವರ ವರದಿಯನ್ನು ಗಮನದಲ್ಲಿಟ್ಟುಕೊಂಡಿದ್ದೇವೆ. ಅದೇರೀತಿ ವೆಲ್ಫೇರ್ ಸ್ಟೇಟ್ ಆ್ಯಕ್ಟ್ ಏನಿದೆ ಅದನ್ನೂ ಕೂಡ ಗಮನ ದಲ್ಲಿಟ್ಟುಕೊಂಡಿದ್ದೇವೆ. ನಾವೂ, ನೀವೂ ಬಹಳಷ್ಟು ಮಾತನಾಡುತ್ತೇವೆ ಜನತಂತ್ರೀಕರಣ ಮತ್ತು ವ್ಯತ್ತಿಪರತೆಯ ಬಗ್ಗೆ ಗಮನಹರಿಸಿ ನಿಜವಾಗಿಯೂ ಒಂದು ಉತ್ತಮವಾದ ವರದಿಯನ್ನು ಕೊಡ ಬೇಕೆಂದು ನಾವು ಅವರನ್ನು ಕೇಳಿಕೊಂಡಿದ್ದೇವೆ. ಅದು ಈ ತಿಂಗಳ ಕೊನೆಯೊಳಗೆ ಬರಬಹುದು. ಅದು ಬಂದಮೇಲೆ ಸರ್ಕಾರ ಅದರ ಬಗ್ಗೆ ಒಂದು ಕ್ರಮವನ್ನು ತೆಗೆದುಕೊಳ್ಳುತ್ತದೆ. ಈ ದಿಸೆಯಲ್ಲಿ

ಒಂದು ಅಮೂಲಾಗ್ರವಾದ ಬದಲಾವಣೆಯನ್ನು ಮಾಡುವುದಕ್ಕೆ, ಸಮಗ್ರವಾದ ತಿದ್ದುಪಡಿಯನ್ನು ಮಾಡಿ ಈ ಸದನದ ಮುಂದಿಡುತ್ತೇನೆ. ಆಗಲೂ ಕೂಡ ಸಾರ್ವಜನಿಕರು ಮತ್ತು ತಾವು ತಮ್ಮ ಅಭಿಪ್ರಾಯಗಳನ್ನು ಹೇಳಿಕೊಳ್ಳುವುದಕ್ಕೆ ಅವಕಾಶವಿದೆ ಎಂಬುದನ್ನು ಹೇಳುತ್ತಾ ಅದನ್ನೂ ಕೂಡ ನಾವು ಗಮನದಲ್ಲಿಟ್ಟುಕೊಳ್ಳುತ್ತೇವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಪಂಪಾಪತಿಯವರು, ವೆಂಕಟರಾಮಯ್ಯನವರು, ಸ್ವಾಮಿರಾವ್‌ರವರು, ಜಿ. ಎಸ್. ಆಚಾರ್‌ರವರು, ಶಿವನಂಜಪ್ಪನವರು, ಬಸವಲಿಂಗಪ್ಪನವರು, ಲಕ್ಕಪ್ಪನವರು ಇನ್ನೂ ಅನೇಕ ಜನ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ, ಅವರು ಪ್ರಸ್ತಾಪ ಮಾಡಿರುವ ಅನೇಕ ವಿಚಾರಗಳಿಗೆ ನಾನು ಈಗಾಗಲೇ ಉತ್ತರವನ್ನು ಕೊಟ್ಟಿದ್ದೇನೆ. ಸಹಕಾರಿ ನೂಲಿನ ಗಿರಣಿಗಳನ್ನು ಪ್ರಾರಂಭ ಮಾಡತಕ್ಕ ವಿಚಾರವನ್ನು ಮಾನ್ಯ ಪಂಪಾಪತಿಯವರು ಏನು ವಿಚಾರ ಮಾಡಿದ್ದಾರೆ ಅದನ್ನು ಖಂಡಿತವಾಗಿ ಸರ್ಕಾರ ಗಮನದಲ್ಲಿಟ್ಟುಕೊಂಡು ತೀವ್ರ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಬಯಸುತ್ತೇನೆ. ಕೈಗಾರಿಕಾ ಸಹಕಾರ ಮಂತ್ರಿಗಳು ಇದಕ್ಕೆ ಸೂಕ್ತ ಉತ್ತರವನ್ನು ಹೇಳುತ್ತಾರೆಂದು ಭಾವಿಸಿದ್ದೇನೆ.

ಇನ್ನು ಸಹಕಾರ ಸಂಘಗಳು ಏತಕ್ಕೆ ಕೆಡುತ್ತವೆ ಎಂದು ಮಾನ್ಯ ಸದಸ್ಯರಾದ ಪಂಪಾಪತಿಯವರು ಹೇಳಿದರು. ನೀವು ಹತ್ತಿಯನ್ನು ಕೊಳ್ಳುವಾಗ ನೂಲಿನ ಮಾರಾಟ ಮಾಡುವಾಗ ಏನು ಮಾಡುತ್ತೀರಿ, ನಿಮ್ಮಲ್ಲಿ ಎಷ್ಟರಮಟ್ಟಿಗೆ ಪ್ರೊಫೆಷನಲೈಸೇಷನ್ ಇದೆ ಎಂಬುದನ್ನು ನೋಡಿದರೆ ಅದು ಈ ಸಹಕಾರ ಸಂಘಗಳು ಕೆಡುವುದಕ್ಕೆ ಕಾರಣ ಎಂದು ಗೊತ್ತಾಗುತ್ತದೆಂದು ಹೇಳಿದರು. ಅವರು ಹೇಳಿದ್ದನ್ನು ನಾನು ಸ್ವಲ್ಪಮಟ್ಟಿಗೆ ಒಪ್ಪಿಕೊಳ್ಳುತ್ತೇನೆ. ಎಲ್ಲಾ ಕಡೆಗಳಲ್ಲೂ ಸಹಕಾರ ಸಂಘಗಳು ಕೆಡುತ್ತವೆಂದು ನಾನು ಹೇಳುವುದಿಲ್ಲ. ಎಲ್ಲೆಲ್ಲಿ ಪ್ರಾಮಾಣಿಕ ಅಧಿಕಾರಿಗಳಿದ್ದಾರೆ, ಎಲ್ಲೆಲ್ಲಿ ಪ್ರಾಮಾಣಿಕ ಸಹಕಾರಿಗಳಿದ್ದಾರೆ ಅಂಥ ಸಹಕಾರ ಸಂಘಗಳು ಚೆನ್ನಾಗಿ ನಡೆಯುತ್ತಿವೆ. ಎಲ್ಲಿ ಜನರ ಕಾರ್ಯಕ್ರಮಗಳ ಬಗ್ಗೆ ಬಹಳ ನಿಷ್ಠೆ ಇರತಕ್ಕ ಜನರಿದ್ದಾರೆ ಅಲ್ಲಿ ಸಹಕಾರ ಸಂಘಗಳು ಚೆನ್ನಾಗಿ ನಡೆಯುತ್ತಿವೆ. ಎಲ್ಲಿ ಭ್ರಷ್ಟಾಚಾರಿಗಳಿದ್ದಾರೆ, ಎಲ್ಲಿ ಸ್ವಾರ್ಥಿಗಳಿದ್ದಾರೆ ಅಂಥ ಸಹಕಾರ ಸಂಘಗಳು ನಷ್ಟವನ್ನು ಅನುಭವಿಸುತ್ತಿವೆ. ಈ ರೀತಿ ನಷ್ಟ ಆಗದ ರೀತಿಯಲ್ಲಿ ಮಾಡಬೇಕಾದರೆ ಈ ಸೇವೆಯನ್ನು ಮಾಡುವುದರ ಮೂಲಕ ನಾವು ಕೆಲಸ ಮಾಡಬೇಕಾಗುತ್ತದೆ. ಇಂಥ ಒಂದು ಕಾರ್ಯಕ್ರಮವನ್ನು ನಾವು ಹಾಕಿಕೊಳ್ಳಬೇಕಾಗುತ್ತದೆ. ಆ ಕಾರ್ಯಕ್ರಮ ಏನು ಎಂಬುದನ್ನು ನಾನು ಕೊನೆಯಲ್ಲಿ ಹೇಳುತ್ತೇನೆ. ಇವತ್ತು ಮಾನ್ಯ ಪಂಪಾಪತಿಯವರು ಏನು ಹೇಳಿದ್ದಾರೆ, ಮಾನ್ಯ ವೆಂಕಟರಾಮಯ್ಯನವರು ಬೀಡಿ ಕಾರ್ಮಿಕರ ಸಹಕಾರ ಸಂಘವನ್ನು ಮಾಡಿ ಎಂದು ಏನು ಹೇಳಿದ್ದಾರೆ ಅದರ ಬಗ್ಗೆ ಹೇಳುವುದಾದರೆ, ತಾವು ನಾಳೆಯೇ ಇದಕ್ಕೆ ಬೇಕಾದ ಪ್ರಸ್ತಾವಗಳನ್ನು ನನಗೆ ಕಳುಹಿಸಿಕೊಟ್ಟರೆ ಅದನ್ನು ಪರಿಶೀಲಿಸಿ ನೋಂದಣಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳಬಯಸುತ್ತೇನೆ.

ಇನ್ನು ಸಹಕಾರ ಸಂಘಗಳ ಸಾಲಗಳನ್ನು ರದ್ದುಮಾಡಿ ಎಂದು ತಾವು ಹೇಳುತ್ತಿದ್ದೀರಿ. ಹಾಗಾದರೆ ಈ ವ್ಯವಸ್ಥೆಯನ್ನು ಯಾವ ರೀತಿ ಮುಂದುವರಿಸುವುದಕ್ಕೆ ಇಷ್ಟಪಡುತ್ತೀರೋ ಗೊತ್ತಿಲ್ಲ. ನಮ್ಮ ಸರ್ಕಾರದ ನೀತಿ ಏನೆಂದರೆ ಸಾಧ್ಯವಾದಷ್ಟು ಕೃಷಿಕರಿಗೆ ಕಡಿಮೆ ಬಡ್ಡಿಯ ದರದಲ್ಲಿ ಹಣವನ್ನು ಕೊಡತಕ್ಕ ವ್ಯವಸ್ಥೆ ಆಗಬೇಕೇ ಹೊರತು ಬೇರೆ ಅಲ್ಲ. ಆದರೆ ಸಾಲವನ್ನೇ ಕೊಡಕೂಡದು ಎಂದು ಮಾನ್ಯ ವೆಂಕಟರಾಮಯ್ಯನವರು ಏನು ಹೇಳುತ್ತಿದ್ದಾರೆ ಅದು ಖಂಡಿತ ನನಗೆ ಆಶ್ಚರ್ಯವಾಗುತ್ತಿದೆ. ಆದ್ದರಿಂದ ಅವರು ತಮ್ಮ ಅಭಿಪ್ರಾಯಗಳನ್ನು ತಿದ್ದಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ

ಇನ್ನು ಮಾನ್ಯ ಸ್ವಾಮಿರಾವ್‌ರವರು ಪ್ರಸ್ತಾಪ ಮಾಡಿ ಟಿ ಎ ಪಿ ಎಂ.ಸಿ.ಎಸ್. ಹೊಸನಗರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಅದಕ್ಕೆ ಸಂಬಂಧಪಟ್ಟಹಾಗೆ ಕೆಲವು ವಿಷಯಗಳು ಹೈಕೋರ್ಟಿನಲ್ಲಿದೆ. ಇದು ಅಪೂರ್ಣವಾಗಿರುವುದರಿಂದ ಈಗ ಯಾವ ಕ್ರಮವನ್ನು ತೆಗೆದುಕೊಳ್ಳಲಾಗುವುದಿಲ್ಲ. ಪೂರ್ಣವಾದಮೇಲೆ ಮುಂದಿನ ಕ್ರಮ ತೆಗೆದುಕೊಳ್ಳುತ್ತೇನೆಂದು ಮಾನ್ಯ ಸದಸ್ಯರಿಗೆ ಹೇಳಲು ಇಚ್ಛೆಪಡುತ್ತೇನೆ. ಇದಾದ ಮೇಲೆ ಕೆಲವು ಸಣ್ಣಪುಟ್ಟ ಆರೋಪಗಳನ್ನು ಕೂಡ ಮಾಡಿದ್ದಾರೆ, ಆ ಆರೋಪಗಳನ್ನು ಖಂಡಿತವಾಗಿಯೂ ವಿಚಾರ ಮಾಡಿ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಇನ್ನು ರೈತರ ಬಗ್ಗೆ ಮಾತನಾಡಿದ ಮಾನ್ಯ ಚಂದ್ರಕಾಂತ ಬೆಲ್ಲದ್‌ರವರು ಒಂದು ಸಹಕಾರ ಮನೋಭಾವನೆಯನ್ನು ಅರ್ಥಮಾಡಿಕೊಂಡಿರುವ ಅಧಿಕಾರಿಗಳನ್ನು ಈ ಸಹಕಾರಿ ಕ್ಷೇತ್ರದಲ್ಲಿ

ಹಾಕಬೇಕೆಂದು ಹೇಳಿರುತ್ತಾರೆ. ಅಧಿಕಾರಿಗಳು ಮಾತ್ರವಲ್ಲ ಅಧಿಕಾರೇತರರು ಸಹಕಾರಿ ಮನೋಭಾವವನ್ನು ಹೊಂದಿದವರು ಇದ್ದರೆ ಮಾತ್ರ ಈ ಕ್ಷೇತ್ರದಲ್ಲಿ ಕೆಲಸ ಮಾಡಲು ಸಾಧ್ಯವಾಗುತ್ತದೆ. ಅಂಥ ಅಧಿಕಾರಿಗಳನ್ನು ಹುಡುಕಿಹಾಕಲು ಕಷ್ಟವಾಗುತ್ತದೆ. ಈವತ್ತಿನ ದಿವಸ ಇರತಕ್ಕಂಥ ಅಧಿಕಾರಿಗಳು ಗ್ರಾಮಮಟ್ಟದಿಂದ ಬಂದಿರತಕ್ಕಂಥವರು ರೈತ ಚಿಂತನೆ ಇರತಕ್ಕಂಥವರ ಸೇವಾ ನೆರವು ಪಡೆಯಲು ಸಾಧ್ಯವಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಮಾನ್ಯ ಜಿ.ಎಸ್ ಆಚಾರ್‌ರವರು ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಸದಸ್ಯರಿಗೆ ಹೆಚ್ಚಿನ ವೇಳೆಯಿಲ್ಲದ ಕಾರಣ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಲಿಕ್ಕೆ ಆಗಲಿಲ್ಲವೆಂದು ಹೇಳಿದರು. ಅವರು ಮಾಡಿದಂಥ ಪ್ರಸ್ತಾಪವೇನೆಂದರೆ ಸಹಕಾರಿ ಕ್ಷೇತ್ರದಲ್ಲಿ ಹೆಗ್ಗಣಗಳು ಸೇರಿಕೊಂಡಿವೆ ಎನ್ನುವ ಮಾತನ್ನು ಹೇಳಿದರು. ಆ ಹೆಗ್ಗಣಗಳು ಎಲ್ಲೇ ಇರಲಿ ಅವುಗಳನ್ನು ಸಾಯಿಸಲೇಬೇಕು ಇಲ್ಲವಾದರೆ ಸಹಕಾರಿ ಇಲಾಖೆ ಮುಂದೆ ಬರುವುದಕ್ಕೆ ಸಾಧ್ಯವಾಗುವುದಿಲ್ಲ. ಅವು ಹೊರಗೆ ಇರಲಿ. ಒಳಗೇ ಇರಲಿ ಆ ಹೆಗ್ಗಣಗಳು ಹೆಗ್ಗಣಗಳೇ. ಅವುಗಳನ್ನು ಸಾಯಿಸಲೇ ಬೇಕೆಂದು ಹೇಳಿದ್ದಾರೆ.

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ್ದುದು ನಾಲ್ಕು ಕಾಲಿನದಲ್ಲ, ಎರಡು ಕಾಲಿನದು ಎಂದು ಹೇಳಿದ್ದುದು?

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಇತರ ಇಲಾಖೆಗಳಿಗಿಂತ ಸಹಕಾರಿ ಇಲಾಖೆಯಲ್ಲಿರುವ ಹೆಗ್ಗಣಗಳು ಬಹಳ ವೈಶಿಷ್ಟವಾದವುಗಳಾಗಿರುತ್ತದೆ. ಈ ಸಹಕಾರಿ ಹೆಗ್ಗಣಗಳಿಗೆ ಯಾವ ಔಷಧಿಗಳನ್ನು ಕೊಟ್ಟರೂ ಸಾಯುವುದಿಲ್ಲ.

ಶ್ರೀ ಎಚ್. ಏಕಾಂತಯ್ಯ.—ಅನೇಕ ಸಹಕಾರಿ ಸಂಘಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲವೆಂದು ಹೇಳಿದರು. ಹುಣಸೂರು ಕಾಫಿ ಕ್ಯೂರಿಂಗ್ ವರ್ಕ್ಸ್ ಮತ್ತು ಸೊರಬದಲ್ಲಿರುವ ಸಹಕಾರ ಸಂಘದ ಬಗ್ಗೆ ಹೇಳಿದರು. ಲಕ್ಷಾಂತರ ರೂಪಾಯಿಗಳ ದುರ್ವ್ಯವಹಾರ ಮಾಡಿದಂಥ ಅನೇಕ ಸಹಕಾರಿ ಸಂಘಗಳು ಇವೆ. ಎಲ್ಲೆಲ್ಲಿ ಇವೆ ಎಂಬುದನ್ನು ಅನಂತರ ಹೇಳುತ್ತೇನೆ. ಈವತ್ತಿನ ದಿವಸ ನಮ್ಮ ಆಚಾರ್ಯರವರು ಒಂದು ಮಾತನ್ನು ಹೇಳಿದರು ·ಹೊಳೆ ನೀರಿಗೆ ದೊಣ್ಣಪ್ಪ ನಾಯಕನ ಅಪ್ಪಣೆಯೇ' ಎಂದು. ಹೊಳೆ ನೀರಿಗೆ ದೊಣ್ಣಪ್ಪನಾಯಕನ ಅಪ್ಪಣೆ ಬೇಕಾಗಿಲ್ಲ. ಆದರೆ ಹೊಳೆ ನೀರನ್ನು ಹೊಲಸು ಮಾಡತಕ್ಕಂಥವರಿಗೆ ದೊಣ್ಣಪ್ಪನಾಯಕನ ಅಪ್ಪಣೆ ಬೇಕಾಗುತ್ತದೆ. ಈವತ್ತಿನ ದಿವಸ ಸಹಕಾರಿ ಸಂಘಗಳನ್ನು ಸರಿಯಾದ ರೀತಿಯಲ್ಲಿ ನಡೆಸಿಕೊಂಡು ಹೋಗಲು ಯಾರ ಅಪ್ಪಣೆಯೂ ಬೇಕಾಗಿಲ್ಲ. ಯಾರು ಹಾನೆಸ್ಟಿಯಿಲ್ಲದೆ ದುರುಪಯೋಗ ಮಾಡುವ ಮುಖಾಂತರ ಕೆಲಸ ಮಾಡುತ್ತಿದ್ದಾರೆ ಅಂತಹವರನ್ನು ಶಿಕ್ಷೆಗೆ ಒಳಪಡಿಸಬೇಕಾಗುತ್ತದೆ ಮತ್ತು ಯಾರು ಹಾನೆಸ್ಟ್ ಆಗಿ ಕೆಲಸ ಮಾಡುತ್ತಾರೆ ಅವರ ಆಯ್ಕೆ ಅವಶ್ಯಕತೆ ಇದೆ ಎಂದು ಹೇಳುವುದಕ್ಕೆ ಈ ಸಂದರ್ಭದಲ್ಲಿ ಇಷ್ಟಪಡುತ್ತೇನೆ.

ಇನ್ನು ಕ್ಯಾಂಪ್‌ಕೊ ಬಗ್ಗೆ ಮತ್ತು ಗೃಹ ನಿರ್ಮಾಣ ಸಹಕಾರಿ ಸಂಘಗಳ ಬಗ್ಗೆ ಮಾತನಾಡಿದ್ದಾರೆ. ಇದರ ಬಗ್ಗೆ ಎಚ್ಚರವಾಗಿರಬೇಕೆಂದೂ ಸಹ ಮಾನ್ಯ ಸದಸ್ಯರು ಹೇಳಿದ್ದಾರೆ. ಈ ರೀತಿ ಯಾವ ಸಹಕಾರಿ ಸಂಘಗಳು ರಾಜ್ಯದಲ್ಲಿ ಇವೆ ಇದ್ದು ಅವುಗಳನ್ನು ವಿಚಾರಣೆ ಮಾಡುವುದಕ್ಕೆ ಆದೇಶವನ್ನು ನೀಡಿದ್ದೇವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ಆಡಿಟ್ ಸೆಲ್ ಏನು ಇದೆ ಅದು ಶಾಸ್ತ್ರೋಕ್ತವಾದ ರೀತಿಯಲ್ಲಿ ಇಲ್ಲವೆಂದು ಹೇಳಿದ್ದಾರೆ. ಅದನ್ನು ಕೂಡ ಪರಿಶೀಲನೆ ಮಾಡುತ್ತೇನೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಶಿವನಂಜಪ್ಪನವರು ಒಂದೆರಡು ಆರೋಪಗಳನ್ನು ಮಾಡಿದರು. ನಿಜವಾದ ಆರೋಪಮಾಡಿ, ಆದರೆ ಆಧಾರ ರಹಿತ ಆರೋಪಗಳನ್ನು ಮಾಡಬೇಡಿ ಎಂದು ಹೇಳುತ್ತೇನೆ. ಆಧಾರ ಸಹಿತ ಆರೋಪಮಾಡಿ, ಆದರೆ ಆಧಾರರಹಿತ ಆರೋಪಗಳನ್ನು ಮಾಡಿದ್ದೇ ಆದರೆ ಪಕ್ಷದ ಶಾಸಕರು ಇರಬಹುದು. ಇಲಾಖೆಯ ಅಧಿಕಾರಿಗಳು ಇರಬಹುದು ಅವರ ವಿರುದ್ಧ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಜಿ. ಎಸ್. ಶಿವನಂಜಪ್ಪ.—ಎಲ್ಲಾ ಶಾಸಕರುಗಳಿಗೆ ಪ್ರಿಂಟ್ ಮಾಡಿ ಹಂಚಿದ್ದಾರೆ ನಿಮಗೂ ಕೊಟ್ಟಿದ್ದಾರೆ. ಅದರ ಬಗ್ಗೆ ನಾನು ಹೇಳಿದ್ದೇನೆ. ಅದರಲ್ಲಿ ನನ್ನ ಸ್ವಂತ ಆರೋಪ ಏನೂ ಇಲ್ಲ. ಸರಿಯಾಗಿದ್ದರೆ ಸರಿ ಅನ್ನಿ, ತಪ್ಪಾಗಿದ್ದರೆ ಸರಿಪಡಿಸಿ. ಸರಿಪಡಿಸತಕ್ಕದ್ದು ನಿಮಗೆ ಬಿಟ್ಟದ್ದು.

ಶ್ರೀ ಹೆಚ್. ಏಕಾಂತಯ್ಯ.—ಪತ್ರಿಕೆಗಳಲ್ಲಿ ಬಂದ ಆರೋಪ ಬೇರೆ. ಸಭೆಯಲ್ಲಿ ಮಾಡಿದ ಆರೋಪ ಬೇರೆ. ತಾವು ಏನು ಆರೋಪ ಮಾಡಿದ್ದೀರೆಂಬುದನ್ನು ಬರೆದುಕೊಂಡಿದ್ದೇನೆ. ಹಣ ತೆಗೆದುಕೊಂಡು ಕೆಲಸ ಕೊಟ್ಟಿದ್ದಾರೆ ಎಂದು ಹೇಳಿದ್ದೀರಿ. ಇದಕ್ಕೆ ತಕ್ಕಂಥ ಪುರಾವೆ ಕೊಟ್ಟರೆ ಯಾವುದೇ ವ್ಯಕ್ತಿ ಆಗಿರಲಿ ಅವರ ಮೇಲೆ ಕ್ರಮ ಕೈಗೊಳ್ಳುತ್ತೇನೆ. ಬಸವಲಿಂಗಪ್ಪನವರು ಮತ್ತು ಲಕ್ಕಪ್ಪನವರು ಅನೇಕ ವಿಚಾರಗಳನ್ನು ಹೇಳಿದ್ದಾರೆ. ಬಸವಲಿಂಗಪ್ಪನವರು ಇದ್ದರೆ ಚೆನ್ನಾಗಿತ್ತು. ಅವರು ಸಹಕಾರ ಸಂಘಗಳ ಕಾರ್ಯ ನಿರ್ವಹಣೆ ಬಗ್ಗೆ ಕಠಿಣ ಕ್ರಮ ಕೈಗೊಳ್ಳಬೇಕೆಂದರು. ನಿಜ. ಆದರೆ ನಮ್ಮ ಹಿರಿಯ ಸಹಕಾರಿ ಧುರೀಣರು ಮತ್ತು ಹಿರಿಯ ಸದಸ್ಯರಾದ ಪಾಟೀಲರು "You should not become a recovery officer" ಎಂಬ ಮಾತನ್ನು ಹೇಳಿದರು. ಕೊನೆಯಲ್ಲಿ ಈ ವಿಚಾರವನ್ನು ಪ್ರಸ್ತಾಪಿಸುತ್ತೇನೆ. ನಮ್ಮ ರಾಷ್ಟ್ರದಲ್ಲಿ ಸಹಕಾರ ಚಳುವಳಿ ಪ್ರಾರಂಭವಾಗಿ ೮೪ ವರ್ಷವಾಯಿತು, ೮೪ ವರ್ಷಗಳ ನಂತರ ಯಾವ ಒಂದು ಉದ್ದೇಶ ಸಾಧನೆಗಾಗಿ ಸಹಕಾರ ಸಂಘಗಳನ್ನು ಸ್ಥಾಪಿಸಿದ್ದೇವೋ ಅದನ್ನು ಈಡೇರಿಸುವುದಕ್ಕೆ ಸಾಧ್ಯವಾದ ಪರಿಸ್ಥಿತಿ ಬಂದಿದೆ. ಸ್ವಾತಂತ್ರ್ಯ ಬಂದು ೪೦ ವರ್ಷಗಳ ನಂತರ ಈ ಸಹಕಾರ ಚಳುವಳಿಯಿಂದ ನಾವು ಅನೇಕ ವಿಧವಾದ ಸಾಮಾಜಿಕ ಆರ್ಥಿಕ ಕಾರ್ಯಕ್ರಮಗಳನ್ನು ಜಾರಿ ಮಾಡಲಿಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಆದರೆ ಎಷ್ಟರ ಮಟ್ಟಿಗೆ ನಾವು ಇದರಲ್ಲಿ ಜಯಶೀಲರಾಗಿದ್ದೇವೆ ಎಂಬುದನ್ನು ವಿಚಾರ ಮಾಡಬೇಕಾಗಿದೆ. ಬಳಕೆದಾರರ ಸಹಕಾರ ಸಂಘಗಳ ಮೂಲಕ ಮತ್ತು ಬೇರೆ ಬೇರೆ ಸಹಕಾರ ಸಂಘಗಳ ಮೂಲಕ ಗ್ರಾಹಕರಿಗೆ ಬೇಕಾದ ವಸ್ತುಗಳನ್ನು ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆ, ಆದರೆ ಎಷ್ಟರಮಟ್ಟಿಗೆ ಫಲಕಾರಿಯಾಗಿದ್ದೇವೆ? ಕೃಷಿಕರಿಗೆ ಬೇಕಾದ ಸಾಲ ಸಲಕರಣೆಗಳನ್ನು ಕೊಡುವುದಕ್ಕೆ ಪ್ರಯತ್ನ ಮಾಡಿ ಎಷ್ಟರ ಮಟ್ಟಿಗೆ ಫಲಕಾರಿಯಾಗಿದ್ದೇವೆ ಎಂಬುದನ್ನು ವಿಚಾರ ಮಾಡಬೇಕಾಗಿದೆ. ಈ ದಿಸೆಯಲ್ಲಿ ಎಲ್ಲೋ ತಪ್ಪಿದೆ. ಅದನ್ನು ಸರಿಪಡಿಸುವ ಪ್ರಯತ್ನ ಮಾಡಬೇಕಾಗಿದೆ. ಇದರಲ್ಲಿ ಎರಡು ವಿಧದಲ್ಲಿ ಆಲೋಚನೆ ಮಾಡಬೇಕಾಗಿದೆ. ಮೊಟ್ಟಮೊದಲನೆಯದಾಗಿ ಯಾರು ಯಾರು ಉತ್ತಮವಾದ ಸಹಕಾರಿಗಳಿದ್ದಾರೆ ಸಹಕಾರ ರಂಗದಲ್ಲಿ ನಿಷ್ಠರಾಗಿದ್ದಾರೆ ಅವರಿಗೆ ಬೆಂಬಲ ಕೊಡಬೇಕಾಗುತ್ತದೆ. ಪಕ್ಷಾತೀತವಾಗಿ ಕೆಲಸ ಮಾಡಬೇಕಾಗುತ್ತದೆ. ಅದನ್ನು ನಾವು ಮಾಡುತ್ತೇವೆ. ಕೆಲವರು ಹೇಳಿದರು ಸಹಕಾರಿಗಳಿಗೆ ಪಕ್ಷವೇ ಇಲ್ಲ ಎಂದು. ಅದನ್ನು ನಾನು ಒಪ್ಪುತ್ತೇನೆ. ಕೆಲವು ಸಂದರ್ಭಗಳಲ್ಲಿ ಎಲ್ಲಾ ಸಹಕಾರಿಗಳು ಒಂದೇ ಮಾತನ್ನು ಹೇಳಿದರು. ಸಹಕಾರಿ ಕ್ಷೇತ್ರದಲ್ಲಿರುವ ಜನರು ಅನೇಕ ಅಭಿಪ್ರಾಯಗಳನ್ನು ಹೇಳಿದಾಗ ಅವರ ಅಭಿಪ್ರಾಯ ಹೆಚ್ಚು ಕಡಿಮೆ ಒಂದೇ ಆಗಿರುವುದನ್ನು ನೋಡಿದ್ದೇವೆ. ಯಾರು ಸಹಕಾರಿ ಕ್ಷೇತ್ರದಲ್ಲಿ ಇಲ್ಲದ ಶಾಸಕರಿದ್ದಾರೆ ಅವರ ವಿಚಾರವನ್ನು ತೆಗೆದುಕೊಂಡಾಗ ಅವರು ಯಾವುದೇ ಪಕ್ಷಕ್ಕೆ ಸೇರಿರಲಿ ಅವರ ಭಾವನೆ ಕೂಡ ಒಂದೇ ಆಗಿರುವುದನ್ನು ಕಂಡಿದ್ದೇವೆ. ಮಾನ್ಯ ಪಾಟೀಲರು ಹೇಳಿದರು "you should not become a recovery officer or a prosecutor" ಎಂದು Yes. I don't want to become a prosecutor or a recovery officer. ಎಲ್ಲೆಲ್ಲಿ ಸಹಕಾರ ಸಂಘಗಳಲ್ಲಿ ಹಣವನ್ನು ತಿಂದು ಹಾಕಿದ್ದಾರೆ, ಎಲ್ಲಿ ಸಹಕಾರಿಗಳು ಸ್ವಂತ ಹಣ ಮಾಡಿದ್ದಾರೆ ಅಂಥ ಕಡೆ ಸಹಕಾರಿಗಳ ಹಿತವನ್ನು ಗಮನದಲ್ಲಿ ಇಟ್ಟುಕೊಂಡು ಕೆಲಸ ಮಾಡಿದ್ದೇವೆ. ಅವರ ಬಗ್ಗೆ ಮಾತನಾಡುವುದು ಬೇಡವೆ ? ಇವತ್ತಿನ ದಿವಸ ನಾನು ಲಿಕ್ವಿಡೇಟರ್ ಆಗಬೇಕೇ ಅಥವಾ ಪ್ರಾಸಿಕ್ಯೂಟರ್ ಆಗಬೇಕೇ ? ಎರಡೂ ಆಗುವುದಕ್ಕೆ ಸಿದ್ಧನಿಲ್ಲ. I wish to become a recovery officer and prosecutor rather than a liquidator or a prosecutor. ಇವತ್ತಿನ ದಿವಸ ಪ್ರಾಸಿಕ್ಯೂಷನ್ ಮಾಡುವುದು ಏನಿದೆ ಅದು ಹೋಗಬೇಕು. ಯಾರಿಗೂ ಕೂಡ ಕಿರುಕುಳ ಕೊಡಬೇಕೆಂಬ ಉದ್ದೇಶದಿಂದ ವಿಚಾರಣೆ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಇವತ್ತಿನ ದಿವಸ ನಮ್ಮ ಚಳವಳಿ ಏನು ಇರಬೇಕೆಂದರೆ ಯಾರು ದೇಶದಲ್ಲಿ ಜನಸಾಮಾನ್ಯರು ಇದ್ದಾರೆ ಅವರ ಆರ್ಥಿಕ ಪ್ರಗತಿಗಾಗಿ, ಸಾಮಾಜಿಕ ಆರ್ಥಿಕ ಕಾರ್ಯಕ್ರಮಗಳು ಏನಿವೆ, ಅವು ಕೇಂದ್ರ ಸರ್ಕಾರದ ನೆರವಿನವಾಗಿರಲಿ ಅಥವಾ ರಾಜ್ಯ ಸರ್ಕಾರದ ಯೋಜನೆಯಿಂದ ಆಗಿರಲಿ, ಈ ಕಾರ್ಯಕ್ರಮಗಳು ಬಡವರಿಗೆ ಮುಟ್ಟುವ ವ್ಯವಸ್ಥೆ ಆಗಬೇಕಾದರೆ ನಾವು ಕಠಿಣ ಕ್ರಮ ಕೈಗೊಳ್ಳಬೇಕಾಗುತ್ತದೆ. ಸಹಕಾರಿ ಕ್ಷೇತ್ರದಲ್ಲಿ ಏನಾಗಿದೆ ಎಂಬ ಬಗ್ಗೆ ಮಾನ್ಯ ಪಾಟೀಲರು ಮತ್ತಿತರರು ಹೇಳಿದರು. ಅವರ ಮಾತನ್ನು ನಾನು ಒಪ್ಪುತ್ತೇನೆ. ಅಲ್ಲಿ ಮುಕ್ತ ಅವಕಾಶ ಇರಬೇಕು, ಹೌದು, ಮುಕ್ತ ಅವಕಾಶ ಇರಬೇಕು. ರಾಜ್ಯ ಮಟ್ಟದ ಮಹಾಮಂಡಲದಲ್ಲಿ ಮುಕ್ತ ಅವಕಾಶ ಇದ್ದು ಕೇವಲ ೩೪ ಜನ ಸದಸ್ಯರಿದ್ದಾರೆ. ಇಂಥ ಮುಕ್ತ ಅವಕಾಶ ಬೇಕಾಗಿದೆಯೆ ?

ಈ ದೇಶದ ಜನಸಾಮಾನ್ಯರು ಯಾರಿದ್ದಾರೆ ಅವರ ಪ್ರಾತಿನಿಧ್ಯ ಇರುವಂತೆ ಸಹಕಾರಿ ಚಳುವಳಿ ನಡೆದರೆ ಎಲ್ಲೋ ಆಗಲಿ ಖಂಡಿತವಾಗಿ ಒಳ್ಳೆಯದಾಗುವುದಕ್ಕೆ ಸಾಧ್ಯವಿದೆ. ಆದರೆ ನಮ್ಮ ದೇಶದಲ್ಲಿರುವ ಸಾಮಾಜಿಕ, ಆಡಳಿತ ವ್ಯವಸ್ಥೆಯಲ್ಲಿ ಸಾಮಾನ್ಯ ಜನ ಈ ಒಂದು ಜಾಗಗಳಿಗೆ ಬರುವುದಕ್ಕೆ ಸಾಧ್ಯವಿಲ್ಲ ಆದಕ್ಕೋಸ್ಕರ ನಿಯಂತ್ರಣ ಹಾಕುವಂಥ ಕೆಲಸ ಮಾಡಬೇಕಾಗಿದೆ. ಅದರ ಮುಖಾಂತರ ಬೇರೆ ಯಾವರು ಸಕ್ರಿಯವಾಗಿ ಭಾಗವಹಿಸುವ ವ್ಯವಸ್ಥೆ ಮಾಡಬೇಕಾಗುತ್ತದೆ. ಆ ದೃಷ್ಟಿಯಿಂದ ಕೆಲವು ನಿಯಂತ್ರಣ ಹಾಕಬೇಕಾಗುತ್ತದೆಯೋ ಹೊರತು ಬೇರೆ ದೃಷ್ಟಿಯಿಂದ ಅಲ್ಲ ಎಂಬುದನ್ನು ಈ ಸಂದರ್ಭ ದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಕೊನೆಯದಾಗಿ ಒಂದೆರಡು ವಿಚಾರಗಳನ್ನು ಪ್ರಸ್ತಾಪ ಮಾಡು ವುದಕ್ಕೆ ಇಷ್ಟಪಡುತ್ತೇನೆ. ಈಗಾಗಲೇ ಹೇಳಿದಹಾಗೆ ಸಮಗ್ರವಾದ ತಿದ್ದುಪಡಿಯನ್ನು ಒಳಗೊಂಡ ಹೊಸ ಮಸೂದೆಯನ್ನು ಸರ್ಕಾರ ತರುವುದಕ್ಕೆ ಇಷ್ಟಪಡುತ್ತದೆ. ಅದನ್ನು ಜಾಗ್ರತೆ ಮಾಡುವುದಕ್ಕೆ ಇಷ್ಟಪಡುತ್ತದೆ. ಮಾನ್ಯ ಮುಖ್ಯಮಂತ್ರಿಗಳು ೧೯೮೭-೮೮ ಮತ್ತು ೧೯೮೮-೮೯ನೇ ಆಯವ್ಯಯ ಭಾಷಣದಲ್ಲಿ ನಮ್ಮ ಇಲಾಖೆಗೆ ಸಂಬಂಧಪಟ್ಟಂತೆ ಕೆಲವಾರು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ ನಮ್ಮ ಇಲಾಖೆಗೆ ಸಂಬಂಧಪಟ್ಟಂತೆ ಸಮಗ್ರ ಗ್ರಾಮೀಣ ಸಾಲ ವ್ಯವಸ್ಥೆಗೆ ಸಮೀಕ್ಷೆ ಈಗಾಗಲೇ ಮಾಡಿದ್ದೇವೆ ೧೭೫ ತಾಲ್ಲೂಕುಗಳಲ್ಲಿ ಸಮೀಕ್ಷೆ ಮಾಡಿ ೧೯೮೭-೮೮ರಲ್ಲಿ ೨,೧೫೧ ಕೋಟಿ ರೂಪಾಯಿಗಳ ಸಾಲದ ಅವಶ್ಯಕತೆ ಇದೆ ಎಂಬುದನ್ನು ಕಂಡುಕೊಂಡಿ ದ್ದೇವೆ ಸಮೀಕ್ಷಾ ವರದಿಯನ್ನು ಕೆಲವೇ ದಿನಗಳಲ್ಲಿ ಕೊಡುವವರಿದ್ದಾರೆ. ಅದು ಬಂದಮೇಲೆ ನಬಾರ್ಡ್‌ನವರ ಮತ್ತು ಕೇಂದ್ರ ಸರ್ಕಾರದವರ ಸಹಾಯ ಪಡೆದು ಕಡಿಮೆ ಬಡ್ಡಿಯಲ್ಲಿ ಹಣ ಪಡೆದು ಈ ದೇಶದ ಕೃಷಿಕನಿಗೆ ಸಾಲ ಕೊಡುವ ಪ್ರಯತ್ನ ಮಾಡುತ್ತೇವೆ. ಅಷ್ಟೇ ಅಲ್ಲ ೧೯೮೮-೮೯ನೇ ಸಾಲಿನಲ್ಲಿ ಕೂಡ ಉಳಿದ ತಾಲ್ಲೂಕುಗಳ ಪೈಕಿ ಪ್ರತಿಯೊಂದು ತಾಲ್ಲೂಕಿನಲ್ಲೂ ಒಂದೊಂದು ಹೋಬಳಿಯಂತೆ ೧೭೫ ತಾಲ್ಲೂಕುಗಳಲ್ಲೂ ಎರಡನೇ ಹಂತದಲ್ಲಿ ಸಮೀಕ್ಷೆ ಮಾಡಿಸಿ ಸಾಲ ನೀಡುವ ವ್ಯವಸ್ಥೆಯನ್ನು ಮುಂದುವರೆಸುತ್ತೇವೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಸನ್ಮಾನ್ಯ ಅಧ್ಯಕ್ಷರೆ, ಮಾರಾಟ ಸಹಕಾರ ಸಂಘಗಳು ಮತ್ತು ಇನ್ನಿತರ ಸಹಕಾರ ಸಂಘಗಳು ಜನಸಾಮಾನ್ಯರಿಗೆ ಪ್ರಯೋಜನಕಾರಿಯಾದ ರೀತಿಯಲ್ಲಿ ಕೆಲಸ ಮಾಡಬೇಕಾದರೆ ಆರ್ಥಿಕವಾಗಿ ಅವನ್ನು ಬಲಪಡಿಸಬೇಕಾಗುತ್ತದೆ. ಆ ರೀತಿ ಆರ್ಥಿಕವಾಗಿ ಬಲಪಡಿಸುವುದಕ್ಕೆ ಹೊಸ ಯೋಜನೆಯನ್ನು ರೂಪಿಸುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತಿದೆ. ಈ ಸಹಕಾರ ಸಂಘಗಳನ್ನು ಬಲಪಡಿಸುವುದಕ್ಕೆ ನಬಾರ್ಡ್ ಮತ್ತು ಎನ್.ಸಿ.ಡಿ.ಸಿ. ಸಹಾಯ ಪಡೆಯುತ್ತೇವೆ. ಮಾನ್ಯ ಕೆ. ಎಚ್. ಪಾಟೀಲರು ಮತ್ತು ಇನ್ನಿತರ ಸದಸ್ಯರು linking credit with marketing ಬಗ್ಗೆ ಹೇಳಿದ್ದಾರೆ. ಆ ಕೆಲಸವನ್ನು ಮಾಡಲಿಕ್ಕೆ ಹೆಚ್ಚು ಹೆಚ್ಚು ರೈತರಿಗೆ ಸಾಲ ಕೊಡುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಆ ಕಡೆ ಮತ್ತು ಈ ಕಡೆ ಇರತಕ್ಕ ಅನೇಕ ಹಿರಿಯ ಸದಸ್ಯರು ಅನೇಕ ಸಲಹೆಗಳನ್ನು ಹೇಳಿದ್ದಾರೆ. ಸನ್ಮಾನ್ಯ ಅಧ್ಯಕ್ಷರೆ ನಾನು ಇನ್ನೂ ಹೆಚ್ಚು ತೀವ್ರವಾದ ಧಾಳಿಯನ್ನು ನಿರೀಕ್ಷಿಸಿದ್ದೆ. ಆದರೆ ಅನೇಕ ಕಾರಣಗಳಿಂದಾಗಿ ಅಥವಾ ಕಡಿಮೆ ಅವಕಾಶ ಇದ್ದು ಎಂದು ಕಾಣುತ್ತದೆ ಅದಕ್ಕೋಸ್ಕರ ಹೆಚ್ಚು ಮಾತನಾಡುವುದಕ್ಕೆ ಸಾಧ್ಯವಾಗದೇ ಇರಬಹುದು. ಹೆಚ್ಚು ಹೆಚ್ಚು ವಿಚಾರಗಳನ್ನು ಮಾನ್ಯ ಸದಸ್ಯರು ಹೇಳಿದ್ದಾರೆ ಸಲಹೆ ಗಳನ್ನು ಕೊಟ್ಟಿದ್ದಾರೆ ಅದನ್ನು ಸ್ವೀಕಾರ ಮಾಡಿಕೊಂಡು ಉತ್ತಮವಾದ ಕಾರ್ಯವನ್ನು ಮಾಡಲಿಕ್ಕೆ ಸಾಧ್ಯವಾಗುತ್ತಿತ್ತು. ಆದಾಗ್ಯೂ ಈಗ ಕೊಟ್ಟಿರುವ ಉತ್ತಮವಾದ ಸಲಹೆಗಳನ್ನು ಸ್ವೀಕಾರ ಮಾಡಿದ್ದೇನೆ, ಆಧಾರರಹಿತವಾದ ಆರೋಪಗಳನ್ನು ತಿರಸ್ಕಾರ ಮಾಡುತ್ತೇನೆ. ಈ ಬೇಡಿಕೆಗಳ ಬಗ್ಗೆ ಇವತ್ತು ಮಾತನಾಡಿದಂಥ ಸದಸ್ಯರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಎಚ್. ಪಾಟೀಲ್. — ಮಾನ್ಯ ಮಂತ್ರಿಗಳು ಉತ್ತಮವಾಗಿ ಮಾತನಾಡಿದ್ದಾರೆ. ಯಾವ ತಪ್ಪಿನಿಂದ ಸಹಕಾರ ಸಂಘಕ್ಕೆ ಬರಬೇಕಾದ ಹಣ ಬಂದಿಲ್ಲ ಎಂಬುದನ್ನು ಹೇಳಿದ್ದಾರೆ ಕೇವಲ ಕೇಂದ್ರ ಸರ್ಕಾರದ ತಪ್ಪಿನಿಂದ ಅಥವಾ ಇತರ ಮೇಲಿನ ಸಂಸ್ಥೆಗಳ ತಪ್ಪಿನಿಂದ ಬರಬೇಕಾದ ಹಣ ನಿರಾಕೃತ ವಾಗಿದೆ ಎಂದು ಹೇಳಬಾರದು. ನಾನು ಒಂದು ಸಣ್ಣ ಉದಾಹರಣೆ ಕೊಡುತ್ತೇನೆ. ನ್ಯಾಷನಲ್ ಕೋ-ಆಪರೇಟೀವ್ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನವರು ೬೬,೦೭,೭೦೦ ರೂಪಾಯಿಗಳನ್ನು ಸ್ಯಾಂಕ್ಷನ್ ಮಾಡಿ ನಿಮಗೆ ಕಳುಹಿಸಿದ್ದಾರೆ. ನೀವು ಎಷ್ಟರಮಟ್ಟಿಗೆ ತೆಗೆದುಕೊಳ್ಳುವುದಕ್ಕೆ ಸಾಧ್ಯ ವಾಯಿತು ಅಂದರೆ ೪೬,೬೬,೦೦೦ ರೂಪಾಯಿಗಳನ್ನು ತೆಗೆದುಕೊಳ್ಳಲು ಸಾಧ್ಯವಾಯಿತು. ಅಂದರೆ ಇನ್ನೂ ೨೦ ಲಕ್ಷ ರೂಪಾಯಿಗಳನ್ನು ನೀವು ತೆಗೆದುಕೊಳ್ಳುವುದಕ್ಕಾಗಲಿಲ್ಲ. ಇದಲ್ಲದೆ ಬೇರೆ ಅವಕಾಶ

ಗಳೂ ಇವೆ ಈ ದೋಷಕ್ಕೆ ಸಹಕಾರಿ ಖಾತೆಯನ್ನು ದೂಷಿಸುವುದಕ್ಕೆ ನಾನು ಇಚ್ಛೆಪಡುವುದಿಲ್ಲ. ನೀವು ಅಂದರೆ ನಿಮ್ಮ ಖಾತೆಯವರು ಮುಂದಿನ ವರ್ಷಕ್ಕೆ ರಿನ್ಯೂ ಮಾಡಿ ಎಂದು ಬರೆದಿದ್ದೀರಿ. ಅಸಹಾಯಕ ಸ್ಥಿತಿಯಲ್ಲಿ ನೀವು ಬರೆದಿದ್ದೀರಿ ಆದರೆ ಏತಕ್ಕೆ ಎಂದು ನೀವು ವಿಚಾರ ಮಾಡಲಿಲ್ಲ ಮಾನ್ಯ ಮಂತ್ರಿಗಳು ಕೂಡ ಅಸಹಾಯಕರಾಗಿದ್ದೀರಿ. ಆ ದೃಷ್ಟಿಯಿಂದ ಏನಾದರೂ ವ್ಯವಸ್ಥೆ ಮಾಡಬೇಕೆಂದು ನಾನು ಹೇಳಿದೆ Unless some separate finance is arranged for this purpose it is not possible for you to implement any of these schemes of the Co-operative Department. ಯಾವ ಸ್ಕೀಮ್ ಬಗ್ಗೆಯಾಗಲೀ ಅದು ಸರಿಯಾದ ರೀತಿಯಲ್ಲಿ ಬರದೇ ಇದ್ದರೆ, ಸರಿಯಾದ ವೇಳೆಯಲ್ಲಿ ಬರದೇ ಇದ್ದರೆ ನಿಮ್ಮ ಮೇಲೆ ಸಿಟ್ಟು ಮಾಡುತ್ತೇವೆ. ಆದರೆ ನೀವು ಇದರಲ್ಲಿ ತಪ್ಪು ಮಾಡಿರುವುದಿಲ್ಲ. ಡಿಪಾರ್ಟ್‌ಮೆಂಟಿನಲ್ಲಿ ತಪ್ಪು ಇರುವುದು, ಪದ್ಧತಿ ಹಾಗೂ ಫೈನಾನ್ಸ್‌ನಲ್ಲಿ ತಪ್ಪು ಇರುವುದು ಒಟ್ಟು ರಿಲೀಸ್ ಆದ ಹಣವನ್ನು ನೀವು ತೆಗೆದುಕೊಳ್ಳುವುದಕ್ಕೆ ಆಗಿಲ್ಲ. ಏಕೆ ಆಗಿಲ್ಲ ಎಂದರೆ ನಿಮ್ಮಲ್ಲಿ ಪ್ರಾವಿಷನ್ ಇಲ್ಲ. ಬಹಳ ಸೂಕ್ಷ್ಮ ರೀತಿಯಲ್ಲಿ ನಿಮ್ಮ ರಿಪೋರ್ಟ್ ನೋಡಿದರೂ ಕೂಡ ಅನೇಕ ಸಂದರ್ಭದಲ್ಲಿ ಸೆಂಟ್ರಲ್ ಸೆಕ್ಟರ್ ಸ್ಕೀಮ್ ನೋಡಿ, ಸ್ಟೇಟ್ ಪ್ಲಾನ್ ನೋಡಿದರೆ ಸರಿಯಾದ ಪ್ಲಾನ್ ಇಲ್ಲದಿರುವುದು ಕಂಡು ಬರುತ್ತದೆ ಮಾನ್ಯ ಬೊಮ್ಮಾಯಿಯವರು ಪ್ಲಾನಿಂಗ್ ಮಿನಿಸ್ಟರ್ ಇದ್ದಾರೆ. ಸಹಕಾರಿ ಚಳುವಳಿಗೆ ಬೇಕಾಗುವ ಪ್ಲಾನ್ ಅನ್ನು ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ನವರು ತಯಾರು ಮಾಡಬೇಕು ಸಹಕಾರಿ ಇಲಾಖೆಯನ್ನು ಕಾನ್‌ಫಿಡೆನ್ಸ್‌ಗೆ ತೆಗೆದುಕೊಂಡು ಯಾವುದೇ ಹುದ್ದೆಗಳಲ್ಲೂ ಪ್ಲಾನ್ ಮಾಡಿಲ್ಲ. ನಾನು ಒಂದು ಸಣ್ಣ ಉದಾಹರಣೆ ಹೇಳುತ್ತೇನೆ. ದಾಲ್ ಮ್ಯಾನುಫ್ಯಾಕ್ಚರ್ ಮಾಡುವುದಕ್ಕೆ ೪ ಯೂನಿಟ್‌ಗಳನ್ನು ಸ್ಯಾಂಕ್ಷನ್ ಮಾಡಿ ಸೆಂಟ್ರಲ್ ಗೌರ್ನಮೆಂಟ್‌ನವರು ಸಬ್ಸಿಡಿ ರಿಲೀಸ್ ಮಾಡಿದ್ದಾರೆ. ಅದನ್ನು ಡೈರೆಕ್ಟರ್ ಆಫ್ ಅಗ್ರಿಕಲ್ಚರ್‌ಗೆ ಕೊಟ್ಟರು. ಅವರು ಅದನ್ನು ರಿಜಿಸ್ಟ್ರಾರ್ ಸಮ್ಮುಖಕ್ಕೆ ಕೊಟ್ಟರು. ಸಾಲ ಕೊಡುವುದಕ್ಕೆ ಎನ್‌ಸಿಡಿಸಿ ಯವರು ಸ್ಕೈ ಈಸ್ ದಿ ಲಿಮಿಟ್ ಎಂದು ಹೇಳಿದರು. ನಿಮ್ಮಲ್ಲಿ ಸರಿಯಾದ ಪ್ಲಾನ್ ಇಲ್ಲ. ಈ ನಾಲ್ಕರಲ್ಲಿ ಉಳಿದ ಇನ್ನು ಬೀದರ್, ಗುಲ್ಬರ್ಗ ಹಾಗೂ ಓಲ್ಡ್ ಮೈಸೂರು ಭಾಗಕ್ಕೆ ಕೊಡಬಹುದಾಗಿತ್ತು. ಏಕೆ ನಿಮ್ಮಲ್ಲಿ ಸರಿಯಾದ ಪ್ಲಾನ್ ಇಲ್ಲ ? ನೀವು ಪ್ರಾಸಿಕ್ಯೂಟರ್ ಆಗಬೇಡಿ. ಹಣ ತಿಂದಿರುವವರನ್ನು ಹಿಡಿಯಲು ಒಬ್ಬ ಅಧಿಕಾರಿಯನ್ನು ನೇಮಿಸಿ. ಆತ ಸರಿಯಾಗಿ ಕೆಲಸ ನಿರ್ವಹಿಸದಿದ್ದರೆ ಆತನನ್ನು ವಜಾ ಮಾಡಿ. ನೀವು ಇವತ್ತು ಫ್ರೆಂಡ್, ಫಿಲಾಸಫರ್ ಮತ್ತು ಗೈಡ್ ಆಗಬೇಕು. ರಿಕವರಿ ಬಗ್ಗೆ ನಿಮ್ಮ ಬಾಯಿಂದ ಬರಬಾರದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ಹಾಗೆ ಹೇಳುತ್ತೀರಿ. ಆದರೆ ಅವರು ಪ್ರಾಸಿಕ್ಯೂಟರ್ ಆಗುತ್ತೇನೆ ಎಂದು ಅವರು ಹೇಳುತ್ತಿದ್ದಾರೆ.

ಶ್ರೀ ಕೆ. ಎಚ್. ಪಾಟೀಲ್.—ಮಂತ್ರಿಗಳ ಸ್ಥಾನ ಉಚ್ಚ ಇರಬೇಕು. ಸೊಸೈಟಿಯಲ್ಲಿ ಎಷ್ಟು ರಿಕವರಿ ಆಗಿದೆ ಎಂದು ತಾವು ಕೇಳುವುದು ಬೇಡ. ತಾವು ಏನಿದ್ದರೂ ಫ್ರೆಂಡ್ ಫಿಲಾಸಫರ್ ಮತ್ತೆ ಗೈಡ್ ಆದರೆ ನಿಮ್ಮ ಸಹಕಾರಿ ಚಳುವಳಿಗೆ ಒಂದು ಹೆಚ್ಚಿನ ಬೆಲೆ ಬರುತ್ತದೆ ಎಂದು ಹೇಳುತ್ತೇನೆ. ತಾವು ಉತ್ತಮವಾಗಿ ಮಾತನಾಡಿರುವುದರಿಂದ, ತಮ್ಮಲ್ಲಿ ಪ್ರಾಮಾಣಿಕ ಉದ್ದೇಶ ಇರುವುದರಿಂದ ನಾನು ಯಾವುದೇ ರೀತಿಯ ಟೀಕೆ ಮಾಡುವುದಿಲ್ಲ. ಎಲ್ಲವನ್ನೂ ನಿಮ್ಮ ಅಧಿಕಾರಿಗಳಿಗೆ ಕೇಳಿದರೇ ಹೇಳಬಹುದೆಂದು ಕಾಣುತ್ತದೆ. ತಾವು ಬರೀ ಪ್ಲಾನ್ಸ್ ಕೊಟ್ಟಿದ್ದೀರಿ. ಹಿಂದೆ ಏನು ರಿಪೋರ್ಟ್ ಕೊಟ್ಟಿದ್ದೀರಿ ಅದನ್ನು ಅನುಸರಿಸಿ ತಾವು ಕೆಲಸ ಮಾಡುತ್ತೀರಾ ? ಸಾಲ ಕೊಡುವ ಬಗ್ಗೆ ನಿಲ್ ಎಂದು ಇದೆ. ಸೆಂಟ್ರಲ್ ಸ್ಕೀಮ್ ಬಗ್ಗೆ ನಿಲ್ ಎಂದು ಇದೆ. ಎಲ್ಲವೂ ಹೀಗಾಯಿತೆಂದರೆ ಕೋ-ಆಪರೇಟಿವ್ ಮೂವ್‌ಮೆಂಟ್ ಹೇಗೆ ನಡೆಯುತ್ತದೆ ? ಒಂದು ಸ್ಕೀಮ್‌ಗೆ ಬರೀ ೪ ಲಕ್ಷ ರೂಪಾಯಿ ತೆಗೆದಿದ್ದೀರಿ. ಇದರಿಂದ ಸಹಕಾರಿ ಚಳುವಳಿ ಆಗುತ್ತದೆಯೇ ? ಇಷ್ಟು ಹಣ ಸಾಕಾಗುತ್ತದೆಯೇ ? ಒಂದು ಮಿಲ್ಲನ್ನು ವಿಶ್ವಬ್ಯಾಂಕಿನ ಸ್ಕೀಮ್‌ನಲ್ಲಿ ತೆಗೆದುಕೊಂಡಿದ್ದು ಅದಕ್ಕೆ ಹಣ ಪ್ರಾವಿಷನ್ ಮಾಡದೇ ಇದ್ದರೆ ಅನೇಕ ರೀತಿಯಿಂದ ಕಷ್ಟಗಳಾಗುತ್ತವೆ. ಈಗಲಾದರೂ ಬೊಮ್ಮಾಯಿಯವರು ಹಾಗೂ ಮುಖ್ಯ ಮಂತ್ರಿಗಳ ಜೊತೆ ಮಾತನಾಡಿ ನಿಮ್ಮ ಇಲಾಖೆಗೆ ಸಪ್ಲಿಮೆಂಟರಿ ಬಜೆಟ್‌ನಲ್ಲಿ ಹೆಚ್ಚು ಹಣ ದೊರಕಿಸಿಕೊಳ್ಳುವ ಬಗ್ಗೆ ಪ್ರಯತ್ನ ಮಾಡಿ.

ಶ್ರೀ ಎಚ್. ಏಕಾಂತಯ್ಯ.—ಕೇಂದ್ರ ವಲಯ ಯೋಜನೆಯಲ್ಲಿ, ಕೇಂದ್ರ ಪರಿಷ್ಕೃತ ಯೋಜನೆಯಲ್ಲಿ ಸಾಕಷ್ಟು ಹಣ ಇದೆ. ಎನ್‌ಸಿಡಿಸಿ ಯೋಜನೆಯಲ್ಲಿ ಹಣವನ್ನು ಪಡೆಯುವ ರೀತಿಯಲ್ಲಿ ಯೋಜನೆ ಪರಿಷ್ಕರಣ ಮಾಡಬೇಕೆಂದು ಮಾನ್ಯ ಪಾಟೀಲರು ಹೇಳಿದ್ದಾರೆ. ಈ ಬಗ್ಗೆ ಚಿಂತನೆ ಮಾಡುತ್ತೇನೆ. ಹೋದವರ್ಷ ಹಣದ ಅಭಾವದಿಂದ ಇನ್ನೂ ಹೆಚ್ಚಿನ ಹಣವನ್ನು ಎನ್‌ಸಿಡಿಸಿ ಯೋಜನೆ ಅಡಿಯಲ್ಲಿ ಪಡೆದುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ಆದರೆ ಈ ವರ್ಷ ಅವಶ್ಯಕವಾದರೆ ಯೋಜನೆಯನ್ನು ಪರಿಷ್ಕರಣ ಮಾಡಿ ಈ ಕೆಲಸವನ್ನು ಮಾಡುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು.—ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರೇ ತಾವು ಪ್ರಶ್ನೆ ಕೇಳಿ, ತಾವು defacto Leader of the opposition.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾನು ಪದೇ ಪದೇ ೩ ವರ್ಷಗಳಿಂದ ಒಂದೇ ಪ್ರಶ್ನೆ ಕೇಳುತ್ತಿದ್ದು, ಪ್ರತಿ ವರ್ಷವೂ ಒಂದೇ ಉತ್ತರ ಬರುತ್ತಾ ಇದೆ. ನಾನು ಈಗ ಆಕ್ಟ್ ತರಿಸಿದ್ದೇನೆ. ಹಾಗೂ ಲೇಟೆಸ್ಟ್ ಆಕ್ಟ್ ತರಿಸಲು ಕಳುಹಿಸಿದ್ದೇನೆ. ಅಗ್ರಿಕಲ್ಚರ್ ಕೆಳಗೆ, ಡೆಟ್ ರಿಲೀಫ್ ಆಕ್ಟ್ ಕೆಳಗೆ ಎಷ್ಟು ಜನರಿಗೆ ರಿಲೀಫ್ ಕೊಟ್ಟಿದ್ದೀರಿ, ಎಷ್ಟು ಅಪ್ಲಿಕೇಷನ್ ರಿಸೀವ್ ಮಾಡಿದ್ದೀರಿ ಎಂದು ನಾನು ಕೇಳಿದೆ.

೧೧-೦೦ ಎ.ಎಂ.

ಪದೇ ಪದೇ ಮೂರು ವರ್ಷಗಳಿಂದ ಕೇಳುತ್ತಲೇ ಇದ್ದೇನೆ. ಒಂದೇ ತರಹದ ಉತ್ತರ ಅವರಿಂದ ಬರುತ್ತಲೇ ಇದೆ ಈಗಲೇ ನಾನು ಈ ಆಕ್ಟ್ ಅನ್ನು ತರಿಸಿದೆ ಆದರೆ, ನನಗೆ ಇನ್ನು ಲೇಟೆಸ್ಟ್ ಇಲ್ಲಿಯವರೆಗ ಸಿಗಲಿಲ್ಲ, ಈ ಕರ್ನಾಟಕ ಡೆಟ್ ರಿಲೀಫ್ ಆಕ್ಟ್ ಪ್ರಕಾರ ಎಷ್ಟು ಜನರಿಗೆ ನೀವು ರಿಲೀಫ್ ಕೊಟ್ಟಿದ್ದೀರಿ, ಎಷ್ಟು ಅಪ್ಲಿಕೇಷನ್ ನೀವು ರಿಸೀವ್ ಮಾಡಿದ್ದೀರಿ, ಎಷ್ಟು ಹಣವನ್ನು ನೀವು ರಿಲೀಫ್ ಆಗಿ ಕೊಟ್ಟಿದ್ದೀರಿ ಎಂದು ಕೇಳಿದ್ದೇನೆ ಅದಕ್ಕೆ ಉತ್ತರ ಇನ್ನು ಬಂದಿಲ್ಲ. ಈ ಕಾನೂನು ಬಗ್ಗೆ ನಾನು ಹೇಳಲೇಬೇಕಾಗುತ್ತದೆ ಈ ಸರ್ಕಾರಕ್ಕೆ ಇದನ್ನು ಇಂಪ್ಲಿಮೆಂಟ್ ಮಾಡಲು ಆಸಕ್ತಿ ಇಲ್ಲವೆಂದು ಸ್ಪಷ್ಟವಾಗುತ್ತದೆ ಏತಕ್ಕೆಂದರೆ ಕಾನೂನನ್ನು ಯಾಗು ಚಲಾಯಿಸಬೇಕು ಎಂಬುದೇ ಗೊತ್ತಿಲ್ಲ. ಈ ಕಾನೂನನ್ನು ಯಾರು ಇಂಪ್ಲಿಮೆಂಟ್ ಮಾಡುತ್ತಾರೆ ಎರಡು ಸಲ ಮಂತ್ರಿಗಳು ಇದೇ ರೀತಿಯ ಉತ್ತರವನ್ನು ಕೊಟ್ಟಿದ್ದಾರೆ. ಇವತ್ತು ನಮ್ಮ ದುರ್ದೈವಕ್ಕೆ ಇವರೂ ಕೂಡ ಇದು ನನ್ನ ಪರ್‌ವ್ಯೂಗೆ ಬರುತ್ತದೆಯೆ ಇಲ್ಲವೇ ಎಂಬುದು ಗೊತ್ತಿಲ್ಲ ಎಂದು ಹೇಳಿದ್ದಾರೆ ಬಡವರ ಬಗ್ಗೆ ಎಷ್ಟು ಕನಿಕರ ಇವರಿಗೆ ಇದೆ ಎಂದು ಕೇಳಬೇಕಾಗುತ್ತದೆ. ಇದನ್ನು ಏತಕ್ಕೆ ಇಂಪ್ಲಿಮೆಂಟ್ ಮಾಡಿಲ್ಲ ಅದಕ್ಕೆ ಕಾರಣಗಳೇನು ಎಂಬುದನ್ನು ಪದೇ ಪದೇ ಪ್ರಸ್ತಾಪ ಮಾಡಿದರೂ ಕೂಡ ತಾವು ಏತಕ್ಕೆ ಇದರ ಬಗ್ಗೆ ಚಿಂತನೆ ಮಾಡುತ್ತಿಲ್ಲ ? ತಾವು ಇದರ ಬಗ್ಗೆ ಸ್ಪಷ್ಟವಾದ ಉತ್ತರವನ್ನು ಕೊಡಬೇಕು ಇಲ್ಲದಿದ್ದರೆ ಏನಾಗುತ್ತದೆ ಎಂದರೆ ನಾವು ಕಾನೂನು ಮಾಡುತ್ತೇವೆ ಅಲ್ಲಿಗೆ ಬಿಡುತ್ತೇವೆ. ನೀವೇ ನೋಡದಿದ್ದರೆ ನಿಮ್ಮ ಅಧಿಕಾರಿಗಳು ಇನ್ನೆಲ್ಲಿ ನೋಡುತ್ತಾರೆ. ಆದ್ದರಿಂದ ತಾವು ಇದಕ್ಕೆ ದಯವಿಟ್ಟು ಉತ್ತರ ಕೊಡಬೇಕು. ಏತಕ್ಕೆ ನಿರ್ಲಕ್ಷ್ಯ ಮಾಡಿದ್ದೀರಿ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಎಚ್. ಏಕಾಂತಯ್ಯ.—ಕರ್ನಾಟಕ ಅಗ್ರಿಕಲ್ಚರಲ್ ಡೆಟ್ ರಿಲೀಫ್ ಆಕ್ಟ್ ಅದು ಸಹಾಯಕ ವಿಭಾಗಾಧಿಕಾರಿಗಳ ವ್ಯಾಪ್ತಿಗೆ ಬರುತ್ತದೆ. ಈ ಸಹಾಯಕ ವಿಭಾಗಾಧಿಕಾರಿಗಳು ರೆವಿನ್ಯೂ ಖಾತೆಯ ವ್ಯಾಪ್ತಿಯಲ್ಲಿ ಬರುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದನ್ನು ಇಂಪ್ಲಿಮೆಂಟ್ ಮಾಡುವವರು ನೀವೇ ಅಂದರೆ ನಿಮ್ಮ ಸಹಕಾರ ಇಲಾಖೆ.

ಶ್ರೀ ಹೆಚ್. ಏಕಾಂತಯ್ಯ.—ಈ ಕಾಯಿದೆ ಬಗ್ಗೆ ಏನು ಹೇಳಿದ್ದಾರೆ ಅದನ್ನು ಖಂಡಿತವಾಗಿ ಪರಿಶೀಲನೆ ಮಾಡುತ್ತೇನೆ. ಈ ಕಾಯಿದೆಯ ಅಡಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ಬಂದಿರತಕ್ಕ ಎಲ್ಲ ಅರ್ಜಿಗಳ ಬಗ್ಗೆ ಸಮೀಕ್ಷೆ ಮಾಡಿ ಯಾವುದಾದರೂ ಅರ್ಜಿಗಳು ಉಳಿದಿದ್ದರೆ ಸಾಧ್ಯವಾದಷ್ಟು ಜಾಗ್ರತೆಯಾಗಿ ವಿಲೇವಾರಿ ಮಾಡಲು ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಏತಕ್ಕೆ ಇಲ್ಲಿಯವರೆಗೆ ಇದನ್ನು ನಿರ್ಲಕ್ಷ್ಯ ಮಾಡಿದ್ದೀರಿ ? ೩-೪ ವರ್ಷಗಳಿಂದ ಇದರ ಬಗ್ಗೆ ಸತತವಾಗಿ ಕೇಳುತ್ತಿದ್ದೇವೆ It is a very important legislation to help the rural masses. ಮನೆ ಇದೆ, ಆಸ್ತಿ ಇದೆ, ಲ್ಯಾಂಡ್ ಇದೆ, ಇವೆಲ್ಲವನ್ನು ಮಾರ್ಟ್‌ಗೇಜ್ ಮಾಡಿದ್ದು ಅವರಿಗೆ ಒಂದು ಡೆಫಿನಿಷನ್ ಕೊಟ್ಟು ಇಷ್ಟು ಆದಾಯ ಇದ್ದರೆ, ಅವರ ಜಮೀನುಗಳನ್ನು ಶ್ರೀಮಂತರು ನುಂಗಿ ಹಾಕಬಾರದು ಎಂದು ಕಾನೂನು ಮಾಡಿದರೂ ಅದನ್ನು ರವ್ಯೂ ಮಾಡದಿದ್ದರೆ ಹೇಗೆ ಪ್ರತಿ ಜಿಲ್ಲೆಯಲ್ಲಿರತಕ್ಕ ಜಿಲ್ಲಾ ಮಂತ್ರಿಗಳು ಇದನ್ನು ರೆವ್ಯೂ ಮಾಡಬೇಕು. ಜಿಲ್ಲಾಧಿಕಾರಿಗಳು ಇದನ್ನು ರೆವ್ಯೂ ಮಾಡಬೇಕು ಆದರೆ ಇದನ್ನು ಟೋಟಲಿ ನೆಗ್ಲೆಕ್ಟ್ ಮಾಡಿದ್ದಾರೆ. ದಯವಿಟ್ಟು ನೀವು ಇನ್ನು ಮುಂದೆ ಇದರ ಬಗ್ಗೆ ಒಂದು ಸುತ್ತೋಲೆಯನ್ನು ಹೊರಡಿಸಬೇಕು. ಹಾಗೂ ೪-೫ ದಿವಸಗಳಲ್ಲಿ ಇದರ ಬಗ್ಗೆ ಒಂದು ಸ್ಟೇಟ್‌ಮೆಂಟ್ ಮಾಡಬೇಕು.

ಶ್ರೀ ಹೆಚ್. ಏಕಾಂತಯ್ಯ.—ಮಾನ್ಯ ಉಪನಾಯಕರು ಏನು ಸೂಚನೆ ಕೊಟ್ಟಿದ್ದಾರೆ ಇದರ ಬಗ್ಗೆ ಈ ತಿಂಗಳಿನಲ್ಲಿ ಕರ್ನಾಟಕ ರಾಜ್ಯದಲ್ಲಿರತಕ್ಕ ಅಂದರೆ ಈ ಡೆಟ್ ರಿಲೀಫ್ ಆಕ್ಟ್ ಪ್ರಕಾರ ಯಾವ ಅರ್ಜಿಗಳು ಬಂದಿವೆ ಅವುಗಳನ್ನು ವಿಲೇವಾರಿ ಮಾಡಲು, ಸಮೀಕ್ಷೆ ಮಾಡಲು ಅಧಿಕಾರಿಗಳಿಗೆ ಸೂಚನೆಯನ್ನು ಕೊಡುತ್ತೇನೆ ಅಷ್ಟೇ ಅಲ್ಲ ನಾನೂ ಸಹ ವಿಭಾಗೀಯ ಮಟ್ಟದಲ್ಲಿ ರಾಜ್ಯ ಮಟ್ಟದಲ್ಲಿ, ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸಮೀಕ್ಷೆ ಹಾಗೂ ಸಮಾಲೋಚನೆ ನಡೆಸುತ್ತೇನೆ, ಆಯಾಯಾ ಜಿಲ್ಲಾ ಮಂತ್ರಿಗಳಿಗೂ ಇದನ್ನು ಮಾಡಲು ತಿಳಿಸುತ್ತೇನೆ.

ಶ್ರೀ ಪಂಪಾಪತಿ.—ವಾಣೀ ವಿಲಾಸ ಸಕ್ಕರೆ ಕಾರ್ಖಾನೆಯ ಬಗ್ಗೆ ಏನೂ ಹೇಳಲಿಲ್ಲ. ಹಿಂದೆ ಇದ್ದಂಥ ಸಹಕಾರ ಸಚಿವರು ನಬಾರ್ಡ್‌ನಿಂದ ಹಣವನ್ನು ಪಡೆದು ಕೊಳವೆ ಬಾವಿಗಳ ವ್ಯವಸ್ಥೆಯನ್ನು ಮಾಡುತ್ತೇವೆಂದು ಹೇಳಿದರು. ತಾವು ಇದರ ಬಗ್ಗೆ ಪ್ರಸ್ತಾಪ ಮಾಡಲಿಲ್ಲ. ಈ ಸಕ್ಕರೆ ಕಾರ್ಖಾನೆಯಲ್ಲಿ ಒಂದು ಡಿಸ್ಟಿಲರಿ ಇದೆ ಅದನ್ನು ಬೇರೆಯವರಿಗೆ ಕೊಟ್ಟಿದ್ದಾರೆ. ಈ ಕಂಪನಿ ಮುಚ್ಚಿ ಅಲ್ಲಿ ಕೆಲಸಮಾಡತಕ್ಕವರು ಕೆಲಸವಿಲ್ಲದೆ ಹೊರಗಡೆ ಇದ್ದಾರೆ. ಆದರೆ ಬೇರೆಯವರು ಅದರ ಲಾಭವನ್ನು ಇವೊತ್ತು ಪಡೆಯುತ್ತಿದ್ದಾರೆ. ಇದರ ಬಗ್ಗೆ ತಾವು ಏನು ಮಾಡಿದ್ದೀರಿ ಎಂಬುದನ್ನು ತಿಳಿಸಬೇಕು.

ಶ್ರೀ ಹೆಚ್. ಏಕಾಂತಯ್ಯ.—ಇದರ ಬಗ್ಗೆ ಪಂಪಾಪತಿಯವರಿಗೆ ನನಗಿಂತ ಹೆಚ್ಚಾಗಿ ಗೊತ್ತಿದೆ. ಎರಡನೆಯದಾಗಿ ಈ ಖಾತೆಯು ನನಗೆ ಸಂಬಂಧಪಟ್ಟಿದ್ದಲ್ಲ. ಇದಕ್ಕೆ ಸಂಬಂಧಪಟ್ಟ ಮಂತ್ರಿಗಳು ಇದರ ಬಗ್ಗೆ ಉತ್ತರವನ್ನು ಹೇಳುತ್ತಾರೆ. ನಾನೂ ಸಹ ಔದ್ಯೋಗಿಕ ಸಹಕಾರ ಮಂತ್ರಿಗಳ ಜೊತೆಯಲ್ಲಿ ಮಾತನಾಡಿ ಅದನ್ನು ಮಾಡಲು ಪ್ರಯತ್ನ ಮಾಡುತ್ತೇನೆ. ಹೆಚ್ಚಿನ ಮಾಹಿತಿ ಗೆ ಆ ಖಾತೆಯ ಸಚಿವರು ಉತ್ತರ ಕೊಡುತ್ತಾರೆ.

ಶ್ರೀ ಆರ್. ವೆಂಕಟರಾಮಯ್ಯ.—ನಿನ್ನೆ ನಾನು ಇದರ ಬಗ್ಗೆ ಪ್ರಸ್ತಾಪ ಮಾಡಿದ್ದೆ. ಆಹಾರ ಧಾನ್ಯ ವಿತರಣೆ ಪೂರ್ತಿಯಾಗಿ ಸಹಕಾರ ಸಂಘಗಳಿಗೆ ಇರಬೇಕು, ಫೇರ್‌ಪ್ರೈಸ್ ಡಿಪೋ ಪರ್ಯಾಯನಿಂದ ಇದನ್ನು ತೆಗೆಯಬೇಕು ಎಂದು ಹೇಳಿದ್ದೆ. ತಾವು ಅದಕ್ಕೆ ಏನೂ ಹೇಳಲಿಲ್ಲ ಇದನ್ನು ತಾವು ಹೇಳಬೇಕು. ಎರಡನೆಯದು, ಜೂನ್ ೩೦ ರವರೆಗೆ ಇಂಟರೆಸ್ಟ್ ಫ್ರೀ ಆಶ್ವಾಸನೆಯನ್ನು ರಾಜ್ಯಪಾಲರ ಭಾಷಣದಲ್ಲಿ ಕೊಟ್ಟಿದ್ದೀರಿ. ಆದ್ದರಿಂದ ಅದನ್ನು ಕೂಡ ಕೊಡಬೇಕು. ಕೆಲವು ಲಿಕ್ವಿಡೇಟರ್ ಸೊಸೈಟೀಸ್ ಎಂದು ಇವೆ. ಅವು ಲಿಕ್ವಿಡೇಟ ಆಗಿ ೨೫-೩೦ ವರ್ಷಗಳಾಗಿರಬಹುದು. ಅದರಲ್ಲಿರುವ ಹಣವನ್ನು ತೆಗೆದುಕೊಳ್ಳುವವರು ಇಲ್ಲ. ಅದರ ಗತಿ ಏನಾಗಿದೆ ಎಂದು ತಾವು ಯೋಚನೆ ಮಾಡಿಲ್ಲ. ಇದರ ಬಗ್ಗೆ ಸ್ಪಷ್ಟ ನಿರ್ದೇಶನವನ್ನು ತಾವು ಕೊಡಬೇಕು. ಆಮೇಲೆ ಟಿಎಪಿಸಿಎಂಎಸ್‌ಗಳಿಗೆ ಸರ್ಕಾರದವರು ೧೫-೧೬ ಕೋಟಿ ರೂಪಾಯಿ ಹಣ ೨ ರೂಪಾಯಿ ಅಕ್ಕಿಯದು ಡಿಫರೆನ್ಸ್ ಅಂತ ಹೇಳಿ ಕೊಡಬೇಕಾಗಿದೆ. ಎಲ್ಲಾ ಸೊಸೈಟಿಗಳು ಸರಿಯಾಗಿ ನಡೆಯುತ್ತಿಲ್ಲ. ಇದನ್ನು ಯಾವಾಗ ಬಿಡುಗಡೆ ಮಾಡುತ್ತೀರಿ ? ಈ ಸೊಸೈಟಿಗಳು ನಡೆಯುವುದಕ್ಕೆ ಬಹಳ ತೊಂದರೆಯಾಗಿದೆ. ಇದರ ಬಗ್ಗೆ ತಾವು ಹೇಳಬೇಕು.

ಶ್ರೀ ಎಚ್. ಏಕಾಂತಯ್ಯ.—ಸನ್ಮಾನ್ಯ ಅಧ್ಯಕ್ಷರೇ, ಆಹಾರ ದಿನಸುಗಳ ವಿವರಣೆಯನ್ನು ಸಹಕಾರ ಸಂಘಗಳು ಮಾಡಬೇಕೆಂದು ಮಾನ್ಯ ವೆಂಕಟರಾಮಯ್ಯನವರು ಹೇಳಿದ್ದಾರೆ. ಅದನ್ನು ನಾನು ಒಪ್ಪುತ್ತೇನೆ. ಇದನ್ನು ಸರ್ಕಾರದ ನೀತಿಯಾಗಿ ನಾವು ಸ್ವೀಕಾರ ಮಾಡಬೇಕಾಗಿರುವುದರಿಂದ ಇದನ್ನು ಸಚಿವ ಸಂಪುಟದ ಮುಂದೆ ತಂದು ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಇಚ್ಛೆಪಡುತ್ತೇನೆ. ಎರಡನೆಯ

ದಾಗಿ ಈಗಾಗಲೇ ಅನೇಕ ಸಂದರ್ಭಗಳಲ್ಲಿ ನಾವು ಹೇಳಿದ್ದೇವೆ. ೩೦-೬-೧೯೮೮ ರವರೆಗೆ ಎಂದರೆ ಇನ್ನೂ ಒಂದು ತಿಂಗಳು ಮುಂದೆ ಹಾಕಿ ಎಂಬ ಮಾತನ್ನು ಅವರು ಹೇಳಿದ್ದಾರೆ. ಈಗಾಗಲೇ ನಾನು ಹೇಳಿದ್ದೇನೆ. ಶೇಕಡ ೭೫ ರಷ್ಟು ಹಣ ವಸೂಲು ಮಾಡಿದ್ದೇವೆ. ಶೇಕಡ ೨೫ ರಷ್ಟು ವಸೂಲು ಆಗುವಂಥಾದ್ದು ಇದೆ. ಅದನ್ನು ನೀವೂ ಮಾಡುವುದಕ್ಕಾಗುವುದಿಲ್ಲ. ಮುಂದಿನ ವರ್ಷ ಕೊಟ್ಟರೂ ಆಗುವುದಿಲ್ಲ. ಆದರೆ ಸುಮಾರು ೭೨ ಕೋಟಿ ರೂಪಾಯಿಗಳ ಬಡ್ಡಿ ರಿಯಾಯಿತಿಯನ್ನು ನಾವು ಈಗಾಗಲೇ ಕೊಡುವಷ್ಟು ಪ್ರಮಾಣದಲ್ಲಿ ಕೊಟ್ಟ ಸಾಲ ವಸೂಲಾಗಿದೆ ಎಂಬ ಮಾತನ್ನು ತಮಗೆ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಮೂರನೆಯದು ಲಿಕ್ವಿಡೇಟೆಡ್ ಸೊಸೈಟಿಗಳ ಬಗ್ಗೆ ಹೇಳಿದ್ದ ಅವರು ಇರಲಿಲ್ಲ. ಅವರು ಯಾವಾಗಲೂ ಸ್ವಲ್ಪ ತಡವಾಗಿ ಬರುತ್ತಾರೆ. ಈ ಸಮಾಪನ ಸ್ಥಿತಿಗೆ ಒಳಪಟ್ಟಂಥ ಸಹಕಾರ ಸಂಘಗಳಿಗೆ ಇಂತಹವು ಸುಮಾರು ೮೯೦ ಸೊಸೈಟಿಗಳಿವೆ. ಆ ಎಲ್ಲ ಸಹಕಾರ ಸಂಘಗಳಿಗೆ ಪ್ರಭಾರವನ್ನು ಅವರು ತೆಗೆದುಕೊಳ್ಳಬೇಕು ಮತ್ತು ಅವುಗಳ ಬಾಬ್ತು ಬರಬೇಕಾದ ಅಸೆಟ್ಸ್ ವಸೂಲು ಮಾಡಬೇಕು. ಲಯಾಬಿಲೀಟೀಸ್ ಏನಿದೆ ಅದನ್ನು ತೀರುವಳಿ ಮಾಡ ವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ. ಈ ಸಹಕಾರ ಸಂಘಗಳ ನೋಂದಣಿಯನ್ನು ರದ್ದುಪಡಿಸಲಿಕ್ಕೆ ಕ್ರಮ ತೆಗೆದು ಕೊಳ್ಳುತ್ತೇನೆ ಎಂಬ ಮಾತನ್ನು ಹೇಳಿದ್ದೇನೆ. ಕೊನೆಯದಾಗಿ ಟಿ ಎ ಪಿ ಎಂ.ಸಿ.ಎಸ್.ಗೆ ಬರಬೇಕಾದ ಹಣವನ್ನು ಜಾಗ್ರತೆಯಾಗಿ ಕೊಡಬೇಕೆಂದು ಹೇಳಿದ್ದಾರೆ. ಈಗಾಗಲೇ ನಾನು ಮುಖ್ಯಮಂತ್ರಿಗಳ ಹತ್ತಿರ ಮಾತನಾಡಿದ್ದೇನೆ. ಅದನ್ನು ಸಾಧ್ಯವಾದಷ್ಟು ಜಾಗ್ರತೆ ಅವರಿಗೆ ಕೊಡಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ. ಮಲ್ಲಪ್ಪ —ಅಧ್ಯಕ್ಷರೇ, ನಮ್ಮ ಸಹಕಾರ ಸಚಿವರು ಸಹಕಾರ ಪ್ರಾರಂಭವಾಗಿ ೮೪ ವರ್ಷ ಆಯಿತು ಎಂದು ತಮ್ಮ ಉತ್ತರದಲ್ಲಿ ಹೇಳಿದ್ದಾರೆ. ೮೪ ವರ್ಷ ಆದರೂ ಸಹ ನಮ್ಮಲ್ಲಿ ಇನ್ನೂ ಸಹಕಾರದ ಬಗ್ಗೆ ಪ್ರಜ್ಞೆ, ಪ್ರಾಮಾಣಿಕತೆ ಬರಲಿಲ್ಲ. ನಾನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೋರಿಕೊಳ್ಳುತ್ತೇನೆ. ಕೆಲವು ಸಹಕಾರ ಸಂಘಗಳಲ್ಲಿ ಹೂಡಿದಂಥ ಬಂಡವಾಳ ಪೂರ್ಣವಾಗಿ ದುರುಪಯೋಗ ಆಗಿರತಕ್ಕಂಥಾದ್ದು ಸಾಕಷ್ಟು ಇದೆ. ಇಂತಹ ಒಂದು ದುರುಪಯೋಗವನ್ನು ತಡೆಯಬೇಕಾದರೆ ವಿಶೇಷವಾದ ನ್ಯಾಯಾಲಯಗಳನ್ನು, ವಿಶೇಷ ತನಿಖಾದಳಗಳನ್ನು ಮಾಡಿ ಕೂಡಲೇ ಇತ್ಯರ್ಥ ಮಾಡತಕ್ಕಂಥ ಪ್ರಯತ್ನ ಮಾಡಬೇಕಾಗುತ್ತದೆ. ದುರುಪಯೋಗ ಮಾಡತಕ್ಕಂಥವರು ಆಡಳಿತ ಮಂಡಳಿಯವರು ಇರಬಹುದು, ಅಧಿಕಾರಿಗಳು ಇರಬಹುದು ಅಥವಾ ನೌಕರರು ಇರಬಹುದು ಅವರು ಸತ್ತುಹೋಗಿದ್ದರೂ ಸಹಿತ ಪೇಪರ್‌ಗಳು ಎಲ್ಲಿವೆಯೋ ಹಾಗೆಯೇ ಉಳಿದುಬಿಡುತ್ತವೆ. ಕೆಲವು ಸಂದರ್ಭಗಳಲ್ಲಿ ಯಾರಾದರೂ ಒತ್ತಾಯ ಮಾಡಿದರೆ ಪೋಲೀಸ್ ಇಲಾಖೆಗೆ ತನಿಖೆಗೆ ಬರೆದಿದ್ದೇವೆ ಎಂದು ಹೇಳುತ್ತಾರೆ. ಪೋಲೀಸ್ ಇಲಾಖೆಯವರನ್ನು ಕೇಳಿದರೆ ಇನ್ನೂ ನಮಗೆ ಬಿಡುವಾಗಿಲ್ಲ ಇದನ್ನು ವಿಚಾರ ಮಾಡುತ್ತೇವೆ ಎಂದು ಸುಮಾರು ೧೦-೧೫ ವರ್ಷಗಳಿಂದ ಪೋಲೀಸ್ ಇಲಾಖೆಯಿಂದ ತನಿಖೆ ಗೋಸ್ಕರ ಕುಳಿತಿರತಕ್ಕಂಥ ಪೇಪರ್‌ಗಳು ಬಹಳ ಇವೆ. ಅದಕ್ಕೋಸ್ಕರ ಮಾನ್ಯ ಸಚಿವರನ್ನು ನಾನು ತಮ್ಮ ಮೂಲಕ ಕೇಳಿಕೊಳ್ಳುವುದೇನೆಂದರೆ ಇದರಲ್ಲಿ ಪ್ರಾಮಾಣಿಕತೆ ಬೆಳೆಯಬೇಕಾದರೆ ತೀವ್ರ ಕ್ರಮ ಬಹಳ ಅಗತ್ಯವೆಂದು ನನ್ನ ಭಾವನೆ. ವಿಶೇಷ ನ್ಯಾಯಾಲಯ ಮತ್ತು ವಿಶೇಷ ತನಿಖಾ ದಳಗಳನ್ನು ನೇಮಿಸುವುದರ ಮೂಲಕ ಕೇವಲ ಒಂದು ವರ್ಷ ಎರಡು ವರ್ಷಗಳಲ್ಲಿ ದುರುಪಯೋಗ ಮಾಡಿದಂಥಾದ್ದರ ಬಗ್ಗೆ ಅಥವಾ ನಿರ್ದೋಷಿ ದೋಷಿ ಎನ್ನತಕ್ಕಂಥಾದ್ದರ ಬಗ್ಗೆ ಪೂರ್ಣ ಕ್ರಮ ತೆಗೆದು ಕೊಂಡರೆ ಈ ಇಲಾಖೆಯಲ್ಲಿ ದುರುಪಯೋಗವನ್ನು ತಡೆಗಟ್ಟಲಿಕ್ಕೆ ಸಾಧ್ಯವಾಗುತ್ತದೆ. ಮತ್ತು ಸಹ ಕಾರದ ನೀತಿ ತತ್ವ ಏನಿದೆ ಅದನ್ನು ಮುಟ್ಟಲಿಕ್ಕೆ ಸಾಧ್ಯ. ಅದಕ್ಕೋಸ್ಕರ ಮಾನ್ಯ ಸಚಿವರು ವಿಶೇಷ ನ್ಯಾಯಾಲಯ ಮತ್ತು ವಿಶೇಷ ತನಿಖಾದಳವನ್ನು ಪ್ರಾರಂಭಿಸುವುದರ ಮೂಲಕ ಕೂಡಲೇ ಅಂತಹವರ ವಿರುದ್ಧ ಕ್ರಮ ತೆಗೆದುಕೊಳ್ಳುತ್ತೀರಾ ಎಂದು ಕೇಳಬಯಸುತ್ತೇನೆ.

ಶ್ರೀ ಎಚ್. ಏಕಾಂತಯ್ಯ —ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ನಾನು ದುರುಪಯೋಗಗಳ ಬಗ್ಗೆ ಸರ್ಕಾರ ಏನು ಕಾರ್ಯಕ್ರಮ ತೆಗೆದುಕೊಂಡಿದೆ ಎಂದು ಹೇಳಿದ್ದೇನೆ. ದಿನಾಂಕ ೨೭-೪-೧೯೮೮ ರಲ್ಲಿ ಸರ್ಕಾರ ಒಂದು ಆದೇಶವನ್ನು ಹೊರಡಿಸಿದೆ. ಆ ಆದೇಶದ ಪ್ರಕಾರ ಇಡೀ ಕರ್ನಾಟಕ ರಾಜ್ಯ ದಲ್ಲಿರತಕ್ಕಂಥ ಎಲ್ಲಾ ಸಹಕಾರ ಸಂಘಗಳು ಏನಿದೆ, ಆ ಸಹಕಾರ ಸಂಘಗಳಲ್ಲಿ ಯಾವುದೇ ಹಣ ದುರುಪಯೋಗ ಆಗಿದ್ದರೆ ಅಂತಹ ಸೊಸೈಟಿಗಳ ಬಗ್ಗೆ ೩೦-೬-೧೯೮೮ ರೊಳಗೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಬೇಕೆಂಬ ಮಾತನ್ನು ಹೇಳಿದೆ. ಅರ್ಹ ಪ್ರಕರಣಗಳಲ್ಲಿ ಅಧಿಕಾರಿಗಳಾಗಲೀ ಅಧಿಕಾರ

ರೇತರರಾಗಲೀ ಅವರ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಬೇಕು ಮತ್ತು ದಾವಾವನ್ನು ಹಾಕ ಬೇಕೆಂಬ ಮಾತನ್ನು ಹೇಳಿದೆ. ಇದರ ಜೊತೆಯಲ್ಲಿ ಅವರು ಅಧಿಕಾರಿಗಳು, ನೌಕರರು ಆಗಿದ್ದರೆ ಅವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕೆಂಬ ಆದೇಶವನ್ನು ನೀಡಲಾಗಿದೆ.

ಅವರು ಅಧಿಕಾರೇತರರು ಆಗಿದ್ದರೆ, ಅವರನ್ನು ಸಹಕಾರಿ ಕ್ಷೇತ್ರದಿಂದ ಅನರ್ಹಗೊಳಿಸುವ ಕ್ರಮ ತೆಗೆದುಕೊಳ್ಳುತ್ತೇವೆ. ೩೦-೬-೮೮ರೊಳಗೆ ಈ ಕೆಲಸವನ್ನು ಸಂಬಂಧಿಸಿದ ಅಧಿಕಾರಿಗಳು ಮಾಡದೇ ಹೋದರೆ, ಅವರ ಮೇಲೆ ಕ್ರಮ ಕೈಗೊಳ್ಳಲಾಗುವುದೆಂದು ಸರ್ಕಾರ ಆದೇಶ ನೀಡಿದೆ. ಇನ್ನು ವಿಶೇಷ ನ್ಯಾಯಾಲಯಗಳ ಸ್ಥಾಪನೆ ಬಗ್ಗೆ ಹೇಳಿದ್ದಾರೆ. ಇದರ ಅವಶ್ಯಕತೆ ಇಲ್ಲವೆಂದು ನಾನು ಭಾವಿಸುತ್ತೇನೆ. ಮತ್ತು ವಿಶೇಷ ತನಿಖಾಧಿಕಾರಿಗಳ ಅವಶ್ಯಕತೆಯೂ ಇಲ್ಲ. ಈಗಾಗಲೇ ವಿಚಾರಣೆ ಮತ್ತು ತನಿಖಾ ವಿಭಾಗ ಎಂದು ಏರ್ಪಾಡು ಮಾಡಿದ್ದೇವೆ. ಅವಶ್ಯಕತೆ ಬಿದ್ದರೆ, ಈ ದಳವನ್ನೇ ಬಲಪಡಿಸುವ ಕೆಲಸವನ್ನು ಮಾಡುವ ವಿಚಾರವನ್ನು ಪರಿಶೀಲಿಸುತ್ತೇನೆ.

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೇ, ನಿನ್ನೇ ಮಾತನಾಡುವಾಗ ಮಾನ್ಯ ಜಿ. ಎಸ್. ಆಚಾರ್‌ರವರು ೨ ಸಾವಿರ ಸಹಕಾರ ಸಂಘಗಳಲ್ಲಿ ಆಡಿಟ್ ಆಗಿಲ್ಲವೆಂದು ಹೇಳಿದರು. ಇರತಕ್ಕ ೫ ಸಾವಿರ ಸಹಕಾರ ಸಂಘಗಳಲ್ಲಿ, ಈ ಆಡಿಟ್ ವ್ಯವಸ್ಥೆ ಎಷ್ಟು ಬಲವಾಗುತ್ತದೆಯೋ, ಅಷ್ಟು ಸಹಕಾರ ಸಂಘಗಳು ಚೆನ್ನಾಗಿ ಕೆಲಸ ಮಾಡುತ್ತವೆ, ಮತ್ತು ಅವುಗಳ ಕ್ರಿಯಾಶೀಲತೆ ಹೆಚ್ಚಾಗುತ್ತದೆ. ಏಕೆಂದರೆ ನಾನೂ ಕೂಡ ಸಹಕಾರಿ ಸಂಘಗಳಲ್ಲಿ ಕೆಲಸ ಮಾಡಿದವನು. ಈ ಸಂಘ ಸಂಸ್ಥೆಗಳಲ್ಲಿ ಯಾವುದೋ ಒಂದು ರೂಪದಲ್ಲಿ ಆಗಿರತಕ್ಕ ತಪ್ಪುಗಳನ್ನು ಅಲ್ಲಿಯೇ ಸರಿಪಡಿಸಿಬಿಡುತ್ತಾರೆ. ಲೆಕ್ಕ ಪತ್ರಗಳನ್ನು ಸರಿಯಾಗಿ ಹೇಳುವಂತಹ ಪರಿಸ್ಥಿತಿ ಇಲ್ಲ. ಈ ವಿಚಾರಗಳು ನನ್ನ ತಿಳುವಳಿಕೆಯಲ್ಲಿರುವುದರಿಂದ ನಾನು ಹೇಳುತ್ತಿದ್ದೇನೆ. ಆದ್ದರಿಂದ ಈ ಆಡಿಟ್‌ನವರು ಎಲ್ಲಾ ಸಹಕಾರ ಸಂಘಗಳ, ವಿವರವಾದ ಆಡಿಟ್ ಮಾಡುವಂಥ ವ್ಯವಸ್ಥೆ ಮಾಡಬೇಕು. ಮತ್ತು ಅನಿರೀಕ್ಷಿತವಾಗಿ ನಿಮ್ಮ ಸೆಲ್‌ಗಳು ಹೋಗಿ ತನಿಖೆ ಮಾಡುವಂತಿರಬೇಕು. ಅಡಿಕೆ ಮಾರುವಂಥ ಸಹಕಾರ ಸಂಘಗಳು, ಏಲಕ್ಕಿ ಮಾರಾಟ ಮಾಡುವ ಸಹಕಾರ ಸಂಘಗಳಿಗೂ ಇವೆ. ಈ ಸಹಕಾರ ಇಲಾಖೆ ಬಗ್ಗೆ ನಿನ್ನೆ ಮಾತನಾಡಲು ನನಗೆ ಸಮಯ ಇರಲಿಲ್ಲ. ತಾವು ಒಂದು ಗಂಟೆ ಕೊಟ್ಟಂಥ ಉತ್ತರದಲ್ಲಿ ಅನೇಕ ಪ್ರಮುಖವಾದ ವಿಚಾರಗಳನ್ನು ಹೇಳಿದ್ದೀರಿ. ೫ ಸಾವಿರ ಸಹಕಾರ ಸಂಘಗಳಲ್ಲಿ ಅಥವಾ ಸಂಘಸಂಸ್ಥೆಗಳಲ್ಲಿ ಗಂಡಹೆಂಡತಿ, ಮಕ್ಕಳು, ಭಾವನವರು, ಸೋದರರು ಇವರೇ ಕೂಡಿ, ಪಟ್ಟಭದ್ರರ ಕೈಯಲ್ಲಿ ಕೆಲವು ಸಂಘಸಂಸ್ಥೆಗಳು ನಡೆಯುತ್ತಿವೆ. ತಾವು ಇವುಗಳನ್ನು ಕಂಡುಹಿಡಿದು, ಇವುಗಳ ಬಗ್ಗೆ ಸೂಕ್ತ ವ್ಯವಸ್ಥೆ ಮಾಡಬೇಕು. ಮತ್ತೆ ನಿನ್ನೇ ಯಾರೂ ಮಾತನಾಡದೇ ಇರತಕ್ಕ ವಿಚಾರ, ಈ ಸಹಕಾರಿ ರಂಗದಲ್ಲಿರತಕ್ಕಂಥ ನೌಕರರು, ನಮ್ಮನ್ನು ಸರ್ಕಾರಿ ನೌಕರರನ್ನಾಗಿ ಮಾಡಬೇಕೆಂದು ಆಂದೋಳನ ಮಾಡುತ್ತಿದ್ದಾರೆ ಇವರನ್ನು ಸರ್ಕಾರಿ ನೌಕರರೆಂದು ಮಾಡದೇ ಇದ್ದರೂ ಕೂಡ, ಇವರನ್ನು ಲೋಕಾಯುಕ್ತ ವ್ಯಾಪ್ತಿಗೆ ಸೇರಿಸಿದ್ದೀರಿ. ಇವರನ್ನೂ ಕೂಡ ಸರ್ಕಾರಿ ನೌಕರರೆಂದು ಮಾಡುವುದಕ್ಕೆ ಏನು ತೊಂದರೆ ಇದೆ. ಇವತ್ತು ಬೇಕಾದಷ್ಟು ಜನ ಈ ಸಹಕಾರಿ ಇಲಾಖೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಇವರು ಒಳ್ಳೆಯ ರೀತಿಯಲ್ಲಿ, ಪ್ರಾಮಾಣಿಕವಾಗಿ, ಸಂತೋಷವಾಗಿ ಕೆಲಸ ಮಾಡಬೇಕು. ಇದರಿಂದ ಈ ಸಹಕಾರ ಸಂಘಗಳೂ ಚುರುಕಾಗುತ್ತವೆ. ಈ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ.—ಸನ್ಮಾನ್ಯ ಅಧ್ಯಕ್ಷರೇ, ೧೯೮೬-೮೭ನೇ ಸಾಲಿನಲ್ಲಿ ೩೫೨೪ ಮಾತ್ರ ಆಡಿಟ್ ಆಗದೇ ಉಳಿದ ಸಹಕಾರ ಸಂಘಗಳು. ಹೋದವರ್ಷ ಶೇಕಡ ೮೫ರಷ್ಟು ಸಹಕಾರ ಸಂಘಗಳ ಆಡಿಟ್ ಕೆಲಸ ಮಾಡಿದ್ದೇವೆ. ೧೯೮೮ರ ಮಾರ್ಚಿ ಒಳಗೆ ಶೇಕಡ ೯೦ರಷ್ಟು ಕಾರ್ಯನಿರತ ಸಹಕಾರ ಸಂಘಗಳನ್ನು ಆಡಿಟ್ ಮಾಡುವಂಥ ನಿರೀಕ್ಷೆ ಇದೆ. ಅನೇಕ ಕಾರಣಗಳಿಂದ ನೂರಕ್ಕೆ ನೂರರಷ್ಟು ಇದೇ ವರ್ಷ ಮಾಡುವುದಕ್ಕೆ ಸಾಧ್ಯವಿಲ್ಲ. ಮುಂದಿನ ವರ್ಷ ಉಳಿದಿರುವ ಸಹಕಾರ ಸಂಘಗಳನ್ನು ಆಡಿಟ್ ಮಾಡುವಂಥ ವ್ಯವಸ್ಥೆ ಮಾಡುತ್ತೇವೆ. ಜೊತೆಗೆ ಎಲ್ಲಾ ಸಹಕಾರ ಸಂಘಗಳನ್ನೂ ಅದೇ ವರ್ಷ ಆಡಿಟ್ ಮಾಡುವುದಕ್ಕೆ ನಮಗೆ ಸಿಬ್ಬಂದಿ ಕೊರತೆ ಇದೆ, ಈ ಕೊರತೆಯಿಂದ ಅದೇ ವರ್ಷ ಎಲ್ಲಾ ಸಹಕಾರ ಸಂಘಗಳ ಆಡಿಟ್ ಪೂರೈಸುವುದಕ್ಕಾಗುವುದಿಲ್ಲ. ಜೊತೆಗೆ ಸಹಕಾರ ಸಂಘಗಳ ಸಂಖ್ಯೆ ಬೆಳೆಯುತ್ತಿರುವ ಆವರೀತಿ ಆಡಿಟ್ ವಿಭಾಗವೂ ಬೆಳೆಯಬೇಕು. ಈಗ ೩೫೪ ಖಾಲಿ ಹುದ್ದೆಗಳು ಇವೆ. ಆದರೂ ಸಾಧ್ಯವಾದಷ್ಟು

ಜಾಗ್ರತೆ ಪೂರ್ತಿ ಮಾಡುವುದರ ಮುಖಾಂತರ, ಉಳಿದಿರುವ ಸಹಕಾರ ಸಂಘಗಳನ್ನು ಆಡಿಟ್ ಮಾಡುವ ಕ್ರಮ ಕೈಗೊಳ್ಳುತ್ತೇವೆ. ಮತ್ತೊಂದು ಮಾನ್ಯ ಹಿರಿಯ ಸದಸ್ಯರು ಹೇಳಿದ್ದಾರೆ. ನಾನು ಈ ಬಗ್ಗೆ ಈಗಾಗಲೇ ಉತ್ತರ ಹೇಳಿದ್ದೇನೆ. ಎಲ್ಲಾ ಸಹಕಾರ ಸಂಘಗಳ ನೌಕರರನ್ನೂ ಸಹ ಸರ್ಕಾರಿ ನೌಕರರೆಂದು ಪರಿಗಣಿಸುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದ್ದೇನೆ. ಸಹಕಾರ ಸಂಘಗಳ ನೌಕರರು ಸಹ ಜೀವನ ನಿರ್ವಹಣೆ ಮಾಡುವುದಕ್ಕೆ, ಸಂಬಳ ಸಾರಿಗೆ ಕೊಡಬೇಕೆಂಬುದನ್ನು ನಾನೂ ಒಪ್ಪುತ್ತೇನೆ. ಆದರೆ ಹಣವನ್ನು ಕೊಡುವಂತಹ ಆರ್ಥಿಕ ಪರಿಸ್ಥಿತಿಯಲ್ಲಿ ಸಹಕಾರ ಸಂಘಗಳು ಇರಬೇಕಾದುದು ಅತ್ಯಂತ ಅವಶ್ಯಕ. ಈ ದಿಸೆಯಲ್ಲಿ ಆಲೋಚನೆ ಮಾಡಿ ನಿಜವಾಗಿಯೂ ಅವರಿಗೆ ಬೇಕಾದಂಥ ಸೌಲಭ್ಯಗಳನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆಯೋ ಎಂಬುದನ್ನು ನೋಡಬೇಕೇ ಹೊರತು ಅವರನ್ನು ಸರಕಾರಿ ನೌಕರರು ಎಂದು ಪರಿಗಣಿಸುವುದು ಸಾಧ್ಯವಿಲ್ಲ. ಲೋಕಾಯುಕ್ತಕ್ಕೆ ಇವರನ್ನು ವಿಚಾರಣೆ ಮಾಡುವುದಕ್ಕೆ ಅಧಿಕಾರ ಇದೆ ಎಂದ ಮಾತ್ರಕ್ಕೆ ಇವರೆಲ್ಲರೂ ಸಹ ಸರಕಾರಿ ನೌಕರರಾಗುವುದಿಲ್ಲ, ಈಗ ನಾವು ನೀವು ಎಲ್ಲಾ ಲೋಕಾಯುಕ್ತದ ವ್ಯಾಪ್ತಿಗೆ ಬರುತ್ತೇವೆ, ಇದರಿಂದ ನಾವು ಸರಕಾರಿ ನೌಕರರು ಅಥವಾ ಅಧಿಕಾರಿಗಳಾಗುವುದಿಲ್ಲ. ಆಯಾ ಸಹಕಾರ ಸಂಘಗಳ ಆರ್ಥಿಕ ಪರಿಸ್ಥಿತಿಯ ಆಧಾರದ ಮೇಲೆ, ಅವರ ಆಡಳಿತ ಹೇಗೆ ನಡೆದಿದೆ, ಅವರ ಕಾರ್ಯ ವೈಖರಿ ಹೇಗಿದೆ, ಏನು ಟರ್ನ್ಓವರ್ ಇದೆ, ಏನು ಲಾಭ ಇದೆ, ಏನು ಬಂಡವಾಳ ಇದೆ ಎಂಬ ಅಂಶಗಳನ್ನು ಪರಿಗಣನೆ ಮಾಡಿಕೊಂಡು ಅವರಿಗೆ ಬೇಕಾದಂಥ ಸೌಲಭ್ಯಗಳನ್ನು ಸಾಧ್ಯವಾದಷ್ಟು ನೀಡುವುದಕ್ಕೂ ಹಾಗೂ ಇವರೂ ಸಹ ಬೇರೆ ಸರಕಾರಿ ನೌಕರರಂತೆ ಜೀವನ ಮಾಡುವುದಕ್ಕೆ ಸಾಧ್ಯವಾಗುವಂತೆ ಇವರಿಗೆ ಸಂಬಳ ಸಾರಿಗೆಗಳನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇದರ ಬಗ್ಗೆ ಪರಿಶೀಲನೆ ಮಾಡಲು ಒಂದು ಸಮಿತಿಯನ್ನೂ ಸಹ ನೇಮಕ ಮಾಡಿದ್ದೇವೆ. ಈ ಸಮಿತಿಯ ವರದಿ ಬಂದ ಮೇಲೆ ನಾವು ಹೆಚ್ಚು ಕಾಳಜಿಯನ್ನು ವಹಿಸಿ ತೀರ್ಮಾನ ಮಾಡುತ್ತೇವೆ ಎಂಬ ಮಾತನ್ನು ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ. ಜಿ. ಜಮಖಂಡಿ (ಮುಧೋಳ್)—ಮಾನ್ಯ ಅಧ್ಯಕ್ಷರೇ, ಇದುವರೆಗೆ ಈ ವ್ಯವಸಾಯ ಸಹಕಾರ ಸಂಘಗಳಿಗೆ ಟಿ.ಎ.ಪಿ.ಸಿ.ಎಂ.ಎಸ್. ಮುಖಾಂತರ ರಸಗೊಬ್ಬರವನ್ನು ಪೂರೈಕೆ ಮಾಡುವ ವಿಧಾನ ಇತ್ತು. ಅದರ ಜೊತೆಗೆ ಆಹಾರ ಧಾನ್ಯಗಳನ್ನೂ ಸಹಿತ ಈ ಟಿ.ಎ ಪಿ.ಸಿ.ಎಂ.ಎಸ್. ಮುಖಾಂತರ ವ್ಯವಸಾಯ ಸಹಕಾರ ಸಂಘಗಳಿಗೆ ಪೂರೈಸುವ ಸಂದರ್ಭ ಇತ್ತು, ಈಗ ನನಗೆ ತಿಳಿದು ಬಂದ ಹಾಗೆ, ಈ ವ್ಯವಸಾಯ ಸಹಕಾರ ಸಂಘಗಳವರು ಮಾರ್ಕೆಟಿಂಗ್ ಫೆಡರೇಷನ್ ಮುಖಾಂತರ ರಸಗೊಬ್ಬರಗಳನ್ನೂ ಫುಡ್ ಕಾರ್ಪೋರೇಷನ್ ಮುಖಾಂತರ ಆಹಾರ ಧಾನ್ಯಗಳನ್ನೂ ಖರೀದಿ ಮಾಡಬೇಕಾಗಿದೆ. ಹಲವಾರು ಕಡೆ ಇದರ ಬಗ್ಗೆ ಕೂಗು ಕೇಳಿಬರುತ್ತಿದೆ. ಹೀಗೆ ಮಾಡುವುದರಿಂದ ಟಿ.ಎ.ಪಿ.ಸಿ.ಎಂ.ಎಸ್.ಗಳ ಅಸ್ತಿತ್ವವೇ ಉಳಿಯುವುದಿಲ್ಲ, ಇವುಗಳ ಅಸ್ತಿತ್ವ ಉಳಿಯಬೇಕಾದರೆ ಹಾಗೂ ರೈತರಿಗೆ ತಾಲ್ಲೂಕು ಮಟ್ಟದಲ್ಲಿ ಸರಿಯಾದ ಬೆಲೆಯಲ್ಲಿ ಆಹಾರ ಧಾನ್ಯಗಳ ವಿತರಣೆಯಾಗಬೇಕಾದರೆ ಈ ಟಿ-ಎ ಪಿ.ಸಿ.ಎಂ.ಎಸ್.ಗಳು ಇರಬೇಕು. ಅದಕ್ಕಾಗಿ ಏನು ಮಾಡಬೇಕೆಂದರೆ, ಮಾರ್ಕೆಟಿಂಗ್ ಫೆಡರೇಷನ್ ಮುಖಾಂತರ ರಸಗೊಬ್ಬರಗಳನ್ನು ಫುಡ್ ಕಾರ್ಪೋರೇಷನ್ ಮುಖಾಂತರ ಆಹಾರಧಾನ್ಯಗಳನ್ನು ಈ ಸಹಕಾರ ಸಂಘಗಳು ಖರೀದಿ ಮಾಡುವುದನ್ನು ತಪ್ಪಿಸಬೇಕು, ಈ ಟಿಎಪಿಸಿಎಂಎಸ್. ನವರು ಖಾಸಗಿಯವರ ಮುಖಾಂತರ ರಸಗೊಬ್ಬರಗಳನ್ನು ಖರೀದಿ ಮಾಡಿ ಸಹಕಾರ ಸಂಘಗಳಿಗೆ ಒದಗಿಸಬೇಕು ಅಥವಾ ಸರಕಾರದ ಕಂಪನಿಗಳಿಂದ ಖರೀದಿ ಮಾಡುವಂತಾಗಬೇಕು ಇದರಿಂದ ಟಿಎಪಿಸಿಎಂಎಸ್. ಗಳು ಬೆಳೆಯುವುದಕ್ಕೆ ಅನುಕೂಲವಾಗುತ್ತದೆ. ತಾಲ್ಲೂಕು ಮಟ್ಟದಲ್ಲಿ ರೈತರಿಗೆ ಒಳ್ಳೆಯ ಬೆಲೆಗೆ ಇವು ದೊರೆಯುವುದಕ್ಕೆ ಅನುಕೂಲವಾಗುತ್ತದೆ ಎಂದು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ.—ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ಈ ಬಗ್ಗೆ ನಾನು ಪ್ರಸ್ತಾಪ ಮಾಡಿದ್ದೇನೆ. ಈ ಗೊಬ್ಬರ ವಿತರಣೆ ಏನಿದೆ ಇದನ್ನು ರಾಜ್ಯಮಟ್ಟದಲ್ಲಿ ಸಹಕಾರ ಮಾರಾಟ ಮಹಾಮಂಡಲದವರು ಮಾಡುತ್ತಿದ್ದಾರೆ. ಅನೇಕ ಸಂದರ್ಭಗಳಲ್ಲಿ ಈ ಮಾರಾಟ ಮಹಾಮಂಡಲದವರು ಟಿಎಪಿಸಿಎಂಎಸ್. ಮುಖಾಂತರ, ಪ್ರಾಥಮಿಕ ಪತ್ತಿನ ಸಹಕಾರ ಸಂಘಗಳ ಮುಖಾಂತರ ಅದರ ಸದಸ್ಯರಿಗೆ ಗೊಬ್ಬರವನ್ನು ಮಾರಾಟ ಮಾಡುಕೊಡುವಂತಹ ಪ್ರಕರಣಗಳು ಇವೆ. ಇನ್ನು ಕೆಲವು ಪ್ರಕರಣಗಳಲ್ಲಿ ಮಾರಾಟ ಮಹಾಮಂಡಲದವರು ತಮ್ಮ ಶಾಖೆಗಳ ಮೂಲಕ ಪ್ರಾಥಮಿಕ ಪತ್ತಿನ ಸಹಕಾರ ಸಂಘಗಳಿಗೆ ಕೊಡುವ ವ್ಯವಸ್ಥೆಯೂ ಇದೆ. ಇದರಬಗ್ಗೆ ಯೋಚನೆ ಮಾಡಬೇಕಾಗಿದೆ. ಎರಡೂ ಹಂತಗಳನ್ನು

ತಪ್ಪಿಸಿ ಒಂದೇ ಹಂತದಲ್ಲಿ ವಿತರಣೆ ಮಾಡಿದ್ದಲ್ಲಿ ಗೊಬ್ಬರದ ಬೆಲೆ ಕಡಿಮೆಯಾಗುವುದಾದರೆ ಅದನ್ನೂ ಸಹ ನಾನು ಪರಿಶೀಲನೆ ಮಾಡುತ್ತೇನೆ. ಇವತ್ತು ರೈತನಿಗೆ ಕಡಿಮೆ ಬೆಲೆಯಲ್ಲಿ ಗೊಬ್ಬರ ಕೊಡುವುದಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕು ಎಂದು ವಿಚಾರ ಮಾಡಿ ಆ ಕ್ರಮವನ್ನು ತೆಗೆದುಕೊಳ್ಳುತ್ತೇನೆ. ಇನ್ನು ಟಿಎಪಿಸಿಎಂಎಸ್. ಮುಖಾಂತರ ಆಹಾರಧಾನ್ಯಗಳನ್ನು ವಿತರಣೆ ಮಾಡಬೇಕೆಂದು ಹೇಳಿದ್ದಾರೆ. ನಮ್ಮ ರಾಜ್ಯದಲ್ಲಿ ಒಂದಕ್ಕಿಂತ ಹೆಚ್ಚು ಸಂಘ ಸಂಸ್ಥೆಗಳು ಈ ಕೆಲಸವನ್ನು ಮಾಡುತ್ತಿವೆ. ಸಗಟು ವ್ಯಾಪಾರಿಗಳು ಇದನ್ನು ಮಾಡುತ್ತಾರೆ. ಕೆಎಸ್‌ಎಫ್‌ಸಿಎಸ್‌ಸಿ. ಯವರು ಇದನ್ನು ಮಾಡುತ್ತಾರೆ. ಅದೇ ರೀತಿ ಬೀಜವನ್ನು ಸೀಡ್ ಕಾರ್ಪೊರೇಷನ್‌ನವರು, ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನವರು ಮಾಡುತ್ತಾರೆ. ರೈತರಿಗೆ ಬೇಕಾದ ಅವಶ್ಯಕ ವಸ್ತುಗಳನ್ನು ಒಂದಕ್ಕಿಂತ ಹೆಚ್ಚು ಸಂಘ ಸಂಸ್ಥೆಗಳು ಮಾಡುತ್ತಿವೆ. ಇದನ್ನು ತಪ್ಪಿಸಿ ಒಂದೇ ಏಜೆನ್ಸಿ ಮೂಲಕ ಇದನ್ನು ಮಾಡಬೇಕೆಂಬ ಮಾತನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಇದರ ಬಗ್ಗೆ ವಿಚಾರ ಮಾಡಿ, ಸರ್ಕಾರದ ಮುಂದೆ ಇಟ್ಟು ತೀರ್ಮಾನ ತೆಗೆದುಕೊಳ್ಳುತ್ತೇನೆ ಎಂಬ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಜಿ. ಎಸ್. ಶಿವನಂಜಪ್ಪ (ಗುಬ್ಬಿ).—ಮಾನ್ಯ ಅಧ್ಯಕ್ಷರೇ, ನಾನು ಒಂದೇ ಒಂದು ಬೇಡಿಕೆ ಅವರ ಮುಂದಿಟ್ಟಿದ್ದೆ. ನನ್ನ ಕ್ಷೇತ್ರದಲ್ಲಿ ಸುಮಾರು ಹತ್ತು ಸಾವಿರ ಜನ "ತೋಟದ ಗೌಡರು" ಅಥವಾ 'ತಿಗಳರು' ಎಂಬ ಜನ ಇದ್ದಾರೆ. ಅವರು ತರಕಾರಿ ಹಣ್ಣುಗಳನ್ನು ಬೆಳೆಯುತ್ತಾರೆ. ಅವರು ಬೆಳೆದಂಥ ಕಾಲದಲ್ಲಿ ಧಾರಣೆ ಕಡಿಮೆಯಾಗುತ್ತದೆ, ಅವರು ಕೈಬಿಟ್ಟ ಮೇಲೆ ಧಾರಣೆ ಜಾಸ್ತಿಯಾಗುತ್ತದೆ. ಇದನ್ನು ತಪ್ಪಿಸುವುದಕ್ಕೆ ಅವರು ಈ ಹಣ್ಣು ಮತ್ತು ತರಕಾರಿಗಳನ್ನು ಸಂಗ್ರಹಿಸಿಡಲು ಅನುಕೂಲವಾಗುವಂತೆ ಒಂದು ಕೋಲ್ಡ್ ಸ್ಟೋರೇಜ್ ಮಾಡಬೇಕು. ನಮ್ಮಲ್ಲಿ ಆಹಾರ ವಿತರಣೆ ಮಾಡುವ ಅನೇಕ ಸೊಸೈಟಿಗಳು ಇವೆ. ಅವರಿಗೆ ಒಂದು ಲಕ್ಷ ರೂಪಾಯಿ ಆಹಾರ ಬಿಡುಗಡೆ ಮಾಡಿದರೆ ಅವರು ತೆಗೆದುಕೊಂಡು ಹೋಗುವುದು ೨೫ ಸಾವಿರ ರೂಪಾಯಿನದು ಮಾತ್ರ. ಸುಮಾರು ೭೫ ಸಾವಿರ ರೂಪಾಯಿಗಳು ಬಿಲ್ ಆದರೆ ಹಣವನ್ನು ಅಲ್ಲೆ ತೆಗೆದುಕೊಂಡು ಕಟ್ಟುವಂತಹ ಪರಿಸ್ಥಿತಿ ಸೊಸೈಟಿಗಳಿಗೆ ಇಲ್ಲ. ಆದ್ದರಿಂದ ಇಂತಹ ಸೊಸೈಟಿಗಳಿಗೆ ಸರ್ಕಾರದವರು ಹಣವನ್ನು ಒದಗಿಸಿಕೊಟ್ಟು ಅಭಿವೃದ್ಧಿ ಮಾಡಿದರೆ ಆ ಈ ಸೊಸೈಟಿಗಳು ಸುವ್ಯವಸ್ಥಿತವಾಗಿ ನಡೆದು ರೈತರಿಗೆ ಅನುಕೂಲವಾಗುತ್ತದೆ. ಈ ಕೆಲಸವನ್ನು ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ.—ಮಾನ್ಯ ಅಧ್ಯಕ್ಷರೇ ನಾನು ಈಗಾಗಲೇ ಹೇಳಿದ್ದೇನೆ. ಪ್ರಾಥಮಿಕ ಪತ್ತಿನ ಸಹಕಾರ ಸಂಘಗಳು ಏನಿವೆ ಇವುಗಳ ಆರ್ಥಿಕ ಪರಿಸ್ಥಿತಿ ಸರಿಯಾಗಿ ಇಲ್ಲದೆ ಇರುವುದರಿಂದ ಅವುಗಳನ್ನು ಸರಿಪಡಿಸಲು ಒಂದೇ ಸಾರಿ ಸಾಧ್ಯವಾಗುವುದಿಲ್ಲ. ಇಂತಹ ಸೊಸೈಟಿಗಳನ್ನು ಬಲಪಡಿಸಲು ನಾವು ನಬಾರ್ಡ್‌ನವರಿಂದ ನೆರವು ಪಡೆದುಕೊಂಡು ಶೇರು ಬಂಡವಾಳ ಹೆಚ್ಚು ಮಾಡಿ ಹಣ ಕೊಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಈ ಕೆಲಸವಾದರೆ ಆಗ ಈ ಸೊಸೈಟಿಗಳು ಸರಿಯಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇನ್ನು ಗುಬ್ಬಿ ಮತ್ತು ತುಮಕೂರುಗಳಲ್ಲಿ ಶೈತ್ಯಾಗಾರವನ್ನು ಸ್ಥಾಪನೆ ಮಾಡಬೇಕೆಂದು ಹೇಳಿದರು ಈ ಬಗ್ಗೆ ನಾವು ಚರ್ಚೆ ಮಾಡಿ ಆದಷ್ಟು ಬೇಗ ಕ್ರಮ ತೆಗೆದುಕೊಳ್ಳುತ್ತೇನೆ ಎನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಐ.ಬಿ. ಶಂಕರ್.—ಮಾನ್ಯ ಅಧ್ಯಕ್ಷರೇ, ಡಿ.ಸಿ.ಸಿ. ಬ್ಯಾಂಕುಗಳಿಗೆ ಸಬ್‌ಸಿಡಿಯನ್ನು ಸರ್ಕಾರದವರು ಕೊಡುತ್ತಾರೆ. ಈ ಹಣ ಸುಮಾರು ೬–೭ ತಿಂಗಳುಗಳದರೂ ಬಿಡುಗಡೆಯಾಗುತ್ತಿಲ್ಲ. ಇದರಿಂದ ಡಿ.ಸಿ.ಸಿ. ಬ್ಯಾಂಕುಗಳು ಮತ್ತು ಸೊಸೈಟಿಗಳು ಹಾಳಾಗುವುದಕ್ಕೆ ಕಾರಣವಾಗಿವೆ. ನೀವು ಆ ಸಬ್‌ಸಿಡಿ ಹಣವನ್ನು ಅಪೆಕ್ಸ್ ಬ್ಯಾಂಕ್‌ಗಳಿಗೆ ರಿಲೀಜ್ ಮಾಡಿ. ಆಗ ಡಿ.ಸಿ.ಸಿ. ಬ್ಯಾಂಕ್‌ಗಳಿಗೆ ಮತ್ತು ಸೊಸೈಟಿಗಳಿಗೆ ಕೊಡುವ ಪ್ರಶ್ನೆ ಬರುವುದೇ ಇಲ್ಲ. ಇನ್ನು ನಮ್ಮಲ್ಲಿ ಎರಡು ಸೊಸೈಟಿಗಳು ಇವೆ. ಒಂದು ಸೊಸೈಟಿ ಬಹಳ ಉತ್ತಮವಾಗಿ ಕೆಲಸ ಮಾಡುತ್ತಿದೆ. ಇನ್ನೊಂದು ಸಂಪೂರ್ಣವಾಗಿ ನಿರ್ನಾಮವಾಗಿರತಕ್ಕಂಥ ಸೊಸೈಟಿ. ಈ ಎರಡು ಸೊಸೈಟಿಗಳನ್ನು ತಾವೇನು ಮಾಡಿದ್ದೀರೆಂದರೆ ಎರಡು ಸೊಸೈಟಿಗಳನ್ನು ಒಂದೇ ಮಾಡಿದ್ದೀರಿ. ಇದರಿಂದ ಈಗ ಎರಡೂ ಸೊಸೈಟಿಗಳು ರೋಗಗ್ರಸ್ತ ಸೊಸೈಟಿಗಳಾಗಿವೆ. ಈ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆ. ಮತ್ತು ಮಾನ್ಯ ಸದಸ್ಯರಾದ ಇದಿನಬ್ಬನವರು ಹೇಳಿದಹಾಗೆ ಆಡಿಟ್ ವ್ಯವಸ್ಥೆ ಉತ್ತಮವಾಗಿರಬೇಕು. ಯಾವುದೇ ಜಿಲ್ಲೆಗೆ ಆಡಿಟರ್ಸ್ ಹೋದಾಗ ಅವರನ್ನು ಚೆನ್ನಾಗಿ ನೋಡಿಕೊಳ್ಳಬೇಕು. ಅವರಿಗೆ ಊಟದ ವ್ಯವಸ್ಥೆ ತಂಗುವ ವ್ಯವಸ್ಥೆ ಇನ್ನು ಎಲ್ಲಾ ತರಹದ ವ್ಯವಸ್ಥೆಯನ್ನು ಡಿ.ಸಿ.ಸಿ. ಬ್ಯಾಂಕ್‌ನವರು ನೋಡಿಕೊಳ್ಳಬೇಕು. ಈ

ರೀತಿ ವ್ಯವಸ್ಥೆಯಾದಾಗ ಯಾವ ರೀತಿ ಉತ್ತಮ ಆಡಿಟ್ ಮಾಡಬಹುದು ಇದು ಅಧಿಕಾರಿಗಳಿಗೆ ಗೊತ್ತಿದ್ದರೂ ಸಹ ಅಧಿಕಾರಿಗಳು ಕಣ್ಣುಮುಚ್ಚಿಕೊಂಡಿದ್ದಾರೆ. ಇನ್ನು ಈಗಾಗಲೇ ಮಾನ್ಯ ಸದಸ್ಯರಾದ ಜಮಖಂಡಿಯವರು ಗೊಬ್ಬರದ ಬಗ್ಗೆ ಮಾತನಾಡಿದರು. ಮಾರ್ಕೆಟ್‌ನಲ್ಲಿ ಸಿಗುವಂತಹ ಗೊಬ್ಬರದ ಬೆಲೆಗಿಂತ ಸೊಸೈಟಿಯಲ್ಲಿ ಸಿಗುವಂತಹ ಗೊಬ್ಬರದ ಬೆಲೆ ಜಾಸ್ತಿಯಾಗಿದೆ ಮತ್ತು ದುಬಾರಿಯಾಗಿದೆ. ಸೊಸೈಟಿಗಳನ್ನು ಮಾಡಿರುವ ಉದ್ದೇಶವೇನೆಂದರೆ ರೈತರಿಗೆ ಅನುಕೂಲವಾಗಲೆಂದು ಮಾನ್ಯ ಮಂತ್ರಿಗಳು ಚಿಕ್ಕಮಂಗಳೂರಿಗೆ ಬಂದಿದ್ದಾಗ ಅವರ ಗಮನಕ್ಕೂ ಸಹ ನಾನು ಈ ವಿಷಯ ತಂದಿದ್ದೇನೆ. ಇನ್ನು ಕೊನೆಯದಾಗಿ ಈಗ ಕಾಫಿ ಬೆಳೆಗೆ ಸಾಲ ಕೊಡುತ್ತಿದ್ದಾರೆ ಕಾಫಿ ಬೆಳೆ ಬೇರೆ ಬೆಳೆಗಳಂತೆ ಅಲ್ಲ, ಬೇರೆ ಬೆಳೆಗೆ ಸಿಕ್ಕಂತೆ ಕಾಫಿ ಬೆಳೆಗೆ ದುಡ್ಡು ಒಂದೇ ಸಾರಿ ಸಿಗುವುದಿಲ್ಲ. ಹಂತ ಹಂತವಾಗಿ ದುಡ್ಡು ಸಿಗುತ್ತದೆ. ಸೊಸೈಟಿಯಲ್ಲಿ ಒಬ್ಬರದು ೧೦–೨೦ ಸಾವಿರ ರೂಪಾಯಿಗಳು ಬಾಕಿ ಇರುತ್ತದೆ ಕಾಫಿ ಬೋರ್ಡ್‌ನಿಂದ ಬಂದಂತಹ ಹಣ ಸೊಸೈಟಿ ಸಾಲಕ್ಕೆ ತೆಗೆದುಕೊಂಡು ಮರು ಸಾಲ ಕೊಡುವ ವ್ಯವಸ್ಥೆ ಮಾಡಿ. ಇದರಿಂದ ಕಾಫಿ ಬೆಳೆಗಾರರಿಗೆ ಅನುಕೂಲವಾಗುತ್ತದೆ. ಈಗ ತಾವು ಸಾಲ ತೀರುವ ತನಕ ಮರು ಸಾಲ ಕೊಡುವುದಿಲ್ಲ. ಈ ಬಗ್ಗೆ ಮಾನ್ಯ ಮಂತ್ರಿಗಳು ಯೋಚನೆ ಮಾಡಬೇಕು. ಇನ್ನು ಹಿಂದೆ ಒಂದು ಸಾರಿ ಬ್ಯಾಂಕ್‌ಗಳ ನೌಕರರು ನಮಗೆ ಸಂಬಳ ಹೆಚ್ಚು ಮಾಡಬೇಕೆಂದು ಮುಷ್ಕರ ಮಾಡಿದರು. ಆಗ ಮನವಿಯನ್ನು ಸಹ ಸಲ್ಲಿಸಿದ್ದರು. ಬ್ಯಾಂಕ್ ಡೈರೆಕ್ಟರ್ಸ್ ಒಂದು ನಿರ್ಣಯ ಪಾಸ್ ಮಾಡಿ ತಮಗೆ ಕಳುಹಿಸಿದ್ದರು. ತಾವು ಆಶ್ವಾಸನೆ ಕೊಟ್ಟ ಮೇಲೆ ಮುಷ್ಕರವನ್ನು ವಿತ್ ಡ್ರಾ ಮಾಡಿಸಿದೆವು. ಆದರೆ ಈ ತನಕ ಏನೂ ಆಗಿಲ್ಲ ಈ ಬಗ್ಗೆ ತಾವೇನು ಕಾರ್ಯಕ್ರಮ ತೆಗೆದುಕೊಂಡಿದ್ದೀರೆನ್ನುವುದನ್ನು ತಿಳಿಸಬೇಕು.

ಶ್ರೀ ಎಚ್. ಏಕಾಂತಯ್ಯ.—ಮಾನ್ಯ ಅಧ್ಯಕ್ಷರೇ ನಾನು ಈಗಾಗಲೇ ರಿಯಾಯಿತಿ ಬಗ್ಗೆ ಹೇಳಿದ್ದೇನೆ, ೧೯೮೬–೮೭ನೇ ಸಾಲಿಗೆ ಕೊಡಬೇಕಾದಂತಹ ೪ ಕೋಟಿ ರೂಪಾಯಿಗಳು ಮಾತ್ರ ಕೊಡಬೇಕಾಗಿದೆ. ಈ ಹಣವನ್ನು ನಾವು ಆದಷ್ಟು ಬೇಗ ಕೊಡುತ್ತೇವೆ. ನಾವು ಕೊಡಬೇಕಾಗಿದ್ದ ೬೩ ಕೋಟಿ ಸಬ್‌ಸೀಡಿ ಹಣದಲ್ಲಿ ೪ ಕೋಟಿ ರೂಪಾಯಿಗಳು ಮಾತ್ರ ಬಾಕಿ ಇದೆ. ಆ ಹಣವನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಐ. ಬಿ. ಶಂಕರ್.—ಅದಲ್ಲ ನಾನು ಹೇಳಿದ್ದು ನೀವು ಅಪೆಕ್ಸ್‌ಬ್ಯಾಂಕಿಗೆ ಆ ಹಣ ಕೊಡಿ ಎಂದು. ಸೊಸೈಟಿಗಳಿಗೆ ಕೊಡಬೇಡಿ.

ಶ್ರೀ ಎಚ್. ಏಕಾಂತಯ್ಯ.—ಮಾನ್ಯ ಸದಸ್ಯರು ಹೇಳಿದಹಾಗೆ ಕ್ರಮ ತೆಗೆದುಕೊಂಡಿದ್ದೇನೆ. ಬಡ್ಡಿ ಕೊಡುವವರಿಗೆ ಮೊದಲು ಪ್ರಾಥಮಿಕ ಪತ್ತಿ ಸಹಕಾರ ಸಂಘಗಳು ನಷ್ಟವನ್ನು ಭರಿಸಬೇಕಾಗಿತ್ತು. ಇದನ್ನು ನಾವು ತಪ್ಪಿಸಿ ಈಗ ನಾವು ಈ ನಷ್ಟವನ್ನು ಪ್ರಾಥಮಿಕ ಪತ್ತಿ ಸಹಕಾರ ಸಂಘಗಳು ಸ್ವಲ್ಪ ಭಾಗವನ್ನು ಇನ್ನುಳಿದ ಸ್ವಲ್ಪ ಭಾಗವನ್ನು ಡಿ. ಸಿ. ಸಿ. ಬ್ಯಾಂಕ್‌ಗಳು ಮತ್ತು ಸ್ವಲ್ಪ ಭಾಗ ಅಪೆಕ್ಸ್‌ಬ್ಯಾಂಕ್ ಭರಿಸಬೇಕೆಂದು ಸೂಚನೆ ಕೊಟ್ಟಿದ್ದೇವೆ. ಇನ್ನು ಗೊಬ್ಬರದ ವಿತರಣೆ ಮತ್ತು ಆಡಿಟ್ ಬಗ್ಗೆ ಹೇಳಿದರು. ಆಡಿಟ್ ಮಾಡುವುದರಲ್ಲಿ ಆಡಿಟರ್ಸ್ ಶಾಮಿಲಾಗಿರುವುದು ಕಂಡು ಬಂದರೆ ನನಗೆ ದೂರು ಕೊಟ್ಟರೆ ಖಂಡಿತವಾಗಿ ನಾನು ಅವರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ, ಆಮೇಲೆ ಗೊಬ್ಬರದ ಬೆಲೆ ಬಗ್ಗೆ ಈಗಾಗಲೇ ನಾನು ಹೇಳಿದ್ದೇನೆ. ಸಹಕಾರ ಸಂಘಗಳ ಮುಖಾಂತರ ಮಾರಾಟ ಮಾಡುವ ಗೊಬ್ಬರದ ಬೆಲೆಯು ಖಾಸಗೀಯವರು ಮಾರಾಟ ಮಾಡುವ ಗೊಬ್ಬರದ ಬೆಲೆಗಿಂತ ಜಾಸ್ತಿ ಇದೆಯೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅದಕ್ಕೆ ಅನೇಕ ವಿಧವಾದಂಥ ಕಾರಣಗಳು ಇವೆ. ಅವುಗಳನ್ನು ಪರಿಶೀಲನೆ ಮಾಡಿ ಖಾಸಗೀಯವರಲ್ಲಿ ಯಾವ ಬೆಲೆಗೆ ಗೊಬ್ಬರ ಸಿಗುತ್ತದೆಯೋ ಅದೇ ಬೆಲೆಗೆ ಸಹಕಾರ ಸಂಘಗಳಲ್ಲೂ ಸಿಗುವ ಹಾಗೆ ಕ್ರಮವನ್ನು ತೆಗೆದುಕೊಳ್ಳುತ್ತೇನೆ. ಆಮೇಲೆ, ಕಾಫಿ ಬೋರ್ಡ್ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ. ಅದನ್ನು ಪರಿಶೀಲನೆ ಮಾಡುತ್ತೇನೆ, ಕಾಫಿ ಬೋರ್ಡ್‌ನವರು ಒಪ್ಪಿಕೊಂಡರೆ ಅದನ್ನು ಮಾಡಲಿಕ್ಕೆ ಸಾಧ್ಯವಾಗುತ್ತದೆ ಸಾಧ್ಯವಾದರೆ ಖಂಡಿತ ಮಾಡುತ್ತೇನೆ. ಇನ್ನೂ ಒಂದು ವಿಷಯವನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಸಹಕಾರ ಬ್ಯಾಂಕ್‌ಗಳಲ್ಲಿ ಕೆಲಸ ಮಾಡುತ್ತಿರುವ ನೌಕರರುಗಳ ಮೇಲೆ ಅವರಿಗಿಂತ ಹೆಚ್ಚು ಕಳಕಳಿ ನನಗಿದೆ, ಕಳಕಳಿ ಒಂದೇ ಇದ್ದರೆ ಸಾಲದು. ನೌಕರರುಗಳ ಬೇಡಿಕೆಯನ್ನು ಈಡೇರಿಸುವುದಕ್ಕೆ ಆಯಾಯಾ ಬ್ಯಾಂಕುಗಳಿಗೆ ಆರ್ಥಿಕ ಶಕ್ತಿ ಇದೆಯೋ ಎಂದು ನೋಡಬೇಕಾಗುತ್ತದೆ. ಅದನ್ನು

ಪರಿಗಣನೆಯಲ್ಲಿ ಇಟ್ಟುಕೊಂಡು ಅವರ ವೇತನವನ್ನು ಪುನರ್‌ಪರಿಶೀಲನೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ. ರಾಮಪ್ಪ.—ಮಾನ್ಯ ಅಧ್ಯಕ್ಷರೇ, ನಮ್ಮ ಬಳ್ಳಾರಿ ತಾಲ್ಲೂಕಿನಲ್ಲಿ ಬಸರಗೋಡ ಎಂದು ಒಂದು ವಿಲೇಜ್ ಇದೆ. ಈ ವಿಲೇಜ್‌ನಲ್ಲಿ ಇದ್ದ ಸೊಸೈಟಿಯಲ್ಲಿ ನಡೆದಿರುವ ಅವ್ಯವಹಾರದ ಬಗ್ಗೆ ಸುಮಾರು ೫-೬ ವರ್ಷಗಳ ಹಿಂದೆಯೇ ಪೋಲೀಸ್ ಕೇಸ್ ಹಾಕಬೇಕೆಂದು ತೀರ್ಮಾನವಾಗಿತ್ತು. ಪೋಲೀಸ್ ಕೇಸ್‌ಗೆ ಅಲ್ಲಿರುವ ಡೆಪ್ಯುಟಿ ರಿಜಿಸ್ಟ್ರಾರ್‌ರವರು ಸರಿಯಾದ ಮಾಹಿತಿಯನ್ನು ಒದಗಿಸಿ ಕೊಡುತ್ತಿಲ್ಲ. ಡೆಪ್ಯುಟಿ ರಿಜಿಸ್ಟ್ರಾರ್‌ರವರ ಹಿಂದೆ ದೊಡ್ಡವರಿದ್ದಾರೆಂದು ಅವರೇ ಹೇಳುತ್ತಾರೆ. ಅವರು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಅಂಥ ಅಧಿಕಾರಿಗಳ ಮೇಲೆ ನೀವು ಏನು ಆಕ್ಷನ್ ತೆಗೆದುಕೊಳ್ಳುತ್ತೀರಿ? ಇವತ್ತಿನವರೆಗೂ ಅವರು ಪೋಲೀಸಿನವರಿಗೆ ಮಾಹಿತಿಗಳನ್ನು ಕೊಟ್ಟಿಲ್ಲ. ಮಾಹಿತಿಗಳು ಕೊಡದೇ ಇರುವುದರಿಂದ ಕೇಸ್ ನಡೆಯುತ್ತಿಲ್ಲ. ಇದರಲ್ಲಿ ಯಾರಾದರೂ ಶಾಮೀಲಾಗಿದ್ದಾರೋ ಎಂದು ನನಗೆ ಅರ್ಥವಾಗುತ್ತಿಲ್ಲ. ಆಮೇಲೆ ಹಡ್ಲಿಗಿ ಶುಗರ್ ಫ್ಯಾಕ್ಟರಿಯು ಈಗಾಗಲೇ ಲಿಕ್ವಿಡೇಟ್ ಆಗಿದೆ. ಲಿಕ್ವಿಡೇಟ್ ಆದ ಮೇಲೆ ರೈತರುಗಳಿಗೆ ಕೊಡಬೇಕಾಗಿರುವ ರೊಕ್ಕವನ್ನು ಕೊಡಬೇಕಾಗಿತ್ತು. ಆದರೆ ಅವರುಗಳಿಗೆ ರೊಕ್ಕವನ್ನು ಇದುವರೆಗೂ ಕೊಟ್ಟಿಲ್ಲ. ಇದರ ಬಗ್ಗೆ ಡೆಪ್ಯುಟಿ ರಿಜಿಸ್ಟ್ರಾರ್‌ರವರನ್ನು ಕೇಳಿದರೆ ಸರಿಯಾಗಿ ಹೇಳುವುದಿಲ್ಲ. ಇದಕ್ಕೆ ಯಾರು ಜವಾಬ್ದಾರರಾಗುತ್ತಾರೆ ? ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ? ಮಂತ್ರಿಗಳಿಗೆ ಇದರಲ್ಲಿ ಏನಾದರು ಸಂಬಂಧ ಇದೆಯೇ ಎಂದು ಕೇಳುತ್ತೇನೆ.

ಶ್ರೀ ಏಕಾಂತಯ್ಯ.—ಮಾನ್ಯ ಸದಸ್ಯರಾದ ರಾಮಪ್ಪನವರು ಎರಡು ಪ್ರಶ್ನೆಗಳನ್ನು ಕೇಳಿದ್ದಾರೆ. ಒಂದು, ಸಹಕಾರ ಸಂಘದಲ್ಲಿ ದುರುಪಯೋಗವಾಗಿದೆ. ಇದಕ್ಕೆ ಸಂಬಂಧಪಟ್ಟಂತೆ ಮಾಹಿತಿಗಳನ್ನು ಸಂಬಂಧಪಟ್ಟ ಅಧಿಕಾರಿ ಕೊಡುತ್ತಿಲ್ಲವೆಂದು ಹೇಳಿದ್ದಾರೆ. ದಿನಾಂಕ ೨೭-೪-೮೮ ರಂದು ಸರ್ಕಾರ ಒಂದು ಆದೇಶ ಹೊರಡಿಸಿ, ಇಡೀ ಕರ್ನಾಟಕ ರಾಜ್ಯದಲ್ಲಿ ಯಾವುದಾದರೂ ಸಹಕಾರ ಸಂಘಗಳಲ್ಲಿ ದುರುಪಯೋಗವಾಗಿ ಅಂಥವುಗಳ ಮೇಲೆ ಅಧಿಕಾರಿಗಳು ಕ್ರಮವನ್ನು ದಿನಾಂಕ ೩೦-೬-೮೮ರೊಳಗೆ ತೆಗೆದುಕೊಳ್ಳದೇ ಇದ್ದರೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ತಿಳಿಸಲಾಗಿದೆ. ಮಾನ್ಯ ಸದಸ್ಯರು ಹೇಳಿರುವಂತೆ ಅಧಿಕಾರಿಗಳು ಕ್ರಮ ತೆಗೆದುಕೊಳ್ಳದೇ ಇದ್ದರೆ ಅಂಥ ಅಧಿಕಾರಿಯ ಮೇಲೆ ನಾವು ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಆಮೇಲೆ ಹಡ್ಲಿಗಿ ಶುಗರ್ ಫ್ಯಾಕ್ಟರಿ ಲಿಕ್ವಿಡೇಟ್ ಆಗಿರುವ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ. ಅದರ ಬಗ್ಗೆ ವಿಚಾರ ಮಾಡುತ್ತೇನೆ.

ಶ್ರೀ ಎಂ. ರಾಮಪ್ಪ.—ಈಗ ಏನಾಗಿದೆ ಎಂದರೆ, ಅದಕ್ಕೆ ಸಂಬಂಧಪಟ್ಟ ಆಫೀಸರ್‌ಗಳು ಇನ್ನೊಂದೆರಡು ತಿಂಗಳಿನಲ್ಲಿ ರಿಟೈರ್ಡ್ ಆಗಿಬಿಡುತ್ತಾರೆ.

ಶ್ರೀ ಏಕಾಂತಯ್ಯ.—ಇದರ ಬಗ್ಗೆ ನಾವು ಕ್ರಮ ತೆಗೆದುಕೊಳ್ಳುವುದಿಲ್ಲ ಎನ್ನುವ ಭ್ರಮೆ ಮಾನ್ಯ ಸದಸ್ಯರಿಗಿದ್ದರೆ ಅದನ್ನು ಅವರಲ್ಲೇ ಇಟ್ಟುಕೊಳ್ಳಬೇಕು. ಯಾರೇ ತಪ್ಪು ಮಾಡಲಿ ಅವರ ಮೇಲೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ. ಮಾನ್ಯ ರಾಮಪ್ಪನವರೇ ಒಂದು ಪಕ್ಷ ತಪ್ಪು ಮಾಡಿದರೂ ಕೂಡ ಅವರ ಮೇಲೂ ಕ್ರಮವನ್ನು ನಾವು ತೆಗೆದುಕೊಳ್ಳುತ್ತೇವೆ. ಅದರ ಬಗ್ಗೆ ಭ್ರಮೆ ಇರಬೇಕಾದ ಅವಶ್ಯಕತೆ ಇಲ್ಲವೆಂದು ಹೇಳುತ್ತೇನೆ. ನನ್ನ ಅಧಿಕಾರಾವಧಿಯಲ್ಲಿ ಅಧಿಕಾರಿಗಳು ಅಥವಾ ಅಧಿಕಾರಿಯೇತರರುಗಳು ಶಾಮೀಲಾಗಿ ಏನಾದರೂ ಅಕ್ರಮಗಳನ್ನು ಮಾಡಿ ಅದು ನನ್ನ ಗಮನಕ್ಕೆ ಬಂದು ಕ್ರಮ ತೆಗೆದುಕೊಂಡಿಲ್ಲವೆಂದು ತಾವು ಹೇಳಿ ಯಾವುದಾದರೂ ಒಂದು ಉದಾಹರಣೆಯನ್ನು ಕೊಡುವುದಾದರೆ, ಅದನ್ನು ಚಾಲೆಂಜ್ ಆಗಿ ನಾನು ತೆಗೆದುಕೊಳ್ಳುತ್ತೇನೆ.

ಶ್ರೀ ಎಂ. ರಾಮಪ್ಪ.—ಈ ಫ್ಯಾಕ್ಟರಿ ಲಿಕ್ವಿಡೇಟ್ ಆಗಿ ಒಂದೂವರೆ ವರ್ಷವಾಗಿದೆ. ಅಲ್ಲಿರತಕ್ಕ ಸಾಮಾನುಗಳನ್ನು ಮಾರುತ್ತೇವೆಂದು ತಾವು ಹೇಳುತ್ತೀರಿ. ಆದರೆ ಅಲ್ಲಿ ಮಾರುವುದಕ್ಕೆ ಸಾಮಾನುಗಳೇ ಇಲ್ಲ. ಇದರ ಬಗ್ಗೆ ಯಾರ ಮೇಲೆ ಆಕ್ಷನ್ ತೆಗೆದುಕೊಳ್ಳುತ್ತೀರಿ ?

೧೧–೩೦ ಎ.ಎಂ.

ನಾನು ಆ ಚಾಲೆಂಜ್‌ನ್ನು ಸ್ವೀಕಾರ ಮಾಡುತ್ತೇನೆ. ಏಕೆಂದರೆ ಒಂದೂವರೆ ವರ್ಷವಾಗಿದೆ. ಅದನ್ನು ಅಕ್ವಿಡೇಟ್ ಮಾಡಿ ಎಂದು ಹೇಳುತ್ತಾ ಬಂದಿದ್ದೇನೆ. ಅವರು ಮಾಡುತ್ತೇವೆ ಎಂದು ಹೇಳುತ್ತಾ ಬಂದಿದ್ದಾರೆ. ಇನ್ನೂ ಮಾಡಿಲ್ಲ. ಅಲ್ಲಿ ಯಾವ ಸಾಮಾನು ಕೂಡ ಇಲ್ಲ. ಇಂತಹವರ ಬಗ್ಗೆ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ ?

ಶ್ರೀ ಏಕಾಂತಯ್ಯ.—ನಾನು ಮಾನ್ಯ ರಾಮಪ್ಪನವರಿಗೂ ಹೇಳುತ್ತೇನೆ. ಪಕ್ಷದ ಸದಸ್ಯರಿಗೂ ಹೇಳುತ್ತೇನೆ, ಸದನದ ಎಲ್ಲಾ ಸದಸ್ಯರಿಗೂ ಹೇಳುತ್ತೇನೆ. ಇಂಥ ಆರೋಪಗಳನ್ನು ಮಾಡಿದ್ದೇ ಆದರೆ, ಅದು ರುಜುವಾತು ಆದರೆ ಖಂಡಿತವಾಗಿ ನಾನು ಇಲ್ಲಿ ಒಂದು ನಿಮಿಷವೂ ಕೂಡ ಇರುವುದಿಲ್ಲ. ಮಾನ್ಯ ಬಂಗಾರಪ್ಪನವರಿಗೂ ಗೊತ್ತಿದೆ. ಅವರ ಕ್ಷೇತ್ರವಾದ ಸೊರಬದಲ್ಲಿ ಇದ್ದಂಥ ಸಹಕಾರ ಸಂಘದ ಬಗ್ಗೆ ನಾನು ಯಾವ ರೀತಿಯಲ್ಲಿ ಕ್ರಮವನ್ನು ತೆಗೆದುಕೊಂಡಿದ್ದೇನೆ ಎನ್ನುವುದು. ಅದೇ ರೀತಿಯಾಗಿ ಯಾವ ಯಾವ ಸಹಕಾರ ಸಂಘಗಳಲ್ಲಿ ದುರ್ಉಪಯೋಗವಾಗಿದೆ ಎಂದು ತಿಳಿದು ಬಂದಲ್ಲಿ, ಅಂಥ ಪ್ರತಿಯೊಂದು ಸಂದರ್ಭಗಳಲ್ಲಿಯೂ ಕೂಡ ನಾನು ಅದನ್ನು ಸ್ವತಃ ತಿಳಿದುಕೊಂಡು ಅಲ್ಲಿ ಯಾವುದೇ ಜಾತಿ, ಯಾವುದೇ ಪಕ್ಷದವರೇ ಇರಲಿ, ಅವರು ತಪ್ಪಿತಸ್ಥರು ಎಂದು ಕಂಡುಬಂದಲ್ಲಿ, ಅಧಿಕಾರಿಗಳು ಮತ್ತು ಅಧಿಕಾರೇತರರ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಂಡಿದ್ದೇನೆ. ಆದುದರಿಂದ ಮಾನ್ಯ ಸದಸ್ಯರಲ್ಲಿರುವಂಥ ಯಾವುದೇ ಮಾಹಿತಿಯನ್ನು ಅವರು ಕೊಟ್ಟಿದ್ದೇ ಆದರೆ, ಈ ತಿಂಗಳೊಳಗಾಗಿ ಪ್ರತಿಯೊಬ್ಬ ಅಧಿಕಾರಿ ಮತ್ತು ಅಧಿಕಾರೇತರರ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆ ಎಂಬ ಭರವಸೆಯನ್ನು ಈ ಸಂದರ್ಭದಲ್ಲಿ ಕೊಡಬಯಸುತ್ತೇನೆ.

†ಶ್ರೀ ವಿನಯಕುಮಾರ ಸೊರಕೆ.—ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಣ್ಣ ಹಿಡುವಳಿದಾರರಿಗೆ ಎರಡು ಎಕರೆಗಳಿಗಿಂತ ಕಡಿಮೆ ಜಮೀನು ಇರುವವರಿಗೆ, ತಮ್ಮ ಜಮೀನನ್ನು ಅಭಿವೃದ್ಧಿಪಡಿಸಲಿಕ್ಕೆ ಭೂ ಅಡಮಾನ ಬ್ಯಾಂಕ್‌ಗಳಿಂದಾಗಲಿ, ಅಥವಾ ಸಹಕಾರ ಸಂಘಗಳಿಂದಾಗಲೀ, ಯಾವುದೇ ರೀತಿಯ ಸಾಲವು ಸಿಗುತ್ತಾ ಇಲ್ಲ. ಸೀಮಿತವಾಗಿ ಎರಡು ಎಕರೆ ಜಮೀನು ಬೇಕು ಎಂಬ ನಿರ್ಬಂಧ ಈಗ ಇದೆ. ಆದರೆ ಇದರಲ್ಲಿ ಕೆಲವು ಸಣ್ಣ ಹಿಡುವಳಿದಾರರು, ಪರಿಶಿಷ್ಟ ಜಾತಿ ಮತ್ತು ಜನಾಂಗಗಳಿಗೆ ಸೇರಿದವರಿದ್ದಾರೆ. ಅವರಿಗೆ ಒಂದು ಎಕರೆಗಿಂತ ಕಡಿಮೆ ಜಮೀನು ಇರುತ್ತದೆ, ಹೀಗಿರುವಾಗ ಅವರ ಭೂಮಿಯನ್ನು ಅಭಿವೃದ್ಧಿಪಡಿಸಲಿಕ್ಕೆ ಸಾಲದ ಅವಕಾಶವು ಅವರಿಗೆ ಸಿಗುತ್ತಾ ಇಲ್ಲ. ಆದುದರಿಂದ ಅವರಿಗೂ ಈ ಒಂದು ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ,

ಶ್ರೀ ಹೆಚ್. ಏಕಾಂತಯ್ಯ.—ಎರಡು ಎಕರೆಗಿಂತ ಕಡಿಮೆ ಭೂಮಿ ಹೊಂದಿರುವ ರೈತರಿಗೂ ಕೂಡ ಭೂಮಿ ಅಭಿವೃದ್ಧಿಪಡಿಸಿಕೊಳ್ಳಲು ಸಾಲ ಸೌಲಭ್ಯವನ್ನು ಕೊಡಿಸಬೇಕೆಂದು ಮಾನ್ಯ ಸೊರಕೆಯವರು ಕೇಳಿಕೊಂಡಿದ್ದಾರೆ ಅದರ ಬಗ್ಗೆ ಪರಿಶೀಲನೆ ಮಾಡಿ ಅಂತಹವರಿಗೂ ಸಹ ಈಗ ಹಾಲಿ ಇರುವಂಥ ನಿಯಮಗಳ ಪ್ರಕಾರ ಸಹಾಯ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ. ಒಂದು ಪಕ್ಷ ನಮ್ಮಲ್ಲಿರುವಂಥ ನಿಯಮಗಳಿಗೆ ತಿದ್ದುಪಡಿ ಮಾಡುವುದಕ್ಕೆ ಅವಶ್ಯಕ ಎಂದು ಕಂಡುಬಂದಲ್ಲಿ ನಿಯಮಗಳನ್ನು ತಿದ್ದುಪಡಿ ಮಾಡುವುದರ ಮುಖಾಂತರ ಅವರಿಗೆ ಬೇಕಾದಂಥ ಸಾಲವನ್ನು ಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ರಾಮಪ್ಪ.—ಅಧ್ಯಕ್ಷರೆ, ಮಾನ್ಯ ಸಹಕಾರ ಮಂತ್ರಿಯವರು ನನ್ನ ತಾಲ್ಲೂಕಿಗೆ ಸೇರಿದವರು. ಅವರು ಪ್ರಾಮಾಣಿಕತೆಗೆ ಹೆಸರಾದವರು ಎಂಬ ಒಂದು ನಂಬಿಕೆ ಕೂಡ ನಮ್ಮಲ್ಲಿದೆ. ಆ ಬಗ್ಗೆ ಅವರಲ್ಲಿ ೩–೪ ಪ್ರಶ್ನೆಗಳನ್ನು ಕೇಳಬಯಸುತ್ತೇನೆ. ಮೊದಲನೆಯದಾಗಿ ಡಿಫಾಲ್ಟರ್‌ಗಳು ಸಂಘದ ಅಧಿಕಾರದಲ್ಲಿರಬಾರದು ಎಂಬ ಒಂದು ನಿಯಮ ಇದೆ. ಆ ರೀತಿಯ ಕಾಯಿದೆಯೂ ಇದೆ. ಆದರೆ ಮಸ್ಕಲ್ ಗ್ರಾಮದ ಒಂದು ಸಂಘದಲ್ಲಿ ಡಿಫಾಲ್ಟರ್ ಒಬ್ಬರು ಅನೇಕ ವರ್ಷಗಳಿಂದ ಅಧ್ಯಕ್ಷ ಸ್ಥಾನದಲ್ಲಿ ಮುಂದುವರಿಯುತ್ತಿದ್ದಾರೆ. ಅದೇ ರೀತಿಯಲ್ಲಿ ಮಸ್ಕಲ್ ಗ್ರಾಮದ ಸೇವಾ ಸಹಕಾರಿ ಸಂಘದಲ್ಲಿ ಬಹಳ

ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ದುರುಪಯೋಗವಾಗಿದೆ. ಆ ದುರುಪಯೋಗದಿಂದಾಗ ಆ ಸಂಘವು ಇವೊತ್ತು ಬೇರೆ ವ್ಯವಹಾರ ಮಾಡುವುದಕ್ಕೆ ಆಗದೆ ಕೈಕಟ್ಟಿ ಕುಳಿತುಕೊಳ್ಳುವಂತಾಗಿದೆ. ಅಲ್ಲಿ ಯಾವುದೇ ವ್ಯವಹಾರವಿಲ್ಲದೆ ನಿಂತು ಹೋಗಿದೆ. ಆ ದುರುಪಯೋಗದ ಬಗ್ಗೆ ತಾವು ಏಕೆ ಶೀಘ್ರ ಕ್ರಮಗಳನ್ನು ಕೈಗೊಳ್ಳಲಿಲ್ಲ. ಈಗಲಾದರೂ ತೆಗೆದುಕೊಳ್ಳಲು ಬಯಸುತ್ತೀರಾ ಅದೇ ರೀತಿಯಲ್ಲಿ ಈಚಲಗೆರೆ ವ್ಯವಸಾಯ ಸಂಘದ ಕಾರ್ಯದರ್ಶಿಯು ಮಾಡಿರತಕ್ಕಂಥ ಅನೇಕ ದುರ್ವ್ಯವಹಾರಗಳ ಬಗ್ಗೆ ತಮಗೆ ಗಮನಕ್ಕೆ ಬಂದಿದೆ. ಅವರು ಅನೇಕ ಹೆಸರುಗಳ ವಿಚಾರದಲ್ಲಿ ಮಾಡಿದ ಅವ್ಯವಹಾರ, ದುರುಪಯೋಗ ತಮ್ಮ ಗಮನಕ್ಕೆ ಬಂದಿದ್ದರೂ ಸಹ ಅವರ ಮೇಲೆ, ವರ್ಗಾವಣೆ ಮುಂತಾದ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳುವ ಬಗ್ಗೆ ಸರಕಾರವನ್ನು ಕೇಳಬಯಸುತ್ತೇನೆ. ಅದೇ ರೀತಿಯಲ್ಲಿ ಹತ್ತೀ ಬೆಳೆಗಾರರ ಸಹಕಾರ ಸಂಘದ ಅಧ್ಯಕ್ಷರಾಗಿ ತಾವು ಕೆಲಸ ಮಾಡಿದ್ದೀರಿ. ಆ ಸಹಕಾರ ಸಂಘದ ಕಟ್ಟಡಕ್ಕೋಸ್ಕರವಾಗಿ. ಭೂಮಿಯನ್ನು ಪಡೆಯುವುದಕ್ಕೋಸ್ಕರವಾಗಿ ಹಿರಿಯೂರು ಟೌನ್‌ಗೆ ಲಗತ್ತಾಗಿರುವ ಮ್ಯಾಗನೂರು ಹಳ್ಳಿಯ ಸರ್ವೆ ನಂಬರ್‌ನಲ್ಲಿ ಕೆಲವು ಸರ್ವೆ ನಂಬರ್‌ಗಳ ಭೂಮಾಲೀಕರೊಂದಿಗೆ ಜಮೀನು ಕೊಳ್ಳುವುದಕ್ಕೋಸ್ಕರವಾಗಿ ನೆಗೋಶಿಯೇಟ ಮಾಡಿದರು. ಆದರೆ ಇದ್ದಕ್ಕಿದ್ದ ಹಾಗೆ ಅವರು ಅಧ್ಯಕ್ಷರಾಗಿ ಬದಲಾವಣೆ ಆದಾಗ ಅವೊತ್ತು ಸಹಕಾರಿ ಸಂಘದಿಂದ ಕೆಲವು ಭಾಗದ ಹಣವನ್ನು ಕೂಡ ಭೂಮಾಲೀಕರಿಗೆ ಕೊಟ್ಟರು. ಆದರೆ ಇವರು ಇಳಿದ ನಂತರ ಹಣವು ವಾಪಸ್ಸು ಆ ಸಂಘಕ್ಕೆ ಬರಲಿಲ್ಲ, ಅವರು ಅಧಿಕಾರದಿಂದ ಇಳಿದ ನಂತರ ಅದಕ್ಕೆ ಮತ್ತಷ್ಟು ಹಣವನ್ನು ಸೇರಿಸಿ ವೈಯಕ್ತಿಕವಾಗಿ ಭೂಮಿಯನ್ನು ಕೊಂಡಿದ್ದಾರೆ ಎಂಬ ಆಪಾದನೆಯು ಭೂಮಾಲೀಕರ ಕಡೆಯಿಂದ ಬಂದಿದೆ, ಇದರ ಬಗ್ಗೆ ಸೂಕ್ತ ಮಾಹಿತಿಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಆಮೇಲೆ ಹಿಂದೆ ಅಮಾಲ್ಗಮೇಷನ್ ಮಾಡಿದಾಗ ಕೈಸಾಲವನ್ನು ಕೊಡುತ್ತಿದ್ದರು. ಅತಿ ಬಡವರಿಗೆ ಏನಾದರೂ ತೊಂದರೆ ಇದ್ದರೆ ನೂರು ಇನ್ನೂರು ಕೈಸಾಲ ಕೊಡುತ್ತಿದ್ದರು. ಅದನ್ನು ಮುಂದುವರಿಸುತ್ತೀರೋ ಹೇಗೆ ? ಆಮೇಲೆ ನಮ್ಮ ತಾಲ್ಲೂಕಿನಲ್ಲಿ ಕಟ್ ಆಫ್ ಪ್ರಾರಂಭವಾಗಿದೆ. ಬಡ್ಡಿಯನ್ನು ಮನ್ನಾ ಮಾಡುವ ಕಾರ್ಯಕ್ರಮವನ್ನು ಇನ್ನೂ ಒಂದು ತಿಂಗಳಿಗೆ ಮುಂದಕ್ಕೆ ಹಾಕುವಿರಾ ?

ಶ್ರೀ ಹೆಚ್. ಏಕಾಂತಯ್ಯ.—ಅಧ್ಯಕ್ಷರೇ, ಹಲವಾರು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಮಸ್ಕಲ್ ಈಚಲಗೆರೆ ಮುಂತಾದ ಸಹಕಾರ ಸಂಘಗಳಲ್ಲಿ ದುರುಪಯೋಗವಾಗಿದೆ ಎಂದರು. ಎಲ್ಲೆಲ್ಲಿ ದುರುಪಯೋಗವಾಗಿದೆ ಅಂಥಾ ಕಡೆಯೆಲ್ಲ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳುವಂತೆ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ಒಂದು ಪಕ್ಷ ಅವರು ಕ್ರಮ ತೆಗೆದುಕೊಂಡಿಲ್ಲದಿದ್ದರೆ ಖಂಡಿತವಾಗಿ ಅದನ್ನು ಪರಿಶೀಲಿಸಿ ತೀವ್ರ ಕ್ರಮ ತೆಗೆದುಕೊಳ್ಳುತ್ತೇನೆ. ನಾನು ಪ್ರತಿ ಸಹಕಾರ ಸಂಘದ ಲೆಕ್ಕ ಕೊಡುವುದಕ್ಕೆ ಇಲ್ಲಿ ನಿಂತಿಲ್ಲ. ನೀತಿಯ ಬಗ್ಗೆ ಹೇಳುತ್ತಿದ್ದೇನೆ ಅಷ್ಟೆ. ಆಮೇಲೆ ಯಾರೋ ಒಬ್ಬರು ಸುಸ್ತಿದಾರರಾಗಿದ್ದರೂ ಅವರು ಅಧ್ಯಕ್ಷರಾಗಿ ಇರಲು ಸಾಧ್ಯವಿಲ್ಲ. ಅವರು ಮುಂದುವರಿಯಲು ನಾನು ಅವಕಾಶ ಕೊಡುವುದಿಲ್ಲ. ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ ಮುಂದೆ ತನಿಖೆ ಮಾಡಿಸಿ ಅವರು ನಿಜವಾಗಿ ಸುಸ್ತಿದಾರರೇ ಆಗಿದ್ದಲ್ಲಿ ಮುಂದುವರಿಯಲು ಬಿಡುವುದಿಲ್ಲ.

ಆಮೇಲೆ ಹತ್ತಿ ಬೆಳಗಾರರ ಸಹಕಾರ ಸಂಘದ ಭೂಮಿಯನ್ನು ನೀವು ಇದಾಗ ಖರೀದಿ ಮಾಡಿದ್ದೀರಿ, ಆದರೆ ಅದು ಆಗಲಿಲ್ಲ ಎಂದರು. ಖರೀದಿಸಿದ್ದು ನಿಜ, ಸೆಕ್ಷನ್ Section 79 (b) of the Land Reforms Act ಪ್ರಕಾರ ಸರ್ಕಾರದ ಅನುಮತಿ ಇಲ್ಲದೆ ಯಾವುದೇ ಸಹಕಾರ ಸಂಘ ಆ ಭೂಮಿಯನ್ನು ಕ್ರಯಕ್ಕೆ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಮಾಡಲಿಲ್ಲ ತದನಂತರದ ರಾಜಕೀಯ ಕಾರಣಗಳಿಂದ ಸಹಕಾರ ಸಂಘವು ಲಿಕ್ವಿಡೇಟ್ ಮಾಡಿಸಿದರು. ಆದ್ದರಿಂದ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಹೇಳುತ್ತೇನೆ. ಆಮೇಲೆ ನಾನು ಭೂಮಿಯನ್ನು ತೆಗೆದುಕೊಂಡಿದ್ದೇನೆಂದು ಹೇಳಿದರು. ನನ್ನದೇನಾದರೂ ಇದ್ದರೆ ಅದನ್ನು ಅವರೇ ಬೇಕಾದರೆ ತೆಗೆದುಕೊಳ್ಳಲಿ. ನಾನು ಭೂಮಿಯನ್ನು ತೆಗೆದುಕೊಂಡಿಲ್ಲ. ಅವರು ನನ್ನ ಪ್ರಾಮಾಣಿಕತೆಯ ಬಗ್ಗೆ ಒಳ್ಳೆಯ ಮಾತನ್ನು ಆಡಿದ್ದಾರೆ. ಅದಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅಧ್ಯಕ್ಷರೇ, ಒಬ್ಬ ವ್ಯಕ್ತಿ, ಜೀವನ ಶೈಲಿಯ ನಿರ್ಧಾರ ಮಾಡಬೇಕಾದರೆ ಆತ ಶಾಸಕ ಅಥವಾ ಮಂತ್ರಿ ಆಗಬೇಕು. ಜನ ಮೊದಲು ವ್ಯಕ್ತಿ ಹೇಗಿದ್ದ, ಈಗ ಹೇಗೆ ಬಾಳುತ್ತಿದ್ದಾನೆ ಎಂದು ವಾಚ್ ಮಾಡುತ್ತಾರೆ. ಹೇಗೋ

ಇದ್ದ ಒಬ್ಬ ವ್ಯಕ್ತಿ ಶಾಸಕನಾದ ಮೇಲೆ ಅಥವಾ ಸಚಿವನಾದ ಮೇಲೆ ಇದ್ದಕ್ಕಿದ್ದಂತೆ ಆಸ್ತಿವಂತನಾದರೆ ಜನ ಅವರಿಗೆ ಶಿಕ್ಷೆಯನ್ನು ಕೊಡುತ್ತಾರೆ. ಅಂಥಾ ಶಿಕ್ಷೆಯನ್ನು ನಾನು ತಪ್ಪು ಮಾಡಿದ್ದರೆ ಶಿಕ್ಷೆ ಪಡೆಯಲು ತಯಾರಾಗಿದ್ದೇನೆ. ರಾಮಪ್ಪನವರು ನನ್ನ ಊರಿನವರು. ನಾನು ಹೇಗೆ ಬಾಳುತ್ತಿದ್ದೇನೆ ಎಂಬುದು ಅವರಿಗೆ ಗೊತ್ತಿದೆ. ಅವರು ಹೇಗೆ ಬದುಕುತ್ತಿದ್ದರು ಎಂದು ನನಗೆ ಗೊತ್ತಿದೆ. ಆ ವಿಚಾರಗಳನ್ನೆಲ್ಲ ಇಲ್ಲಿ ಪ್ರಸ್ತಾಪ ಮಾಡಲು ನಾನು ಇಚ್ಛಿಸುವುದಿಲ್ಲ. ಅವರು ಕೇಳಿದ ಎಲ್ಲಾ ಮಾಹಿತಿಗಳನ್ನೂ ಕೊಡುವುದಕ್ಕೆ ತಯಾರಾಗಿದ್ದೇನೆ. ಅವರು ಆರೋಪ ಮಾಡಲಿ, ಅವನ್ನು ವಿಚಾರಣೆ ಮಾಡಿಸುತ್ತೇನೆ. ಅವುಗಳಲ್ಲಿ ಹುರುಳಿದ್ದರೆ ಕ್ರಮ ತೆಗೆದುಕೊಳ್ಳುತ್ತೇನೆ. ಅದಾದಮೇಲೆ ಕೆಲವು ಸಹಕಾರ ಸಂಘಗಳಿಗೆ ಹಣ ಕಟ್ಟುವುದಕ್ಕೆ ಆಗುತ್ತಿಲ್ಲ ಅವುಗಳಿಗೆ ಏನಾದರೂ ಸಾಲ ಕೊಡುತ್ತೀರಾ ಎಂದು ಕೇಳಿದರು. ಮೊದಲೇ ಸರ್ಕಾರ ತೀರ್ಮಾನ ತೆಗೆದುಕೊಂಡಿದೆ ೧೯೮೫-೮೬ರ ಚಾಲ್ತಿ ಸಾಲದ ಮತ್ತು ೧೯೮೬-೮೭ರ ಬಾಕಿ ಸಾಲದ ಮೇಲಿನ ಸುಮಾರು ೬೨ ಕೋಟಿ ರೂಪಾಯಿಗಳ ಬಡ್ಡಿಯನ್ನು ಈಗಾಗಲೇ ಮನ್ನಾ ಮಾಡಿದೆ ಇದು ಯಾವುದೇ ರಾಜ್ಯ ಸರ್ಕಾರವೂ ಮಾಡಿದ್ದಿಲ್ಲ. ಹೆಚ್ಚಿನ ರಿಯಾಯಿತಿ ಕೊಡುವ ಅವಶ್ಯಕತೆ ಇಲ್ಲ ಎಂಬ ಭಾವನೆ ಸರ್ಕಾರಕ್ಕೆ ಇದೆ. ಆಮೇಲೆ ಕಾಲಾವಕಾಶವನ್ನು ಮುಂದೆ ಹಾಕಲು ಸಾಧ್ಯವಿಲ್ಲ.

ಶ್ರೀ ಕೆ. ರಮಾನಾಥ ರೈ.— ಮಾನ್ಯ ಅಧ್ಯಕ್ಷರೇ, ಬಂಟ್ವಾಳ ತಾಲ್ಲೂಕಿನಲ್ಲಿನ ಹುಕ್ಕೇರಿಯಲ್ಲಿ ವಿದ್ಯುತ್ ಕನ್ಸೂಮರ್ ಕೋ ಆಪರೇಟೀವ್ ಸೊಸೈಟಿಯನ್ನು ಪ್ರಾರಂಭ ಮಾಡುವುದಕ್ಕೆ ಸರಕಾರ ತೀರ್ಮಾನ ಮಾಡಿದ್ದು ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಒಬ್ಬ ಪ್ರಮೋಟರ್ ಅನ್ನು ಕೂಡ ಮಾಡಿ ಇಟ್ಟಿದ್ದಾರೆ. ಆದರೆ ಕಾರ್ಯವನ್ನು ಪ್ರಾರಂಭ ಮಾಡಿಲ್ಲ. ೩ ವರ್ಷದಿಂದ ಪ್ರಾರಂಭ ಮಾಡದೇ ಇರುವಂತಹ ಈ ಕನ್ಸೂಮರ್ ಸೊಸೈಟಿಯನ್ನು ಪ್ರಾರಂಭ ಮಾಡುತ್ತೀರಾ? ಎರಡನೆಯದಾಗಿ, ಹೇಳುವುದಾದರೆ ಬೀಡಿ ಕಟ್ಟುವ ಸಹಕಾರ ಸಂಘವೊಂದನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಾರಂಭ ಮಾಡಬೇಕೆಂದು ಒಂದು ಹಂತದಲ್ಲಿ ಷೇರ್ ಅನ್ನೂ ಕೂಡ ಕಲೆಕ್ಟ್ ಮಾಡಿಟ್ಟಿದ್ದಾರೆ. ಇದನ್ನು ಕಾರ್ಯಾರಂಭ ಮಾಡಲಿಕ್ಕೆ ಅನುಮತಿ ಕೊಡುತ್ತೀರಾ?

ಶ್ರೀ ಹೆಚ್. ಏಕಾಂತಯ್ಯ.....ಸಂಬಂಧಪಟ್ಟ ಪ್ರಸ್ತಾವನೆಗಳನ್ನು ಕಳಿಸಿದರೆ ನಿಯಮಾವಳಿಗಳನ್ನು ಅನುಸರಿಸಿ ಮುಂದಿನ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಕೆ. ರಮಾನಾಥ ರೈ.— ನಿಮ್ಮ ಹತ್ತಿರವೇ ಇದೆ. ಜಿಲ್ಲಾಧಿಕಾರಿಗಳು ಚೀಫ್ ಪ್ರಮೋಟರ್ ಅನ್ನು ಮಾಡಿದ್ದಾರೆ. ಆದರೆ ಕೆಲಸವನ್ನು ಪ್ರಾರಂಭ ಮಾಡಿಲ್ಲ.

ಶ್ರೀ ಹೆಚ್. ಏಕಾಂತಯ್ಯ.—ನೋಡುತ್ತೇನೆ. We will take a decision.

ಶ್ರೀ ಬಾಬುರೆಡ್ಡಿ ವಿ. ತುಂಗಳ್.— ಸನ್ಮಾನ್ಯ ಅಧ್ಯಕ್ಷರೇ ಆಗಲೇ ಮಾನ್ಯ ಸಹಕಾರಿ ಸಚಿವರು ಉತ್ತರ ಕೊಡುವಾಗ ಸಹಕಾರಿ ಇಲಾಖೆಯ ಕೆಲವು ಹಗರಣಗಳ ಬಗ್ಗೆ ಹೇಳುತ್ತಾ ಅವರು ಒಂದು ಮಾತನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಎಲ್ಲಿ ದುರುಪಯೋಗವಾಗಿದೆ, ದುರ್ವ್ಯವಹಾರವಾಗಿದ್ದರೆ ಅಪರ ತಪ್ಪೇವಾಗಿದ್ದರೆ ೩೦-೬-೧೯೮೮ರ ಒಳಗೆ ಆಮೂಲಾಗ್ರವಾಗಿ ವಿಚಾರಣೆ ಮಾಡಿ ಶಿಕ್ಷೆ ಕೊಡುತ್ತೇನೆಂದು ಹೇಳಿದ್ದಾರೆ. ಹಳ್ಳಿಗಳಲ್ಲಿ ಇರವಂತಹ ಸಹಕಾರ ಸಂಘಗಳಲ್ಲಿ ತಿಂದವನೇ ಜಾಣ ಎನ್ನುವಂತಹ ರೀತಿಯಲ್ಲಿ ನಡೆದು ಬಂದಿದೆ. ನನ್ನ ಕ್ಷೇತ್ರದಲ್ಲಿನ ಮೂರು ಸೊಸೈಟಿಗಳಲ್ಲಿ ಕಾರ್ಯದರ್ಶಿಗಳು ೨-೩ ಲಕ್ಷ ರೂಪಾಯಿಗಳನ್ನು ತಿಂದು ಏನೂ ಆಗಿಲ್ಲ ಎನ್ನುವ ರೀತಿಯಲ್ಲಿ ಹಾಯಾಗಿ ಓಡ್ಯಾಡುತ್ತಿದ್ದಾರೆ. ನಾನು ಡೆಪ್ಯುಟಿ ರಿಜಿಸ್ಟ್ರಾರ್ ಹತ್ತಿರ ಹೋಗಿ ಅವರಿಂದ ಕೂಡ ಬರೆಯಿಸಿದ್ದೆ ಆದರೂ ಕೂಡ ಏನೂ ಆಗಿಲ್ಲ ಎಂಬಂತೆ ಅಡ್ಡಾಡುತ್ತಿದ್ದಾರೆ. ಸಹಕಾರ ಸಂಘಗಳಲ್ಲಿ ಆಗಬೇಕಾದ ಕೆಲಸವಾಗಿಲ್ಲ. ಇಂತಹವರ ಬಗ್ಗೆ ತೀವ್ರವಾದ ಉಗ್ರವಾದ ಕ್ರಮ ತೆಗೆದುಕೊಳ್ಳುತ್ತೇನೆಂದು ಮಾನ್ಯ ಸಚಿವರು ಹೇಳಿದ್ದಾರೆ ನಾನು ಅವರ ಬಗ್ಗೆ ಸಂಪೂರ್ಣವಾದ ವಿಶ್ವಾಸವನ್ನು ಇಟ್ಟಿದ್ದೇನೆ ಅವರು ಈ ವಿಚಾರದಲ್ಲಿ ಕ್ರಮವನ್ನು ತೆಗೆದುಕೊಳ್ಳಬೇಕು. ಎರಡನೆಯದಾಗಿ ಸಾಮಾನ್ಯವಾದ ವಿಚಾರದ ಬಗ್ಗೆ ಕೆಲವು ಮಾತುಗಳನ್ನು ಹೇಳುತ್ತೇನೆ. ಅದು ಏನೆಂದರೆ ಸಹಕಾರ ಸಂಸ್ಥೆಯವರು ಅತಿಥಿ ಗೃಹಗಳನ್ನು ಮಾಡಿದ್ದಾರೆ ಅದರಲ್ಲೂ ವಿಶೇಷವಾಗಿ ಎಪಿಎಂಸಿ ಯವರು ರೈತ ಭವನವೆಂದು ಎಲ್ಲಾ ಕಡೆಗಳಲ್ಲಿ ಮಾಡಿದ್ದಾರೆ. ಅವರು ಇದಕ್ಕೆಂದು ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ ಆದರೆ ಅವು ರೈತಭವನಗಳಾಗಿಲ್ಲ. ರಾತ್ರಿ ಹೊತ್ತು ಅಲ್ಲಿ ಪುಢಾರಿಗಳು ಇಸ್ಪೀಟು ಆಡುತ್ತಿದ್ದಾರೆ ಇದರಿಂದಾಗಿ ರೈತರಿಗೆ

ಸರಿಯಾದ ಸ್ಥಳಾವಕಾಶ ಸಿಗುತ್ತಿಲ್ಲ. ಅವರು ೩೦-೪೦ ರೂಪಾಯಿಗಳನ್ನು ಕೊಟ್ಟು ಬೇರೆ ಬೋರ್ಡಿಂಗ್‌ನಲ್ಲಿರುವುದಕ್ಕೆ ಆಗುವುದಿಲ್ಲ. ಈ ರೈತ ಭವನಗಳನ್ನು ಸಾಮಾನ್ಯ ರೈತರಿಗೆಂದೇ ಮೀಸಲಿಡಬೇಕು ಮತ್ತು ಮಾನ್ಯ ಸಹಕಾರಿ ಸಚಿವರು ಈ ಪುಢಾರಿಗಳ ಇನ್ಸ್ಪೆಟ್ ದಂಧೆಯನ್ನು ತಡೆಯುತ್ತಾರೆಯೋ ಎಂದು ನಾನು ಅವರಲ್ಲಿ ಕೇಳಬಯಸುತ್ತೇನೆ. ಇತ್ತೀಚೆಗೆ ಸರಕಾರದವರೇ ಸಹಕಾರ ಸಂಘಗಳ ಕಡೆಯಿಂದ ರೈತರು ತೆಗೆದುಕೊಂಡಂತಹ ಸಾಲದ ಬಡ್ಡಿಯನ್ನು ಮನ್ನಾ ಮಾಡಿದ್ದಾರೆ ಅದಕ್ಕೆ ನಾನು ಅವರನ್ನು ಅಭಿನಂದಿಸುತ್ತೇನೆ. ಆದರೆ ಮನ್ನಾ ಮಾಡಿದಂತಹ ಹಣ ಏನು ಇದೆ ಆ ಹಣ ಇನ್ನಾದರೂ ಕೂಡ ಸರಕಾರದಿಂದ ಸಹಕಾರಿ ಸಂಘಗಳಿಗೆ ಜಮಾ ಆಗಿಲ್ಲ ಇದರಿಂದಾಗಿ ಸಹಕಾರ ಸಂಘಗಳು ನಡೆಯುವುದು ಬಹಳ ದುಸ್ತರವಾಗಿದೆ. ದಯವಿಟ್ಟು ಮನ್ನಾ ಮಾಡಿದಂತಹ ಹಣ ಏನು ಇದೆ ಅದನ್ನು ಆದಷ್ಟು ಬೇಗ ತೀವ್ರವಾಗಿ ಸಹಕಾರಿ ಸಂಘಗಳಿಗೆ ಕೊಡುವ ಬಗ್ಗೆ ಕಾರ್ಯಕ್ರಮ ಹಾಕಿಕೊಳ್ಳಬೇಕು. ಇದನ್ನು ಮಾಡಿದರೆ ರೈತರೂ ಕೂಡ ನಿಮ್ಮನ್ನು ಅಭಿನಂದಿಸುತ್ತಾರೆ ನಾನೂ ಕೂಡ ತಮ್ಮನ್ನು ಅಭಿನಂದಿಸುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ.— ಎಲ್ಲಾ ವಿಚಾರಗಳಿಗೆ ನಾನು ಈಗಾಗಲೇ ಉತ್ತರ ಕೊಟ್ಟಿದ್ದೇನೆ. ಪುನಃ ಹೇಳುತ್ತೇನೆ. ಅವರ ತಪ್ಪು ಮಾಡಿದವರ ಬಗ್ಗೆ ದಿನಾಂಕ ೩೦-೬-೧೯೮೮ರ ಒಳಗೆ ಶಿಕ್ಷೆ ಕೊಡುತ್ತೇನೆಂದು ನಾನು ಹೇಳಲಿಲ್ಲ ಅಷ್ಟರ ಒಳಗೆ ಏನು ಕ್ರಮ ಕೈಗೊಳ್ಳಬೇಕೋ ಅಂಥ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಪ್ರಾರಂಭ ಮಾಡುತ್ತೇನೆಂದು ಹೇಳಿದ್ದೇನೆ. they should have initiated the proceedings. ಆ ಒಂದು ಕೆಲಸವನ್ನು ಮಾಡುತ್ತೇನೆ ರೈತ ಭವನಕ್ಕೂ ನನಗೂ ಏನೂ ಸಂಬಂಧವಿಲ್ಲ. ಸಹಕಾರೀ ರೈತ ಭವನವೇನಾದರೂ ಇದ್ದರೆ ಮತ್ತು ನಮ್ಮ ಇಲಾಖೆಗೆ ಬರುವಂತಹ ಸಹಕಾರ ಸಂಘಗಳ ಭವನಗಳು ಇದ್ದು ಅದರಲ್ಲಿ ಏನಾದರೂ ಅವ್ಯವಹಾರ ನಡೆದರೆ ಖಂಡಿತ ಕ್ರಮ ತೆಗೆದುಕೊಳ್ಳುತ್ತೇನೆ. ಇನ್ನು ಬಡ್ಡಿ ಮನ್ನಾ ಬಗ್ಗೆ ಈಗಾಗಲೇ ಹೇಳಿದ್ದೇನೆ. ೧೯೮೬-೮೭ರಲ್ಲಿ ಅಂದರೆ ಇತ್ತೀಚೆಗೆ ಬಂದಂತಹ ೪ ಕೋಟಿ ರೂಪಾಯಿಗಳ ಬಿಲ್ಸ್‌ಗಳು ಏನು ಇದೆ ಅವುಗಳು ಮಾತ್ರ ಬಾಕಿ ಇದೆ. ಈಗಾಗಲೇ ೬೧ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ೧೯೮೬-೮೭ಕ್ಕೆ ಸಂಬಂಧಪಟ್ಟಂತೆ ಇನ್ನು ೪ ಕೋಟಿ ರೂಪಾಯಿ ಏನು ಇದೆ ಅದನ್ನು ಕೂಡ ತೀವ್ರವಾಗಿ ಕೊಡಿಸಲಿಕ್ಕೆ ಯೋಜನೆ ಮಾಡುತ್ತೇನೆ,

೧೯೮೭-೮೮ನೇ ಸಾಲಿನದು ಇನ್ನೂ ಬಿಲ್ ಬಂದಿಲ್ಲ. ೩೦-೬-೧೯೮೮ ಆದಮೇಲೆ ಬರುತ್ತದೆ. ಸುಮಾರು ೬೭ ಕೋಟಿ ರೂಪಾಯಿಗಳ ಬೆಲೆ ಬರಬಹುದು. ಅದನ್ನು ಆದಷ್ಟು ಜಾಗ್ರತೆ ಕೊಡಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಡಿ. ಎ. ಚಿನ್ನಪ್ಪ.— ಮಾನ್ಯ ಅಧ್ಯಕ್ಷರೇ ಕೊಡಗಿನಲ್ಲಿ ಎರಡು ಸೊಸೈಟಿಗಳು ಇವೆ orange-growers, Co-operative Society ಗೋಣಿಕೊಪ್ಪಲ್‌ನಲ್ಲಿದೆ, ಇನ್ನೊಂದು ಕುಶಾಲ್‌ನಗರದಲ್ಲಿ Fruits Canning Society, ಎಂದು. ೧೯೭೨ನೇ ಇಸವಿಯಲ್ಲಿ ಅದು ಮುಚ್ಚಿಹೋಗಿ ಅವರಲ್ಲಿ ೮೦ ಲಕ್ಷ ರೂಪಾಯಿಗೂ ಹೆಚ್ಚು ನಷ್ಟವಾಗಿದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಸುಮಾರು ಎರಡು ತಿಂಗಳ ಹಿಂದೆ ಹೋಗಿ ಕಣ್ಣಾರೆ ಕಂಡು ಪರಾಂಬರಿಸಿ ನೋಡಿ ಬಂದಿದ್ದಾರೆ ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆ ಎಂದು ನಾನು ಮಾನ್ಯ ಮಂತ್ರಿಗಳಲ್ಲಿ ಕೇಳುವುದಕ್ಕೆ ಬಯಸುತ್ತೇನೆ, ಆಮೇಲೆ ಏಲಕ್ಕಿ ಗ್ರೋಯರ್ಸ್ ಅವರು ಎರಡು-ಮೂರು ವರ್ಷಗಳಿಂದಲೂ ಕಂಟಿನ್ಯೂಯಸ್ ಆಗಿ ಲಾಸ್ ಆಗಿ ಏಲಕ್ಕಿಯನ್ನು ಬೆಳೆಯುತ್ತಿಲ್ಲ. ಅದು ಕಮರ್ಷಿಯಲ್ ಕ್ರಾಪ್ ಆಗಿರುವುದರಿಂದ ಬಡ್ಡಿ ಮತ್ತು ಅಸಲನ್ನು ಮಾಫಿ ಮಾಡಲಿಕ್ಕೆ ಆಗುವುದಿಲ್ಲ ಎಂದು ಕಾನೂನಿನಲ್ಲಿ ಅಡಕವಾಗಿದೆ. ಅದರ ಬಗ್ಗೆ ಅವರಿಗೂ ಸಹಿತ ಬಡ್ಡಿ ಮಾಫಿ ಮಾಡಿಕೊಡಬೇಕು, ಕೊಡಗು ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಗಳಲ್ಲಿ ಅವರುಗಳು ಅಸಲನ್ನು ಏನು ತೆಗೆದುಕೊಂಡಿದ್ದರು. ಅವರಿಗೆ ಎಲ್ಲರಿಗೂ ತೊಂದರೆಯಾಗಿದೆ. ಅವರ ಮನೆಗಳನ್ನು ಜಪ್ತಿ ಮಾಡುವ ಪರಿಸ್ಥಿತಿ ಆಗಿದೆ. ಕೆಲವು ಕಡೆ ಜಪ್ತಿ ಮಾಡಿದ್ದಾರೆ. ಇದರ ಬಗ್ಗೆ ಆಕ್ಟ್‌ನಲ್ಲಿ ತಿದ್ದುಪಡಿ ಮಾಡಿ ಅವರಿಗೂ ಸಹ ಬೇರೆ ಫುಡ್ ಕ್ರಾಪ್‌ನಲ್ಲಿ ಯಾವ ರೀತಿಯಲ್ಲಿ ಅವರಿಗೆ ಕನ್‌ಸೆಷನ್ ಕೊಡುತ್ತೀರೋ ಅದೇ ರೀತಿ ಇವರಿಗೂ ಮಾಫಿ ಮಾಡುತ್ತೀರಾ? ಅದನ್ನು ಮಾನ್ಯ ಮಂತ್ರಿಗಳು ಮಾಡಬೇಕೆಂದು ನಾನು ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ,— ಮಾನ್ಯ ಚಿನ್ನಪ್ಪನವರಿಗೆ ಗೊತ್ತಿದೆ. ನಾನು ಗೋಣಿಕೊಪ್ಪಲ್ ಮತ್ತು ಕುಶಾಲ್ ನಗರಕ್ಕೆ ಹೋಗಿದ್ದೆ. ಅಲ್ಲಿ ಏನು ಸಮಾಪನ ಸ್ಥಿತಿಗೆ ಒಳಪಟ್ಟ ಸಹಕಾರ ಸಂಘಗಳು ಇವೆಯೋ ಅದರ ಬಗ್ಗೆ ಹೈಕೋರ್ಟ್‌ನಲ್ಲಿ ಪ್ರಶ್ನೆ ಮಾಡಿದ್ದಾರೆ. ಆದರೆ ಅದರ ಜೊತೆಯಲ್ಲಿ ಮತ್ತೊಂದು ಪ್ರಶ್ನೆ ಮಾಡುವಂಥದ್ದು ಕೆಲವು ಸ್ನೇಹಿತರು ಅಲ್ಲಿ ಚಿನ್ನಪ್ಪನವರು ಇದ್ದರೂ ಎಂದು ನಾನು ಭಾವಿಸಿದ್ದೇನೆ. ಒಂದು ಪಕ್ಷ ಸಂಸ್ಕರಣ ಸಂಘಗಳು ಏನು ಇವೆ ಅದನ್ನು ತೆಗೆದುಕೊಳ್ಳುವುದಕ್ಕೆ ಯಾರಾದರೂ ಮುಂದೆ ಬಂದರೆ ಬಿಟ್ಟುಕೊಡುತ್ತೇವೆ ಎಂದು ಸರ್ಕಾರದ ಪರವಾಗಿ ಈ ಮಾತನ್ನು ಅವರಿಗೆ ಹೇಳಿದ್ದೇನೆ. ಒಂದೆರಡು ತಿಂಗಳಲ್ಲಿ ಬರುತ್ತೇನೆ ಎಂದು ಅವರು ಹೇಳಿದರು ಪುನಃ ಬಂದಿಲ್ಲ. ಖಂಡಿತವಾಗಲೂ ಸಹಾ ನಿಮ್ಮ ಸ್ನೇಹಿತರಿಗೆ, ಸಹಾಯ ಮಾಡಬೇಕು ಎಂದು ಇದ್ದರೆ ಅವರನ್ನು ಕರೆದುಕೊಂಡು ಬಂದರೆ ಸಂಸ್ಕರಣ ಸಂಘವನ್ನು ವಹಿಸಿಕೊಡಲಿಕ್ಕೆ ಸರಕಾರ ಸಿದ್ಧ ಇದೆ. ಬೇರೆಯವರು ಯಾವ ಷರತ್ತುಗಳಿಗೆ ಒಳಪಟ್ಟು ಇದನ್ನು ತೆಗೆದುಕೊಳ್ಳುವುದಕ್ಕೆ ಇಚ್ಛೆ ಪಟ್ಟಿದ್ದೀರೋ ಅದೇ ಷರತ್ತುಗಳಿಗೆ ನಿಬಂಧನೆಗಳಿಗೆ ಒಳಪಟ್ಟು ತೆಗೆದುಕೊಳ್ಳುವ ಹಾಗಿದ್ದರೆ ಇದಕ್ಕೂ ಸಹಾ ಸರ್ಕಾರ ಪರಿಶೀಲನೆ ಮಾಡುತ್ತದೆ ಎಂಬ ಮಾತನ್ನು ಹೇಳುತ್ತೇನೆ. ಮತ್ತೊಂದು ಮಾತನ್ನು ಹೇಳಿದ್ದಾರೆ, ಏಲಕ್ಕಿ ಬೆಳೆಗಾರರಿಗೆ ನೀವು ಬಡ್ಡಿಯ ಸಹಾಯಧನವನ್ನು ಕೊಡಬೇಕು ಎಂದು ಹೇಳಿದ್ದಾರೆ. ಸನ್ಮಾನ್ಯ ಅಧ್ಯಕ್ಷರೇ, ಜಾರಿಯಲ್ಲಿರುವಂಥ ಆದೇಶದ ಪ್ರಕಾರ ಯಾರು ಅಸಲನ್ನು ಕೊಡುತ್ತಾರೆ, ಅವರಿಗೆ ಬಡ್ಡಿಯ ರಿಯಾಯಿತಿಯನ್ನು ಕೊಡುವಂಥ ಆದೇಶ ಈಗಾಗಲೇ ಜಾರಿಯಲ್ಲಿದೆ. ತೋಟಗಾರರ ಬೆಳೆಗಳು ಏನು ಇವೆ ಏಲಕ್ಕಿ ಆಗಿರಬಹುದು, ತೆಂಗು ಆಗಿರಬಹುದು, ದ್ರಾಕ್ಷಿ ಆಗಿರಬಹುದು, ಇತರ ಬೆಳೆ ಆಗಿರಬಹುದು. ಆ ಬೆಳೆಗೆ ನಾವು ಸುಮಾರು ಮೂರು ವರ್ಷ, ನಾಲ್ಕು ವರ್ಷ ಏಳು ವರ್ಷ ಬರೀ ಬಡ್ಡಿಯನ್ನು ಮಾತ್ರ ತೆಗೆದುಕೊಳ್ಳುತ್ತೇವೆ. ಅಸಲನ್ನು ತೆಗೆದುಕೊಳ್ಳುವುದಿಲ್ಲ. ಎಲ್ಲಿ ಬರೀ ಬಡ್ಡಿಯನ್ನು ನಾವು ತೆಗೆದುಕೊಳ್ಳುತ್ತೇವೆಯೋ ಅಲ್ಲಿ ನಾವು ಬಡ್ಡಿ ರಿಯಾಯಿತಿಯನ್ನು ಕೊಟ್ಟಿಲ್ಲ. ಕೊಡಲಿಕ್ಕೆ ಸಾಧ್ಯ ಇಲ್ಲ. ಇದು ಸರ್ಕಾರದ ನಿರ್ಧಾರ ಕೂಡಾ ಆಗಿದೆ. ಆದ್ದರಿಂದ ಅವರಿಗೆ ಹೆಚ್ಚಿನ ಸಹಾಯವನ್ನು ಮಾಡಲಿಕ್ಕೆ ಆಗುವುದಿಲ್ಲ ಎನ್ನುವ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಬಿ. ಬಿ. ಸಿಂಗಯ್ಯ.— ಬಹುಶಃ ಈಗ ಸಹಕಾರ ಸಚಿವರು ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಈ ಸಹಕಾರ ಸಂಘಗಳಲ್ಲಿ ಅಧಿಕಾರರೂಢ ಆಗಿರತಕ್ಕಂಥ ನಿರ್ದೇಶಕರುಗಳು ಮತ್ತು ನೌಕರರೆಲ್ಲರೂ ಹೆಗ್ಗಣಗಳಾಗಿ ಬೆಳೆದು ಈ ಸಹಕಾರ ಸಂಘದ ಅಸ್ತಿತ್ವವನ್ನೇ ನಾಶ ಮಾಡತಕ್ಕಂಥ ರೀತಿಯಲ್ಲಿ ಇವತ್ತು ಬೆಳೆದಿದ್ದಾರೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಇದು ಒಪ್ಪತಕ್ಕಂಥ ವಿಚಾರ, ಈ ರೀತಿಯಲ್ಲಿ ನನ್ನ ತಾಲ್ಲೂಕಿನಲ್ಲಿ ಸಹಾ ಸುಮಾರು ೫–೬ ಸಹಕಾರ ಸಂಘಗಳು ಇವೆ. ಅವುಗಳು ಇವತ್ತು ಮುಳುಗಿ ಹೋಗಿವೆ. ಈ ರೀತಿಯಲ್ಲಿ ಕೆಲವು ನೌಕರರ ನಿರ್ದೇಶಕರುಗಳು ಈ ರೀತಿ ಸಹಕಾರ ಸಂಘಗಳಲ್ಲಿ ತಿಂದು ತೇಗಿದ್ದಾರೆ. ಅಂತಹವರ ಬಗ್ಗೆ ಇದುವರೆಗೂ ಕ್ರಮವನ್ನು ತೆಗೆದುಕೊಂಡಿಲ್ಲ. ಕಡೂರು ತಾಲ್ಲೂಕು ಒಂದು ಸಹಕಾರ ಸಂಘದಲ್ಲಿ ಮೂರು ಸಾರಿ ತಿಂದು ಮಿಸ್ ಅಪ್ರೋಪ್ರಿಯೇಷನ್ ಮಾಡಿ ಸಿಕ್ಕಿದ್ದರೂ ಕೂಡ ಅವನ ಬಗ್ಗೆ ಕ್ರಮ ತೆಗೆದುಕೊಂಡಿಲ್ಲ. ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ? ಹಾಗೆಯೇ ನಮ್ಮ ಜಿಲ್ಲೆಯಲ್ಲಿ ಎಷ್ಟು ಸಹಕಾರ ಸಂಘಗಳು ಮಿಸ್ ಅಪ್ರೋಪ್ರಿಯೇಷನ್ ಆಗಿ ಇದರಲ್ಲಿ ಎಷ್ಟು ಜನ ಸಿಕ್ಕಿಹಾಕಿಕೊಂಡಿದ್ದಾರೆ? ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಅದೇ ರೀತಿ ಪಕ್ಕದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ ಹದಿನೆಂಟು–ಇಪ್ಪತ್ತು ಲಕ್ಷ ರೂಪಾಯಿಗಳನ್ನು ತಿಂದು ಹಾಕಿದ್ದಾರೆ. ಅವರ ಬಗ್ಗೆ ಕೂಡ ಏನೂ ಕ್ರಮ ತಗೆದುಕೊಂಡಿಲ್ಲ ಎಂದು ತಿಳಿದುಬಂದಿದೆ. ಇವರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೀರಾ? ಮೂರನೆಯ ಪ್ರಶ್ನೆ ಕೆಲವು ಕನ್‌ಸ್ಯೂಮರ್ ಕೋ–ಆಪರೇಟೀವ್ ಸೊಸೈಟಿಗಳು ರಿಜಿಸ್ಟರ್ ಆಗಿದ್ದರೂ ಇದುವರೆಗೂ ಏನು ಕೆಲಸ ಮಾಡುತ್ತಿಲ್ಲ. ಕೆಲವು ಕಡೆಯಲ್ಲಿ ಅವು ಎಲೆಕ್ಷನ್ ಟೈಮ್‌ನಲ್ಲಿ ಮಾತ್ರ ಕಾಣಿಸುತ್ತವೆ. ಇಂಥವುದರ ಬಗ್ಗೆ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ?

ಶ್ರೀ ಹೆಚ್. ಏಕಾಂತಯ್ಯ.—ಮಾನ್ಯ ಅಧ್ಯಕ್ಷರೇ. ಎಲ್ಲಾ ಪ್ರಶ್ನೆಗಳಿಗೆ ಉತ್ತರವನ್ನು ನೀಡಿದ್ದೇನೆ. ಎಲ್ಲಿ ದುರುಪಯೋಗ ಆಗಿದೆ ಎಂಬ ಬಗ್ಗೆ ನಿರ್ದಿಷ್ಟವಾದ ಆರೋಪಗಳನ್ನು ಮಾಡಿದರೆ, ಯಾವ–ಯಾವ ಸಹಕಾರ ಸಂಘಗಳಲ್ಲಿ ಕ್ರಮ ತೆಗೆದುಕೊಂಡಿಲ್ಲ ಎಂದು ಹೇಳಿದರೆ ನಾನು ೧೫ ದಿವಸಗಳಲ್ಲಿ ಕ್ರಮ ತೆಗೆದುಕೊಳ್ಳುತ್ತೇನೆ ಎರಡನೆಯದಾಗಿ, ಈ ಸಹಕಾರ ಸಂಘಗಳು ಕೇವಲ ಓಟಿಗಾಗಿ ಮಾಡಿದ್ದಾರೆ, ಇವು

ನಿಷ್ಕ್ರಿಯ ಆಗಿವೆ ಎನ್ನುವ ಮಾತನ್ನೂ ಹೇಳಿದ್ದಾರೆ. ಅಂತಹ ಸಹಕಾರ ಸಂಘಗಳನ್ನು ನನ್ನ ಗಮನಕ್ಕೆ ತಂದರೆ ಅವುಗಳ ರಿಜಿಸ್ಟ್ರೇಷನ್ ರದ್ದು ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಗೋಪಾಲ ಮುಕುಂದ ಕಾನಡೆ.— ಮಾನ್ಯ ಅಧ್ಯಕ್ಷರೇ, ಸಹಕಾರ ಸಂಘಗಳ ವಿಷಯವಾಗಿ ಮಾನ್ಯ ಮಂತ್ರಿಗಳು ಬಹಳ ಚೆನ್ನಾಗಿ ಹೇಳಿದ್ದಾರೆ. ಪ್ರೂಫ್ ಕೊಡಬೇಕು ಎಂದು ಹೇಳಿದ್ದಾರೆ. ಒಂದೇ ಒಂದು ಕೊಡುತ್ತೇನೆ, ಶ್ರೀರಾಮಪುರದ ಜಿಲ್ಲಾ ಸಹಕಾರ ಬ್ಯಾಂಕ್‌ನಲ್ಲಿ ಒಬ್ಬರು ಅಧ್ಯಕ್ಷರು ಇದ್ದಾರೆ. ಇವರು ಕೆ.ಇ.ಬಿ.ಯಲ್ಲಿ ಕೆಲಸ ಮಾಡುತ್ತಿದ್ದಾರೆ. ಶ್ರೀರಾಮಪುರ ಜಿಲ್ಲಾ ಸಹಕಾರ ಬ್ಯಾಂಕ್‌ನಲ್ಲಿ ಅಧ್ಯಕ್ಷರಾಗ ಬೇಕಾದರೆ ಕೆ.ಇ.ಬಿ.ಯವರು ಪರ್ಮಿಷನ್ ಕೊಟ್ಟಿದ್ದಾರೆ. ನಿಮ್ಮ ಇಲಾಖೆಯವರು ಅವರ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಿದ್ದಾರೆ. ಮೊಕದ್ದಮೆ ನಂ. ಸಿಸಿಸಿ ನಂ. ೯೮೭–೮೮ ಎಂ.ಎಂ. ೧೧೧ ಕೋಡ್‌ನಲ್ಲಿ, ಇದರಲ್ಲಿ ಇಂತಹ ಭ್ರಷ್ಟಾಚಾರದ ಆಪಾದನೆಗಳು ಇದ್ದಾಗ ಅವರನ್ನು ಇನ್ನೂ ಅಧ್ಯಕ್ಷರಾಗಿ ಮುಂದುವರಿಸುವುದಕ್ಕೆ ಕಾರಣ ಏನು.

ಶ್ರೀ ಹೆಚ್. ಏಕಾಂತಯ್ಯ.—ವಿವರಣೆಯನ್ನು ಕೊಟ್ಟರೆ ಅದರ ಮೇಲೆ ಪರಿಶೀಲನೆ ಮಾಡುತ್ತೇನೆ. ಕೇವಲ ದಾವೆ ಹಾಕಿದ ಮಾತ್ರಕ್ಕೆ ಅವರನ್ನು ಅಧ್ಯಕ್ಷ ಸ್ಥಾನದಿಂದ ತೆಗೆಯುವುದಕ್ಕೆ ಬರುವುದಿಲ್ಲ. ಇದಕ್ಕೆ ಕಾನೂನು ಇದ್ದರೆ ನನ್ನದು ತಕರಾರು ಏನೂ ಇಲ್ಲ. ಆದರೆ ಕ್ರಿಮಿನಲ್ ಮೊಕದ್ದಮೆಯಾಗಲೀ ಅಥವಾ ದಾವೆಯಾಗಲೀ ಇತ್ಯರ್ಥ ಆಗುವವರೆಗೆ ನಾವು ಅವರನ್ನು ಆರೋಪಿ ಎಂದು ಪರಿಗಣಿಸಿ ಅನರ್ಹರನ್ನಾಗಿ ಮಾಡುವುದಕ್ಕೆ ಸಾಧ್ಯವಿಲ್ಲ. ಒಂದು ವೇಳೆ ಮಿಸ್ ಕಾಂಡಕ್ಟ್ ಎಂದು ಪರಿಗಣಿಸಿ ಅನರ್ಹರನ್ನಾಗಿ ತೆಗೆಸುವುದಕ್ಕೆ ಸಾಧ್ಯ ಆದರೆ, ಅನರ್ಹರೆಂದು ತೆಗೆಸಲು ಸಂಬಂಧಪಟ್ಟವರಿಗೆ ನಾನು ಸೂಚನೆ ಕೊಡುತ್ತೇನೆ.

ಶ್ರೀ ಆರ್. ಎನ್. ನಾಯಕ್.— ನೀವು ಏನು ಮಾಡಬೇಕಾಗಿಲ್ಲ. ಕಾನೂನು ಪ್ರಕಾರ ಕಾನೂನು ಬದ್ಧವಾಗಿ ಆತ ಕ್ರಿಮಿನಲ್ ಕೇಸ್‌ನಲ್ಲಿ ಆರೋಪಿ ಎಂದು ಪರಿಗಣನೆ ಆದರೆ ಆತನನ್ನು ಇಟ್ಟುಕೊಳ್ಳುವುದಕ್ಕೆ ಆಗುವುದಿಲ್ಲ, ಅವನೇ ಹೋಗುತ್ತಾನೆ, ಏನು ಕಥೆ ಹೇಳುತ್ತಿದ್ದೀರಾ ? ಆತ ನಿಮ್ಮ ಅಧಿಕಾರಿ, ಏನು ಮಾಡುತ್ತೀರಿ ಎಂದು ಹೇಳಿ ?

ಶ್ರೀ ಹೆಚ್. ಏಕಾಂತಯ್ಯ.— ಕ್ರಿಮಿನಲ್ ಕೇಸ್ ಆದ ತಕ್ಷಣ ಅವರನ್ನು ಅಧ್ಯಕ್ಷ ಪದವಿಯಿಂದ ಪದಚ್ಯುತಿ ಮಾಡುವುದಕ್ಕೆ ಸಾಧ್ಯವಿಲ್ಲವೆಂಬ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ಆರ್. ಎನ್. ನಾಯಕ್.— ಕೆಲವಾರು ಸಂದರ್ಭದಲ್ಲಿ ಕೇಸ್ ಇಲ್ಲದವರನ್ನು ಸಸ್ಪೆಂಡ್ ಮಾಡುತ್ತೀರಿ. ಇವರ ಮೇಲೆ ಕೇಸ್ ಇದ್ದರೂ ಸಹ ಇವರನ್ನು ಬೆಳೆಸಿದ್ದೀರಿ. ನೋಡಿ ನಿಮ್ಮ ನೀತಿ ಹೇಗೆ ಇದೆ, ಇದೇ ನಿಮ್ಮ ನೀತಿ ಇದ್ದರೆ ನಾವು ಒಪ್ಪಿಕೊಳ್ಳುತ್ತೇವೆ.

ಶ್ರೀ ಎಚ್. ಏಕಾಂತಯ್ಯ.— ಇದು ಹುರುಳಿಲ್ಲದ ಆರೋಪ ಆಗಿದೆ.

ಅಧ್ಯಕ್ಷರು.— ಮಾನ್ಯ ರೇವಣ ಸಿದ್ದಯ್ಯನವರೇ, ಮಾತನಾಡಿ.

ಶ್ರೀ ಗೋಪಾಲ ಮುಕುಂದ ಕಾನಡೆ.— ಮಾನ್ಯ ಅಧ್ಯಕ್ಷರೇ, ಮತ್ತೆ ಮುಂದೆ ಹೋಗುತ್ತೀರಿ. ನನಗೆ ಸರಿಯಾದ ಉತ್ತರ ಬೇಡವೆ ?

ಅಧ್ಯಕ್ಷರು.— ನಿಮಗೆ ಬೇಕಾದ ಉತ್ತರ ಕೊಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಗೋಪಾಲ ಮುಕುಂದ ಕಾನಡೆ.— ನಾನು ಕೇಳುವುದು, ಏಕೆಂದರೆ ಇಷ್ಟೇ, ತಮ್ಮ ಮೂಲಕ ನನ್ನ ವಿನಂತಿ, ಆಪಾದನೆಗಳು ಇದ್ದರೆ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ್ದರು. ಅದನ್ನೇ ನಾನು ಕಾಯುತ್ತಿದ್ದೆ, ಒಂದು ಕೇಸನ್ನು ಕೊಟ್ಟಿದ್ದೇನೆ. ನಿಮಗೆ ಸಂಬಂಧಪಟ್ಟ ಅಧಿಕಾರಿಗಳು ಇಲ್ಲೇ ಇದ್ದಾರೆ, ಕೇಸ್ ಆಗಿದೆಯೋ ಅಥವಾ ಇಲ್ಲವೋ ಕೇಳಿ ಹೇಳಿ ಸಾಕು.

ಶ್ರೀ ಹೆಚ್. ಏಕಾಂತಯ್ಯ.— ಶ್ರೀರಾಮಪುರ ಬ್ಯಾಂಕ್ ಎಂದು ಹೇಳಿದ್ದಾರೆ, ಯಾವ ಊರಿನದು ಎಂದು ಬರೆದು ಕಳಿಸಲಿ. ಅದನ್ನು ಖಂಡಿತ ಮಾಡುತ್ತೇನೆ.

ಅಧ್ಯಕ್ಷರು.— ಯಾವ ಊರು, ಯಾವ ತಾಲ್ಲೂಕು ಎಂದು ಬರೆದು ಕಳಿಸಿ.

ಶ್ರೀ ಗೋಪಾಲ ಮುಕುಂದ ಕಾನಡೆ.— ಅದು ನಿಮ್ಮ ಹತ್ತಿರವೇ ಇದೆ.

ಶ್ರೀ ಎಚ್. ಏಕಾಂತಯ್ಯ.— ಬಂದಿದ್ದರೆ ಅದನ್ನು ನೋಡುತ್ತೇನೆ,

ಶ್ರೀ ರೇವಣಸಿದ್ಧಯ್ಯ.— ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಸಹಕಾರ ಇಲಾಖೆಯ ಮೇಲೆ ಸಮರ್ಪಕವಾದ ಉತ್ತರ ಕೊಟ್ಟಿದ್ದಾರೆ. ಒಂದು ವಿಷಯ ಈಗಾಗಲೇ ಮಾನ್ಯ ಸ್ನೇಹಿತರುಗಳು ಕೇಳಿದ್ದಾರೆ. ಕೃಷಿ ಮೇಲಿನ ಬಡ್ಡಿಯನ್ನು ಜೂನ್‌ವರೆಗೆ ಕೊಟ್ಟಿದ್ದೀರಾ ಎಂದು ಹೇಳಿದ್ದಕ್ಕೆ ಸಚಿವರು ಹೇಳುತ್ತಾರೆ. ನಾವು ೬೨ ಕೋಟಿ ರೂಪಾಯಿ ಕೊಟ್ಟಿದ್ದೇವೆ. ಇನ್ನು ೧ ಅಥವಾ ಎರಡು ಕೋಟಿ ರೂಪಾಯಿ ಕೊಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದ್ದಾರೆ. ಏನೋ ಒಂದೆರಡು ಕೋಟಿ ಕೊಡುವುದಕ್ಕೆ ಆಗುವುದಿಲ್ಲ ಎಂಬ ಮಾತನ್ನು ಹೇಳಿದ್ದಾರೆ ೬೨ ಕೋಟಿ ರೂಪಾಯಿಗಳನ್ನು ಕೊಟ್ಟಿರುವುದು ೧೦೦ ಕುಟುಂಬಗಳಿಗೆ ಅಲ್ಲ. ಲಕ್ಷಾಂತರ ಕುಟುಂಬಗಳಿಗೆ ಕೊಟ್ಟಿದ್ದೀರಿ ಎಂಬುದನ್ನು ಜ್ಞಾಪಕದಲ್ಲಿ ಇಟ್ಟುಕೊಳ್ಳಬೇಕು. ರೈತರು ಸ್ವಲ್ಪ ಜನರು ಇಲ್ಲ, ಬಹಳಷ್ಟು ಜನ ಇದ್ದಾರೆ. ನೀವು ಈಗ ಕೊಟ್ಟಿರುವುದು ೭೫ ಪರ್ಸೆಂಟ್ ಮಾತ್ರ. ಕೊಟ್ಟಿರುವ ಜನ ಏನು ಇದ್ದಾರೆ ಅವರು ಅನುಕೂಲ ಇರುವವರು ಅಂತಹವರುಗಳಿಗೆ ಕೊಟ್ಟಿದ್ದೀರಿ. ಸರ್ಕಾರ ಹೇಳಿದ ಗಡುವು ಮೀರಿದೆ, ಎಂದು ಹೇಳುತ್ತೀರಿ. ಆದರೆ ಸರ್ಕಾರ ಹೇಳಿದ ಗಡುವು ಇನ್ನೂ ಮೀರಿಲ್ಲ. ಗವರ್ನರ್‌ರ್ಸ್ ಕೈಯಲ್ಲಿ ಹೇಳಿದ ಗಡುವು ಇದೆ. ಅಕ್ಷರದಲ್ಲಿ, ಬರಹದಲ್ಲಿ ಗಡುವು ಇದೆ. ಇಲ್ಲಿಯವರೆಗೆ ಕೊಡುತ್ತಿದ್ದೀರಿ, ಇನ್ನು ಉಳಿದವರು ಯಾರು ಅಂದರೆ ದುಡ್ಡಿನ ಅನುಕೂಲ ಇಲ್ಲದೇ ಇರುವವರು, ಭೂಮಿಗಳನ್ನು ಮಾರಿ ಹೇಗಾದರೂ ಮಾಡಿ ಕಟ್ಟಿ ಬಿಡಬೇಕು ಎಂದು ನಿಂತಿದ್ದಾರೆ. ಈಗ ನೀವು ಮಾಡುತ್ತಿರುವುದು ೧೦೦ ಜನ ಪಂಕ್ತಿಗೆ ಕುಳಿತಿರುವಾಗ ೮೦ ಜನಕ್ಕೆ ಊಟ ಹಾಕಿ ೨೦ ಜನರನ್ನು ಉಪವಾಸ ಕಳಿಸಿದ ಹಾಗೆ ಇದೆ, ಇದು ಸರಿಯಲ್ಲ, ಸರ್ಕಾರ ಇದನ್ನು ಪುನರ್ ಪರಿಶೀಲನೆ ಮಾಡಬೇಕು. ಇದುವರೆಗೆ ನೀವು ಸಮಯ ಕೊಟ್ಟಿದ್ದೀರಿ. ಆಗ್ರೋ ಇಂಡಸ್ಟ್ರೀಸ್‌ಗೆ ಟ್ರಾಕ್ಟರ್ ಮತ್ತು ಐ.ಪಿ.ಸೆಟ್‌ಗೆ ಸಾಲಕ್ಕೆ ನವೆಂಬರ್‌ವರೆಗೆ ಅವರಿಗೆ ಕೊಟ್ಟಿದ್ದೀರಿ. ಬಡ್ಡಿ ರಿಯಾಯಿತಿಯನ್ನು ಟ್ರಾಕ್ಟರ್ ಸಾಲ, ಐ.ಪಿ.ಸೆಟ್ ಕೊಳ್ಳಲು ಸಾಲಗಳಿಗೆ ಕೊಟ್ಟಿರುವಾಗ. ಈ ಒಂದು ಸಣ್ಣ ಸಾಲಕ್ಕೆ ಒಂದು ತಿಂಗಳ ಗಡುವು ಅದೂ ಒಂದು ತಿಂಗಳು ಅಲ್ಲ, ೨೦ ದಿನಗಳ ಗಡುವು ಕೊಡತಕ್ಕದ್ದು ಒಳ್ಳೆಯದು. ಈಗ ಮಾನ್ಯ ಏಕಾಂತಯ್ಯನವರು ಯಾವ ಮೂಡ್‌ನಲ್ಲಿ ಹೇಳಿದ್ದಾರೆ, ಅದು ಸಾಧ್ಯ ಆಗಲಿಕ್ಕಿಲ್ಲ ಎಂದು ದಯವಿಟ್ಟು ತಮ್ಮ ಮುಖಾಂತರ ಮಾನ್ಯ ಸಚಿವರನ್ನು ಕೇಳುತ್ತಿದ್ದೇನೆ, ಸರ್ಕಾರದವರು ಕೊಟ್ಟಿರುವ ಗಡುವು ಮತ್ತೊಮ್ಮೆ ಜೂನ್‌ವರೆಗೆ ಖಂಡಿತವಾಗಿ ಕೊಡಬೇಕೆಂದು ಒತ್ತಾಯ ಪೂರ್ವಕವಾಗಿ ತಮ್ಮ ಮುಖಾಂತರ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎಚ್. ಏಕಾಂತಯ್ಯ.—ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ನಾನು ಅನೇಕ ಸಂದರ್ಭಗಳಲ್ಲಿ ಹೇಳಿದ್ದೆನೆ. ಈಗ ಜಾರಿಯಲ್ಲಿರುವಂತಹ ಆದೇಶದ ಅವಧಿ ಪೂರ್ಣಗೊಂಡಿದೆ. ಈ ಅವಧಿಯನ್ನು ಪುನಃ ೩೦-೬-೧೯೮೮ರವರೆಗೆ ಹೆಚ್ಚಿಸಲು ಸಾಧ್ಯವಾಗುವುದಿಲ್ಲವೆಂಬ ಮಾತನ್ನು ಇಲ್ಲಿ ಅನೇಕ ಸಲ ಹೇಳಿದ್ದೇನೆ. ಅಂದರೆ ಇದರ ಅರ್ಥ ರೈತರಿಗೆ ಸಹಾಯ ಮಾಡಬಾರದು ಎಂದು ಅಲ್ಲ, ನಾವು ರೈತರಿಗೆ ಸಹಾಯ ಮಾಡಬೇಕೆಂಬ ಉದ್ದೇಶ ಇಟ್ಟುಕೊಂಡೇ ಸುಮಾರು ೧೩೦ ಕೋಟಿ ರೂಪಾಯಿಗಳಷ್ಟು ರಿಯಾಯಿತಿಯನ್ನು ಕೊಡುವಂತಹ ಒಂದು ಕೆಲಸವನ್ನು ನಾವು ಮಾಡಿದ್ದೇವೆ, ಇಂತಹ ಒಂದು ತೀರ್ಮಾನವನ್ನು ನಾವು ನಮ್ಮ ಪಕ್ಷದಲ್ಲಿ ತೆಗೆದುಕೊಂಡಿದ್ದೇವೆ, ಈ ೧೩೦ ಕೋಟಿ ರೂಪಾಯಿಗಳ ರಿಯಾಯಿತಿ ಜೊತೆಗೆ ಇನ್ನೂ ಒಂದೆರಡು ಕೋಟಿ ರೂಪಾಯಿಗಳಷ್ಟು ರಿಯಾಯಿತಿಯನ್ನು ಕೊಡಲು ಏತಕ್ಕೆ ಕ್ರಮ ತೆಗೆದುಕೊಳ್ಳಬಾರದೆಂದು ಕೇಳಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ಕಾಲದ ಮಿತಿಯನ್ನು ಮತ್ತೆ ಮತ್ತೆ ವಿಸ್ತರಣೆ ಮಾಡುವಂದಹ ಪ್ರವೃತ್ತಿ ಒಳ್ಳೆಯದಲ್ಲ ಇದು ಸಹಕಾರಿ ಚಳುವಳಿಗೆ ವಿರೋಧ ಆಗಬಹುದೆಂಬ ದೃಷ್ಟಿಯಿಂದ ಈ ರೀತಿಯ ತೀರ್ಮಾನವನ್ನು ನಾವು ತೆಗೆದುಕೊಂಡಿದ್ದೇವೆ.

ಶ್ರೀ ರೇವಣಸಿದ್ಧಯ್ಯ.—ಈ ಒಂದು ಬೇಡಿಕೆಯನ್ನು ನಾವೇ ಮೊದಲು ಸರ್ಕಾರದ ಮುಂದೆ ಮಂಡಿಸಿದ್ದು. ಆದರೆ ಮಾನ್ಯ ಮಂತ್ರಿಗಳು ಸಮಯ ಮುಂದುವರೆಸಲು ಸಾಧ್ಯವಿಲ್ಲವೆಂದು ಹೇಳಿದ್ದಾರೆ. ಆದ್ದರಿಂದ ನಾನು ಇಲ್ಲಿ ಈ ಬಗ್ಗೆ ಮತ್ತೆ ಪ್ರಶ್ನೆ ಕೇಳುವುದಿಲ್ಲ.

ಶ್ರೀ ಪ್ರತಾಪಚಂದ್ರಶೆಟ್ಟಿ.—ನಮ್ಮ ಕುಂದಾಪುರ ಭೂ ಅಭಿವೃದ್ಧಿ ಬ್ಯಾಂಕ್‌ನಲ್ಲಿನ ಇಬ್ಬರು ಸಿಬ್ಬಂದಿಗಳು ಎರಡು ಚೆಕ್‌ಗಳನ್ನು ಕದ್ದು ಬೈಂದೂರಿನಲ್ಲಿ ವಟಾಯಿಸಿದ ಬಗ್ಗೆ ಇಲಾಖೆಯಿಂದ ತನಿಖೆ ಆಗಿದೆ. ತನಿಖೆಯ ನಂತರ ಒಬ್ಬರನ್ನು ಕೆಲಸದಿಂದ ವಜಾ ಮಾಡಲಾಗಿದೆ ಮತ್ತೊಬ್ಬರನ್ನು ಕೆಲಸದಿಂದ ಅಮಾನತುಗೊಳಿಸಿ, ಈಗ ಅದನ್ನು ರದ್ದು ಮಾಡಿದ್ದಾರೆ. ಈ ಇಲಾಖಾ ತನಿಖೆ ವರದಿ

ಕುಂದಾಪುರದ ಭೂ ಅಭಿವೃದ್ಧಿ ಬ್ಯಾಂಕ್‌ಗೆ ಬಾರದೆ ಇರುವ ಸಂದರ್ಭದಲ್ಲಿ ಈ ಇಬ್ಬರು ಸಿಬ್ಬಂದಿಗಳ ಮೇಲೆ ಅವರು ಯಾವ ರೀತಿ ಕ್ರಮ ತೆಗೆದುಕೊಂಡರು ? ಅಲ್ಲದೆ ಈ ಬಗ್ಗೆ ಪೋಲೀಸ್ ಕೇಸ್ ಇನ್ನೂ ಪೂರ್ಣಗೊಳ್ಳದಿರುವಾಗ ಒಬ್ಬರನ್ನು ಕೆಲಸದಿಂದ ವಜಾ ಮಾಡಿದ್ದು ಸರಿಯೇ ಮತ್ತು ಮತ್ತೊಬ್ಬರ ಬಗ್ಗೆ ಅಮಾನತು ಮಾಡಿದ್ದನ್ನು ರದ್ದು ಮಾಡಿದ್ದು ಸರಿಯೇ ? ಈ ರೀತಿ ರದ್ದು ಮಾಡಿದ್ದು ರಾಜಕೀಯ ಪೂರಿತವಾಗಿದೆ ಎಂದು ಆಪಾದನೆ ಮಾಡುತ್ತೇನೆ. ಇದಕ್ಕೆ ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆ ?

ಶ್ರೀ ಎಚ್. ಏಕಾಂತಯ್ಯ.—ಮಾನ್ಯ ಪ್ರತಾಪಚಂದ್ರಶೆಟ್ಟಿ ಅವರು ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್‌ನ ನೌಕರರ ಬಗ್ಗೆ ಹೇಳಿರಬಹುದು. ಈ ಬ್ಯಾಂಕ್‌ನ ನೌಕರರ ನೇಮಕಾತಿ, ಅವರ ವೇತನ ಶ್ರೇಣಿ ನಿಗದಿ ಮಾಡುವುದು, ಹಾಗೂ ಈ ನೌಕರರ ಮೇಲೆ ಶಿಸ್ತಿನ ಕ್ರಮ ಕೈಕೊಳ್ಳುವ ಅಧಿಕಾರ ಕಾಮನ್ ಕೇಡರ್ ಅಥಾರಿಟಿಗೆ ಇದೆ. ಒಂದು ವೇಳೆ ಈ ಇಬ್ಬರು ನೌಕರರು ಈ ಬ್ಯಾಂಕ್‌ನ ನೌಕರರು ಅಲ್ಲದೆ ಕೇಂದ್ರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್‌ನ ನೌಕರರು ಆಗಿದ್ದರೆ ಈ ಬ್ಯಾಂಕ್‌ನ ಅಧಿಕಾರ ವರ್ಗದವರಿಗೆ ಕ್ರಮ ಕೈಕೊಳ್ಳುವ ಅಧಿಕಾರ ಇದೆ. ಇವರು ಏನಾದರೂ ಕಾನೂನು ಪ್ರಕಾರ ಈ ಬಗ್ಗೆ ಕ್ರಮ ತೆಗೆದುಕೊಳ್ಳದಿದ್ದರೆ, ಅವರು ನನ್ನ ಮುಂದೆ ಅಪೀಲು ಹಾಕಿಕೊಳ್ಳುವುದಕ್ಕೆ ಅವಕಾಶ ಇದೆ. ಅವರು ಅಪೀಲು ಮಾಡಿಕೊಂಡರೆ ನಾನು ಅದನ್ನು ಪರಿಶೀಲನೆ ಮಾಡುತ್ತೇನೆ. ಮಾನ್ಯ ಸದಸ್ಯರು ಮತ್ತೊಂದು ಮಾತನ್ನು ಹೇಳಿದರು, ಏನೆಂದರೆ, ಇವರ ಮೇಲಿದ್ದ ಕ್ರಿಮಿನಲ್ ಕೇಸ್ ಇನ್ನೂ ತೀರ್ಮಾನವಾಗದಿದ್ದರೂ ಸಹ ಇಂತಹ ಕ್ರಮ ತೆಗೆದುಕೊಂಡಿರುವುದು ಸರಿಯೇ ಎಂದು? ಇಂತಹ ಪ್ರಕರಣಗಳಲ್ಲಿ ಕ್ರಿಮಿನಲ್ ಕೇಸ್ ತೀರ್ಮಾನವಾದ ಮೇಲೆಯೇ ಕ್ರಮ ತೆಗೆದುಕೊಳ್ಳಬೇಕೆಂಬ ನಿಯಮ ಏನೂ ಇಲ್ಲ. ಇಂತಹ ತಪ್ಪುಗಳನ್ನು ಮಾಡಿದವರ ಮೇಲೆ ಶಿಸ್ತಿನ ಕ್ರಮ ಕೈಕೊಳ್ಳುವಂತಹ ಅಧಿಕಾರ ಸಂಬಂಧಪಟ್ಟ ಬ್ಯಾಂಕ್‌ನವರಿಗೆ ನಿಯಮಗಳ ಪ್ರಕಾರ ಇದೆ. ಆದ್ದರಿಂದ ಅವರು ಕ್ರಮ ಕೈಕೊಂಡಿರಬಹುದು. ಅವರು ಕೈಕೊಂಡ ಕ್ರಮ ಸರಿ ಇಲ್ಲದಿದ್ದರೆ ಆ ಬಗ್ಗೆ ನನ್ನ ಬಳಿ ಅಪೀಲ್ ಮಾಡಿಕೊಳ್ಳಬಹುದು. ಆಗ ನಾನು ಈ ಬಗ್ಗೆ ಕ್ರಮ ಕೈಕೊಳ್ಳುತ್ತೇನೆ.

ಶ್ರೀ ಡಿ.ಟಿ. ಜಯಕುಮಾರ್.—ಮಾನ್ಯ ಅಧ್ಯಕ್ಷರೇ, ಈ ಮೊದಲು ಎಸ್.ಸಿ. ಮತ್ತು ಎಸ್.ಟಿ. ಫಾರ್ಮರ್ಸ್ ಅಸೋಸಿಯೇಷನ್ ಅವರಿಗೆ ವಿಶೇಷವಾದಂಥ ಸಾಲ ಕೊಡುವ ವ್ಯವಸ್ಥೆ ಇತ್ತು. ಆದರೆ ಈಗ ಅದನ್ನು ನಿಲ್ಲಿಸಿದ್ದಾರೆ. ಬೇರೆ ರೈತರ ಸಾಲವನ್ನು ಮನ್ನಾ ಮಾಡಿರುವಂತೆ ಇವರಿಗೆ ಕೊಟ್ಟ ಸಾಲವನ್ನು ಸಹ ಏತಕ್ಕೆ ಮನ್ನಾ ಮಾಡಬಾರದು ಮತ್ತು ಈ ಮೊದಲು ಇವರಿಗೆ ಕೊಡುತ್ತಿದ್ದ ವಿಶೇಷವಾದಂಥ ಸಾಲವನ್ನು ಮತ್ತೆ ಮುಂದುವರೆಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಏಕಾಂತಯ್ಯ.—ಮಾನ್ಯ ಜಯಕುಮಾರ್ ಅವರು ಹೇಳಿದಂಥ ರೀತಿಯಲ್ಲಿ ಎಸ್.ಸಿ ಮತ್ತು ಎಸ್.ಟಿ. ಫಾರ್ಮರ್ಸ್ ಅಸೋಸಿಯೇಷನ್ ಎಂಬುದು ಇಲ್ಲ. ಫಾರ್ಮಿಂಗ್ ಕೋಆಪರೇಟಿವ್ ಸೊಸೈಟಿ ಎಂದು ಇರಬಹುದು. ಈ ಬೇಸಾಯ ಸಹಕಾರ ಸಂಘಗಳ ಬಗ್ಗೆ ನಾನು ಉತ್ತರ ಕೊಡುವಾಗ ಹೇಳಿದ್ದೇನೆ. ಈ ಸಹಕಾರ ಸಂಘಗಳು ಸರ್ಕಾರದಿಂದ ಮತ್ತು ಇನ್ನಿತರ ಬೇರೆ ಬೇರೆ ಸಂಘ ಸಂಸ್ಥೆಗಳಿಂದ ಪಡೆದಂಥ ಸಾಲವನ್ನು ವಾಪಸ್ ಕೊಡದಿರಬಹುದು. ಇಂತಹ ಕೆಲವು ಸೊಸೈಟಿಗಳು ಕೆಲಸ ಮಾಡದೆ ನಿಷ್ಕ್ರಿಯವಾಗಿವೆ, ಮತ್ತೆ ಕೆಲವು ಸಮಾಪನಸ್ಥಿತಿಗೆ ಬಂದಿವೆ. ಇಂತಹ ಸೊಸೈಟಿಗಳನ್ನು ಪುನಶ್ಚೇತನಗೊಳಿಸುವುದಕ್ಕೆ ಯಾವ ರೀತಿ ಸಹಾಯ ಮಾಡುವುದಕ್ಕೆ ಸಾಧ್ಯ ಎಂಬುದನ್ನು ಸರ್ಕಾರ ಪರಿಶೀಲನೆ ಮಾಡುತ್ತದೆ ಮತ್ತು ಇಂತಹ ಸೊಸೈಟಿಗಳಿಗೆ ಸಾಧ್ಯವಾದಷ್ಟು ಸಹಾಯ ಮಾಡುವಂತಹ ವ್ಯವಸ್ಥೆಯನ್ನು ಸರ್ಕಾರ ಮಾಡುತ್ತದೆ.

ಶ್ರೀ ಪಟಮಕ್ಕಿ ರತ್ನಾಕರ್.—ಮಾನ್ಯ ಅಧ್ಯಕ್ಷರೇ, ಈ ಮೊದಲು ಜನರು ಈ ಸಹಕಾರಿ ತತ್ವ ಮತ್ತು ಇದರ ಚಳುವಳಿಯಲ್ಲಿ ಸಾಕಷ್ಟು ನಂಬಿಕೆಯನ್ನು ಇಟ್ಟುಕೊಂಡಿದ್ದರು, ಆದರೆ ಈಗ ಅದು ಇಲ್ಲದಂತೆ ಆಗಿದೆ, ಈ ಕಾರಣದಿಂದ ಇದಕ್ಕೆ ಒಂದು ಹೊಸ ರೂಪ ಕೊಡಬೇಕು ಮತ್ತು ಇದಕ್ಕೆ ಕಾಯಕಲ್ಪ ಮಾಡಬೇಕು ಎಂದು ಕೊಂಡು ಸರ್ಕಾರದವರು ಶ್ರೀ ಕೆ.ಎಚ್. ಪಾಟೀಲ್ ಅವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ನೇಮಕ ಮಾಡಿದರು. ಈ ಸಮಿತಿಯವರು ತಮ್ಮ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ ಮೇಲೆ ಅವರು ಮಾಡಿದ್ದ ಶಿಫಾರಸ್‌ಗಳ ಆಧಾರದ ಮೇಲೆ ಕೆಲವೊಂದು ಮಾರ್ಪಾಡುಗಳನ್ನು ಮಾಡಬಹುದಾಗಿತ್ತು. ಆದರೆ ಅದಕ್ಕೆ ಬದಲು ಈಗ ಹೊಸ ಒಂದು ಸಮಿತಿ

ಯನ್ನು ರಚನೆ ಮಾಡಿದ್ದಾರೆ. ಇದನ್ನು ಯಾವ ಉದ್ದೇಶಕ್ಕಾಗಿ ರಚನೆ ಮಾಡಿದ್ದೀರಿ ಮಾನ್ಯ ಪಾಟೀಲ್ ಅವರ ಸಮಿತಿ ಕೊಟ್ಟ ವರದಿಯಲ್ಲಿ ಏನಾದರು ತಪ್ಪುಗಳು ಅಥವಾ ನ್ಯೂನತೆಗಳು ಇದ್ದವೇ ಎಂದು ಕೇಳುವುದಕ್ಕೆ ಇಷ್ಟಪಡುತ್ತಿದ್ದೇನೆ.

ಇನ್ನು ಎರಡನೆಯದಾಗಿ ಪ್ರಾಥಮಿಕ ಸಹಕಾರ ಸಂಘಗಳು ಡಿ.ಸಿ.ಸಿ. ಬ್ಯಾಂಕ್‌ಗಳಿಗೆ ಸಾಲದ ಹಣವನ್ನು ಮರುಪಾವತಿ ಮಾಡದಿದ್ದರೆ ಮತ್ತು ಅವು ಈ ಕಾರಣದಿಂದ ಡಿಫಾಲ್ಟ್ ಆದರೆ ಮತ್ತೆ ಅವುಗಳಿಗೆ ಸಾಲ ಮಂಜೂರು ಮಾಡುವ ಅಧಿಕಾರ ಇರುವುದಿಲ್ಲ. ಇದರಿಂದ ರೈತರ ಪೈಕಿ ಯಾರು ಯಾರು ಸಮಯಕ್ಕೆ ಸರಿಯಾಗಿ ಪ್ರಾಮಾಣಿಕವಾಗಿ ಸಾಲದ ಹಣವನ್ನು ಮರುಪಾವತಿ ಮಾಡಿರುತ್ತಾರೆ, ಅಂತಹವರಿಗೆ ಹೊಸ ಸಾಲ ತೆಗೆದುಕೊಳ್ಳುವ ಸೌಲಭ್ಯ ತಪ್ಪಿಹೋಗುತ್ತದೆ. ಇಂತಹ ರೈತರಿಗೆ ಮತ್ತೆ ಸಾಲ ಕೊಡುವಂತ ವ್ಯವಸ್ಥೆ ಆಗಬೇಕು. ಯಾರು ಸಾಲ ಮರುಪಾವತಿ ಮಾಡಿಲ್ಲ ಅಂತಹವರಿಗೆ ಮತ್ತೆ ಸಾಲ ಕೊಡದಿದ್ದರೂ ಸಹ ಸಾಲ ಮರುಪಾವತಿ ಮಾಡಿದವರಿಗೆ ಏತಕ್ಕೆ ಮತ್ತೆ ಸಾಲ ಕೊಡುವ ವ್ಯವಸ್ಥೆಯನ್ನು ಜಾರಿಗೆ ತರಬಾರದು ?

೧೨-೦೦ ಮಧ್ಯಾಹ್ನ

ಶ್ರೀ ಹೆಚ್. ಏಕಾಂತಯ್ಯ.—ಮಾನ್ಯ ಅಧ್ಯಕ್ಷರೆ. ಅದು ಸರಿಯಿಲ್ಲ. ಮೊದಲನೆಯದಾಗಿ, ಕೆ. ಹೆಚ್. ಪಾಟೀಲರ ವರದಿ ಏನಿದೆ ಅದನ್ನು ನಾವು ತಿರಸ್ಕಾರ ಮಾಡಿದ್ದೇವೆ. ಎನ್ನುವ ಮಾತನ್ನು ಹೇಳಿದ್ದಾರೆ, ಅದನ್ನು ನಾವು ಒಪ್ಪಿಕೊಂಡಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಅದು ಸರಿಯಲ್ಲ. ಸಹಕಾರ ಕ್ಷೇತ್ರದಲ್ಲಿ ಜನಗಳಿಗೆ ವಿಶ್ವಾಸ ಕಳೆದು ಹೋಗಿದೆ ಎಂದು ಹೇಳಿದ್ದಾರೆ, ಕಳೆದು ಹೋಗಿದೆ ಎನ್ನುವುದನ್ನು ನಾನು ನಂಬುವುದಿಲ್ಲ, ಕಡಿಮೆಯಾಗಿರಬಹುದು ಅಷ್ಟೆ. ಇವತ್ತಿನದಿವಸ ಆ ವಿಶ್ವಾಸವನ್ನು ಹೆಚ್ಚಿಸುವಂಥ ರೀತಿಯಲ್ಲಿ ಮಾನ್ಯ ಕೆ. ಹೆಚ್. ಪಾಟೀಲರು ಏನು ಹೇಳಿದ್ದಾರೆ ಆ ವಿಚಾರಗಳನ್ನೂ ಸಹ ಗಮನದಲ್ಲಿಟ್ಟುಕೊಂಡು ಅಥವಾ ಬೇರೆ ಬೇರೆ ಕಮೀಷನ್‌ಗಳ, ಸಮಿತಿಗಳ ವರದಿಗಳು ಇರಬಹುದು ಆ ಎಲ್ಲಾ ವರದಿಗಳನ್ನು ಗಮನದಲ್ಲಿಟ್ಟುಕೊಂಡು ಜನ ತಂತ್ರೀಕರಣದ ಬಗ್ಗೆ ಅವರು ಹೇಳಿದಂಥ ಮಾತುಗಳನ್ನೂ ಸಹ ಗಮನದಲ್ಲಿಟ್ಟುಕೊಂಡು, ಹೊಸದಾಗಿ ಒಂದು ವರದಿ ಕೊಡಲಿಕ್ಕೆ ಹೇಳಿದ್ದೇವೆ. ಆ ವರದಿ ಬಂದಮೇಲೆ ಸರ್ಕಾರ ಕಾರ್ಯಕ್ರಮ ತೆಗೆದುಕೊಳ್ಳುತ್ತದೆ. ಅವರು ಮತ್ತೊಂದು ಮಾತನ್ನು ಹೇಳಿದ್ದಾರೆ. ಯಾರು ಸಾಲವನ್ನು ತೆಗೆದುಕೊಂಡು ಮರುಪಾವತಿ ಮಾಡಿದ್ದಾರೆ, ಆ ರೀತಿ ಮರುಪಾವತಿ ಮಾಡಿದವರಿಗೆ ನೀವು ಹಣ ಕೊಡುತ್ತಾ ಇಲ್ಲ, ಅದಕ್ಕೆ ಬದಲಾಗಿ ಬೇರೆಯವರಿಗೆ ಕೊಡತಕ್ಕ ಸಂಧರ್ಭ ಇದೆ ಎಂದು ಹೇಳಿದ್ದಾರೆ. ಯಾವುದೇ ಸಂದರ್ಭದಲ್ಲೂ ಯಾರು ಸಾಲವನ್ನು ಪಾವತಿ ಮಾಡಿದ್ದಾರೋ ಅವರಿಗೆ ಆದ್ಯತೆ ಮೇಲೆ ಸಾಲ ಕೊಟ್ಟು ಉಳಿದವರಿಗೆ ಸಾಲ ಕೊಡುವಂಥ...

ಶ್ರೀ ಪಟವಾಕ್ಕಿ ರತ್ನಾಕರ್.—ಸಹಕಾರಿ ಸಂಘ ಜಿಲ್ಲಾ ಬ್ಯಾಂಕಿಗೆ ಡಿಫಾಲ್ಟ್ ಆದರೆ ಆ ಸಂಘಕ್ಕೆ ಜಿಲ್ಲಾ ಬ್ಯಾಂಕು ಸಾಲ ಮಂಜೂರಾತಿ ಮಾಡುವುದಿಲ್ಲ.

ಶ್ರೀ ಹೆಚ್. ಏಕಾಂತಯ್ಯ.—ಅದು ಸರಿಯಿಲ್ಲ. ಯಾವುದೇ ಸಹಕಾರ ಸಂಘ ಪೂರ್ತಿಯಾಗಿ ಹಣ ಕೊಡದೇ ಡಿಫಾಲ್ಟ್ ಆಗಿದ್ದರೂ ಯಾರು ಹಣವನ್ನು ಕೊಟ್ಟಿದ್ದಾರೆ ಅವರಿಗೆ ಹಣವನ್ನು ವಾಪಸ್ ಕೊಡಿಸುವಂಥ ವ್ಯವಸ್ಥೆ ಮಾಡುತ್ತೇನೆ. ಅಂತಹ ಸಂದರ್ಭ ಇದ್ದರೆ ಹೇಳಿ ಸಾಲ ಕೊಡಿಸುವ ಜವಾಬ್ದಾರಿ ನಾನು ತೆಗೆದುಕೊಳ್ಳುತ್ತೇನೆ.

ಶ್ರೀ ಕೆ. ವಸಂತ ಬಂಗೇರ.—ಸನ್ಮಾನ್ಯ ಅಧ್ಯಕ್ಷರೆ, ಹಣ ದುರುಪಯೋಗ ಮಾಡಿದ ಒಟ್ಟು ಸಹಕಾರ ಸಂಘಗಳು ಎಷ್ಟು, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಣ ದುರುಪಯೋಗ ಮಾಡಿದ ಸಹಕಾರ ಸಂಘಗಳು ಎಷ್ಟು, ಹಣ ದುರುಪಯೋಗ ಮಾಡಿದವರ ಮೇಲೆ ಏನು ಕ್ರಮ ಕೈಗೊಂಡಿದ್ದೀರಿ. ಬೆಳ್ತಂಗಡಿ ನನ್ನ ಕ್ಷೇತ್ರದಲ್ಲಿ ಕೊಯ್ಯೂರು ಸೇವಾ ಸಹಕಾರಿ ಸಂಘ ಇದೆ. ಈ ಸಹಕಾರ ಸಂಘದಲ್ಲಿ ಸುಮಾರು ಹಣ ದುರುಪಯೋಗವಾಗಿದೆ, ಅಲ್ಲಿ ಮೂರೂವರೆ ಲಕ್ಷ ರೂಪಾಯಿ ಕೃಷಿ ಕೂಲಿ ಕಾರ್ಮಿಕರ ಸಹಿ ಹಾಗೂ ಹೆಬೆಟ್ಟನ್ನು ಫೋರ್ಜರಿ ಮಾಡಿ ಸಾಲ ಪಡೆದಿದ್ದಾರೆ. ಈಗ ನೀವು ಬಡ್ಡಿ ರಿಯಾಯಿತಿ ಮಾಡಿದ್ದೀರಿ, ಹೆಚ್ಚಿನ ಸಾಲ ಕೊಟ್ಟಿದ್ದಾರೆ. ಕೃಷಿ ಕೂಲಿ ಕಾರ್ಮಿಕರು

ಏನಿದ್ದಾರೆ ಅವರ ಮೇಲೆ ಮೂರೂವರೆ ಲಕ್ಷ ರೂಪಾಯಿಗಳ ಸಾಲ ಇದೆ, ಈ ಫೋರ್ಜರಿ ಮಾಡಿದ ಸಾಲವನ್ನು ಮನ್ನಾ ಮಾಡುತ್ತೀರಾ ? ನನ್ನ ಕ್ಷೇತ್ರದಲ್ಲಿ ಗುರುವಾಯನಕೆರೆ ಮಹಿಳಾ ಗ್ರಾಹಕರ ಸೇವಾ ಸಹಕಾರಿ ಸಂಘ ಇದೆ, ನಮ್ಮ ಪುತ್ತೂರಿಗೆ ಒಬ್ಬ ಅಸಿಸ್ಟೆಂಟ್ ರಿಜಿಸ್ಟ್ರಾರ್ ಬಂದಿದ್ದಾರೆ. ಅವರು ಪುತ್ತೂರಿಗೆ ಯಾವಾಗ ಬಂದರೋ ಆಗಿನಿಂದ ಪುತ್ತೂರು ವಿಭಾಗದ ಸಹಕಾರ ಸಂಘಗಳಿಗೆ ಗ್ರಹಚಾರ ಹಿಡಿಯಿತು. ಈ ಪ್ರಾಮಾಣಿಕ ಅಧಿಕಾರಿ, ಪ್ರಾಮಾಣಿಕವಾದ ರೀತಿಯಲ್ಲಿ ಸಹಕಾರ ಸಂಘಗಳನ್ನು ನಿರ್ನಾಮ ಮಾಡಲಿಕ್ಕೆ ಪ್ರಯತ್ನ ಮಾಡುತ್ತಾ ಇದ್ದಾರೆ. ಈ ಮಹಿಳಾ ಗ್ರಾಹಕರ ಸಹಕಾರ ಸಂಘ ಸುಮಾರು ಮೂರು ವರ್ಷಗಳ ಹಿಂದೆ ಮತ್ತೊಂದು ಕಡೆ ಬ್ರಾಂಚನ್ನು ಪ್ರಾರಂಭ ಮಾಡಿದೆ. ಈ ಬ್ರಾಂಚ್ ಪ್ರಾರಂಭವಾದ ಮೇಲೆ ಒಂದೂವರೆ ವರ್ಷದ ನಂತರ ಬೆಳ್ತಂಗಡಿ ಸಿ. ಎ. ಬ್ಯಾಂಕ್‌ನವರು ಅದೇ ವ್ಯವಹಾರವನ್ನು ಮಾಡುವಂಥ ಮತ್ತೊಂದು ಬ್ರಾಂಚನ್ನು ತೆರೆದರು ಈ ಎರಡಕ್ಕೂ ಪುತ್ತೂರಿನ ಎ. ಆರ್ ಅವರು ಅನುಮತಿ ಕೊಟ್ಟಿದ್ದಾರೆ. ಈ ಎರಡು ಸಹಕಾರ ಸಂಘಗಳು ಒಂದೇ ಸ್ಥಳದಲ್ಲಿ ಒಂದೇ ವ್ಯವಹಾರವನ್ನು ಮಾಡಬಾರದು ಎಂದು ನಿಯಮ ಇದೆ. ಈಪ್ರಕಾರ ಈಗಾಗಲೇ ನಾವು ಮಾನ್ಯ ಸಚಿವರಿಗೆ ಅರ್ಜಿಯನ್ನು ಸಲ್ಲಿಸಿದ್ದೇವೆ, ಒಂದೂವರೆ ವರ್ಷದ ನಂತರ ತೆರೆದಂಥ ಅದೇ ವ್ಯವಹಾರವನ್ನು ಮಾಡುವಂಥ ಸಿ. ಎ. ಬ್ಯಾಂಕಿನ ಬ್ರಾಂಚನ್ನು ಮುಚ್ಚುತ್ತೀರಾ ಎಂದು ಕೇಳುತ್ತಾ ಇದ್ದೇನೆ. ಮತ್ತೊಂದು ವಿಚಾರ, ಬೆಳ್ತಂಗಡಿಯ ಟಿ. ಎ. ಪಿ. ಸಿ. ಎಂ. ಎಸ್, ಸುಮಾರು ೧೫ ಲಕ್ಷ ರೂಪಾಯಿ ನಷ್ಟದಲ್ಲಿ ಅದು ನಡೆಯುತ್ತಿದೆ. ಈ ಸಂಘದಲ್ಲಿ ಅವ್ಯವಹಾರ ನಡೆದಿದೆ, ಹಣ ದುರುಪಯೋಗವಾಗಿದೆ ಎಂದು ಎರಡು ವರ್ಷಗಳ ಹಿಂದೆ ಮಾನ್ಯ ಮುಖ್ಯಮಂತ್ರಿಯವರಿಗೆ ಮತ್ತು ಸಂಬಂಧಪಟ್ಟ ಸಚಿವರಿಗೆ ನಾನು ಅರ್ಜಿ ಸಲ್ಲಿಸಿದ್ದೆ. ಅದರ ಬಗ್ಗೆ ತನಿಖೆಗೆ ಆಜ್ಞೆ ಮಾಡಿ ೨ ವರ್ಷವಾಯಿತು. ಆದರೆ ಈ ತನಿಖೆಯನ್ನು ಪುತ್ತೂರಿನ ಎ. ಆರ್. ಮಾಡುತ್ತಾ ಇದ್ದಾರೆ, ಅವರು ತಿಂಗಳಿಗೊಮ್ಮೆ ಬರುತ್ತಾರೆ, ಬಂದಕೂಡಲೇ ಅವರಿಗೆ ಕೊಡುವಂಥ ವ್ಯವಹಾರ ಕೊಟ್ಟುಬಿಟ್ಟರೆ ಅವರು ವಾಪಸ್ ಹೋಗುತ್ತಾರೆ. ಅಂತೂ ೨ ವರ್ಷಗಳಿಂದ ತನಿಖೆ ನಡೆದಿಲ್ಲ. ಈ ರೀತಿ ಪ್ರಾಮಾಣಿಕವಾಗಿ ದುಡಿಯುವಂಥ ಅಸಿಸ್ಟೆಂಟ್ ರಿಜಿಸ್ಟ್ರಾರ್ ಮೇಲೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ ಎಂದು ಕೇಳುತ್ತಾ ಇದ್ದೇನೆ. ಕೊನೆಯದಾಗಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನನಗೆ ತಿಳಿದ ಮಟ್ಟಿಗೆ ಎರಡು ಸಹಕಾರ ಸಂಘ ಇದೆ. ಒಂದು ಕೊಯ್ಯೂರು ಸೇವಾ ಸಹಕಾರಿ ಸಂಘ ಮತ್ತು ಇನ್ನೊಂದು ಕಾರ್ಕಳ ತಾಲ್ಲೂಕಿನ ಶೀರ್ತಾಡಿ ಸಹಕಾರ ಸಂಘ ಇದೆ. ಈ ಶೀರ್ತಾಡಿ ಸಹಕಾರಿ ಸಂಘ ಸುಮಾರು ೩೫ ಲಕ್ಷ ರೂಪಾಯಿ ದುರುಪಯೋಗ ಮಾಡಿದೆ. ಈ ರೀತಿ ದುರುಪಯೋಗ ಮಾಡಿದವರ ಮೇಲೆ ಸರ್ಕಾರ ಏನೂ ಕ್ರಮ ಕೈಗೊಂಡಿಲ್ಲ. ಇದಕ್ಕೆ ಕಾರಣ ಏನು, ಅವರ ಮೇಲೆ ಏನಾದರೂ ಅನುಕಂಪ ಇದೆಯೋ. ಅವರ ಮೇಲೆ ಕ್ರಮ ತೆಗೆದುಕೊಳ್ಳಲಿಕ್ಕೆ ಏನಾದರೂ ಕಷ್ಟವಾಗುತ್ತಿದೆಯೋ. ಇದಕ್ಕೆ ಸ್ಪಷ್ಟವಾಗಿ ಉತ್ತರ ಕೊಡಬೇಕು ಎಂದು ಕೇಳುತ್ತಾ ಇದ್ದೇನೆ.

ಶ್ರೀ ಹೆಚ್. ಏಕಾಂತಯ್ಯ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಪ್ರಸ್ತಾಪ ಮಾಡುವುದಕ್ಕೆ ಮೊದಲೇ ನಾನು ಪ್ರಸ್ತಾಪ ಮಾಡಿ ಹೇಳಿದ್ದೇನೆ. ಶಿರತಾಡಿ ಸಹಕಾರ ಸಂಘ ಆಗಿರಬಹುದು ಮತ್ತೊಂದು ಸಹಕಾರ ಸಂಘ ಆಗಿರಬಹುದು, ನಾನು ಕ್ರಮ ತೆಗೆದುಕೊಂಡಿದ್ದೇನೆಂದು ಹೇಳಿದ್ದೇನೆ ಮಾನ್ಯ ಸದಸ್ಯರು ಶಿರತಾಡಿ ಸಹಕಾರ ಸಂಘದಲ್ಲಿ ಹೆಚ್ಚು ಹಣ ದುರುಪಯೋಗವಾಗಿದೆ ಎಂದು ಹೇಳಿದ್ದಾರೆ ಅದರ ಬಗ್ಗೆ ಸಿ. ಒ. ಡಿ. ತನಿಖೆಯಾಗಿತ್ತು. ಇನ್ನುಳಿದ ಅಂಶಗಳ ಬಗ್ಗೆ ಸಿ. ಒ. ಡಿ. ತನಿಖೆ ಮಾಡಲಿಕ್ಕೆ ಕಳುಹಿಸಿದ್ದೇವೆ ಇನ್ನು ಮಾನ್ಯ ಸದಸ್ಯರು ಮಹಿಳಾ ಸಹಕಾರ ಸಂಘದ ಬಗ್ಗೆ ಹೇಳಿದ್ದಾರೆ. ಶಾಖೆಯನ್ನು ತೆರೆಯುವುದಕ್ಕೆ ಅನುಮತಿ ಕೊಟ್ಟಿರುವುದರಿಂದ ಇನ್ನೊಂದು ಬೇಡ ಎಂದು ಹೇಳಿದ್ದಾರೆ. ಈ ಬಗ್ಗೆ ಆಗಲೇ ಸೂಚನೆ ಕೊಟ್ಟಿದ್ದೇವೆ ಕ್ರಮ ತೆಗೆದುಕೊಳ್ಳುತ್ತೇವೆ. ಮಾನ್ಯ ಸದಸ್ಯರು ಸಂಖ್ಯೆ ಎಷ್ಟು ಹಣ ಎಷ್ಟು ಎಂದು ಕೇಳಿದ್ದಾರೆ. ಈಗ ಸದ್ಯಕ್ಕೆ ನನ್ನಲ್ಲಿ ಆ ಅಂಕಿ ಸಂಖ್ಯೆಗಳು ಇಲ್ಲ. ಯಾವುದೇ ಸಹಕಾರ ಸಂಘದಲ್ಲಿ ದುರುಪಯೋಗವಾಗಿದ್ದರೂ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಕುಮಾರ ಗೌಡ ಪಾಟೀಲ್.—ಹಳ್ಳಿಗಾಡಿನ ಸೊಸೈಟಿಗಳಲ್ಲಿ ಸುಗ್ಗಿ ಕಾಲದಲ್ಲಿ ರೈತರಿಗೆ ನೂರಕ್ಕೆ ಎಪ್ಪತ್ತೈದರಷ್ಟು ಹಣ ಕೊಡುವಂಥ ವ್ಯವಸ್ಥೆ ಇತ್ತು. ಅದೇ ಉದ್ದೇಶದಿಂದಲೇ ಗೋಡೌನ್

ನಿರ್ಮಾಣವಾಗಿದ್ದು. ಆದರೆ, ನೀವು ಮಾಡಿದಂಥ ಕಾರ್ಯಕ್ರಮ ಸರಿಯಾಗಿ ನಡೆಯುವುದಿಲ್ಲ. ಇವೊತ್ತು ಹೆಚ್ಚಿನ ಹಣವನ್ನು ರೈತರಿಗೆ ಕೊಡುವುದಿಲ್ಲ, ಈ ವ್ಯವಸ್ಥೆ ಸರಿಯಾಗಿ ನಡೆಯಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ,

ಶ್ರೀ ಹೆಚ್. ಏಕಾಂತಯ್ಯ.—ಈಗ ಫಸಲು ಸಾಲ ಕೊಡಲಿಕ್ಕೆ ವ್ಯವಸ್ಥೆ ಮಾಡಿದ್ದೇವೆ, ಅದು ಮುಂದುವರೆಯುತ್ತದೆ,

ಶ್ರೀ ಬಿ. ಸ್ವಾಮಿರಾವ್.—ಮಾನ್ಯ ಅಧ್ಯಕ್ಷರೆ, ನಿನ್ನೆಯ ದಿವಸ ಪ್ರಸ್ತಾಪ ಮಾಡುತ್ತಾ ಶಿಕಾರಿಪುರ ತಾಲ್ಲೂಕಿನ ಒಂದು ಡಿಫಂಕ್ಟ್ ಸೊಸೈಟಿಯ ಬಗ್ಗೆ ಹೇಳಿದ್ದೆ. ಅದು ಮಾನ್ಯ ಅಜ್ಜಿಬಾಳ ಹೆಗಡೆಯವರಿಗೂ ಗೊತ್ತಿದೆ, ಅದು ನಿಜವಾಗಿದ್ದ ಪಕ್ಷದಲ್ಲಿ ಸಂಬಂಧಪಟ್ಟವರಿಂದ ದುಡ್ಡನ್ನು ರಿಕವರಿ ಮಾಡುತ್ತೀರಾ ? ಹೊಸನಗರ ಟಿ. ಎ. ಪಿ. ಸಿ. ಎಂ. ಎಸ್. ಸೆಕ್ರೆಟರಿಯವರು ರಾಜೀನಾಮೆ ಕೊಟ್ಟು ಜೀಪು, ಕಾರು, ಮನೆ ಮಾಡಿಕೊಂಡಿದ್ದಾರೆಂದು ಹೇಳಿದ್ದೆ, ಅದು ಕೋರ್ಟ್‌ನಲ್ಲಿದೆ ಎಂದು ಹೇಳಿದರು, ಅದು ಕೋರ್ಟಿನಲ್ಲಿ ಇಲ್ಲ ಈ ಬಗ್ಗೆ ಎಲ್. ಎ. ಕ್ವೆಶ್ಚನ್ ಕೂಡ ಹಾಕಿದ್ದೆ, ಅದನ್ನು ಕೂಡ ಕೇಳಲಿಕ್ಕೆ ಇಷ್ಟಪಡುತ್ತೇನೆ. ಇನ್ನು ಈ ಸೊಸೈಟಿಗಳು ಹಾಳಾಗುವುದಕ್ಕೆ ಆಡಿಟರ್ಸ್ ಕಾರಣ ಎಂದು ಪ್ರಸ್ತಾಪ ಮಾಡುತ್ತಾ ಕೆಟ್ಟ ಭಾಷೆಯಲ್ಲಿ ಹೇಳಿದ್ದೆ. ಯಾರು ತಪ್ಪು ಮಾಡಿರುತ್ತಾರೆ ಅವರ ಕೈ ಹೆಬ್ಬೆಟ್ಟನ್ನು ಕತ್ತರಿಸಬೇಕೆಂದು ಹೇಳಿದ್ದೆ. ಇದುವರೆಗೆ ಯಾರ ಕೈ ಹೆಬ್ಬೆಟ್ಟನ್ನು ಕತ್ತರಿಸಿದ್ದಾರೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಲಿಕ್ಕೆ ಬಯಸುತ್ತೇನೆ. ಇನ್ನೂ ಹೊನ್ನಾವ ಜಲವಳ್ಳಿಯ ಬಗ್ಗೆ ಹೇಳಿದ್ದೆ ಅದರ ಬಗ್ಗೆಯೂ ಸಹ ಮಾನ್ಯ ಮಂತ್ರಿಗಳು ಉತ್ತರ ಹೇಳಬೇಕು.

ಶ್ರೀ ಹೆಚ್. ಏಕಾಂತಯ್ಯ.—ಅಧ್ಯಕ್ಷರೆ, ನಾನು ಉತ್ತರವನ್ನು ಕೊಟ್ಟಾಗ ಮಾನ್ಯ ಸದಸ್ಯರಾದ ಸ್ವಾಮಿರಾವ್ ಅವರು ಇರಲಿಲ್ಲ. ಹೊಸನಗರ ಟಿಎಪಿಸಿಎಂಎಸ್ ನಲ್ಲಿ ಯಾರು ಯಾರು ದುರುಪಯೋಗ ಮಾಡಿದ್ದಾರೆ, ಅವರ ಮೇಲೆ ಕ್ರಮ ತೆಗೆದುಕೊಂಡಿದ್ದೇನೆಂದು ನಾನು ಆಗಲೇ ಹೇಳಿದ್ದೇನೆ. ಕೋರ್ಟುಗಳಲ್ಲಿ ಯಾವುದೂ ಇಲ್ಲ. ಅಲ್ಲಿ ಹಣ ವಸೂಲು ಮಾಡಲಿಕ್ಕೆ ಕ್ರಮ ತೆಗೆದುಕೊಂಡಿದ್ದೇವೆ, ಇನ್ನು ಯಾವುದಾದರೂ ಉಳಿದಿದ್ದರೆ ಅದರ ಬಗ್ಗೆಯೂ ಕೂಡ ಕ್ರಮ ತೆಗೆದುಕೊಳ್ಳುತ್ತೇವೆ. ಮಾನ್ಯ ಸದಸ್ಯರು ಜಲವಳ್ಳಿ ಹೆಸರು ಹೇಳಿದರು. ಆ ಸಹಕಾರ ಸಂಘದಲ್ಲಿ ಯಾರೇ ದುರುಪಯೋಗ ಮಾಡಿದ್ದರೂ ಅಗತ್ಯವಾದ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳುತ್ತೇನೆ.

ಶ್ರೀ ಪಟಮಕ್ಕಿ ರತ್ನಾಕರ್.—ಲೆಕ್ಕ ಪರಿಶೋಧಕರು ತಪ್ಪು ಮಾಡಿದ್ದರ ಬಗ್ಗೆ ಏನು ಮಾಡುತ್ತೀರಿ ?

ಶ್ರೀ ಹೆಚ್. ಏಕಾಂತಯ್ಯ.—ಅವರ ಹೆಬ್ಬೆಟ್ಟು ಕತ್ತರಿಸುವುದು ಬೇಡ. ಕಾನೂನು ಪ್ರಕಾರ ಏನು ಶಿಕ್ಷೆ ಕೊಡಲಿಕ್ಕೆ ಸಾಧ್ಯವಾಗುತ್ತದೆ ಅದನ್ನು ಮಾಡುತ್ತೇವೆ.

ಶ್ರೀ ಮದನ್‌ಗೋಪಾಲ್ ನಾಯಕ್.—ಸುರ್‌ಪುರ ಭೂ ಅಭಿವೃದ್ಧಿ ಬ್ಯಾಂಕಿನಲ್ಲಿ ಹಿಂದೆ ಕರೆಂಟ್ ಇಲ್ಲದೇ ಇರತಕ್ಕಂಥ ಊರಿನಲ್ಲಿ ಕರೆಂಟ್ ಪಂಪ್‌ಸೆಟ್ ಕೊಟ್ಟಿದ್ದಾರೆ. ಅನಂತರ ಇನ್ನು ಕೆಲವರಿಗೆ ಬಾವಿ ಸಾಲ ಕೊಟ್ಟಿದ್ದಾರೆ. ಅವರು ತಮ್ಮ ಹೊಲಗಳಲ್ಲಿ ಬಾವಿಗಳನ್ನೆ ತೋಡಿಸಿಲ್ಲ ಅಂತಹ ಕಡೆ ಸಾಲ ಕೊಟ್ಟಿದ್ದಾರೆ. ಈಗ ಪಂಪ್‌ಸೆಟ್ ಮತ್ತು ಬಾವಿ ಎರಡೂ ಇಲ್ಲ. ಅವರು ದುಡ್ಡು ಕೊಡಬೇಕೆಂದು ಆದೇಶ ಹೋಗಿದೆ. ಯಾರು ಪಂಪ್‌ಸೆಟ್ ತೆಗೆದುಕೊಂಡಿಲ್ಲ, ಯಾವ ಊರಿನಲ್ಲಿ ಕರೆಂಟ್ ಇಲ್ಲಿ ಅಲ್ಲಿಗೆ ಪಂಪ್‌ಸೆಟ್ ಕೊಟ್ಟಿದ್ದಾರೆ. ಆ ಸಾಲವನ್ನು ತ್ವರಿತ ಗತಿಯಲ್ಲಿ ವಸೂಲು ಮಾಡುತ್ತಿದ್ದಾರೆ, ಇಂತಹ ಒಂದು ಪ್ರಕರಣದ ಸಮಯದಲ್ಲಿ ಯಾವ ರೈತ ಪಂಪ್‌ಸೆಟ್ ತೆಗೆದುಕೊಂಡಿದ್ದಾನೆ, ಯಾವ ರೈತ ನಿಜವಾಗಿ ಬಾವಿ ತೋಡಿಸಿದ್ದಾನೆ. ಯಾರು ಪಂಪ್‌ಸೆಟ್ ತೆಗೆದುಕೊಂಡಿಲ್ಲ, ಯಾರು ಬಾವಿ ತೋಡಿಸಿಲ್ಲ ಅಂತಹವನ್ನು ಎನ್‌ಕ್ವಯಿರಿ ಮಾಡಿಸಿ ಹಣ ವಸೂಲು ಮಾಡಲಿಕ್ಕೆ ಆದೇಶ ಕೊಡುತ್ತೀರಾ ?

ಶ್ರೀ ಹೆಚ್. ಏಕಾಂತಯ್ಯ.—ಅಂಥ ಪ್ರಕರಣಗಳು ಏನಾದರೂ ಇದ್ದರೆ ಮಾನ್ಯ ಸದಸ್ಯರು ಹೇಳಬಹುದು. ನಾವು ಎಲ್ಲೆಲ್ಲಿ ಹಣವನ್ನು ಸಾಲವಾಗಿ ಕೊಟ್ಟಿದ್ದೇವೆ ಅದನ್ನು ನಾವು ವಸೂಲು ಮಾಡಬೇಕಾಗುತ್ತದೆ. ಸಾಲವನ್ನು ಕೊಟ್ಟಿಲ್ಲವೆಂದು ಹೇಳುವುದಾದರೆ ಅದನ್ನು ಕಾನೂನು ಪ್ರಕಾರ ಇತ್ಯರ್ಥ ಮಾಡಬೇಕಾಗುತ್ತದೆ.

ಅಧ್ಯಕ್ಷರು.—ಇಲ್ಲಿಗೆ ಚರ್ಚೆ ಮುಕ್ತಾಯವಾಯಿತು. ನಾನು ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವವೇನೆಂದರೆ.—

''೩೧-೩-೧೯೮೯ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಯ ಸಂಖ್ಯೆ ೫೬ಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗುಗಳನ್ನು ಮಂಜೂರು ಮಾಡಬೇಕು.''

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು.

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ.)

ಅಭಿಯಾಚನೆ ಕ್ರಮಾಂಕ 56–ಸಹಕಾರ (ಕ್ರಮಪಡಿಸಿದ ಮಾರುಕಟ್ಟೆಗಳ ಹೊರತು)

''ರಾಜ್ಯಪಾಲರ ಶಿಫಾರಸಿನ ಮೇರೆಗೆ ೩೧-೩-೧೯೮೯ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಹಕಾರ (ಕ್ರಮಪಡಿಸಿದ ಮಾರುಕಟ್ಟೆಗಳ ಹೊರತು) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೭೪,೧೧,೩೫ ೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೫,೪೨,೯೭,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.''

ಅಧ್ಯಕ್ಷರು.—ಈಗ ಮಾನ್ಯ ಕೈಗಾರಿಕಾ ಸಹಕಾರ ಸಚಿವರಿಂದ ಉತ್ತರ.

ಶ್ರೀ ಆರ್. ಬಿ. ಪೋತೇದಾರ್ (ಮಾನ್ಯ ಕೈಗಾರಿಕಾ ಸಹಕಾರ ಮಂತ್ರಿಗಳು).— ಸನ್ಮಾನ್ಯ ಅಧ್ಯಕ್ಷರೆ. ನಿನ್ನೆಯ ದಿವಸ ಬಹಳಷ್ಟು ಮಾನ್ಯ ಸದಸ್ಯರು ಬಹಳ ಉತ್ತಮ ಸಲಹೆಗಳನ್ನು ಕೊಟ್ಟಿದ್ದಾರೆ ಮಾನ್ಯ ಕೆ. ಹೆಚ್. ಪಾಟೀಲ್‌ರವರೂ ಬಹಳಷ್ಟು ಮಾತನಾಡಿದ್ದಾರೆ, ಅವರು ನನಗಿಂತ ದೊಡ್ಡವರು. ಗದಗ್‌ನ ಆಜೂಬಾಜಿನಲ್ಲಿ ಬಹಳಷ್ಟು ಕೋ-ಆಪರೇಟಿವ್ ಸೊಸೈಟಿಗಳನ್ನು ನಡೆಸಿ ಅನುಭವವನ್ನು ಹೊಂದಿದ್ದಾರೆ. ಅವರಿಗೆ ಪ್ರಾಕ್ಟಿಕಲ್ ಆಗಿ ಎಕ್ಸ್‌ಪೀರಿಯನ್ಸ್ ಇದೆ. ನಿನ್ನೆಯ ದಿವಸ ಅವರು ಮಾತನಾಡುವಾಗ ಒಂದು ಮಾತನ್ನು ಹೇಳಿದರು. ಸ್ಪಿನ್ನಿಗ್ ಮಿಲ್ ಮತ್ತು ಕಾರ್ಖಾನೆಗಳಿಗೆ ಒಬ್ಬ ಟೆಕ್ನಿಕಲ್ ಮ್ಯಾನೇಜಿಂಗ್ ಡೈರೆಕ್ಟರ್‌ರವರನ್ನು ನೇಮಕ ಮಾಡಿ ಎಂದು ಹೇಳಿದ್ದಾರೆ. ಅವರ ಸಲಹೆ ಬಹಳ ಒಳ್ಳೆಯದಿದೆ. ನಾನು ಒಂದು ಸಕ್ಕರೆ ಕಂಪನಿಗೆ ಒಬ್ಬ ಟೆಕ್ನಿಕಲ್ ಮ್ಯಾನೇಜಿಂಗ್ ಡೈರೆಕ್ಟರ್‌ವರನ್ನು ನೇಮಕ ಮಾಡಿ ಎಕ್ಸ್‌ಪೆರಿಮೆಂಟ್ ಮಾಡಿ ನೋಡಬೇಕೆಂದು ನನಗನಿಸುತ್ತಿದೆ. ಈ ಉದ್ದೇಶಕ್ಕಾಗಿ ಒಬ್ಬ ವ್ಯಕ್ತಿಯ ಹೆಸರನ್ನು ಸಜೆಸ್ಟ್ ಮಾಡಿ ಎಂದು ಷುಗರ್ ಫೆಡರೇಷನ್‌ನವರನ್ನು ಕೇಳಿಕೊಂಡಿದ್ದೇನೆ.

ಇನ್ನು ಎರಡನೆಯದಾಗಿ ನಾನು ಈ ಖಾತೆಯನ್ನು ನನ್ನ ಕೈಗೆ ತೆಗೆದುಕೊಂಡಮೇಲೆ ಅವತ್ತಿನಿಂದ ಹಿಡಿದು ಲೆಕ್ಕ ಹಾಕಿದರೆ ಷುಗರ್ ಕೇನ್ ಕ್ರಷಿಂಗ್ ಬಹಳ ಬೆಳೆದಿದೆ. ಅದರ ಸಂಖ್ಯೆಯನ್ನು ಹೇಳಬೇಕೆಂದರೆ ೧೯೮೭-೮೮ ರಲ್ಲಿ ೩೨.೮೯ ಮೆಟ್ರಿಕ್ ಟನ್ ಕ್ರಷಿಂಗ್ ಮಾಡಿದೆ. ೧೯೮೬-೮೭ ರಲ್ಲಿ ೨೭-೪೦ ಮೆಟ್ರಿಕ್ ಟನ್ ಕಬ್ಬನ್ನು ಕ್ರಷ್ ಮಾಡಿದೆ. ಒಟ್ಟು ೫೯ ಲಕ್ಷ ಮೆಟ್ರಿಕ್ ಟನ್‌ಗಿಂತಲೂ ಹೆಚ್ಚಿಗೆ ಕ್ರಷಿಂಗ್ ಮಾಡಿದ್ದೇವೆ. ಇನ್ನು ಷುಗರ್ ಪ್ರೊಡಕ್ಷನ್‌ನ್ನು ತೆಗೆದುಕೊಂಡರೆ ೧೯೮೭ ರಲ್ಲಿ ೨.೭೪ ಮೆಟ್ರಿಕ್ ಟನ್ ಪ್ರೊಡಕ್ಷನ್ ಮಾಡಿದ್ದರೆ ೧೯೮೮ರಲ್ಲಿ ೩.೪೦ ಮೆಟ್ರಿಕ್ ಟನ್ ಷುಗರ್‌ನ್ನು ಪ್ರೊಡಕ್ಷನ್ ಮಾಡಿದ್ದೇವೆ. ಷುಗರ್‌ಕೇನ್ ಸಪ್ಲೈ ೨೦.೪೮ ಪರ್ಸೆಂಟ್ ಹೆಚ್ಚು ಆಗಿದೆ. ಷುಗರ್ ಪ್ರೊಡಕ್ಷನ್ ೨೦.೫೬ ಪರ್ಸೆಂಟ್ ಇಂಕ್ರೀಸ್ ಆಗಿದೆ. ರಿಕವರಿ ೧೯೮೮ ರಲ್ಲಿ ೧೦.೪೧ ಪರ್ಸೆಂಟ್ ಇದೆ ೧೯೮೭ ರಲ್ಲಿ ೧೦ ಪರ್ಸೆಂಟ್ ಇತ್ತು. ರಿಕವರಿಯಲ್ಲೂ ಕೂಡ ಹೆಚ್ಚಿನ ಸಾಧನೆಯನ್ನು ಮಾಡಿದ್ದೇವೆ. ಕೇನ್ ಸಪ್ಲೈ ಜಾಸ್ತಿ [illegible] ಕಾರ್ಖಾನೆ [illegible] ಮೇಲೆ ನಾವು ಸ್ಟ್ರಿಕ್ಟ್ ಆಗಿ ಕ್ರಮವನ್ನು ತೆಗೆದುಕೊಂಡಿದ್ದೇವೆ.

ಅಡ್ಮಿನಿಸ್ಟ್ರೇಷನ್ ಮೇಲೆ, ಫೈನಾನ್ಸ್ ಮೇಲೆ ಸ್ಟ್ರಿಕ್ಟ್ ಆಗಿ ಕ್ರಮ ತೆಗೆದುಕೊಂಡಿದ್ದರ ಫಲವಾಗಿ ನಾವು ಫೈನಾನ್‌ಷಿಯಲ್ ಇನ್‌ಸ್ಟಿಟ್ಯೂಷನ್ಸ್‌ಗೆ ಏನು ೧೭ ಕೋಟಿ ರೂಪಾಯಿಗಳನ್ನು ಕೊಡಬೇಕಾಗಿತ್ತು ಆ ಪೈಕಿ ಸುಮಾರು ೯.೫೨ ಕೋಟಿ ರೂಪಾಯಿಗಳನ್ನು ಅವರಿಗೆ ಮುಟ್ಟಿಸಿದ್ದೇವೆ.

ಸೆಂಟ್ರಲ್ ಗೌವರ್ನ್‌ಮೆಂಟ್‌ನವರು ಕೇನ್ ಡೆವಲಪ್‌ಮೆಂಟ್‌ಗೆ ೬.೨ ಕೋಟಿ ರೂಪಾಯಿಗಳನ್ನು ಸ್ಯಾಂಕ್ಷನ್ ಕೊಟ್ಟಿದ್ದಾರೆ, ಸ್ಯಾಂಕ್ಷನ್ ಇಷ್ಟರಲ್ಲೇ ಬರಬಹುದು. ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಬಹಳ ಪ್ರಯತ್ನ ಮಾಡಿದ್ದಾರೆ. ಇದು ಬಂದನಂತರ ವರೈಟಿ ಆಫ್ ಕೇನ್ಸ್ ಮತ್ತು ಇರಿಗೇಷನ್ ಫೆಸಿಲಿಟೀಸ್ ಕೊಟ್ಟು ಡೆವಲಪ್‌ಮೆಂಟ್ ಮಾಡಬೇಕು ಎನ್ನುವ ವಿಚಾರ ಇಟ್ಟುಕೊಂಡಿದ್ದೇವೆ.

ಮಾನ್ಯ ಕೆ. ಎಚ್. ಪಾಟೀಲ್‌ರವರು ಎನ್.ಸಿ.ಡಿ.ಸಿ.ಯವರು ೩ ಕೋಟಿ ೩೮ ಲಕ್ಷ ರೂಪಾಯಿಗಳನ್ನು ಸ್ಯಾಂಕ್ಷನ್ ಮಾಡಿದ್ದಾರೆಂದು ಹೇಳಿದರು. ಗೌವರ್ನ್‌ಮೆಂಟ್ ಅಷ್ಟನ್ನು ತೆಗೆದುಕೊಳ್ಳುವುದಕ್ಕೆ ಆಗಲಿಲ್ಲ. ಮಾನ್ಯ ಪ್ರತಾಪ ಚಂದ್ರಶೆಟ್ಟಿಯವರು ವಾಣಿ ವಿಲಾಸ ಶುಗರ್ ಫ್ಯಾಕ್ಟರಿಯಲ್ಲಿ ಬೋರ್‌ವೆಲ್‌ಗಳನ್ನು ತೆಗೆಯಬೇಕೆಂದು ಹೇಳಿದ್ದಾರೆ. ಮಾನ್ಯ ಜಾಲಪ್ಪನವರು ಕೋ ಆಪರೇಟೀವ್ ಮಿನಿಸ್ಟರ್ ಇದ್ದಾಗ ೧೭ ಬೋರ್‌ವೆಲ್‌ಗಳನ್ನು ತೆಗೆಸಿದ್ದರು. ೧೭ರ ಪೈಕಿ ೬ ಬೋರ್‌ವೆಲ್‌ಗಳು ಸಕ್ಸಸ್‌ಫುಲ್ ಆಗಿವೆ. ಬಾಕಿ ಫೆಲ್ಯೂರ್ ಆಗಿದೆ. ಇಂಥ ಸ್ಕೀಮ್ ಬಿಟ್ಟುಬಿಡಿ ಎಂದು ಹೇಳಿದ್ದಾರೆ. ಈಗ ನಾವು ಕ್ಯಾಬಿನೇಟ್ ಸಬ್ ಕಮಿಟಿ ಮಾಡಿದ್ದೇವೆ. ಕ್ಯಾಬಿನೇಟ್ ಸಬ್ ಕಮಿಟಿಯಲ್ಲಿ ಸಿಕ್ ಮಿಲ್‌ಗಳನ್ನು ಯಾವರೀತಿ, ಹೇಗೆ ರಿವೈವ್ ಮಾಡಬೇಕು ಎನ್ನುವ ಬಗ್ಗೆ ವಿಚಾರ ಮಾಡುತ್ತಿದ್ದೇವೆ. ಎರಡು ವಾರದಲ್ಲಿಯೇ ಡಿಸಿಶನ್ ತೆಗೆದುಕೊಳ್ಳುತ್ತೇನೆ.

ಇನ್ನು ಮಾನ್ಯ ಆರ್. ವೆಂಕಟರಾಮಯ್ಯನವರು ರಾಯಚೂರು ಮತ್ತು ಬಿಜಾಪುರ ಸ್ಪಿನ್ನಿಂಗ್ ಮಿಲ್‌ಗಳನ್ನು ಓಪನ್ ಮಾಡಬೇಕೆಂದು ಹೇಳಿದ್ದಾರೆ. ನಮ್ಮ ಕಡೆ ೭ ಮಿಲ್‌ಗಳ ಪೈಕಿ ೪ ಮಿಲ್‌ಗಳು ಮುಚ್ಚಿರುತ್ತವೆ ಅವುಗಳನ್ನು ನಾವು ಓಪನ್ ಮಾಡಬೇಕೆಂದು ಮನಸ್ಸಿನಲ್ಲಿಟ್ಟುಕೊಂಡಿದ್ದೇವೆ. ಇದನ್ನು ಸಬ್ ಕಮಿಟಿಯ ಮುಂದೆ ಇಟ್ಟಿದ್ದೇವೆ. ರಾಯಚೂರು ಮತ್ತು ಬಿಜಾಪುರದಲ್ಲಿರುವ ಮಿಲ್‌ಗಳನ್ನು ಬೇಗನೆ ಓಪನ್ ಮಾಡುತ್ತೇವೆ.

ಶ್ರೀ ವೆಂಕಟರಾಮಯ್ಯ.—ಬೇಗ ಎಂದರೆ ಯಾವಾಗ ಓಪನ್ ಮಾಡಿಸುತ್ತೀರಿ ಅದನ್ನು ದಯವಿಟ್ಟು ಹೇಳಿ.

ಶ್ರೀ ಆರ್. ಬಿ. ಪೋತದಾರ್.—ಒಂದು ವಾರ ಅಥವಾ ಎರಡು ವಾರಗಳಲ್ಲಿಯೇ ಡಿಸಿಶನ್ ತೆಗೆದುಕೊಳ್ಳುತ್ತೇವೆ. ಮತ್ತೆ ಬೆಳಗಾವ್ ಮತ್ತು ಬಾಗಲ್‌ಕೋಟೆಯಲ್ಲಿನ ಮಿಲ್ಲುಗಳನ್ನು ಓಪನ್ ಮಾಡುತ್ತೇವೆ. ತಮ್ಮ ಗೌರಿಬಿದನೂರಿನಲ್ಲಿಯ ಸಕ್ಕರೆ ಕಾರ್ಖಾನೆ ವಿಚಾರವನ್ನು ಹೇಳಿದ್ದೀರಿ. ಅದನ್ನು ಈ ಸಚಿವ ಸಂಪುಟವು ಈಗಾಗಲೇ ಆದನ್ನು ಮಾಡಲು ಡಿಸಿಶನ್ ತೆಗೆದುಕೊಂಡಿದ್ದೇವೆ. ಸಿರಗುಪ್ಪ, ಶುಗರ್ ಕೆಮಿಕಲ್ಸ್ ಅವರಿಗೆ ಮಾರಬೇಕೆಂದು ನಿರ್ಣಯ ತೆಗೆದುಕೊಂಡಿದ್ದೇನೆ. ಮತ್ತೆ ಈಗ ಸ್ಟ್ರಿಕ್ಟ್ ಕಾರ್ಯಕ್ರಮ ತೆಗೆದುಕೊಂಡಿರುವ ಕಾರಣ ಅನೇಕ ಮಿಲ್‌ಗಳಿಗೆ ಶೋಕಾಸ್ ನೋಟೀಸ್ ಕೊಟ್ಟಿದ್ದೇವೆ. ಹೇಮಾವತಿ, ಶ್ರೀರಾಮ ಗೋಕಾಕ್, ಸಕ್ಕರೆ ಕಾರ್ಖಾನೆಗಳಿಗೆ ನೋಟೀಸ್ ಕೊಟ್ಟಿದ್ದೇವೆ. ವಾಣಿವಿಲಾಸ್ ಮತ್ತು ಭದ್ರಾ ಶುಗರ್ ಫ್ಯಾಕ್ಟರಿಯನ್ನು ಸೂಪರ್‌ಸೀಡ್ ಮಾಡಿದ್ದೇವೆ. ಮತ್ತೆ ರಾಯಬಾಗ್ ಸಕ್ಕರೆ ಕಾರ್ಖಾನೆ ಸೆಕ್ಷನ್ ೬೪ರ ಪ್ರಕಾರ ಎನ್‌ಕ್ವಯರಿಗೆ ಆಜ್ಞೆ ಮಾಡಿದ್ದೇವೆ, ಪ್ರಶ್ನೋತ್ತರ ವೇಳೆಯಲ್ಲಿ ಈ ಪಾಯಿಂಟ್ ರೈಸ್ ಮಾಡಿದಾಗ ಉತ್ತರವನ್ನು ಕೊಟ್ಟಿದ್ದೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಸಚಿವರು ಮಿಲ್ಸ್‌ಗಳನ್ನು ಓಪನ್ ಮಾಡಿಸುತ್ತೇವೆಂದು ಹೇಳಿದರು. ಯರಮರಸ ಮಿಲ್‌ನ್ನೂ ಸಹ ಆದಷ್ಟು ಬೇಗ ಮಾಡಿಸುತ್ತೀರಾ ಎಂದು ಕೇಳುತ್ತೇನೆ, ಏತಕ್ಕೆಂದರೆ ಇದನ್ನು ಮೂರುಸಾರಿ ಈ ಸದನದಲ್ಲಿ ಕೇಳಿದಾಗ ಹೇಳುತ್ತಿರುವ ಉತ್ತರವಾಗಿದೆ. ೧–೨ ವಾರದಲ್ಲಿ ಓಪನ್ ಮಾಡಿಸುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಆರ್. ಬಿ. ಪೋತದಾರ್.—ಸಬ್ ಕಮಿಟಿಗೆ ರೆಫರ್ ಮಾಡಲಾಗಿದೆ. ಅಲ್ಲಿಂದ ರಿಪೋರ್ಟ್ ಬರಲಿ. ಬಂದನಂತರ ಎರಡು ವಾರಗಳಲ್ಲಿಯೇ ಮಾಡಬಹುದು.

ಶ್ರೀ ಕೆ. ಎಚ್. ಪಾಟೀಲ್,—ಮಾನ್ಯ ಅಧ್ಯಕ್ಷರೇ ಒಂದು ಕ್ಲಾರಿಫಿಕೇಷನ್ ಕೇಳಲಿಕ್ಕೆ ಇಚ್ಛೆ ಪಡುತ್ತೇನೆ. ೫ ಮಿಲ್‌ಗಳ ಸಲುವಾಗಿ ಮಾರ್ಜಿನ್ ಮನಿ ಸ್ಯಾಂಕ್ಷನ್ ಆಗಿ ಬಂದಿದೆ. ಫೈನಾನ್ಸ್ ಡಿಪಾರ್ಟ್‌ಮೆಂಟ್‌ನವರು ಒಳಗೆ ಮುಚ್ಚಿಟ್ಟಿದ್ದಾರೆ. ಮುಖ್ಯಮಂತ್ರಿಗಳು ಸಹ ಒಪ್ಪಿ ಅದನ್ನು ಕೊಡಬೇಕೆಂದು ಒಪ್ಪಿಕೊಂಡಿದ್ದಾರೆ. ಚೀಫ್ ಮಿನಿಸ್ಟರ್‌ರವರಿಂದ ಫೈನಾನ್ಸ್ ಡಿಪಾರ್ಟ್‌ಮೆಂಟಿಗೆ ಹೇಳಲು ಪ್ರಯತ್ನ ಮಾಡುತ್ತೀರಾ ? ಹಣಕಾಸಿನ ಇಲಾಖೆಯವರ ಕಿವಿ ಹಿಂಡಲಿಕ್ಕೆ ತಮ್ಮಿಂದ ಸಾಧ್ಯವಾಗುತ್ತದೆಯೆ ?

ಶ್ರೀ ಆರ್. ಬಿ. ಪೋತದಾರ್.—ಮಾನ್ಯ ಮುಖ್ಯ ಮಂತ್ರಿಗಳಿಗೆ ಹೇಳಿ ಮಾಡಿಕೊಡುತ್ತೇನೆ, ರಾಯಚೂರು ಮತ್ತು ಬಿಜಾಪುರದ ಮಿಲ್‌ಗಳನ್ನು ರೀಓಪನ್ ಮಾಡಬೇಕೆಂದು ವಿಚಾರ ಮಾಡಿದ್ದೇವೆ. ಅದಕ್ಕೆ ತಮ್ಮ ಮತ್ತು ಅರಣ್ಯ ಸಚಿವರಾದ ಶ್ರೀ ಬಾಗಲಕೋಟೆಯವರ ಸಹಾಯವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಎಸ್. ಹೆಚ್. ಕೌಜಲಗಿ.—ಬೆಳಗಾಂ ಸ್ಪಿನ್ನಿಂಗ್ ಮಿಲ್ಲಿನವರು ಹಣದ ಅಡಚಣೆಯಾದ ಕಾರಣ ಹಣ ಸಹಾಯ ಮಾಡಬೇಕೆಂದು ಸರ್ಕಾರವನ್ನು ಮೇಲಿಂದ ಮೇಲೆ ಕೇಳುತ್ತಿದ್ದಾರೆ. ತಾವು ಹಣ ಸಹಾಯ ಮಾಡುತ್ತೇವೆಂದು ಹೇಳುತ್ತಿದ್ದು ಇವತ್ತಿನವರೆಗೆ ಸರ್ಕಾರದಿಂದ ಅವರಿಗೆ ಯಾವುದೇ ಅನುಕೂಲ ಸಿಕ್ಕಿಲ್ಲ. ನೀವು ಯಾವ ಯಾವ ಸವಲತ್ತುಗಳನ್ನು ಕೊಟ್ಟಿದ್ದೀರಿ ಎಂದು ಕೇಳುತ್ತೇನೆ.

ಶ್ರೀ ಆರ್. ಬಿ. ಪೋತದಾರ್.—ಅದು ಸಿಕ್ ಲಿಸ್ಟಿನಲ್ಲಿದ್ದು ಸ್ಪೆಷಲ್ ಕಮಿಟಿಯ ಮುಂದಿದೆ. ಅದರ ಬಗ್ಗೆ ವಿಚಾರ ವಿನಿಮಯ ಮಾಡುವುದಕ್ಕೆ ಹತ್ತಿದ್ದೇವೆ. ನಾವು ಅದರ ಬಗ್ಗೆ ಇಂಟರೆಸ್ಟ್ ಆಗಿದ್ದೇವೆ, ಸಹಾಯ ಮಾಡುತ್ತೇವೆ.

ಶ್ರೀ ಎಸ್. ಹೆಚ್. ಕೌಜಲಗಿ.—ಅದು ಸಿಕ್ ಆಗುವುದಕ್ಕೆ ಮೊದಲು ಸಹಾಯ ಮಾಡಿದರೆ ಅನುಕೂಲವಾಗುತ್ತದೆ. ಅದಕ್ಕೆ ಇನ್ನೂ ಜೀವ ಇದೆ. ಸಿಕ್ ಆಗುವುದಕ್ಕೆ ಮೊದಲು ಹಣ ಸಹಾಯ ಮಾಡಿದರೆ ಚಲೋ ಆಗುತ್ತದೆ. ಉಳಿದ ಕಡೆಗಳಲ್ಲಿ ಮಾಡಿದ್ದೀರಿ. ಇದರ ಬಗ್ಗೆ ಬೆಳಗಾಂ ಜನ ಬಹಳ ಸಾರಿ ಕೇಳಿದ್ದಾರೆ. ತಾವು ಎಷ್ಟು ಸಹಾಯ ಮಾಡುತ್ತೀರಿ ಎಂಬುದನ್ನ ಹೇಳಬೇಕು. ಹತ್ತಿ ತೆಗೆದುಕೊಂಡರೂ ಹಣ ಕೊಟ್ಟಿಲ್ಲ.

ಶ್ರೀ ಆರ್. ಬಿ. ಪೋತದಾರ್,—ಅದೇ ವಿಚಾರದಲ್ಲಿ ಪ್ರಯತ್ನ ಮಾಡುತ್ತೇವೆ.

ಶ್ರೀ ಜಿ. ರಾಜೂಗೌಡ.—ಕೊಳ್ಳೇಗಾಲ ಸಕ್ಕರೆ ಕಾರ್ಖಾನೆಯ ಮಾರಾಟವಾದಾಗ ೭೦ ಲಕ್ಷ ರೂಪಾಯಿ ಷೇರು ಬಂಡವಾಳ ಮತ್ತು ಫಂಡು ಇತ್ತು. ಅದನ್ನು ದಯಮಾಡಿ ಷೇರು ಹೋಲ್ಡರ್‌ಗಳಿಗೆ ಕೊಡಲಿಕ್ಕೆ ಪ್ರಯತ್ನ ಮಾಡುತ್ತೀರಾ ? ಆ ಕಾರ್ಖಾನೆಯನ್ನು ೫ ಕೋಟಿ ರೂಪಾಯಿಗಳಿಗೆ ಮಾರಾಟ ಮಾಡಿದ್ದಾರೆ. ಅದರಲ್ಲಿ ೭೦ ಲಕ್ಷ ರೂಪಾಯಿಗಳನ್ನು ಷೇರುದಾರರಿಗೆ ಮತ್ತು ಯಾರು ಕಬ್ಬನ್ನು ಮಾರಾಟ ಮಾಡಿ ಹಣ ಸಂದಾಯವಾಗಿಲ್ಲ ಅಂಥವರಿಗೆ ಹಣ ಕೊಡಲಿಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಆರ್. ಬಿ. ಪೋತದಾರ್.—ಅದು ಇನ್ನೂ ಮಾರಾಟವಾಗಿಲ್ಲ ನಾವು ಕೊಡಬೇಕೆಂದು ಡಿಸಿಷನ್ ತೆಗೆದುಕೊಂಡಿದ್ದೇವೆ. ತಾವು ಎರಡನೆಯದಾಗಿ ಏನು ಹೇಳಿದ್ದೀರಿ. ಅದನ್ನೇ ಗೂಡಿಸಲಿಕ್ಕೆ ವಿಚಾರ ಮಾಡುತ್ತೇನೆ.

ಶ್ರೀ ಜಿ. ರಾಜೂಗೌಡ.—ಕಾರ್ಖಾನೆ ಮಾರಾಟವಾಗಿ ರಿಜಿಸ್ಟರ್ ಆಯಿತು.

(ಗೊಂದಲ)

ಶ್ರೀ ಆರ್.ಬಿ. ಪೋತದಾರ್.—ನನಗೆ ಗೌರಿಬಿದನೂರು ಅಂದ ಹಾಗೆ ಕೇಳಿತು, ಅದನ್ನು ಇನ್ನೂ ಸೇಲ್ ಮಾಡಿಲ್ಲ. ಕೊಳ್ಳೇಗಾಲ ಕಾರ್ಖಾನೆಯ ಶೇರು ಹೋಲ್ಡರರಿಗೆ ಕೊಡಬೇಕಾದ ಹಣದ ಬಗ್ಗೆ ವಿಚಾರ ಮಾಡಿಸುತ್ತೇನೆ.

ಉಪಾಧ್ಯಕ್ಷರು.—ಬೇಡಿಕೆ ಮೇಲೆ ಚರ್ಚೆ ಮತ್ತು ಉತ್ತರ ಇಲ್ಲಿಗೆ ಮುಕ್ತಾಯವಾಯಿತು. ಈಗ ಪ್ರಸ್ತಾವನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವ ಏನೆಂದರೆ,

"೩೧–೩–೧೯೭೮ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಯ ಸಂಖ್ಯೆ ೯ಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗನ್ನು ಮಂಜೂರ್ಮಾಡಬೇಕು."

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಯನ್ನು ಮಂಜೂರ್ಮಾಡಲಾಯಿತು.

(ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಯನ್ನು ಕೆಳಗೆ ನಮೂದಿಸಲಾಗಿದೆ.)

ಅಭಿಯಾಚನೆ ಕ್ರಮಾಂಕ ೯ ಸಹಕಾರಿ ಉದ್ಯಮಗಳು

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೭೮ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಹಕಾರಿ ಉದ್ಯಮ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೨,೬೭,೨೬,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೫೭ ೫೪,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರ್ಮಾಡುವುದು."

ಧಾರ್ಮಿಕ, ಧಾರ್ಮಿಕ ದತ್ತಿಗಳ, ಖುಷ್ಕಿ ಭೂ ಅಭಿವೃದ್ಧಿ ಹಾಗೂ ಕ್ರಮಪಡಿಸಿದ ಮಾರುಕಟ್ಟೆಗಳ ರಾಜ್ಯ ಸಚಿವರಿಂದ ಉತ್ತರ.

ಶ್ರೀ ಕೆ. ಅಮರನಾಥ ಶೆಟ್ಟಿ (ಧಾರ್ಮಿಕ, ಧಾರ್ಮಿಕ ದತ್ತಿಗಳ, ಖುಷ್ಕಿ ಭೂ ಅಭಿವೃದ್ಧಿ ಹಾಗೂ ಕ್ರಮಪಡಿಸಿದ ಮಾರುಕಟ್ಟೆಗಳ ರಾಜ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ಮಾರುಕಟ್ಟೆ ಇಲಾಖೆಯ ಬಗ್ಗೆ ಹಿರಿಯ ಸದಸ್ಯರಾದ ಪಾಟೀಲರು, ಶಿವನಂಜಪ್ಪನವರು, ವೆಂಕಟರಾಮ್ಯನವರು ಪಂಪಾಪತಿಯವರು ಕೆಲವೊಂದು ವಿಷಯಗಳ ಬಗ್ಗೆ ಏನು ಪ್ರಸ್ತಾಪ ಮಾಡಿದ್ದಾರೆ ಅದಕ್ಕೆ ಕೊನೆಯದಾಗಿ ಉತ್ತರ ಕೊಡಲು ಬಯಸುತ್ತೇನೆ. ಕೃಷಿ ಉತ್ಪನ್ನ ಮಾರುಕಟ್ಟೆಯ ಮುಖಾಂತರ ರಾಜ್ಯದಲ್ಲಿ ಬೆಳೆದ ಉತ್ಪಾನ್ನಗಳಿಗೆ ಹೆಚ್ಚಿನ ಬೆಲೆಯನ್ನು ಕೊಡಿಸುವ ದೃಷ್ಟಿಯಿಂದ, ರೈತರಿಗೆ ಮಧ್ಯವರ್ತಿಗಳಿಂದ ಶೋಷಣೆಯಾಗದ ಹಾಗೆ ಮಾಡಲಿಕ್ಕೆ ಮಾರುಕಟ್ಟೆಗಳನ್ನು ಸ್ಥಾಪಿಸಿರುವುದು ಮುಖ್ಯ ಉದ್ದೇಶವಾಗಿದೆ. ರಾಜ್ಯದಲ್ಲಿ ೧೧೬ ಮುಖ್ಯ ಮಾರುಕಟ್ಟೆಗಳು ಮತ್ತು ೨೪೫ ಉಪ ಮಾರುಕಟ್ಟೆಗಳು ಇವೆ. ೧೧೬ ಮುಖ್ಯ ಮಾರುಕಟ್ಟೆಗಳಲ್ಲಿ ೭೬ ಮುಖ್ಯ ಮಾರುಕಟ್ಟೆಗಳು ಸ್ವಂತ ತಮ್ಮದೇ ಆದ ಪ್ರಾಂಗಣವನ್ನು ಹೊಂದಿದ್ದು ವ್ಯಾಪಾರವನ್ನು ಅಲ್ಲಿಗೆ ಸ್ಥಳಾಂತರ ಮಾಡಿವೆ. ೩೧ ಮಾರುಕಟ್ಟೆಗಳು ಜಮೀನನ್ನು ಹೊಂದಿದ್ದು ಅಭಿವೃದ್ಧಿ ಕಾರ್ಯಗಳನ್ನು ಈಗ ಕೈಗೊಳ್ಳುತ್ತಿವೆ. ಉಳಿದ ೯ ಮಾರುಕಟ್ಟೆಗಳಿಗೆ ಸರಿಯಾದ ಭೂಮಿ ಸಿಕ್ಕದೆ ಭೂಸ್ವಾಧೀನಗೋಸ್ಕರ ಪ್ರಯತ್ನವನ್ನು ಮಾಡುತ್ತಿದ್ದೇವೆ. ಇವತ್ತು ೨೪೫ ಉಪ ಮಾರುಕಟ್ಟೆಗಳಲ್ಲಿ ೩೩ ಉಪ ಮಾರುಕಟ್ಟೆಗಳು ಸ್ವಂತ ಪ್ರಾಂಗಣವನ್ನು ಹೊಂದಿದ್ದು ತನ್ನ ವ್ಯಾಪಾರವನ್ನು ಅಲ್ಲಿಗೆ ಸ್ಥಳಾಂತರ ಮಾಡಿದೆ. ೯೮ ಉಪ ಮಾರುಕಟ್ಟೆಗಳು ಜಮೀನನ್ನು ಹೊಂದಿದ್ದು ಅದರ ಅಭಿವೃದ್ಧಿ ಕಾರ್ಯಗಳನ್ನು ಬಹಳ ಪ್ರಗತಿಯಿಂದ ಮುಂದುವರೆಸುತ್ತಿದೆ. ಉಳಿದ ೧೧೪ ಮಾರುಕಟ್ಟೆಗಳಲ್ಲಿ ಭೂಸ್ವಾಧೀನಕ್ಕೋಸ್ಕರ ಈಗಾಗಲೇ ಕ್ರಮವನ್ನು ಕೈಗೊಂಡಿದ್ದೇವೆ, ೧೧೬ ಮುಖ್ಯ ಮಾರುಕಟ್ಟೆಗಳಲ್ಲಿ ೭೬ ಮುಖ್ಯ ಮಾರುಕಟ್ಟೆಗಳಿಗೆ ಪ್ರಾಂಗಣ ಇದೆ, ವ್ಯಾಪಾರವನ್ನು ಅಲ್ಲಿಗೆ ಸ್ಥಳಾಂತರಿಸಿದ್ದೇವೆ. ೧೯೭೭–೭೮ರಲ್ಲಿ ಸಂಪೂ[illegible],೭೨೭ ಕೋಟಿ ರೂಪಾಯಿಗಳ ವ್ಯವಸಾಯೋತ್ಪನ್ನದ ವ್ಯವಹಾರ ಆಗಿದೆ. ಐದು

ವರ್ಷಗಳ ತಃಖ್ತೆಯನ್ನು ತಪ್ಪು ಮುಂದಿಟ್ಟಾಗ ೧೯೮೩-೮೪ರಲ್ಲಿ ೧,೦೧೧ ಕೋಟಿ ರೂಪಾಯಿಗಳ ವ್ಯವಹಾರ ಆಗಿದೆ. ೧೯೮೪-೮೫ರಲ್ಲಿ ೧,೩೨೪ ಕೋಟಿ ರೂಪಾಯಿಗಳ ವ್ಯವಹಾರ ಆಗಿವೆ. ೧೯೮೫-೮೬ರಲ್ಲಿ ೧,೧೮೭ ಕೋಟಿ ರೂಪಾಯಿಗಳ ವ್ಯವಹಾರ ಆಗಿವೆ. ೧೯೮೬-೮೭ರಲ್ಲಿ ೧.೩೨೯ ಕೋಟಿ ರೂಪಾಯಿಗಳ ವ್ಯವಹಾರ ಆಗಿದೆ. ೧೯೮೭-೮೮ರಲ್ಲಿ ೧,೭೨೨ ಕೋಟಿ ರೂಪಾಯಿಗಳ ವ್ಯವಹಾರ ಆಗಿದೆ. ಈ ಮಾರುಕಟ್ಟೆಗಳಿಂದ ಬಂದಿರುವ ಆದಾಯ ಈ ರೀತಿ ಇದೆ. ೧೯೮೩-೮೪ರಲ್ಲಿ ಖರೀದಿದಾರರಿಂದ ಎರಡು ಪರ್ಸೆಂಟ್ ಸೆಸ್ ತೆಗೆದುಕೊಳ್ಳುತ್ತಿದ್ದು ಮಾರುಕಟ್ಟೆ ಶುಲ್ಕ- ಲೈಸೆನ್ಸ್ ಶುಲ್ಕ ಎಲ್ಲಾ ಆದಾಯ ಸೇರಿಕೊಂಡು ೨೦ ಕೋಟಿ ೫೯ ಲಕ್ಷ ರೂಪಾಯಿ ಆದಾಯ ಮಾರುಕಟ್ಟೆಗಳಿಂದ ಬಂದಿದೆ. ೧೯೮೪-೮೫ರಲ್ಲಿ ೨ ಪರ್ಸೆಂಟ್ ಇದ್ದ ಸೆಸ್ಸನ್ನು ೧ ಪರ್ಸೆಂಟಿಗೆ ಇಳಿಸಿದ ನಂತರ ೧೬ ಕೋಟಿ ೭ ಲಕ್ಷ ರೂಪಾಯಿ ಆದಾಯ ಬಂದಿದೆ. ೧೯೮೫-೮೬ರಲ್ಲಿ ೧ ಪರ್ಸೆಂಟ್ ಸೆಸ್ ಪ್ರಕಾರ ೧೫ ಕೋಟಿ ೯೬ ಲಕ್ಷ ರೂಪಾಯಿ ಆದಾಯ ಬಂದಿದೆ ೧೯೮೬-೮೭ರಲ್ಲಿ ೧ ಪರ್ಸೆಂಟ್ ಸೆಸ್ ತೆಗೆದುಕೊಂಡು ಮಾರುಕಟ್ಟೆ ಶುಲ್ಕ, ಲೈಸೆನ್ಸ್ ಶುಲ್ಕ ಎಲ್ಲಾ ಆದಾಯಗಳು ಸೇರಿಕೊಂಡು ೧೭ ಕೋಟಿ ೩೨ ಲಕ್ಷ ರೂಪಾಯಿಗಳ ಆದಾಯ ಬಂದಿದೆ. ೧೯೮೭-೮೮ರಲ್ಲಿ ೧ ಪರ್ಸೆಂಟ್ ಸೆಸ್ ತೆಗೆದುಕೊಂಡು ಎಲ್ಲ ಮೂಲಗಳ ಆದಾಯ ಸೇರಿ ೨೦ ಕೋಟಿ ೮೨ ಲಕ್ಷ ರೂಪಾಯಿಗಳ ಆದಾಯ ಬಂದಿದೆ ೧೯೮೩-೮೪ರಲ್ಲಿ ೨ ಪರ್ಸೆಂಟ್ ಸೆಸ್ ತೆಗೆದುಕೊಂಡು ೨೦ ಕೋಟಿ ೫೯ ಲಕ್ಷ ರೂಪಾಯಿ ಆದಾಯ ಇದ್ದರೆ ೧೯೮೭-೮೮ರಲ್ಲಿ ೧ ಪರ್ಸೆಂಟ್ ಸೆಸ್ ಇದ್ದರೂ ೨೦ ಕೋಟಿ ೮೨ ಲಕ್ಷ ರೂಪಾಯಿ ಆದಾಯ ಮಾಡಿದ್ದೇವೆ ಎಂದು ಹೇಳುವುದಕ್ಕೆ ಬಯಸುತ್ತೇನೆ ೧೯೮೮-೮೯ನೇ ಸಾಲಿನಲ್ಲಿ ಕೈಗೊಳ್ಳಬೇಕಾದ ಪ್ರಮುಖ ಕಾರ್ಯಕ್ರಮಗಳನ್ನು ಈ ಸಭೆಯ ಮುಂದೆ ಇಡುತ್ತೇನೆ, ಸಂತೆಗಳ ಅಭಿವೃದ್ಧಿ ಮಾಡಬೇಕೆಂದು ಕ್ರಮ ತೆಗೆದುಕೊಂಡಿದ್ದೇವೆ. ನಮ್ಮ ರಾಜ್ಯದಲ್ಲಿ ೯೭೨ ವಾರದ ಸಂತೆಗಳು ನಡೆಯುತ್ತವೆ. ೧೯೮೨-೮೩ರಲ್ಲಿ ರಾಜ್ಯ ಸರ್ಕಾರದ ಯೋಜನೆ ಅಡಿಯಲ್ಲಿ ೩೦ ಸಂತೆಗಳನ್ನು ಈಗಾಗಲೇ ಅಭಿವೃದ್ಧಿಗೊಳಿಸಲಾಗಿದೆ ಉಳಿದಿರುವಂಥ ಸಂತೆಗಳಲ್ಲಿ ಅಂದರೆ ೯೭೨ ಸಂತೆಗಳಲ್ಲಿ ೪೩೩ ಸಂತೆಗಳನ್ನು ಅಭಿವೃದ್ಧಿ ಮಾಡಬೇಕೆಂದು ಸಮೀಕ್ಷೆ ನಡೆಸಿದ್ದೆವು ಅದರಲ್ಲಿ ೧೧೪ ಸಂತೆಗಳನ್ನು ೧ ಕೋಟಿ ೭೧ ಲಕ್ಷ ರೂಪಾಯಿನಲ್ಲಿ ಅಭಿವೃದ್ಧಿ ಮಾಡುವುದಕ್ಕೆ ಮಂಜೂರಾತಿಯನ್ನು ನೀಡಲಾಗಿದೆ. ೫೨ ಸಂತೆಗಳು ಮಾರಾಟ ಮಂಡಲಿ ಸಮೀಕ್ಷೆಯಿಂದ ಗುರುತಿಸಿದ ೪೩೩ ಸಂತೆಗಳಲ್ಲಿ ಸೇರಿರುತ್ತದೆ. ೧೧೪ ಸಂತೆಗಳಲ್ಲಿ ೨೯ ಸಂತೆಗಳ ಕಾರ್ಯ ಈಗಾಗಲೇ ಮುಗಿದಿದ್ದು ೮೫ ಸಂತೆಗಳ ಅಭಿವೃದ್ಧಿ ಕಾರ್ಯ ಪ್ರಗತಿಯಲ್ಲಿದೆ, ಕೇಂದ್ರದ ಧನ ಸಹಾಯದಿಂದ ಮಾರುಕಟ್ಟೆ ಅಭಿವೃದ್ಧಿಯನ್ನು ಮಾಡುವಲ್ಲಿ ನಾವು ಕ್ರಮ ತೆಗೆದುಕೊಂಡಿದ್ದೇವೆ. ಇದಕ್ಕೆ ೧೦೦ ಪರ್ಸೆಂಟ್ ಏಡ್ ಕೇಂದ್ರ ಸರ್ಕಾರದಿಂದ ನಮಗೆ ಸಿಗುತ್ತದೆ. ಕೇಂದ್ರ ಸರ್ಕಾರದಿಂದ ೭೭ ಮುಖ್ಯ ಮಾರುಕಟ್ಟೆಗಳಿಗೆ ೩.೩೧ ಕೋಟಿ ರೂಪಾಯಿಗಳು ಮತ್ತು ೮೪ ಉಪಮಾರುಕಟ್ಟೆಗಳಿಗೆ ೧.೨೪ ಕೋಟಿ ರೂಪಾಯಿಗಳನ್ನು ಒಟ್ಟು ೪.೫೫ ಕೋಟಿ ರೂಪಾಯಿಗಳ ಸಹಾಯಧನವನ್ನು ಪಡೆದು ಅಭಿವೃದ್ಧಿ ಕಾರ್ಯಗಳನ್ನು ಈಗಾಗಲೇ ನಾವು ಕೈಗೊಂಡಿದ್ದೇವೆ. ಇದರಲ್ಲಿ ೭೭ ಮುಖ್ಯ ಮಾರುಕಟ್ಟೆಗಳಲ್ಲಿ ೬೭ ಮುಖ್ಯ ಮಾರುಕಟ್ಟೆಗಳು ಕಂಪ್ಲೀಟ್ ಆಗಿವೆ. ೮೪ ಉಪ ಮಾರುಕಟ್ಟೆಗಳಲ್ಲಿ ೬೮ ಮಾರುಕಟ್ಟೆಗಳ ಕೆಲಸ ಈಗಾಗಲೇ ಕಂಪ್ಲೀಟ್ ಆಗಿದೆ ಎಂಬುದನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

೧೨-೩೦ ಪಿ.ಎಂ.

ಈ ಕೆಳಕಂಡ ೮ ಮುಖ್ಯ ಮಾರುಕಟ್ಟೆಗಳು ಹಾಗೂ ೧೩ ಉಪ ಮಾರುಕಟ್ಟೆಗಳನ್ನು ಅಭಿವೃದ್ಧಿ ಪಡಿಸಲು ೧.೨೫ ಕೋಟಿ ರೂಪಾಯಿಗಳ ಯೋಜನೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೇವೆ. ಅಲ್ಲಿಂದ ಬಂದ ಕೂಡಲೇ ಈ ಕೆಲಸಗಳನ್ನು ಕೂಡಾ ಕೈಗೊಳ್ಳುತ್ತೇವೆ. ೮ ಮುಖ್ಯ ಮಾರುಕಟ್ಟೆಗಳು ಈ ಕೆಳಕಂಡಂತೆ ಇವೆ.

೧. ಬೆಳಗಾವಿ ೨. ರಾಯಚೂರು ೩. ಗಂಗಾವತಿ ೪ ಹೊಸಪೇಟೆ ೫ ಗೋಣಿಕೊಪ್ಪಲ್ ೬ ಚನ್ನಗಿರಿ ೭ ಹಿರೇಕೆರೂರು ೮. ಗುಬ್ಬಿ

ಮಾನ್ಯ ಶಿವನಂಜಪ್ಪನವರು ಈ ಬಗ್ಗೆ ಕೇಳಿದಾಗ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೆ. ಇದಕ್ಕೆ ೪ ಲಕ್ಷ ರೂಪಾಯಿ ಎಸ್ಟಿಮೇಟ್ ಆಗಿದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ೧೩ ಉಪ ಮಾರುಕಟ್ಟೆಗಳು ಈ ಕೆಳಕಂಡಂತಿವೆ.—

೧. ಅರಕಲಗೂಡು ೨ ಸಿಂಧಗಿ ೩. ತಾವರೆಕೆರೆ ೪. ಹೊಸಪೇಟೆ ೫. ಕುಂದಾಪುರಾ ೬. ಖಾನಾಪುರ ೭. ಇಂಡಿ ೮ ಚಟಚಣ ೯ ಹಿರೇಬಾಗೇವಾಡಿ ೧೦. ಶ್ರೀರಾಮಪುರ ೧೧. ಮುರಗೋಡ ೧೨. ಮುಂದಗೋಡ ೧೩. ಕಾರಟಗಿ

ಇನ್ನು ಗ್ರಾಮೀಣ ಗೋದಾಮುಗಳ ನಿರ್ಮಾಣದ ಬಗ್ಗೆ ಹೇಳುವುದಾದರೆ, ಗ್ರಾಮೀಣ ಗೋದಾಮುಗಳ ನಿರ್ಮಾಣ ಯೋಜನೆಯಲ್ಲಿ ೧೯೮೧–೮೨ ರಿಂದ ೧೯೮೫–೮೬ರವರೆಗೆ ೩.೭೨ ಕೋಟಿ ರೂಪಾಯಿಗಳ ವೆಚ್ಚದಲ್ಲಿ ೨೬೮ ಗೋದಾಮುಗಳು ಮಂಜೂರಾಗಿದ್ದು ಇವುಗಳಲ್ಲಿ ೧೯೩ ಗೋದಾಮುಗಳು ಪೂರ್ಣಗೊಂಡಿವೆ. ಈ ವೆಚ್ಚದಲ್ಲಿ ಕೇಂದ್ರ ಸರ್ಕಾರ ಕಾಲು ಭಾಗ, ಕೃಷಿ ಮಾರಾಟ ಮಂಡಲಿ ಕಾಲುಭಾಗ, ಇನ್ನುಳಿದ ಅರ್ಧ ಭಾಗ ಆಯಾ ಮಾರುಕಟ್ಟೆ ಸಮಿತಿಗಳಿಂದ ಭರಿಸಲಾಗುತ್ತಿದೆ. ೪ನೇ ಹಂತದಲ್ಲಿ ೫೪ ಗೋದಾಮುಗಳನ್ನು ನಿರ್ಮಿಸಲು ೧.೩೫ ಕೋಟಿ ರೂಪಾಯಿಗಳ ವೆಚ್ಚದ ಯೋಜನೆಯನ್ನು ಕೇಂದ್ರ ಸರ್ಕಾರಕ್ಕೆ ಮಂಜೂರಾತಿಗಾಗಿ ಕಳುಹಿಸಲಾಗಿದ್ದು, ಮಂಜೂರಾತಿಯನ್ನು ನಿರೀಕ್ಷಿಸಲಾಗುತ್ತಿದೆ. ಮಂಜೂರಾತಿ ಬಂದಕೂಡಲೇ ಈ ಕೆಲಸವನ್ನು ಪ್ರಾರಂಭ ಮಾಡುತ್ತೇವೆಂದು ಹೇಳುತ್ತೇನೆ.

ನಬಾರ್ಡ್ ಸಂಸ್ಥೆಯಿಂದ ಸಾಲವನ್ನು ತೆಗೆದುಕೊಂಡು ಮಾರುಕಟ್ಟೆಗಳನ್ನು ಅಭಿವೃದ್ಧಿ ಮಾಡಬೇಕೆನ್ನುವ ಯೋಜನೆಯಿಂದ ಪ್ರಸಕ್ತ ವರ್ಷದಲ್ಲಿ ನಬಾರ್ಡ್ ಸಂಸ್ಥೆಯ ಮೂಲಕ ೨.೧೪ ಕೋಟಿ ರೂಪಾಯಿಗಳ ಸಾಲವನ್ನು ಪಡೆಯಬೇಕೆಂದು ಯೋಚನೆ ಮಾಡಿದ್ದೇವೆ. ಇದರಲ್ಲಿ ೧೧ ಮಾರುಕಟ್ಟೆ ಸಮಿತಿಗಳ ಪ್ರಾಂಗಣಗಳನ್ನು ಅಭಿವೃದ್ಧಿಪಡಿಸಲು ಯೋಚನೆ ಮಾಡಲಾಗಿದೆ. ೧. ಚನ್ನಪಟ್ಟಣ ೨. ನರಗುಂದ ೩. ಬಾದಾಮಿ ೪. ಕೊಟ್ಟೂರು ೫. ರಾಮದುರ್ಗ ೬. ಹೊಳೆ–ಆಲೂರು ೭. ತುರುವೇಕೆರೆ ೮. ಭದ್ರಾವತಿ ೯. ಚಾಮರಾಜನಗರ ೧೦. ನಂಜನಗೂಡು ೧೧, ಶೋರಾಪುರ. ಇಷ್ಟು ಕಡೆ ನಬಾರ್ಡ್‌ನಿಂದ ಸಾಲ ಪಡೆದು ಮಾರುಕಟ್ಟೆ ಸಮಿತಿಗಳ ಪ್ರಾಂಗಣಗಳನ್ನು ಅಭಿವೃದ್ಧಿಪಡಿಸಲು ಯೋಚಿಸಲಾಗಿದೆ,

ಇನ್ನು ವಿಶ್ವಬ್ಯಾಂಕಿನ ಮೊದಲನೆಯ ಹಂತದ ಯೋಜನೆಯಲ್ಲಿ ೯.೪೮ ಕೋಟಿ ರೂಪಾಯಿಗಳ ಸಾಲ ಪಡೆದು ೪೭ ಮುಖ್ಯ ಮಾರುಕಟ್ಟೆಗಳು ಹಾಗೂ ೧೫ ಉಪಮಾರುಕಟ್ಟೆಗಳನ್ನು ಅಭಿವೃದ್ಧಿ ಮಾಡಿದ್ದೇವೆ. ಇನ್ನೂ ಕೆಲವೊಂದು ಮಾರುಕಟ್ಟೆ ಸಮಿತಿಗಳಿಂದ ಸಾಲ ಮರುಪಾವತಿ ಆಗಬೇಕಾಗಿದೆ. ಇನ್ನು ವಿಶ್ವಬ್ಯಾಂಕಿನ ದ್ವಿತೀಯ ಹಂತದ ಯೋಜನೆಯಲ್ಲಿ ರಾಯಚೂರು ಮತ್ತು ಹುಬ್ಬಳ್ಳಿಗಳಲ್ಲಿ ಆಧುನಿಕ ಹತ್ತಿ ಮಾರುಕಟ್ಟೆ ಪ್ರಾಂಗಣಗಳನ್ನು ಹಾಗೂ ಬೆಂಗಳೂರು ಮತ್ತು ಮೈಸೂರುಗಳಲ್ಲಿ ಹಣ್ಣು ತರಕಾರಿಗಳ ಮಾರಾಟಕ್ಕಾಗಿ ಪ್ರತ್ಯೇಕವಾದ ಆಧುನಿಕ ಪ್ರಾಂಗಣಗಳನ್ನು ಅಭಿವೃದ್ಧಿ ಪಡಿಸಲು ಮತ್ತು ಇನ್ನಿತರೆ ಮಾರುಕಟ್ಟೆಗಳನ್ನು ಅಭಿವೃದ್ಧಿಪಡಿಸಲು ೬೦ ಕೋಟಿ ರೂಪಾಯಿಗಳ ಯೋಜನೆಯನ್ನು ರೂಪಿಸಿದ್ದು ಸಧ್ಯದಲ್ಲೇ ಮಂಜೂರಾತಿಗಾಗಿ ಪ್ರಸ್ತಾವನೆ ಕಳುಹಿಸಬೇಕಾಗಿದೆ. ನಿನ್ನೆಯ ದಿವಸ ಮಾನ್ಯ ಶಿವನಂಜಪ್ಪನವರು ಕೋಲ್ಡ್ ಸ್ಟೋರೇಜ್ ವ್ಯವಸ್ಥೆಯನ್ನು ಒದಗಿಸುತ್ತೀರಾ ಎಂದು ಕೇಳಿದ್ದಾರೆ. ಇವತ್ತು ಮಾರುಕಟ್ಟೆ ಸಮಿತಿಗಳಲ್ಲಿ ಹಣದ ತೊಂದರೆ ಇರುವುದರಿಂದ ಬೇರೆ ಕಡೆ ಇವನ್ನು ವ್ಯವಸ್ಥೆ ಮಾಡುವುದು ಕಷ್ಟ ಇದೆ. ಆದರೂ ಕೂಡಾ ಬೆಂಗಳೂರು ಮತ್ತು ಮೈಸೂರಿನಲ್ಲಿ ಮಾಡಿರುವುದರಲ್ಲೇ ಈ ಒಂದು ಕೋಲ್ಡ್ ಸ್ಟೋರೇಜ್ ಮಾಡುವ ಆಲೋಚನೆಯನ್ನು ನಾವು ಮಾಡುತ್ತಿದ್ದೇವೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಇನ್ನು ಮಾರುಕಟ್ಟೆ ಸಮಿತಿಗಳ ಚುನಾವಣೆ ಬಗ್ಗೆ ಹೇಳುವುದಿದ್ದರೆ ಅದು ಇಷ್ಟರಲ್ಲೇ ಅಂದರೆ ಮೇ ತಿಂಗಳಲ್ಲೇ ನಡೆಯಬೇಕಾಗಿತ್ತು, ಆದರೆ ಕೆಲವೊಂದು ಕಾರಣಗಳಿಂದ ಅಂದರೆ ಗ್ರಾಜ್ಯುಯೇಟ್ ಕಾನ್ಸಿಟ್ಯೂಯೆನ್ಸಿ ಎಲೆಕ್ಷನ್ ಮತ್ತು ಟೀಚರ್ಸ್ ಕಾನ್ಸಿಟ್ಯೂಯೆನ್ಸಿ ಎಲೆಕ್ಷನ್ ಮತ್ತು ಮಳೆಗಾಲದ ಪ್ರಾರಂಭದಿಂದ ಈ ಚುನಾವಣೆಯನ್ನು ಈಗಾಗಲೇ ಮುಂದೂಡಿದ್ದೇವೆ. ಇದರ ಜೊತೆಗೆ ನಿಗದಿತ ಕಾಲಾವಧಿ ಮುಗಿದ ಸಮಿತಿಗಳಿಗೆ ಚುನಾವಣೆ ನಡೆದು ಹೊಸ ಸಮಿತಿಗಳು ಅಸ್ತಿತ್ವಕ್ಕೆ ಬರುವವರೆಗೆ ಈಗಿರುವ ಸಮಿತಿಗಳನ್ನೇ ಮುಂದುವರೆಸುವ ಕೆಲಸವನ್ನು

ಮಾಡುತ್ತೇವೆ ಎಂದು ಕೂಡ ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಈ ಚುನಾವಣೆಯನ್ನು ಸೆಪ್ಟಂಬರ್ ೧ ರಿಂದ ಅಕ್ಟೋಬರ್ ೧೬ರೊಳಗೆ ಮಾಡಬೇಕೆಂಬ ನಿರ್ಣಯವನ್ನು ನಾವು ಈಗಾಗಲೇ ತೆಗೆದುಕೊಂಡಿದ್ದೇವೆ. ಇನ್ನು ಮಾರುಕಟ್ಟೆ ವಿಷಯದಲ್ಲಿ ದಳ್ಳಾಳಿಗಳಿಂದ ತೊಂದರೆ ಮತ್ತು ಹಣ ಸೋರಿಹೋಗುವಂಥ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ ಈ ಕಾರಣಕ್ಕೋಸ್ಕರ ಮಾರುಕಟ್ಟೆ ಕಾಯಿದೆಯನ್ನು ಪರಿಣಾಮಕಾರಿಯಾಗಿ ಜಾರಿಗೆ ತಂದು ರೈತರಿಗೆ ಹೆಚ್ಚಿನ ಸೌಲಭ್ಯವನ್ನು ಒದಗಿಸುವುದಕ್ಕೋಸ್ಕರ ಶ್ರೀ ಅಜ್ಜೀಬಾಳ ಹೆಗಡೆಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿದ್ದೇವೆ. ಅದರಲ್ಲಿ ಶ್ರೀ ಕೆ. ಎಚ್. ಪಾಟೀಲರು ಸದಸ್ಯರಿದ್ದಾರೆ. ಈಗಾಗಲೇ ಈ ಸಮಿತಿಯವರು ಅಧ್ಯಯನ ಕಾರ್ಯವನ್ನು ಕೈಗೊಂಡಿದ್ದಾರೆ. ಜೂನ್ ತಿಂಗಳ ಅಂತ್ಯದೊಳಗೆ ರಿಪೋರ್ಟ್‌ನ್ನು ಕೊಡುವ ಆಶಯವನ್ನು ವ್ಯಕ್ತಪಡಿಸಿದ್ದಾರೆ. ಅದು ಬಂದ ಕೂಡಲೇ ಇನ್ನೂ ಹೆಚ್ಚಿನ ಪರಿಣಾಮಕಾರಿಯಾಗಿ ರೈತರಿಗೆ ಏನೇನು ಅನ್ಯಾಯ ಆಗುತ್ತಿದೆ ಅದನ್ನು ಸರಿಪಡಿಸಲಿಕ್ಕೆ ಪ್ರಯತ್ನ ಪಡುತ್ತೇನೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಶಿವನಂಜಪ್ಪನವರು ಮಾತನಾಡುತ್ತಾ ದಳ್ಳಾಳಿಗಳು ರೈತರಿಂದ ಕಮಿಷನ್ ವಸೂಲು ಮಾಡುತ್ತಿದ್ದಾರೆ.ಎಂದು ಹೇಳಿದ್ದಾರೆರೈತರಿಂದ ಕಮಿಷನ್ ಪಡೆಯಬಾರದು ಎಂದು ಕಾನೂನುಇದ್ದರೂ ಕೂಡ ಸಾಕಷ್ಟು ಪ್ರಚಾರ ಕಾರ್ಯಕ್ರಮಗಳನ್ನು ಮಾಡಿದರೂ ಕೂಡ ಕೆಲವು ಕಡೆ ರೈತರ ಶೋಷಣೆ ನಡೆಯುತ್ತಿದೆ ಎಂಬುದನ್ನು ನನ್ನ ಗಮನಕ್ಕೆ ತಂದಿದ್ದಾರೆ, ಈಗಾಗಲೇ ೨೧೨ ಪ್ರಕರಣಗಳನ್ನು ಬುಕ್ ಮಾಡಿಕೊಂಡು ೫೧.೨೧೩ ರೂಪಾಯಿಗಳನ್ನು ವಸೂಲು ಮಾಡಿಕೊಂಡು ರೈತರಿಗೆ ಹಿಂದಕ್ಕೆ ಕೊಡುವಂಥ ಕಾರ್ಯಕ್ರಮವನ್ನು ಕೂಡ ಮಾಡಿದ್ದೇವೆ. ಇಂತಹ ಪ್ರಕರಣಗಳಿಗೆ ಸೇರಿದಂಥ ದಳ್ಳಾಳಿಗಳು ಯಾರಿದ್ದಾರೆ ಅವರ ಲೈಸೆನ್ಸ್‌ನ್ನು ಸಸ್ಪೆಂಡ್ ಮಾಡುವಂಥ ಕಾರ್ಯಕ್ರಮವನ್ನು ಕೂಡ ಇಷ್ಟರಲ್ಲೇ ತೆಗೆದುಕೊಂಡಿದ್ದೇವೆ.

ಶ್ರೀ ಕೆ.ಹೆಚ್. ಪಾಟೀಲರು ಒಂದು ಸಲಹೆಯನ್ನು ಕೊಟ್ಟಿದ್ದಾರೆ. ಮಾರ್ಕೆಟಿಂಗ್ ಸಲುವಾಗಿ ಟಿ.ಎ.ಪಿ.ಸಿ.ಎಂ.ಎಸ್. ಮತ್ತು ಎ.ಪಿ.ಎಂ.ಸಿ.ಗಳನ್ನು ಲಿಂಕ್ ಮಾಡಬೇಕೆಂದು ಒಳ್ಳೆಯ ಸೂಚನೆಯನ್ನು ಕೊಟ್ಟಿದ್ದಾರೆ. ಅದನ್ನು ನಾನು ಪರಿಶೀಲನೆ ಮಾಡುತ್ತೇನೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಶ್ರೀ ವೆಂಕಟರಾಮಯ್ಯನವರು ಸಹ ಇದೇ ವಿಷಯವಾಗಿ ಬಹಳ ತೊಂದರೆ ಇದೆಯೆಂದು ಹೇಳಿದ್ದಾರೆ. ಈ ವಿಷಯದಲ್ಲಿ ಈಗಾಗಲೇ ೨೧೨ ಪ್ರಕರಣಗಳನ್ನು ಬುಕ್ ಮಾಡಿದ್ದೇವೆ ಎಂದು ಹೇಳಿದ್ದೇನೆ ಬಾಂಗಾರುಪೇಟೆಯಲ್ಲಿ ಕಾರ್ಯದರ್ಶಿಯವರ ಮೇಲೆ ಅವರು ಆಪಾದನೆ ಮಾಡಿದ್ದಾರೆ. ಅವರ ಮೇಲೆ ಬೇರೆ ಆಪಾದನೆಗಳೂ ಬಂದಿವೆ. ಅವರನ್ನು ಅಲ್ಲಿಂದ ವರ್ಗಾವಣೆ ಮಾಡುವಂಥ ಕಾರ್ಯವನ್ನು ಮಾಡುತ್ತಿದ್ದೇವೆ. ಶ್ರೀ ಪಂಪಾಪತಿಯವರು ದಾವಣಗೆರೆ ಸೊಸೈಟಿಯಲ್ಲಿ ದಳ್ಳಾಳಿಗಳಿಂದ ಬಹಳಷ್ಟು ತೊಂದರೆ ಇದೆಯೆಂದು ಹೇಳಿದ್ದಾರೆ. ಅವರು ಹೇಳಿದ್ದುದು ಸತ್ಯವಾದ ಮಾತು. ಇದನ್ನು ತಿಳಿದುಕೊಂಡು ಅಲ್ಲಿ ೨೪ ಜನರ ಮೇಲೆ ಈಗಾಗಲೇ ಕೇಸು ದಾಖಲು ಮಾಡಿ ೫,೨೪೯.೩೨ ರೂಪಾಯಿಗಳನ್ನು ದಳ್ಳಾಳಿಗಳಿಂದ ವಸೂಲಿ ಮಾಡಿಕೊಂಡು ಅದನ್ನು ರೈತರಿಗೆ ವಾಪಾಸ್ಸು ಕೊಟ್ಟಿದ್ದೇವೆ. ಇದೇ ಹೊತ್ತಿಗೆ ಶ್ರೀ ವೆಂಕಟರಾಮಯ್ಯನವರು ಬಂಗಾರುಪೇಟೆಯ ವಿಷಯವನ್ನು ಹೇಳಿದ್ದಾರೆ. ನಮ್ಮ ಇಲಾಖೆಗೆ ಬಂದ ದೂರಿನ ಪ್ರಕಾರ ಇದುವರೆಗೆ ನಾಲ್ಕು ಕೇಸ್‌ಗಳನ್ನು ಬುಕ್ ಮಾಡಿ ೧೬೦ ರೂಪಾಯಿಗಳನ್ನು ವಸೂಲಿ ಮಾಡಿ ವಾಪಾಸ್ಸು ಅವರಿಗೆ ಕೊಟ್ಟಿದ್ದೇವೆ. ಸಂಬಂಧಪಟ್ಟ ದಳ್ಳಾಳಿಗಳ ಮೇಲೆ ಕ್ರಮ ತೆಗೆದುಕೊಂಡಿದ್ದೇವೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಹೆಚ್ಚಿಗೆ ನಾನು ಇದರಲ್ಲಿ ಏನೂ ಹೇಳಲು ಬಯಸುವುದಿಲ್ಲ, ಇದಕ್ಕೆ ಸಂಬಂಧಪಟ್ಟಂತೆ ಕಾನೂನನ್ನೂ ತಿದ್ದುಪಡಿಯಾಗಿ ಬಂದನಂತರ ಕೆಲವೊಂದು ವಿಷಯಗಳನ್ನು ಏನು ಹೇಳಿದ್ದಾರೆ ಅವುಗಳನ್ನು ಗಮನದಲ್ಲಿಟ್ಟುಕೊಂಡು ಏನೇನು ಸರಿಮಾಡಲಿಕ್ಕೆ ಸಾಧ್ಯವಿದೆಯೆಂದು ನೋಡಿ ರೈತರಿಗೆ ಹೆಚ್ಚಿನ ಅನುಕೂಲ ಕೊಡುವಂಥ ಕೆಲಸವನ್ನು ಮಾಡುವುದಕ್ಕೆ ಬಯಸುತ್ತೇನೆ ಎಂದು ಈ ಸಂದರ್ಭದಲ್ಲಿ ಹೇಳಿಕೊಂಡು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ಮಾರುಕಟ್ಟೆಗಳಲ್ಲಿ ಇರತಕ್ಕ ದಳ್ಳಾಳಿಗಳನ್ನು ಸಾಧ್ಯವಾದರೆ ಅವಾಯ್ಡ್ ಮಾಡಿ. ಯಾವ ದಿವಸ ರೈತ ತನ್ನ ವಸ್ತುಗಳನ್ನು ಮಾರಾಟ ಮಾಡುತ್ತಾನೆ, ಅದೇ ದಿವಸ ಅವನಿಗೆ ಪೇಮೆಂಟ್ ಆಗಬೇಕು. ಈ ದಳ್ಳಾಳಿಗಳು ಅದೇ ದಿನ ದುಡ್ಡು

ಕೊಡುವುದಿಲ್ಲ. ೧೫ ದಿವಸಗಳ ಕಾಲ ದಳ್ಳಾಳಿಗಳ ಹತ್ತಿರ ರೈತರು ಓಡಾಡಬೇಕಾಗುತ್ತದೆ, ದಯವಿಟ್ಟು ಇದನ್ನು ತಪ್ಪಿಸಬೇಕು.

ಶ್ರೀ ಕೆ. ಅಮರನಾಥ ಶೆಟ್ಟಿ.—ದಳ್ಳಾಳಿಗಳು ದುಡ್ಡು ಕೊಡುವುದನ್ನು ಡಿಲೆ ಮಾಡುತ್ತಾರೆಂದು ರೈತರಿಂದ ನಮಗೆ ದೂರುಗಳು ಬಂದರೆ, ಅವರನ್ನು ತೆಗೆಯುತ್ತೇವೆ.

ಶ್ರೀ ಆರ್. ವೆಂಕಟಸ್ವಾಮಯ್ಯ.—ಯಾರೂ ದೂರು ಕೊಡುವುದಕ್ಕಾಗುವುದಿಲ್ಲ. ಏಕೆಂದರೆ ರೈತರ ಮೇಲೆ ದಳ್ಳಾಳಿಗಳ ಹಿಡಿತ ಇರುತ್ತದೆ ತಕ್ಷಣ ಏನಾದರೂ ಆಗಲೀ ರೈತರಿಗೆ ಮಾರಾಟ ಮಾಡಿದ ವಸ್ತುಗಳಿಗೆ ದುಡ್ಡು ಕೊಡಬೇಕು. ದಯಮಾಡಿ ಈ ಬಗ್ಗೆ ಸ್ಪಷ್ಟ ಆಶ್ವಾಸನೆ ಕೊಡಬೇಕು.

ಶ್ರೀ ಕೆ. ಅಮರನಾಥ ಶೆಟ್ಟಿ.—ಮಾರಾಟ ಮಾಡಿದ ದಿನವೇ ದುಡ್ಡು ಕೊಡಿಸುವ ಕೆಲಸವನ್ನು ಮಾಡುತ್ತೇವೆ. ಜೊತೆಗೆ ರೈತರಿಂದ ಈ ಬಗ್ಗೆ ನಮಗೂ ದೂರುಗಳು ಬರಬೇಕು. ಈಗ ರೈತರಿಗೂ ಮತ್ತು ದಳ್ಳಾಳಿಗಳಿಗೂ ನಡುವೆ ಇರತಕ್ಕ ಸಂಬಂಧದ ಬಗ್ಗೆ ಮಾನ್ಯ ಅಜ್ಜೀಬಾಳ ಹೆಗಡೆಯವರ ನೇತೃತ್ವದಲ್ಲಿ, ಮಾನ್ಯ ಕೆ. ಹೆಚ್. ಪಾಟೀಲರನ್ನೂ ಸದಸ್ಯರನ್ನಾಗಿ ಮಾಡಿ ಕಮಿಟಿ ಮಾಡಿದ್ದೇವೆ.

ಶ್ರೀ ಕೆ. ಹೆಚ್. ಪಾಟೀಲ್.—ಈಗಾಗಲೇ ತಾವು ಕೇಳಿದಹಾಗೆ, ಅಜ್ಜೀಬಾಳ ಹೆಗಡೆಯವರ ಕಮಿಟಿ ರಿಪೋರ್ಟ್ ಬರುವತನಕ ಚುನಾವಣೆಯನ್ನು ಮುಂದೂಡುವುದು ಸೂಕ್ತವಲ್ಲವೇ ? ನಗರಾಭಿವೃದ್ಧಿ ಸಚಿವರೂ ಕೂಡ ಡಿಸೆಂಬರ್‌ವರೆಗೆ ಚುನಾವಣೆಗಳನ್ನು ಮುಂದಕ್ಕೆ ಹಾಕಿದ್ದಾರೆ. ಏಕೆಂದರೆ ಸೆಪ್ಟೆಂಬರ್ ತಿಂಗಳು ಮಳೆಗಾಲ ಇರುತ್ತದೆ. ಚುನಾವಣೆಯನ್ನು ನಡೆಸುತ್ತೇವೆಂದರೆ ಅದೊಂದು ಅಸೆಂಬ್ಲಿ ಚುನಾವಣೆಯ ತರಹ ದೊಡ್ಡ ಚುನಾವಣೆ ಆಗುತ್ತದೆ. ಆದುದರಿಂದ ಡಿಸೆಂಬರ್‌ವರೆಗೆ ಚುನಾವಣೆಯನ್ನು ಮುಂದೂಡುವ ಬಗ್ಗೆ ತಾವು ಉತ್ತರ ಹೇಳಬೇಕು.

ಶ್ರೀ ಕೆ. ಅಮರನಾಥ ಶೆಟ್ಟಿ.—ಇದನ್ನು ಪರಿಶೀಲನೆ ಮಾಡಿ ತಿಳಿಸುತ್ತೇನೆ.

ಶ್ರೀ ಬಿ. ಜಿ. ಜಮಖಂಡಿ.—ವಕ್ಕಲುತನ ಹಿಡುವಳಿ ಸಮಿತಿಯಲ್ಲಿ ಖರೀದಿದಾರರು, ರೈತರು, ಕಮೀಷನ್ ಏಜೆಂಟರು, ಸಹಕಾರ ಸಂಘಗಳ ಅಧ್ಯಕ್ಷರು ಆ ಸಮಿತಿಯಲ್ಲಿ ಇರುತ್ತಾರೆ. ಆದರೆ ಶ್ರಮಿಕ ವರ್ಗದ ಹಮಾಲರೂ ಕೂಡ ಲೈಸನ್ಸ್ ತೆಗೆದುಕೊಂಡಿರುತ್ತಾರೆ. ಅವರನ್ನು ಏಕೆ ವಕ್ಕಲುತನ ಸಮಿತಿಯಲ್ಲಿ ತೆಗೆದುಕೊಳ್ಳಬಾರದು ? ಹಮಾಲರನ್ನು ಪ್ರತಿನಿಧಿಗಳನ್ನಾಗಿ ಆ ಸಮಿತಿಯಲ್ಲಿ ಹಾಕಿದರೆ, ಸಹಕಾರ ಸಂಘಗಳು ಒಳ್ಳೆಯ ರೀತಿಯಲ್ಲಿ ನಡೆಯುತ್ತವೆ ಎಂದು ನನ್ನ ಭಾವನೆ.

ಶ್ರೀ ಕೆ. ಅಮರನಾಥ ಶೆಟ್ಟಿ.—ಈಗಾಗಲೇ ಕಮಿಟಿ ಆಗಿದೆ. ಆ ಕಮಿಟಿ ರಿಪೋರ್ಟ್ ಬಂದ ನಂತರ ಈ ವಿಷಯವನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಕುಮಾರಗೌಡ ಪಾಟೀಲ್.—ಹೆಚ್ಚಿನ ಸಂಖ್ಯೆಯ ಶುಲ್ಕವನ್ನು ರೈತರಿಂದ ವಸೂಲ್ಮಾಡಿ, ಇದನ್ನು ಕೂಡ ವ್ಯಾಪಾರಸ್ಥರು ತಪ್ಪಿಸುತ್ತಿದ್ದಾರೆ. ಇದರ ಬಗ್ಗೆ ಏನೂ ಕಾರ್ಯಕ್ರಮ ತೆಗೆದುಕೊಂಡಿದ್ದೀರಿ. ರೈತರು ಬೆಳೆದಂಥ ಎಣ್ಣೆಕಾಳುಗಳನ್ನು, ಎಣ್ಣೆ ಗಿರಣಿಗಳಿಗೆ ಪರಭಾರೆ ಮಾಡಿ ಕಳುಹಿಸುತ್ತಿದ್ದಾರೆ. ಇದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ. ಬಿಜಾಪುರ ಮಾರ್ಕೆಟ್‌ನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಹಣ್ಣು ಮತ್ತು ದಾಳಿಂಬೆ ಹೆಚ್ಚಿನ ಪ್ರಮಾಣದಲ್ಲಿ ಬೆಳೆಯಲಾಗಿದೆ. ಇಲ್ಲಿ ಶೈತ್ಯಾಗಾರದ ಅವಶ್ಯಕತೆ ಇದೆ. ಈ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ.

ಶ್ರೀ ಕೆ. ಅಮರನಾಥ ಶೆಟ್ಟಿ.—ಶುಲ್ಕ ವಸೂಲಿಯನ್ನು ತಪ್ಪಿಸುವ ವ್ಯಾಪಾರಸ್ಥರ ಮೇಲೆ ಯೋಗ್ಯ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳುತ್ತೇನೆ. ಇನ್ನು ಎಲ್ಲಾ ಮಾರುಕಟ್ಟೆ ಸಮಿತಿಗಳು ಶೈತ್ಯಾಗಾರ ಹೊಂದುವಂಥ ಸಾಮರ್ಥ್ಯ ಇಲ್ಲದೇ ಇರುವುದರಿಂದ, ಎಲ್ಲಾ ಕಡೆಗಳಲ್ಲೂ ಇದನ್ನು ಏರ್ಪಾಡು ಮಾಡುವುದು ಕಷ್ಟ ಎಂದು ಹೇಳುತ್ತೇನೆ.

ಶ್ರೀ ಮದನ ಗೋಪಾಲ ನಾಯಕ್.—ನಬಾರ್ಡ್ ವತಿಯಿಂದ ಸುರಪುರ ಮಾರುಕಟ್ಟೆಗೆ ಸಾಲ ಕೊಟ್ಟಿದೆ ಎಂದು ಹೇಳಿದ್ದೀರಿ. ಯಾವ ಮಾರ್ಕೆಟ್‌ಗೆ ಎಷ್ಟೆಷ್ಟು ಸಾಲವನ್ನು ಕೊಟ್ಟಿದ್ದೀರಿ. ಮೇನ್ ಮಾರುಕಟ್ಟೆಗೆ ಎಷ್ಟು ಕೊಟ್ಟಿದ್ದೀರಿ, ಸಬ್ ಮಾರುಕಟ್ಟೆಗೆ ಎಷ್ಟು ಒದಗಿಸಿದ್ದೀರಿ. ಇದರಲ್ಲಿ ಖಾನಾಪುರ ಮಾರ್ಕೆಟ್ ಕೂಡ ಸೇರಿದೆಯೋ ಎಂಬುದರ ಬಗ್ಗೆ ತಿಳಿಸಬೇಕು.

ಶ್ರೀ ಕೆ. ಅಮರನಾಥ ಶೆಟ್ಟಿ.—ಈ ಮಾರ್ಕೆಟ್ ಯಾರ್ಡ್‌ಗಳನ್ನು ಅಭಿವೃದ್ಧಿ ಪಡಿಸಲಿಕ್ಕೆ ನಬಾರ್ಡ್‌ನಿಂದ ಸಾಲ ತೆಗೆದುಕೊಳ್ಳಬೇಕೆಂದು ನಾವು ಯೋಚನೆ ಮಾಡಿದ್ದೇವೆ. ಅದರಲ್ಲಿ ಶೋರಾಪುರ ಮಾರ್ಕೆಟ್ ಯಾರ್ಡ್‌ನ ಪ್ರಾಂಗಣದ ಅಭಿವೃದ್ಧಿಗೋಸ್ಕರ ೩೮.೫ ಲಕ್ಷ ರೂಪಾಯಿಗಳನ್ನು ನಾವು ಇಟ್ಟಿದ್ದೇವೆ.

ಶ್ರೀ ವಿನಯಕುಮಾರ್ ಸೊರಕೆ.—ಪುತ್ತೂರು ಸಬ್ ಮಾರ್ಕೆಟ್ ಯಾರ್ಡ್‌ಗೆ ಮಾನ್ಯ ಮಂತ್ರಿಗಳು ಭೇಟಿ ನೀಡಿದ್ದಾರೆ ಅಲ್ಲಿ ಮಾರ್ಗ ರಚನೆಯ ಬಗ್ಗೆ ಇದ್ದ ತಕರಾರು ಒಳ್ಳೆಯ ರೀತಿಯಿಂದ ಸೌಹಾರ್ದತೆಯಿಂದ ತೀರ್ಮಾನವಾಗಿದೆ. ಮಾರ್ಗರಚನೆಯ ಅವಶ್ಯಕತೆ ಮಾನ್ಯ ಮಂತ್ರಿಗಳ ಗಮನಕ್ಕೂ ಕೂಡಾ ಬಂದಿದೆ. ಅಲ್ಲಿ ಮಾರ್ಗ ರಚನೆಯಾಗದೇ ಮಾರ್ಕೆಟ್ ಯಾರ್ಡ್ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಆದುದರಿಂದ ಇದರ ಕೆಲಸಕಾರ್ಯಗಳನ್ನು ಯಾವಾಗ ಪೂರ್ತಿಗೊಳಿಸುತ್ತೀರಿ ಎಂಬ ಆಶ್ವಾಸನೆಯನ್ನು ಕೊಡಬೇಕು. ಕಳೆದ ಮೂರು ವರ್ಷದಿಂದ ಮಾರ್ಕೆಟ್ ಯಾರ್ಡ್‌ನಲ್ಲಿರುವ ಅಂಗಡಿಗಳು ಒಂದೂ ಆಕ್ಷನ್ ಆಗಲಿಲ್ಲ. ಪ್ರತಿ ವರ್ಷ ಕೂಡಾ ಆಕ್ಷನ್ ಆಗುವ ಪದ್ಧತಿ ಇದೆ. ಆದರೆ ಈಗ ಆಕ್ಷನ್ ಆಗದೇ ಇರುವುದಕ್ಕೆ ಕಾರಣ ಏನು? ಪುತ್ತೂರು ಮಾರ್ಕೆಟ್ ಯಾರ್ಡ್‌ನ್ನು ಸಬ್‌ಡಿವಿಜನಲ್ ಲೆವೆಲ್‌ನಲ್ಲಿ ಬೈಫರ್ಕೇಟ್ ಮಾಡಬೇಕೆಂದು ಒಂದು ಮನವಿಯನ್ನು ಕೂಡಾ ಈ ಸದನದಲ್ಲಿ ಹಿಂದೆ ಕೊಟ್ಟಿದ್ದೆವು ಈ ಮಾರ್ಕೆಟ್ ಯಾರ್ಡನ್ನು ಸಬ್‌ಡಿವಿಜನ್ ಹಂತದಲ್ಲಿ ಬೈಫರ್ಕೇಟ್ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ.

ಶ್ರೀ ಕೆ. ಅಮರನಾಥ ಶೆಟ್ಟಿ.—ಪುತ್ತೂರು ಮಾರ್ಕೆಟ್ ಯಾರ್ಡ್ ಮಾರ್ಗ ರಚನೆ ವಿಷಯವನ್ನು ಶಾಸಕರಾದ ವಿನಯಕುಮಾರ್ ಸೊರಕೆಯವರು ಕೇಳಿದ್ದಾರೆ. ಐದಾರು ವರ್ಷಗಳ ಹಿಂದೆ ಮಾರ್ಕೆಟ್ ಯಾರ್ಡ್ ಮಾಡುವಾಗ ಸಂಬಂಧಪಟ್ಟವರು ಈ ಮಾರ್ಗದ ಬಗ್ಗೆ ಆಲೋಚನೆ ಮಾಡಬೇಕಾಗಿತ್ತು. ಆಗ ಅವರು ಮಾರ್ಗದ ಆಲೋಚನೆ ಮಾಡಲಿಲ್ಲ. ಮಾರ್ಕೆಟ್ ಆದ ನಂತರ ಅಲ್ಲಿ ಮಾರ್ಗ ಮಾಡುವುದಕ್ಕೆ ಪ್ರಯತ್ನ ಪಟ್ಟಾಗ, ಅಲ್ಲಿ ಎಂಟ್ರೆನ್ಸ್‌ನಲ್ಲಿದ್ದ ಒಬ್ಬರು ಕೋರ್ಟಿಗೆ ಹೋಗಿ ಸ್ಟೇ ತಂದುದರಿಂದ ಮಾರ್ಗ ರಚನೆ ಮಾಡುವುದಕ್ಕೆ ಕಷ್ಟವಾಗಿತ್ತು. ಮೊನ್ನೆತಾನೇ ನಾನು ಕೂಡಾ ಮಾನ್ಯ ಶಾಸಕರನ್ನು ಕರೆದುಕೊಂಡು ಆ ಜಾಗಕ್ಕೆ ಹೋಗಿ ಸಂದರ್ಶನ ಇಟ್ಟಿದ್ದೇನೆ. ಆ ಜಾಗ ನೋಡಿದ್ದೇನೆ. ಸಂಬಂಧಪಟ್ಟವರನ್ನು ಕರೆಸಿ ಅವರಲ್ಲಿ ವಿಚಾರಿಸಿದ್ದೇನೆ. ಈಗ ಒಂದು ರೀತಿಯಿಂದ ರಾಜಿಯಲ್ಲಿ ಅದನ್ನು ಬಿಟ್ಟು ಕೊಡುವಂತಹ ಕೆಲಸಕ್ಕೆ ಅವರು ಮುಂದಾಗಿದ್ದಾರೆ. ಅದಕ್ಕೆ ಕೊಡುವಂತಹ ಹಣ ಏನಿದೆ ಅದನ್ನು ಯಾವ ರೀತಿ ಕೊಡಬೇಕೆಂಬ ಬಗ್ಗೆ ಸ್ವಲ್ಪ ಆಲೋಚನೆ ಮಾಡುತ್ತಿದ್ದೇವೆ. ಅದನ್ನು ಮಾಡಿದ ಕೂಡಲೇ ನಾವು ಮಾರ್ಗದ ಕೆಲಸವನ್ನು ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳಲು ಬಯಸುತ್ತೇನೆ.

ಶ್ರೀ ವಿನಯಕುಮಾರ್ ಸೊರಕೆ.—ಬೈಫರ್ಕೇಷನ್ ಮತ್ತು ಆಕ್ಷನ್ ಬಗ್ಗೆ ಹೇಳಲಿಲ್ಲ.

ಶ್ರೀ ಕೆ. ಅಮರನಾಥ ಶೆಟ್ಟಿ.—ಬೈಫರ್ಕೇಷನ್ ವಿಷಯದಲ್ಲಿ ಹೇಳುವುದಾದರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇರತಕ್ಕ ಒಂದು ಮಾರ್ಕೆಟ್ ಸಮಿತಿಯನ್ನು ಮೂರು ನಾಲ್ಕಾಗಿ ಬೈಫರ್ಕೇಷನ್ ಮಾಡಬೇಕೆಂಬ ವಿಚಾರ ಇದೆ. ಆದಷ್ಟು ಬೇಗ ಇದನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಜಿ. ಎಸ್. ಶಿವನಂಜಪ್ಪ.—ರೈತರಿಗೆ ಮಾರುಕಟ್ಟೆ ಸೌಲಭ್ಯ ಒದಗಿಸುವುದರ ಜೊತೆಗೆ ರೈತ ಭವನಗಳು ಎಲ್ಲೆಲ್ಲಿ ಇಲ್ಲ ಅಲ್ಲಿ ಅವುಗಳನ್ನು ನಿರ್ಮಾಣ ಮಾಡಬೇಕೆಂದು ಹೇಳಿದ್ದೆ. ಅದರ ಬಗ್ಗೆ ಸಚಿವರು ಹೇಳಲಿಲ್ಲ. ದಳ್ಳಾಳಿಗಳ ವಿಚಾರದಲ್ಲಿ ೨೧೨ ಪ್ರಕರಣಗಳನ್ನು ಪತ್ತೆ ಮಾಡಿದ್ದೇವೆ ಎಂದು ಹೇಳಿದರು, ನಮ್ಮಲ್ಲಿರುವ ಮಾರ್ಕೆಟ್ ಸಮಿತಿಗಳನ್ನು ಲೆಕ್ಕಹಾಕಿದರೆ ಒಂದೊಂದು ಸಮಿತಿಗೆ ಸರಾಸರಿ ಒಂದೊಂದು ಪ್ರಕರಣವು ಬರುವುದಿಲ್ಲ. ಇದರ ಬಗ್ಗೆ ಕಾನೂನು ಮಾಡಿ ಎರಡು ವರ್ಷ ಆಯಿತು. ದಲ್ಲಾಳಿಗಳು ಪ್ರತಿದಿವಸ ಎರಡೂ ಕಡೆ ಲಾಭ ಮಾಡುತ್ತಿದ್ದಾರೆ. ರೈತರು ಮತ್ತು ಕೊಳ್ಳುವವರು ಇಬ್ಬರಿಂದಲೂ ಲಾಭ ಮಾಡುತ್ತಿದ್ದಾರೆ. ಸರಕಾರಕ್ಕೂ ಸಹ ಮೋಸವಾಗುತ್ತಿದೆ. ಇದರಿಂದ ದೇಶದ ಮೇಲೂ ಪರಿಣಾಮವಾಗುತ್ತದೆ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳಲು ಈಗಿರತಕ್ಕಂಥ ಕಾನೂನೇ ಸಾಕು, ಅಧಿಕಾರಿಗಳು ಈ ಕಾನೂನನ್ನು ಸರಿಯಾಗಿ ಪಾಲಿಸಿದರೆ ರೈತರಿಗೆ ಅನುಕೂಲವಾಗುತ್ತದೆ. ಇರತಕ್ಕಂಥ ಕಾನೂನನ್ನು ಸರಿಯಾಗಿ ಬಳಕೆ ಮಾಡಿ ಕ್ರಮ ತೆಗೆದುಕೊಳ್ಳಬೇಕು. ರೈತನ ಮಾಲುಗಳು

ಮಾರುಕಟ್ಟೆಗೆ ಹೋದಾಗ ಅಲ್ಲಿ ಅಳತೆ ಮಾಡಿ, ತೂಕ ಮಾಡಿ ಅದನ್ನು ಹಾಕಬೇಕು. ಇದನ್ನು ಯಾರೂ ಮಾಡುತ್ತಿಲ್ಲ. ಮರ್ಚೆಂಟ್ಸ್ ಏನು ಮಾಡುತ್ತಿದ್ದಾರೆ ಎಂದರೆ, ಒಂದು ಚೀಲ ಕಡಲೆಕಾಯಿ ತೆಗೆದುಕೊಂಡು ಹೋದರೆ ಅವರಲ್ಲಿ ಮೂರು ಕೆ.ಜಿ ತೆಗೆಯುತ್ತಾರೆ, ಇದರಿಂದ ಒಂದು ಚೀಲಕ್ಕೇ ೧೧-೧೫ ರೂಪಾಯಿ ಲಾಸ್ ಆಗುತ್ತಿದೆ. ರೈತನಿಗೆ ಕಷ್ಟವಾಗಿದೆ ಬೇಕಾದಷ್ಟು ಲಾಸ್ ಆಗುತ್ತಿದೆ. ಇದರ ಬಗ್ಗೆ ನಿಮ್ಮ ಅಧಿಕಾರಿಗಳು ಏತಕ್ಕೆ ತನಿಖೆ ಮಾಡುತ್ತಿಲ್ಲ.

ಶ್ರೀ ಕೆ. ಅಮರನಾಥ ಶೆಟ್ಟಿ.—ನಾನು ಈ ಬಗ್ಗೆ ಮೊದಲೇ ಉತ್ತರ ಹೇಳಿದ್ದೇನೆ. ೧೧೬ ಮಾರುಕಟ್ಟೆಗಳಲ್ಲಿ ೭೬ ಮಾರುಕಟ್ಟೆಗಳು ಆಗಿವೆ. ಇನ್ನುಳಿದ ರೈತ ಭವನಗಳನ್ನು ಕಟ್ಟುವುದಕ್ಕೆ ಪ್ರಯತ್ನ ಮಾಡುತ್ತೇನೆ. ಇನ್ನು ದಳ್ಳಾಳಿಗಳಿಂದ ತೊಂದರೆಯಾಗುತ್ತಿದೆ ಎಂದು ಹೇಳಿದರು, ನಮ್ಮ ಗಮನಕ್ಕೆ ಬಂದರೆ ಕಾನೂನು ಪ್ರಕಾರ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಜ್ಞಾನದೇವ ಎಸ್. ದೊಡ್ಡಮೇಟಿ.—ಮಾನ್ಯ ಅಧ್ಯಕ್ಷರೇ ಪ್ರತಿಯೊಂದು ಎ. ಪಿ. ಎಂ. ಸಿ. ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಹಾಗೆ ಒಂದೊಂದು ಅಗ್ನಿಶಾಮಕ ವಾಹನವನ್ನು ಖರೀದಿಸುವುದಕ್ಕೆ ಸೂಚನೆ ಕೊಡುತ್ತೀರಾ? ಆಮೇಲೆ ಈ ಎ.ಪಿ ಎಂ ಸಿ.ಗಳಲ್ಲಿ ಉತ್ಪಾದನೆಯಾಗುವಂತಾದ್ದನ್ನು ರೈತರ ಉಪಯೋಗಕ್ಕೆ ಬರುವಂತೆ ಪಶು ಚಿಕಿತ್ಸಾ ಕೇಂದ್ರಗಳನ್ನು ತೆಗೆಯಲು ಸೂಚನೆ ನೀಡುತ್ತೀರಾ?

ಶ್ರೀ ಕೆ. ಅಮರನಾಥ ಶೆಟ್ಟಿ.—ಮಾನ್ಯ ಸದಸ್ಯರು ಅಗ್ನಿಶಾಮಕ ವಾಹನಗಳನ್ನು ಖರೀದಿಸುವ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇದನ್ನು ಕೆಲವು ಕಡೆಗಳಲ್ಲಿ ಮಾಡಬಹುದು ಅಂದರೆ ಹತ್ತಿ ಇರತಕ್ಕಂಥ ಮಾರುಕಟ್ಟೆಗಳಲ್ಲಿ. ಎಲ್ಲಾ ಮಾರುಕಟ್ಟೆಗಳಲ್ಲಿ ಮಾಡುವುದಕ್ಕೆ ಆಗುವುದಿಲ್ಲ. ಇನ್ನು ಪಶು ಚಿಕಿತ್ಸಾಲಯಗಳ ಬಗ್ಗೆ ಹೇಳಿದ್ದಾರೆ ಅದನ್ನು ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ಕೆ. ಮಲ್ಲಪ್ಪ.—ಮಾನ್ಯ ಅಧ್ಯಕ್ಷರೇ ದಾವಣಗೆರೆಯ ರೆಗ್ಯುಲೇಟೆಡ್ ಮಾರುಕಟ್ಟೆಯ ಪಕ್ಕದಲ್ಲಿ ಒಂದು ಹಳ್ಳ ಇದೆ. ಇದು ಚಿಕ್ಕನಹಳ್ಳಿಯಿಂದ ಮಾರುಕಟ್ಟೆಗೆ ಬರತಕ್ಕಂಥ ಹಳ್ಳ. ಮಾರುಕಟ್ಟೆಗೆ ರೈತರು ಬರಬೇಕಾದರೆ ಸುಮಾರು ೮ ಕಿಲೋಮೀಟರ್ ಸುತ್ತಿಕೊಂಡು ಬರಬೇಕಾಗಿದೆ. ಅದೇ ರೀತಿಯಾಗಿ ಜಗಳೂರಿನಿಂದ ಮಾರುಕಟ್ಟೆಗೆ ಬರತಕ್ಕಂಥ ಒಂದು ರಸ್ತೆ ಇದೆ. ಆ ರಸ್ತೆ ಕೂಡ ನಾದುರಸ್ತಿಯಾಗಿದೆ. ರೈತರು ಸರಕುಗಳನ್ನು ತರುವುದಕ್ಕೆ ತುಂಬಾ ತೊಂದರೆಯಾಗುತ್ತಿದೆ. ಮಾನ್ಯ ಮಾಜಿ ಸಚಿವರಾದ ಕೆ.ಬಿ. ಮಲ್ಲಪ್ಪನವರು ಈ ಮಾರುಕಟ್ಟೆಗೆ ರಸ್ತೆ ಮಾಡುವ ಬಗ್ಗೆ ಒಂದು ಆಜ್ಞೆ ಮಾಡಿದ್ದರು. ಅದು ಇದುವರೆವಿಗೂ ಕಾರ್ಯಗತವಾಗಿಲ್ಲ. ಮಾನ್ಯ ಸಚಿವರನ್ನು ನಾನು ಈಗ ಕೇಳುವುದೇನೆಂದರೆ ಕಾಲುವೆ ಮತ್ತು ಮಾರುಕಟ್ಟೆಗೆ ರಸ್ತೆಯನ್ನು ಮಾಡಿಸಿಕೊಡಬೇಕೆಂದು ಒತ್ತಾಯ ಮಾಡುತ್ತೇನೆ. ರೈತರಿಗೆ ಇಲ್ಲದಿದ್ದರೆ ಬಹಳ ತೊಂದರೆಯಾಗುತ್ತದೆ. ರೈತರು ಪ್ರತಿಭಟನೆ ಕೂಡ ಸಲ್ಲಿಸುತ್ತಿದ್ದಾರೆ. ಇನ್ನು ದಾವಣಗೆರೆ ತಾಲ್ಲೂಕು ಮಾಯಕೊಂಡದಲ್ಲಿ ಸಬ್ ಮಾರ್ಕೆಟ್ ಯಾರ್ಡ್ ಕಟ್ಟಡ ಮುಗಿದಿದೆ ಮಾರ್ಕೆಟನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ದಯಮಾಡಿ ಹೇಳಬೇಕು?

ಶ್ರೀ ಕೆ. ಅಮರನಾಥ ಶೆಟ್ಟಿ.—ಇದು ಲೋಕೋಪಯೋಗಿ ಇಲಾಖೆಯ ರಸ್ತೆಯಾಗಿರುವುದರಿಂದ ನಾನು ರಿಪೋರ್ಟ್ ತರಿಸಿ ನೋಡುತ್ತೇನೆ.

ಶ್ರೀ ಕೆ. ಮಲ್ಲಪ್ಪ.—ಇದು ಮಾರುಕಟ್ಟೆಗಾ ಬರತಕ್ಕಂಥ ರಸ್ತೆ

ಶ್ರೀ ಕೆ. ಅಮರನಾಥ ಶೆಟ್ಟಿ.—ಒಂದು ವೇಳೆ ಲೋಕೋಪಯೋಗಿ ರಸ್ತೆಯಲ್ಲದಿದ್ದರೆ ಮಾರುಕಟ್ಟೆ ಸಮಿತಿ ವರದಿ ತರಿಸಿ ನೋಡಿ ರಸ್ತೆ ಮಾಡುವುದಕ್ಕೆ ಸಾಧ್ಯವಿದ್ದರೆ ಪ್ರಯತ್ನ ಮಾಡುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ನಮ್ಮ ಹಿರಿಯೂರು ತಾಲ್ಲೂಕು ಮಾರುಕಟ್ಟೆ ಸಮಿತಿಯ ಹೊಸ ಕಟ್ಟಡಗಳಲ್ಲಿ ಅವರಿಗೆ ಬೇಕಾದ ಇನ್‌ಫ್ರಾಸ್ಟ್ರಕ್ಚರ್ ಇಲ್ಲ. ಹಿಂದೆ ರೆಗ್ಯುಲೇಟೆಡ್ ಮಾರುಕಟ್ಟೆಗಳವರು ೫ ಸಾವಿರ ರೂಪಾಯಿಗಳಿಗೆ ಒಂದು ಸೈಟ್ ಕೊಟ್ಟಿದ್ದಾರೆ. ವ್ಯಾಪಾರಸ್ಥರು ಆ ಸೈಟ್‌ಗಳನ್ನು ರಿಜಿಸ್ಟರ್ ಮಾಡಿಸಿಕೊಳ್ಳುವುದಕ್ಕೆ ಆಗುತ್ತಿಲ್ಲ. ಅವರಿಗೆ ತೊಂದರೆಯಾಗಿದೆ. ಮತ್ತು ವ್ಯಾಪಾರಸ್ಥರಿಗೆ ಅನುಕೂಲವಾಗುವಂತೆ ಮಾರುಕಟ್ಟೆಗಳಲ್ಲಿ ವ್ಯಾಪಾರವಾಗುವಂತೆ ವ್ಯವಸ್ಥೆ ಮಾಡಬೇಕು. ಇದರಿಂದ ರೆಗ್ಯುಲೇಟೆಡ್ ಮಾರುಕಟ್ಟೆಗೆ ಶುಲ್ಕ ಸಹ ಬರುತ್ತದೆ. ಇದರ ಜೊತೆಗೆ, ಆರ್.ಎಂ.ಸಿ, ಯಾರ್ಡ್‌ನ್ನು ಕಟ್ಟುವುದಕ್ಕೆ ಭೂ ಮಾಲೀಕರಿಂದ ಏನು ಜಮೀನು ವಶಪಡಿಸಿಕೊಳ್ಳಲಾಗಿತ್ತೋ ಆ ಜಮೀನಿನಲ್ಲಿ ಎರಡೂವರೆ ಎಕರೆಯಷ್ಟು ಜಮೀನನ್ನು ಪುನಃ ಭೂ ಮಾಲೀಕರಿಗೇ ಬಿಟ್ಟು ಕೊಡುವ ವ್ಯವಸ್ಥೆಯಾಗಿದೆ -

ಯೆಂದು ತಿಳಿದು ಬಂದಿದೆ. ಹೀಗೆ ಮಾಡುವುದರಿಂದ ಆರ್.ಎಂ.ಸಿ.ಗೆ ಸ್ಥಳ ಕಡಿಮೆ ಬರಬಹುದು. ಹಾಗೆ ಮಾಡಬಾರದೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಅಮರನಾಥ ಶೆಟ್ಟಿ.—ಮಾನ್ಯ ಸದಸ್ಯರು ಹೇಳಿರುವಂಥ ವಿಷಯಗಳ ಬಗ್ಗೆ ಒಂದು ವರದಿಯನ್ನು ತರಿಸಿಕೊಂಡು ಏನಾಗಿದೆ ಎಂಬುದನ್ನು ಅವರಿಗೆ ತಿಳಿಸುತ್ತೇನೆ.

ಶ್ರೀ ಚಂದ್ರಶೇಖರ ರೆಡ್ಡಿ ದೇಶ್‌ಮುಖ್.—ರೈತನು ಬೆಳೆದ ಮಾಲನ್ನು ಮಾರ್ಕೆಟಿಂಗ್ ಕಮಿಟಿಗಳಿಗೆ ತಂದು ಮಾರುತ್ತಾನೆ. ಇದರಿಂದ ಮಾರ್ಕೆಟಿಂಗ್ ಕಮಿಟಿಗಳಿಗೆ ಸಾಕಷ್ಟು ಹಣ ಬರುತ್ತದೆ. ಈ ಹಣವನ್ನು ಬೇರೆ ಯಾವುದೋ ಕೆಲಸಗಳಿಗೆ ಉಪಯೋಗಿಸುವ ಬದಲು ೨೦ ಅಂಶಗಳ ಕಾರ್ಯಕ್ರಮಗಳಲ್ಲಿ ಬರುವ ಆಸ್ಪತ್ರೆಗಳಿಗೆ ಅನುಕೂಲ ಒದಗಿಸುವುದು, ವೆಟರ್‌ನರಿ ಆಸ್ಪತ್ರೆಗಳಿಗೆ ಅನುಕೂಲಗಳನ್ನು ಒದಗಿಸುವುದು ಫ್ಯಾಮಿಲಿ ಪ್ಲಾನಿಂಗ್‌ಗೆ ಬೇಕಾದ ಅನುಕೂಲಗಳನ್ನು ಒದಗಿಸುವುದು ಇವೇ ಮುಂತಾದ ಕಾರ್ಯಕ್ರಮಗಳಿಗೆ ಮಾರ್ಕೆಟಿಂಗ್ ಕಮಿಟಿಗಳಿಂದ ಬರುವ ಹಣವನ್ನು ಉಪಯೋಗಿಸಿದರೆ ಬಹಳ ಅನುಕೂಲವಾಗುತ್ತದೆಂದು ಹೇಳುತ್ತೇನೆ. ಆಮೇಲೆ, ದಳ್ಳಾಳಿಗಳನ್ನು ತೆಗೆದು ನೇರವಾಗಿ ರೈತನು ತನ್ನ ಮಾಲನ್ನು ಮಾರಾಟ ಮಾಡತಕ್ಕ ವ್ಯವಸ್ಥೆಯನ್ನು ಜಾರಿಗೆ ತರಲಾಗುತ್ತದೆಂದು ಹೇಳಲಾಗಿದೆ. ರೈತನು ತಾನು ಬೆಳೆದ ಮಾಲನ್ನು ಮಾರ್ಕೆಟ್ ಯಾರ್ಡಿಗೆ ತಂದು ಸುಲಭವಾಗಿ ಮಾರಾಟ ಮಾಡುವುದಕ್ಕೆ ವ್ಯವಸ್ಥೆ ಮಾಡುವವರೆಗಾದರೂ ದಳ್ಳಾಳಿಗಳು ಇರಲಿ. ದಳ್ಳಾಳಿಗಳನ್ನು ಏಕಾ ಏಕಿ ತೆಗೆದುಹಾಕಿದರೆ ರೈತ ಮತ್ತು ಮಾರುಕಟ್ಟೆಗೆ ಮಧ್ಯದಲ್ಲಿ ಕೆಲಸ ಮಾಡುವವರು ಇಲ್ಲದೆ ಬಹಳ ಕಷ್ಟವಾಗುತ್ತದೆಂದು ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ.

ಶ್ರೀ ಕೆ. ಅಮರನಾಥ್ ಶೆಟ್ಟಿ.—ಸಂಘ ಸಂಸ್ಥೆಗಳ ಹಣವನ್ನು ಆಸ್ಪತ್ರೆಗಳಿಗೆ ಕೊಡುವುದಕ್ಕೆ ಕಾನೂನಿನಲ್ಲಿ ಅವಕಾಶ ಇಲ್ಲ. ಕಾನೂನಿನಲ್ಲಿ ತಿದ್ದುಪಡಿ ಮಾಡಿದರೆ ಮಾತ್ರ ಆ ರೀತಿ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆಮೇಲೆ ಅನೇಕ ಮಾನ್ಯ ಸದಸ್ಯರುಗಳು ದಳ್ಳಾಳಿಗಳನ್ನು ತೆಗೆಯಬೇಕೆಂದು ಹೇಳಿದರು. ಆದರೆ, ಕೆಲವು ಮಾನ್ಯ ಸದಸ್ಯರು ದಳ್ಳಾಳಿಗಳನ್ನು ತೆಗೆದರೆ ಕಷ್ಟವಾಗುತ್ತದೆಂದು ಹೇಳಿದ್ದಾರೆ. ಇದರ ಬಗ್ಗೆ ಆಲೋಚನೆ ಮಾಡುತ್ತೇನೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ.—ಕುಂದಾಪುರ ತಾಲ್ಲೂಕ್ ಆರ್.ಎಂ.ಸಿ. ಯಾರ್ಡ್‌ನಲ್ಲಿರುವ ಗೋಡನ್‌ನಲ್ಲಿ ಕೃಷಿಯೇತರ ವಸ್ತುಗಳನ್ನು ಸಂಗ್ರಹಿಸುವುದಕ್ಕೆ ಅವಕಾಶ ಕೊಟ್ಟಿದ್ದಾರೆ. ಈ ರೀತಿ ಕೃಷಿಯೇತರ ವಸ್ತುಗಳಿಗೆ ಅವಕಾಶ ಕೊಟ್ಟಿರುವುದರಿಂದ ಅದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ ? ಮತ್ತು ಕುಂದಾಪುರ ಮಾರ್ಕೆಟ್ ಯಾರ್ಡಿಗೆ ಹೋಗುವಂಥ ರಸ್ತೆಯನ್ನು ಸರಿ ಮಾಡುವುದಕ್ಕೆ ಯಾವ ರೀತಿ ಸಹಾಯ ಮಾಡುತ್ತೀರಿ ಮತ್ತು ಆರ್.ಎಂ.ಸಿ. ಸಿಬ್ಬಂದಿಯವರು ಗ್ರಾಮೀಣ ಪ್ರದೇಶಗಳಲ್ಲಿ ನಡೆಯುವ ಸಂಪರ್ಕ ಸಭೆಗೆ ಏಕೆ ಹೋಗುವುದಿಲ್ಲ ?

ಶ್ರೀ ಕೆ. ಅಮರನಾಥ್ ಶೆಟ್ಟಿ.—ಕುಂದಾಪುರ ತಾಲ್ಲೂಕಿನಲ್ಲಿರುವ ಮಾರ್ಕೆಟ್ ಯಾರ್ಡ್ ಗೋಡನ್‌ನಲ್ಲಿ ಕೃಷಿಯೇತರ ವಸ್ತುಗಳಿಗೆ ಅವಕಾಶ ಕೊಟ್ಟಿದ್ದಾರೆಂದು ಹೇಳಲಾಗಿದೆ. ಇದರ ಬಗ್ಗೆ ವರದಿಯನ್ನು ತರಿಸಿಕೊಂಡು ಏನು ಮಾಡಬೇಕೋ ಅದನ್ನು ಮಾಡುತ್ತೇನೆಂದು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ. ಆಮೇಲೆ ರಸ್ತೆ ಬಗ್ಗೆ ಹೇಳಿದ್ದಾರೆ. ಆ ರಸ್ತೆಯು ಪಿ.ಡಬ್ಲ್ಯೂ.ಡಿ ಗೆ ಸೇರದೆ ನಮ್ಮ ವ್ಯಾಪ್ತಿಗೆ ಬರುವ ಹಾಗಿದ್ದರೆ ಅದರ ಬಗ್ಗೆ ನೋಡುತ್ತೇನೆ. ನಂತರ, ಮಾನ್ಯ ಸದಸ್ಯರು ಆರ್.ಎಂ.ಸಿ. ಸಿಬ್ಬಂದಿಯವರು ಜನ ಸಂಪರ್ಕ ಸಭೆಗೆ ಏಕೆ ಹೋಗುವುದಿಲ್ಲವೆಂದು ಕೇಳಿದ್ದಾರೆ. ಎಲ್ಲಾ ಸಿಬ್ಬಂದಿ ವರ್ಗದವರೂ ಜನ ಸಂಪರ್ಕ ಸಭೆಗೆ ಹೋಗುವುದಕ್ಕೆ ಬರುವುದಿಲ್ಲ. ಯಾವ ಅಧಿಕಾರಿಗಳು ಜನ ಸಂಪರ್ಕ ಸಭೆಗೆ ಹೋಗುವುದಕ್ಕೆ ಅರ್ಹರಾಗಿರುತ್ತಾರೋ ಅಂಥವರುಗಳು ಇನ್ನು ಮುಂದೆ ಜನ ಸಂಪರ್ಕ ಸಭೆಗೆ ಹಾಜರಾಗುವುದಕ್ಕೆ ತಿಳಿಸುತ್ತೇನೆ.

೧-೦೦ ಪಿ. ಎಂ.

† ಶ್ರೀ ಚಂದ್ರಕಾಂತ ಜಿ. ಬೆಲ್ಲದ —ಮಾನ್ಯ ಅಧ್ಯಕ್ಷರೆ, ಈ ಮಾರುಕಟ್ಟೆ ಕಾನೂನಿಗೆ ತಿದ್ದುಪಡಿಯನ್ನು ತೆಗೆದುಕೊಂಡು ಬಂದು, ಕೃಷಿ ವಿಶ್ವವಿದ್ಯಾನಿಲಯಗಳಲ್ಲಿ ಒಕ್ಕಲುತನದ ಅನೇಕ ಬೆಳೆಗಳ ಬಗ್ಗೆ ಸಂಶೋಧನೆಯನ್ನು ಮಾಡಲಿಕ್ಕೆ ಹಣವನ್ನು ಕೊಡಬೇಕೆಂದು ತಿದ್ದುಪಡಿ ತಂದಿದ್ದರೆ. ಆ ದಿಸೆಯಲ್ಲಿ ಈಗಾಗಲೇ ಹಣವನ್ನು ಕೃಷಿವಿಶ್ವವಿದ್ಯಾಲಯಕ್ಕೆ ಒದಗಿಸಿದ್ದೀರಾ ? ಈಗಿರುವ ಸೆಸ್ಸು ಮೊದಲು

೨ ಪರ್‌ಸೆಂಟ್ ಇರುವಾಗ ಆದಾಯ ಬಹಳ ಕಡಿಮೆ ಬರುತ್ತಿದ್ದು, ಈ ೧ ಪರ್‌ಸೆಂಟ್ ಆದಮೇಲೆ ಆದಾಯ ಹೆಚ್ಚಿಗೆ ಆಗಿದೆ. ಈಗಲೂ ಒಕ್ಕಲುತನ ಹುಟ್ಟುವಳಿಯ ಪ್ರತಿಶತ ೧೦ ರಷ್ಟು ಮಾರುಕಟ್ಟೆಗೆ ಮಾಲು ಬರುತ್ತಾ ಇಲ್ಲ. ಅದನ್ನು ಅರ್ಧ ಪರ್‌ಸೆಂಟ್ ಮಾಡಿದರೆ ಇನ್ನೂ ಹೆಚ್ಚಿಗೆ ಮಾಲು ಮಾರುಕಟ್ಟೆಗೆ ಬರುತ್ತದೆ. ಅದರಿಂದಾಗಿ ಈಗಿರುವ ಆದಾಯ ಹೆಚ್ಚಿಗೆ ಆಗುತ್ತದೆ. ಈ ವಿಚಾರದ ಬಗ್ಗೆ ಮಾನ್ಯ ಮಂತ್ರಿಯವರು ಸೂಕ್ತ ಉತ್ತರವನ್ನು ಕೊಡಬೇಕು.

ಶ್ರೀ ಕೆ. ಅಮರನಾಥ ಶೆಟ್ಟಿ.— ಮಾನ್ಯ ಸದಸ್ಯರು ಹೇಳಿದ ಹಾಗೆ ಅರ್ಧ ಪರ್‌ಸೆಂಟ್ ಮಾಡುವ ಬಗ್ಗೆ ನಾನು ವಿಚಾರಿಸುತ್ತೇನೆ ಮತ್ತು ಕೃಷಿ ವಿಶ್ವವಿದ್ಯಾಲಯದಿಂದ ಆ ಬಗ್ಗೆ ಪ್ರಪೋಸಲ್ಸ್ ಬಂದರೆ ಅದನ್ನು ಪರಿಶೀಲಿಸುತ್ತೇವೆ.

ಉಪಾಧ್ಯಕ್ಷರು.—ಮಾನ್ಯ ಪಂಪಾಪತಿಯವರೇ ತಾವು ಕೇಳಿ...

ಶ್ರೀ ಬಿ.ಆರ್. ನೀಲಕಂಠಪ್ಪ —ಅಧ್ಯಕ್ಷರೆ ನನಗೆ ಒಂದು ಅವಕಾಶವನ್ನು ಕೊಡಿ.

ಉಪಾಧ್ಯಕ್ಷರು.—ದಯವಿಟ್ಟು ಕುಳಿತುಕೊಳ್ಳಬೇಕು, ಮಾನ್ಯ ಪಂಪಾಪತಿಯವರೇ ತಾವು ಕೇಳಿ ?

ಶ್ರೀ ಪಂಪಾಪತಿ.—ಅಧ್ಯಕ್ಷರೆ, ಈ ಮಾರುಕಟ್ಟೆ ಸಮಿತಿಯಿಂದ ಆದಾಯವು ಬರುತ್ತದೆ. ಬರತಕ್ಕಂಥ ಆದಾಯವನ್ನು ರೈತರಿಗೆ, ರೈತರು ಬೆಳೆದಂಥ ಬೆಳೆಗಳನ್ನು ಸಾಗಿಸುವುದಕ್ಕೆ ಬೇಕಾದಂಥ ಅನುಕೂಲತೆಗಳ ಬಗ್ಗೆ ವಿಚಾರ ಮಾಡಬೇಕಾಗಿದೆ. ಏಕೆಂದರೆ ಇವೊತ್ತು ಅವರಿಗೆ ವಸ್ತುಗಳ ಸೌಲಭ್ಯ ಸರಿಯಾಗಿ ಇಲ್ಲ, ನಮ್ಮಲ್ಲಿ ನೀರಾವರಿ ಪ್ರದೇಶ ಉಂಟು. ಆದರೆ ರಸ್ತೆಗಳು ಸರಿಯಾಗಿ ಇಲ್ಲ. ಹಾಗಾಗಿ ಹಾಳಾದ ರಸ್ತೆಗಳ ಮೂಲಕ ಮಾಲನ್ನು ಮಾರುಕಟ್ಟೆಗೆ ತಂದು ಮಾರುವ ಬದಲು ಅಲ್ಲಿಯೇ ಮಾರುವುದು ಒಳ್ಳೆಯದು ಎಂದು ಅಂದುಕೊಳ್ಳುತ್ತಾರೆ. ಆ ಒಂದು ಭಾವನೆ ರೈತರಲ್ಲಿ ಬರುತ್ತಾ ಇದೆ. ಆದುದರಿಂದ ಮಾರುಕಟ್ಟೆಗಳಿಂದ ಬರತಕ್ಕಂಥ ಆದಾಯದಿಂದ ರಸ್ತೆಗಳನ್ನು , ಸರಿಪಡಿಸಿ, ರೈತರು ಬೆಳೆದಂಥ ಬೆಳೆಗಳನ್ನು ಮಾರುಕಟ್ಟೆಗೆ ಸಲೀಸಾಗಿ ತರುವಂತೆ ಒಂದು ವ್ಯವಸ್ಥೆಯನ್ನು ಮಾಡುತ್ತೀರಾ ?

ಶ್ರೀ ಕೆ. ಅಮರನಾಥ ಶೆಟ್ಟಿ.—ರಸ್ತೆಗಳನ್ನು ಮಾಡುವಂಥ ಜವಾಬ್ದಾರಿ ನಮ್ಮ ಇಲಾಖೆಗೆ ಇಲ್ಲ. ಅದಕ್ಕೆ ಬೇರೆ ಇಲಾಖೆಯು ಇದೆ. ಆದುದರಿಂದ ಈ ಬಗ್ಗೆ ಮಾರುಕಟ್ಟೆಯವರು ಸಹಾಯ ಮಾಡುವುದು ಕಷ್ಟ ಎಂದು ಹೇಳಬಯಸುತ್ತೇನೆ.

ಶ್ರೀ ಬಿ, ಆರ್. ನೀಲಕಂಠಪ್ಪ.—ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಜಿಲ್ಲಾಪರಿಷತ್ತು ಮೂಲಕ ಜಿಲ್ಲಾ ಆಡಳಿತ ವಿಕೇಂದ್ರೀಕರಣವಾದ ಮೇಲೆ ಮಾರುಕಟ್ಟೆ ಸಮಿತಿಯವರಿಗೆ ಉತ್ಪತ್ತಿ ಇಲ್ಲ. ಆ ದೃಷ್ಟಿಯಿಂದ ತಾವು ಹೋಬಳಿ ಮಟ್ಟದಲ್ಲಿ ಒಂದೊಂದು ಮಾರ್ಕೆಟ್‌ಯಾರ್ಡ್ ತೆಗೆಯತಕ್ಕಂಥ ವ್ಯವಸ್ಥೆ ಮಾಡುತ್ತೀರಾ ಹಾಗೆಯೇ ಪಂಚಾಯತ್ ಮಟ್ಟದಲ್ಲಿ ಕೊಟ್ಟರೂ ಕೂಡ ಅಲ್ಲಿಯ ಉತ್ಪತ್ತಿಯು ಅವರಿಗೆ ಹೋಗುತ್ತದೆ. ಆದುದರಿಂದ ಈ ಬಗ್ಗೆ ಪರಿಶೀಲಿಸಬೇಕೆಂದು ಕೇಳಿಕೊಳ್ಳುತ್ತೇನೆ. ಅಂತೆಯೇ ಈ ಮಾರುಕಟ್ಟೆ ಸಮಿತಿಗಳಲ್ಲಿ ಆಗುತ್ತಿರುವ ಸೋರುವಿಕೆ ತುಂಬಾ ಇದೆ. ಅದಕ್ಕೆ ೬೦ ಪರ್ಸೆಂಟ್‌ನಷ್ಟು ಬಂದರೆ, ೪೦ ರಷ್ಟು ಹೋಗುತ್ತಾ ಇದೆ. ಆ ಬಗ್ಗೆ ಒಂದು ವಿಶೇಷ ರೀತಿಯಲ್ಲಿ ಸ್ಕ್ವಾಡ್‌ಗಳನ್ನು ಮಾಡಿ ನಿಗಾ ಇಡುವ ವ್ಯವಸ್ಥೆಯು ಇರಬೇಕು. ಇದುವರೆಗೂ ಅಂತಹ ದೂರುಗಳು ತಮಗೆ ಬಂದಿದ್ದಲ್ಲಿ ತಾವುಗಳು ಎಷ್ಟು ಜನರ ಮೇಲೆ ಕ್ರಮವನ್ನು ತೆಗೆದುಕೊಂಡಿದ್ದೀರಿ. ಎಷ್ಟು ಪ್ರಕರಣಗಳಲ್ಲಿ ತನಿಖೆ ಮಾಡಿದ್ದೀರಿ.

ಶ್ರೀ ಕೆ. ಅಮರನಾಥಶೆಟ್ಟಿ —ಮಾರುಕಟ್ಟೆ ಸಮಿತಿಗಳಲ್ಲಿ ಸೋರುವಿಕೆಯ ವಿಚಾರದಲ್ಲಿ ಅನೇಕ ಜನ ಸದಸ್ಯರು ಮಾತನಾಡಿದ್ದಾರೆ. ಈ ವಿಚಾರಗಳಲ್ಲಿ ಈಗಾಗಲೇ ರೈತರಿಂದ ಬಂದಂಥ ದೂರುಗಳನ್ನು ದಾಖಲು ಮಾಡಿಕೊಂಡಿದ್ದೇವೆ. ಅದಕ್ಕೆ ಸಂಬಂಧಪಟ್ಟ ದಲ್ಲಾಳಿಗಳ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಂಡಿದ್ದೇವೆ. ಇನ್ನೂ ಕೂಡ ಅಂತಹ ದೂರುಗಳು ಬಂದಲ್ಲಿ ಆ ಬಗ್ಗೆ ಸರಿಯಾದ ಮಾಹಿತಿಗೆಗಳನ್ನು ಕೊಟ್ಟಲ್ಲಿ, ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತೇನೆ. ಇನ್ನು ಮಂಡಲ್ ಪಂಚಾಯತಿ ಮಟ್ಟದಲ್ಲಿ ಮುಂಚೆ ಹೇಳಿದ ಹಾಗೆ ೯೭೬ ವೀಕ್ಲಿ ಸ್ಯಾಂಡಿಗಳು ಇವೆ. ಅವುಗಳಲ್ಲಿ ೪೩೩ನ್ನು ಈಗಾಗಲೇ ಸರ್ವೆ ಮಾಡಿದ್ದೇವೆ. ಸರ್ವೆ ಮಾಡಿದ ಸ್ಯಾಂಡಿಗಳಿಗೆ ಈಗಿರುವ ಜಾಗದಲ್ಲಿ ಮಾರುಕಟ್ಟೆ

ಸಮಿತಿಗಳ ಮುಖೇನ ಒಂದು ಕಛೇರಿಯನ್ನು ಕೊಡುತ್ತಾ ಇದ್ದೇವೆ. ಅಲ್ಲಿ ಹರಾಜು ಕಟ್ಟೆ ಗೋದಾಮು ಮತ್ತು ನೀರು ಸೌಲಭ್ಯ, ಶೌಚಗೃಹ ಸೌಲಭ್ಯ ಮುಂತಾದ ಅಗತ್ಯ ಸೌಲಭ್ಯಗಳನ್ನು ಮಾಡಿಕೊಡುತ್ತಾ ಇದ್ದೇವೆ. ಹೀಗೆ ಬರುವ ಆದಾಯವನ್ನು ಯಾರು ಅದನ್ನು ನಡೆಸುತ್ತಾರೋ ಅವರಿಗೆ ಕೊಡಬೇಕೆಂದು ಮಾಡಿದ್ದೇವೆ.

ಶ್ರೀ ಜಿ ಬಿ. ನಿಂಗಯ್ಯ (ಮೂಡಿಗೆರೆ).—ನಮ್ಮ ಮೂಡಗೆರೆ ತಾಲ್ಲೂಕು ಮತ್ತು ಸಕಲೇಶಪುರ ಎರಡಕ್ಕೂ ಸೇರಿಸಿ ಒಂದೆ ಎಪಿಎಂಸಿ ಮಾಡಿದ್ದಾರೆ. ಇದರಿಂದ ನಮ್ಮ ಕ್ಷೇತ್ರದ ರೈತರು ಬೆಳೆದ ಸಾಮಗ್ರಿಗಳನ್ನು ಮಾರುವುದಕ್ಕೆ ತೊಂದರೆಯಾಗಿದೆ. ಆದ್ದರಿಂದ ಮೂಡಿಗೆರೆಗೆ ಒಂದು ಎಪಿಎಂಸಿ ಯನ್ನು ಮಂಜೂರು ಮಾಡಬೇಕೆಂದು ಬಹಳ ದಿನದಿಂದಲೂ ಬೇಡಿಕೆ ಇದೆ. ಸಚಿವರು ಈಗಲಾದರೂ ಮಾಡಿಕೊಡುವರೇ ?

ಶ್ರೀ ಕೆ. ಅಮರನಾಥಶೆಟ್ಟಿ.— ಅಲ್ಲಿಂದ ಪ್ರಪೋಸಲ್ ಬಂದಮೇಲೆ ಅದನ್ನು ಆಲೋಚನೆ ಮಾಡುತ್ತೇನೆ.

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಹಿಂದೆ ಧಾರವಾಡದಲ್ಲಿ ಕೃಷಿ ವಿಶ್ವವಿದ್ಯಾಲಯ ಸ್ಥಾಪನೆ ಮಾಡುವ ಸಂದರ್ಭ ಬಂದಾಗ ಬಂದ ಒಂದು ಸಲಹೆ ಎಂದರೆ ಧಾರವಾಡ ಕೃಷಿ ವಿಶ್ವವಿದ್ಯಾಲಿಯ ವ್ಯಾಪ್ತಿಯೊಳಗೆ ಬರುವ ಜಿಲ್ಲೆಗಳಲ್ಲಿ ಇರುವ ಎಪಿಎಂಸಿಗಳಿಂದ ಬೇಕಾದಷ್ಟು ಲಾಭ ಬರುತ್ತದೆ. ಅದನ್ನು ವಿಶ್ವವಿದ್ಯಾಲಯಕ್ಕೆ ಬಳಸಬೇಕೆಂದು ಶ್ರೀ ಕೆ.ಹೆಚ್. ಪಾಟೀಲರೂ ಸಲಹೆ ಮಾಡಿದ್ದರು. ಈಗ ಅದನ್ನು ಸರ್ಕಾರ ಅನ್ವಯಗೊಳಿಸುವುದೇ ?

ಎರಡನೆಯದು ರೈತರ ಭವನಗಳ ಸ್ಥಿತಿಯನ್ನು ಕಣ್ಣಾರೆ ನೋಡಬೇಕು. ಅವು ಬೇರೆ ಕೆಲಸಗಳಿಗಾಗಿಯೂ ಉಪಯೋಗವಾಗುತ್ತಿದ್ದು ಶೌಚತೆಯಂತೂ ಕಾಣದಾಗಿದೆ. ಆದ್ದರಿಂದ ಮಾರುಕಟ್ಟೆ ಸಚಿವರು ಕನಿಷ್ಟ ಪ್ರವಾಸ ಮಾಡುವಾಗ ಐಬಿಗಳಲ್ಲಿ ಇಳಿದುಕೊಳ್ಳುವ ಬದಲು ರೈತಭವನಗಳಲ್ಲಿ ಇಳಿದುಕೊಳ್ಳಲು ಹೋದರೆ ಅವುಗಳ ಬಣ್ಣ ಬಯಲಾಗುತ್ತದೆ ಮತ್ತು ಅವು ನೆಟ್ಟಗೆ ನಡೆಯುತ್ತವೆ.

ಶ್ರೀ ಅಮರನಾಥಶೆಟ್ಟಿ.—ಧಾರವಾಡ ಕೃಷಿ ವಿಶ್ವವಿದ್ಯಾಲಯಕ್ಕೆ ಹಣ ಕೊಡಲು ಎಪಿಎಂಸಿಗಳಿಂದ ಪ್ರಪೋಸಲ್ ಬಂದರೆ ಆಲೋಚನೆ ಮಾಡುತ್ತೇನೆ. ಇನ್ನು ಯಾವ ರೈತ ಭವನ ಸರಿಯಾಗಿಲ್ಲ ಎಂದು ಸ್ಪೆಸಿಫಿಕ್ಕಾಗಿ ಮಾನ್ಯ ಸದಸ್ಯರು ತಿಳಿಸಿದರೆ ಅವನ್ನು ಸರಿಪಡಿಸಲು ಪ್ರಯತ್ನಿಸುತ್ತೇನೆ.

ಶ್ರೀ ಎಸ್. ಹೆಚ್. ಕೌಜಲಗಿ.—ಬೈಲಹೊಂಗಲ ಎಪಿಎಂಸಿ ಈ ಸಲ ೬೫ ಲಕ್ಷ ರೂಪಾಯಿ ಲಾಭ ಸಂಪಾದಿಸಿದೆ. ನಮ್ಮ ಬೈಲಹೊಂಗಲದಲ್ಲಿ ಕಿತ್ತೂರು ಚೆನ್ನಮ್ಮನ ಪ್ರತಿಮೆ ಸ್ಥಾಪಿಸುವ ಸಲುವಾಗಿ ೫ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುವ ಆದೇಶವನ್ನು ಸರ್ಕಾರ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಅಮರನಾಥಶೆಟ್ಟಿ.—ಇದರ ಬಗ್ಗೆ ಪ್ರಪೋಸಲ್ ಬಂದರೆ ಪರಿಶೀಲಿಸುತ್ತೇನೆ.

ಶ್ರೀ ಬಿ.ಎಂ. ಇದಿನಬ್ಬ,—ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೆಚ್ಚು ಮಾರುಕಟ್ಟೆಗಳನ್ನು ಸ್ಥಾಪಿಸಬೇಕೆಂದು ಅನೇಕರು ಕೇಳುತ್ತಿದ್ದೇವೆ. ಅದನ್ನು ಕೊಡುವ ಉದ್ದೇಶವೂ ಸರ್ಕಾರಕ್ಕಿದೆ ಎಂದು ಸಚಿವರು ಬೇರೆ ಕಡೆ ಹೇಳಿರುವುದನ್ನು ಕೇಳಿದ್ದೇವೆ ಆದ್ದರಿಂದ ನಮ್ಮ ಜಿಲ್ಲೆಯಲ್ಲಿ ಎಲ್ಲೆಲ್ಲಿ ಯಾವಾಗ ಮಾರುಕಟ್ಟೆ ಸಮಿತಿಗಳನ್ನು ಕಟ್ಟುವಿರಿ ? ಜೊತೆಗೆ ನಮ್ಮಲ್ಲಿರುವ ಶುಷ್ಕ ಭೂಮಿಯ ಅಭಿವೃದ್ಧಿ ಬಗ್ಗೆ ನಿಮ್ಮದೇನಾದರೂ ಕ್ರಮಗಳಿದೆಯೇ ?

ಶ್ರೀ ಕೆ. ಅಮರನಾಥಶೆಟ್ಟಿ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈಗಾಗಲೇ ಬೈಕಂಪಾಡಿಯಲ್ಲಿ ಮಾರುಕಟ್ಟೆ ಪ್ರಾಂಗಣ ಮಾಡುವುದಕ್ಕೆಂದು ಜಾಗ ತೆಗೆದುಕೊಂಡಿದ್ದು ಅದನ್ನು ಲೆವೆಲ್ ಮಾಡುವುದಕ್ಕೆಂದು ಎಸ್ಟಿಮೇಟ್ ತರಿಸಿಕೊಳ್ಳುತ್ತಿದ್ದೇವೆ. ಅದೇ ತರಹ ಮಂಗಳೂರಿನಲ್ಲಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಅದರೊಟ್ಟಿಗೆ ಬೆಳ್ತಂಗಡಿಯಲ್ಲಿ ಕೂಡ ಜಾಗ ಸಿಕ್ಕಿದರೆ ಪ್ರಾಂಗಣ ಮಾಡುತ್ತೇವೆ. ಹಾಗೆ ಬಂಟ್ವಾಳದಲ್ಲೂ ಜಾಗ ಸಿಕ್ಕಿದರೆ ಮಾಡುತ್ತವೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ಕರ್ನಾಟಕ ರಾಜ್ಯದ ಅನೇಕ ಕಡೆಗಳಲ್ಲಿ ಈ ವಿಚಾರ ನಡೆದಿದ್ದು ಇದರ ಬಗ್ಗೆ ಈ ಸದನದಲ್ಲಿ ಚರ್ಚೆಗೆ ಬಂದಿದೆ. ಹಿಂದೆ ಅಗ್ರಿಕಲ್ಚರ್ ಮಾರ್ಕೆಟಿಂಗ್ ಕಮಿಟಿಗಳು ಏನು ಇದ್ದವು ಇದರ ಮುಖಾಂತರ ಫುಡ್ ಕಾರ್ಪೊರೇಷನ್ನಿನವರು ಭತ್ತ ಮುಂತಾದವನ್ನು ಪರ್ಚೆಸ್ ಮಾಡುತ್ತಿದ್ದರು. ಇದಕ್ಕೆಂದು ಪರ್ಚೇಸ್ ಪಾಯಿಂಟ್ಸ್‌ಗಳನ್ನು ಕೂಡ ಮಾಡಿದ್ದರು.

ಅದೇ ರೀತಿ ನಮ್ಮ ಸೊರಬ ತಾಲ್ಲೂಕಿನಲ್ಲಿ ಕೂಡ ಮಾಡಿದರು. ಈಗ ನಾನು ಹೇಳುತ್ತಿರುವುದ ಸುಮಾರು ೧೫ ವರ್ಷಗಳ ಹಿಂದಿನ ಮಾತು ಇನ್ನೂ ಕೂಡ ರೆಕಾರ್ಡ್‌ನಲ್ಲಿ ಹಾಗೆಯೇ ಉಳಿದಿದೆ ೧-೨-೩ ಲಕ್ಷ ೫೦-೬೦ ಸಾವಿರ ಬೆಲೆ ಬಾಳತಕ್ಕಂತಹ ಭತ್ತವನ್ನು ಎಪಿಎಂಸಿಮುಖಾಂತರ ಪರ್ಚೇಸ್ ಮಾಡಿದರು ಈರೀತಿ ಕೊಂಡಂಥ ಭತ್ತ ಫುಡ್ ಕಾರ್ಪೊರೇಷನ್ನಿಗೆ ಬರಬೇಕಾಗಿತ್ತು, ಬರಲಿಲ್ಲ. ಯಾರು ಪರ್ಚೇಸ್ ಪಾಯಿಂಟ್ ಮಾಡಿ ಇದನ್ನು ಮಾಡಿದರು, ಅವರೇ ಇದನ್ನು ತಿಂದು ಹಾಕಿದರು. ಅವರ ಬಗ್ಗೆ ಕೇಸ್ ಹಾಕಿದರು, ಇನ್ನು ಕೆಲವು ಕಡೆ ಡಿಕ್ರಿಯಾಗಿದೆ. ನಾನು ಅವರ ಹೆಸರುಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಇದು ನಮ್ಮ ಸೊರಬ ತಾಲ್ಲೂಕಿನಲ್ಲಿ ಆದದ್ದು. ಕರ್ನಾಟಕ ರಾಜ್ಯದ ಬೇರೆ ಬೇರೆ ಕಡೆಗಳಲ್ಲಿ ಕೂಡ ಇದು ಇದೆ. ಇನ್ನು ಕೆಲವು ಕೇಸ್‌ಗಳಲ್ಲಿ ಹೈಕೋರ್ಟಿನಿಂದ ಸ್ಟೇ ತರಬೇಕೆಂದು ಹೋದರು ಆದರೆ ಅದು ಆಗಲಿಲ್ಲ. ಇದರ ಬಗ್ಗೆ ಸರಕಾರ ತ್ವರಿತವಾದ ಕ್ರಮವನ್ನು ಹಾಕಿಕೊಳ್ಳಬೇಕು. ಫುಡ್ ಕಾರ್ಪೊರೇಷನ್ ಹಣ ಎಂದರೆ ಅದು ಸರಕಾರದ ಹಣ. ಎಪಿಎಂಸಿ ಮುಖಾಂತರ ಹಣ ಕೊಟ್ಟು ಪರ್ಚೇಸ್ ಪಾಯಿಂಟ್ ಅನ್ನು ಮಾಡಿ ವಸೂಲು ಮಾಡುವಂತಹವಿಚಾರದಲ್ಲಿ ಸರಕಾರದವರು ಯಾವುದೇ ಕಾರ್ಯಕ್ರಮವನ್ನು ಹಾಕುವುದಕ್ಕೆ ಸಾಧ್ಯವಾಗಿಲ್ಲ ಎಂದು ಹೇಳವುದಕ್ಕೆ ಇಷ್ಟಪಡುತ್ತೇನೆ. ಶ್ರೀಮಾನ್ ಜಾಲಪ್ಪನವರು ಸಹಕಾರಿ ಮಂತ್ರಿಗಳಾಗಿದ್ದಾಗ ಅವರು ಬಹಳಪ್ರಯತ್ನ ಮಾಡಿ ಪ್ರೊಸೀಡಿಂಗ್ಸ್ ಹಾಕಿ ಕೇಸ್ ಹಾಕಿಸಿದರು, ಒಳ್ಳೆಯ ಕೆಲಸ ಮಾಡಿದ್ದಾರೆ. ಆಗಲೂ ಕೂಡ ನಾವು ಅದರ ಬಗ್ಗೆ ಅವರ ಹತ್ತಿರ ಮಾತನಾಡಿದ್ದೆವು. ಆದರೆ ಈಗ ಪೊಲಿಟಿಕಲ್ ಪ್ರೆಷರ್‌ನಿಂದ ಅವರು ಅಲ್ಲಿ ಸೇರಿಕೊಂಡಿದ್ದಾರೆ. ಇವತ್ತು ಡಿಕ್ರಿ ಯಾದವರಿಂದ ಕೂಡ ಹಣವನ್ನು ವಸೂಲು ಮಾಡುತ್ತಿಲ್ಲ. ಇನ್ನು ಕೆಲವು ಪ್ರೊಸೀ-ಡಿಂಗ್ಸ್ ಡಿಕ್ರಿಯಾದದ್ದು ಆಗಿದ್ದರೂ ಕೂಡ ಯಾರಿಗೆ ಅಲ್ಲಿ ವಹಿಸಿದ್ದಾರೆ ಅವರೂ ಕೂಡ ಪ್ರೊಸೀಡಿಂಗ್ಸ್ ತೆಗೆದುಕೊಳ್ಳುತ್ತಿಲ್ಲ. ರೆಕಾರ್ಡ್ ಅಷ್ಟೂ ಅಲ್ಲೇಬಿದ್ದಿದೆ. ಇದರ ಬಗ್ಗೆ ಯಾವ ಕಾರ್ಯಕ್ರಮವನ್ನು ಹಾಕುತ್ತೀರಿ, ಎಷ್ಟು ದಿವಸದಲ್ಲಿ ಹಾಕುತ್ತೀರಿ, ಯಾವಾಗ ಶಾಸನ ಸಭೆಯಲ್ಲಿ ತಿಳಿಸುತ್ತೀರಿ ಎಂದು ಹೇಳಬೇಕು ಸೊರಬ ತಾಲ್ಲೂಕಿನಲ್ಲಿ ಆದ ಹಾಗೆ ಕರ್ನಾಟಕ ರಾಜ್ಯದಲ್ಲಿ ಎಲ್ಲೆಲ್ಲಿ ಈ ರೀತಿಯಾಗಿದೆ ಎಂಬುದನ್ನು ಕೂಡ ತಿಳಿಸಬೇಕು.

ಶ್ರೀ ಕೆ. ಅಮರನಾಥ ಶೆಟ್ಟಿ.—ಇದರ ಬಗ್ಗೆ ವರದಿಯನ್ನು ತರಿಸಿ ಸಂಬಂಧಪಟ್ಟವರು ಯಾರಿದಾ ಯಾವ ಪಾರ್ಟಿಯವರೇ ಇರಲೀ ತಪ್ಪಿತಸ್ಥರು ಯಾರಿದ್ದಾರೆ. ಅಂತಹವರ ಮೇಲೆ ಖಂಡಿತ ಆದಷ್ಟು ಬೇಗ ಕ್ರಮವನ್ನು ತೆಗೆದುಕೊಳ್ಳುತ್ತೇನೆ. ಕ್ರಮ ತೆಗೆದುಕೊಂಡು ವರದಿಯನ್ನು ಕೊಡುತ್ತೇನೆ.

ಉಪಾಧ್ಯಕ್ಷರು.—ಚರ್ಚೆ ಮುಕ್ತಾಯವಾಯಿತು ನಾನು ಈಗ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವವೇನೆಂದರೆ,

> "೩೧-೩-೧೯೮೯ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕ್ರಮ ಪಡಿಸಿದ ಮಾರು ಕಟ್ಟೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂತಹ ವೆಚ್ಚವನ್ನು ವಹಿಸಲು ಸರಕಾರಕ್ಕೆ ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗುಗಳನ್ನು ಮಂಜೂರು ಮಾಡಬೇಕು."

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು.

ಅಭಿಯಾಚನೆ ಕ್ರಮಾಂಕ ೫೭—ಕ್ರಮಪಡಿಸಿದ ಮಾರುಕಟ್ಟೆಗಳು

> "ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೯ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕ್ರಮಪಡಿಸಿದ ಮಾರುಕಟ್ಟೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೯,೦೮,೧೯ ೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಉಪಾಧ್ಯಕ್ಷರು.—ಈಗ ಮಾನ್ಯ ಮಂತ್ರಿಗಳಿಂದ ಬೇಡಿಕೆಗಳ ಸಂಖ್ಯೆ. ೨. ಕೃಷಿ ಭೂಮಿ ಅಭಿವೃದ್ಧಿ ಮತ್ತು ಸಂಖ್ಯೆ. ೫೪ ಮತೀಯ ಮತ್ತು ಧರ್ಮಾದಾಯ ಸಂಸ್ಥೆಗಳು ಇತ್ಯಾದಿ ಇವುಗಳ ಬಗ್ಗೆ ಉತ್ತರ.

ಶ್ರೀ ಕೆ. ಅಮರನಾಥ ಶೆಟ್ಟಿ.—ಮಾನ್ಯ ಉಪಾಧ್ಯಕ್ಷರೇ, ಧಾರ್ಮಿಕ ದತ್ತಿ ವಿಷಯದಲ್ಲಿ ಈಗಾಗಲೇ ಮಾನ್ಯ ಸದಸ್ಯರುಗಳಾದ ಶಿವನಂಜಪ್ಪನವರು ಮತ್ತು ಲಕ್ಕಪ್ಪನವರು ತುಂಬಾ ವಿಷಯಗಳನ್ನು ಹೇಳಿದ್ದಾರೆ. ಅದಕ್ಕೆ ಸಂಬಂಧಪಟ್ಟ ಉತ್ತರವನ್ನು ನಾನು ಕೊನೆಗೆ ಕೊಡುತ್ತೇನೆ. ಅದರ ಜೊತೆಯಲ್ಲಿ ಖುಷ್ಕಿ ಭೂಮಿ ವಿಷಯದಲ್ಲಿ ಯಾವ ಶಾಸಕರೂ ಕೂಡ ಮಾತನಾಡಲಿಲ್ಲ. ಅದಕ್ಕೆ ಸಂಬಂಧಪಟ್ಟ ವಿಷಯಗಳನ್ನು ಕೂಡ ಇದರೊಟ್ಟಿಗೆ ಹೇಳಲಿಕ್ಕೆ ಬಯಸುತ್ತೇನೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಬಹಳಷ್ಟು ದೇವಸ್ಥಾನಗಳು ಇವೆ. ಅವುಗಳ ಪರಿಸ್ಥಿತಿ ಒಳ್ಳೆಯದು ಇಲ್ಲ ಎನ್ನತಕ್ಕಂಥದನ್ನು ಮೊಟ್ಟ ಮೊದಲಿಗೆ ಹೇಳುವುದಕ್ಕೆ ಬಯಸುತ್ತೇನೆ. ಸುಮಾರು ೪೦,೭೦೦ ಧಾರ್ಮಿಕ ಸಂಸ್ಥೆಗಳು ನಮ್ಮ ಕರ್ನಾಟಕ ರಾಜ್ಯದಲ್ಲಿ ಇದ್ದು ಮುಂಬಯಿ ಸಾರ್ವಜನಿಕ ಟ್ರಸ್ಟ್ ಆ್ಯಕ್ಟ್ ೧೯೫೧ರ ರೀತ್ಯಾ ನೋಂದಣೆಗೊಂಡ ೬೧೬ ಸಂಸ್ಥೆಗಳು ಸೇರಿ ಒಟ್ಟು ೪೧,೩೧೬ ಸಂಸ್ಥೆಗಳು ನಮ್ಮ ರಾಜ್ಯದಲ್ಲಿವೆ. ಇದರಲ್ಲಿ ೬೧೬ ವಿದ್ಯಾಸಂಸ್ಥೆಗಳು ಟ್ರಸ್ಟ್‌ಗಳು ಸೇರಿದೆ. ಕ್ರಿಶ್ಚಿಯನ್, ಮುಸ್ಲಿಂ ಸಂಸ್ಥೆಗಳೂ ಕೂಡಾ ಇದರಲ್ಲಿ ಸೇರಿಕೊಂಡಿದೆ. ಐದು ರೀತಿಯ ಕಾನೂನಿನಿಂದಾಗಿ ನಮ್ಮಲ್ಲಿ ಕೆಲವೊಂದು ದೇವಸ್ಥಾನಗಳ ಅಭಿವೃದ್ಧಿಯ ಕಾರ್ಯ ಕುಂಠಿತಗೊಂಡಿದೆ ಎಂದು ಹೇಳಲಿಕ್ಕೆ ಬಯಸುತ್ತೇನೆ. ಇದರಲ್ಲಿ ಮೈಸೂರು ಮತೀಯ ಮತ್ತು ಧರ್ಮದಾಯ ಸಂಸ್ಥೆಗಳ ಅಧಿನಿಯಮ ೧೯೨೭ ಮುಂಬಯಿ ಸಾರ್ವಜನಿಕ ನ್ಯಾಸಗಳ ಅಧಿನಿಯಮ ೧೯೫೦, ಹಿಂದೂ ಮತೀಯ ಧಾರ್ಮಿಕ ಮತ್ತು ಧರ್ಮದಾಯ ದತ್ತಿಗಳ ಅಧಿನಿಯಮ ೧೯೫೧, ಹೈದರಾಬಾದ್ ದತ್ತಿ ನಿಯಮ ೧೩೪೯ ಪೆಸ್ಲಿ ಕೊಡಗು ದೇವಸ್ಥಾನ ನಿಧಿಗಳ ನಿರ್ವಹಣ ಅಧಿನಿಯಮ ೧೯೫೬. ಈ ರೀತಿಯ ಐದು ಕಾನೂನುಗಳಿಂದಾಗಿ ನಮ್ಮಲ್ಲಿ ಇಷ್ಟೊಂದು ದೇವಸ್ಥಾನಗಳು ನಡೆಯುತ್ತಿದೆ. ಈ ಕಾನೂನುಗಳನ್ನು ಏಕರೂಪದ ಒಂದು ಶಾಸನವನ್ನು ತರಬೇಕು ಎಂದು ಹೇಳುವಂಥ ಒಂದು ಅಭಿಪ್ರಾಯವನ್ನು ಬಹಳ ಸಂಯಮದಿಂದ ನಾವು ಮಾಡುತ್ತಿದ್ದೇವೆ. ಈಗಲೂ ಕೂಡಾ ಏಕರೂಪದ ಶಾಸನ ತಂದು ಎಲ್ಲಾ ದೇವಸ್ಥಾನದ ಅಭಿವೃದ್ಧಿ ಕಾರ್ಯವನ್ನು ಮಾಡಬೇಕು ಎಂದು ಹೇಳುವಂಥ ದೃಷ್ಟಿಯನ್ನು ನಾವು ಇಟ್ಟುಕೊಂಡಿದ್ದೇವೆ. ಈಗಾಗಲೇ ಅದರ ಡ್ರಾಫ್ಟ್ ಬಿಲ್ ಕೂಡ ತಯಾರಾಗಿದೆ. ಇದು ಸಂಪೂರ್ಣವಾಗಲಿಕ್ಕೆ ಸಮಯ ಬೇಕಾಗಿದ್ದುದರಿಂದಾಗಿ ಐದಾರು ತಿಂಗಳೊಳಗೆ ಇದನ್ನು ಶಾಸನ ಸಭೆಯಲ್ಲಿ ತರಲಿಕ್ಕೆ ನಾನು ಪ್ರಯತ್ನಿಸುತ್ತೇನೆ. ಈ ದೇವಸ್ಥಾನದ ಅಭಿವೃದ್ಧಿ ಕಾರ್ಯವನ್ನು ಪಡೆದುಕೊಳ್ಳಲಿಕ್ಕೋಸ್ಕರವಾಗಿ ೧೯೮೪–೮೫ರಲ್ಲಿ ಸರ್ಕಾರದಿಂದ ಸುಮಾರು ೮೦ ಲಕ್ಷ ರೂಪಾಯಿಗಳನ್ನು ದೇವಸ್ಥಾನದ ಅಭಿವೃದ್ಧಿ ಕಾರ್ಯಕ್ಕೋಸ್ಕರ ಒದಗಿಸಿತ್ತು. ೧೯೮೫–೮೬ರಲ್ಲಿ ಆ ನಂತರ ಹೊಸ ಕಟ್ಟಡ ಮತ್ತು ದೇವಸ್ಥಾನದ ದುರಸ್ತಿಗೋಸ್ಕರ ಸರ್ಕಾರ ೧೫೦ ಲಕ್ಷ ರೂಪಾಯಿಗಳನ್ನು ಮತ್ತು ೬೦ ಲಕ್ಷ ರೂಪಾಯಿಗಳನ್ನು ಒಟ್ಟು ಎರಡು ಕೋಟಿ ಹತ್ತು ಲಕ್ಷ ರೂಪಾಯಿಗಳನ್ನು ದೇವಸ್ಥಾನದ ಅಭಿವೃದ್ಧಿ ಹೊಸ ಕಟ್ಟಡದ ಉದ್ದೇಶಕ್ಕೋಸ್ಕರ ಈ ಸರ್ಕಾರ ನಮಗೆ ದೊರಕಿಸಿಕೊಟ್ಟಿದೆ. ಇದರಲ್ಲಿ ನಾವು ಮೂರು ವರ್ಷಗಳಲ್ಲಿ ೧೯೮೫ ಮತ್ತು ೧೯೮೬ರಲ್ಲಿ ೩೭೭ ಒಟ್ಟು ಸಂಸ್ಥೆಗಳಿಗೆ ಅಭಿವೃದ್ಧಿ ಮಾಡಲಿಕ್ಕೋಸ್ಕರವಾಗಿ ೭೬ ಲಕ್ಷದ ೯೪ ಸಾವಿರ ರೂಪಾಯಿಗಳನ್ನು ಅನುದಾನವಾಗಿ ಬಿಡುಗಡೆ ಮಾಡಿದ್ದೇವೆ. ೧೯೮೬–೮೭ರಲ್ಲಿ ೭೦೨ ಸಂಸ್ಥೆಗಳಿಗೆ ಒಂದು ಕೋಟಿ ಮೂವತ್ತೆಂಟು ಲಕ್ಷದ ಎರಡು ಸಾವಿರ ರೂಪಾಯಿಗಳನ್ನು ಈಗಾಗಲೇ ಅನುದಾನವಾಗಿ ಕೊಟ್ಟಿದ್ದೇವೆ. ಇನ್ನು ೧೯೮೭–೮೮ನೇ ಇಸವಿಯಲ್ಲಿ ೬೮೫ ದೇವಸ್ಥಾನಗಳಿಗೆ ಒಂದು ಕೋಟಿ ಐವತ್ತಾರು ಲಕ್ಷ ರೂಪಾಯಿಗಳನ್ನು ಮತ್ತು ೮೬ ಹೊಸ ದೇವಸ್ಥಾನಗಳಿಗೆ ಛತ್ರದ ನಿರ್ಮಾಣಕ್ಕೋಸ್ಕರ ಐವತ್ತೊಂಭತ್ತು ಲಕ್ಷದ ಐವತ್ತು ಸಾವಿರ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ದೇವಸ್ಥಾನದ ಅಭಿವೃದ್ಧಿ ಕಾರ್ಯ ಮಾಡಬೇಕು ಎಂದು ಹೇಳುವಂಥ ದೃಷ್ಟಿಯಿಂದ ೪೧,೩೧೬ ಸಂಸ್ಥೆಗಳಿಗೆ ಈ ಹಣದಲ್ಲಿ ನಾವು ಸ್ವಲ್ಪ ಸ್ವಲ್ಪ ಹಣವನ್ನು ಕೊಡಬಹುದೇ ಹೊರತು ಸಂಪೂರ್ಣವಾಗಿ ಕೊಡಲಿಕ್ಕೆ ಆಗಿಲ್ಲ. ಆ ರೀತಿ ಕೊಡಲಿಕ್ಕೆ ಸರ್ಕಾರದಿಂದ ಬರುವುದಿಲ್ಲ. ಒಂದು ನೂರು ರೂಪಾಯಿ ಖರ್ಚು ಮಾಡಬೇಕಾದ ಕಡೆಯಲ್ಲಿ ಒಂದು ಸಂಸ್ಥೆಗೆ ೩೦ ರೂಪಾಯಿ ಅಥವಾ ೪೦ ರೂಪಾಯಿ, ಈ ರೀತಿ ನಾವು ಸರ್ಕಾರದ ಮುಖೇನ ದೇವಸ್ಥಾನಗಳಿಗೆ ಈಗಾಗಲೇ ನಾವು ಕೊಟ್ಟಿದ್ದೇವೆ.

ಇನ್ನು ತಸ್‌ದೀಕ್ ಕೊಡುವಂತ ವಿಷಯದಲ್ಲಿ ಹೇಳುವುದಿದ್ದರೆ ಬಹಳಷ್ಟು ದೇವಸ್ಥಾನಗಳಿಗೆ ಹಳೆಯ ಮೈಸೂರು ಜಿಲ್ಲೆಗಳಲ್ಲಿ ಹಿಂದಿನ ಆಳರಸರು ದೇವಸ್ಥಾನದ ದೈನಂದಿನ ಪೂಜೆ ಪುರಸ್ಕಾರಗಳಿಗೆ ಜಮೀನನ್ನು ನೀಡಿತ್ತು. ೧೯೫೧ನೇ ಇಸವಿಯಲ್ಲಿ ಇನಾಂ ರದ್ದಿಯಾತಿ ಕಾಯ್ದೆಯ ಅನ್ವಯ ಸರ್ಕಾರಕ್ಕೆ

ಸೇರಿದ ೧೯೭೦ರ ಇಂಥ ಲ್ಯಾಂಡ್‌ನಿಂದಾಗಿ ದೇವಸ್ಥಾನಗಳಿಗೆ ತಸ್‌ದೀಕ್ ಕೊಡುವಂಥ ಕೆಲಸವನ್ನೂ ಕೂಡ ಮಾಡುತ್ತಿದ್ದೇವೆ.

ಇದರಲ್ಲಿ ಮೈಸೂರು ಜಿಲ್ಲೆಯಲ್ಲಿ ತಸದೀಕ್ ಪಡೆಯಲು ಅರ್ಹವಾದ ಸಂಸ್ಥೆಗಳು ೧೫,೫೭೯. ತಸದೀಕ್ ಭತ್ಯೆಯನ್ನು ನಿಗದಿಪಡಿಸಿದಂತಹ ಸಂಸ್ಥೆಗಳು ೧೨,೪೪೭. ಇನ್ನು ನಿಗದಿ ಮಾಡಲಿಕ್ಕೆ ಇರುವುದು ೩,೧೬೨ ಸಂಸ್ಥೆಗಳು ಬಾಂಬೆ, ಹೈದರಾಬಾದ್, ಕರ್ನಾಟಕ, ಬಳ್ಳಾರಿ ಜಿಲ್ಲೆಗಳಲ್ಲಿ ಕರ್ನಾಟಕ ಇನಾಮ್ ಕಾಯಿದೆ ೧೯೭೭ರ ಅನ್ವಯ ಇವುಗಳ ಜಮೀನು ಸರ್ಕಾರಕ್ಕೆ ವಿಹಿತಗೊಂಡಿದೆ. ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಪ್ರಾಂತ್ಯ ಸರ್ಕಾರದವರು ತಸ್‌ದೀಕ್ ಅನ್ನು ನಿಗದಿ ಮಾಡಿದ್ದಾರೆ. ಈ ಒಂದು ವಿವರವನ್ನು ನಾನು ಕೊಡುತ್ತಿದ್ದೇನೆ. ತಸ್‌ದೀಕ್ ಪಡೆಯಲು ಅರ್ಹವಾದ ಸಂಸ್ಥೆಗಳು ೧೪,೯೭೭, ದೇವಸ್ಥಾನದ ಬಗ್ಗೆ ನಿಗದಿಪಡಿಸಿದ ಸಂಸ್ಥೆಗಳು ೧೩,೧೩೪. ಬಾಕಿ ಉಳಿದ ೩,೧೬೨ ಮೈಸೂರು ಜಿಲ್ಲೆಯಲ್ಲಿ ಮತ್ತು ಹೈದರಾಬಾದ್, ಬಾಂಬೆಗಳಲ್ಲಿ. ಬಳ್ಳಾರಿಯಲ್ಲಿ ಇರುವಂತಹ ಸಂಸ್ಥೆಗಳು ೧,೫೬೩ ಇನ್ನು ೩–೪ ತಿಂಗಳಲ್ಲಿ ತಸದೀಕ್ ಅನ್ನು ನಿಗದಿಪಡಿಸುವಂತಹ ಯೋಜನೆಯನ್ನು ಸರ್ಕಾರ ಹಾಕಿಕೊಂಡಿದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಇನ್ನು ತಸದೀಕ್ ಭತ್ಯದ ಬಗ್ಗೆ ಕಳೆದ ಮೂರು ವರ್ಷಗಳಲ್ಲಿ ನಾವು ಇದರಲ್ಲಿ ಫೈನಲ್ ತಸದೀಕ್ ಎಂದು, ಹಿಂದೆ ಇಂತಿಂಥದ್ದಕ್ಕೆ ತಸದೀಕ್ ಎಂದು ಕೊಡುತ್ತಿದ್ದೆವು. ನೂರು ರೂಪಾಯಿ ಇದ್ದರೆ ೫೦ ರೂಪಾಯಿ ಅಥವಾ ೭೫ ರೂಪಾಯಿ ಕೊಟ್ಟಿರುವಂತಹ ಸಂಸ್ಥೆಗಳು ಇವೆ. ಮೂರು ವರ್ಷಗಳಲ್ಲಿ ೧೯೭೫-೭೬ರಲ್ಲಿ ತಸದೀಕ್ ನಿಗದಿ ಪಡಿಸಲಿಕ್ಕೆ ಒದಗಿಸಿದ್ದ ?,೪೯,೫೦,೦೦೦ರೂ.ಗಳನ್ನು ಸರ್ಕಾರ ಬಿಡುಗಡೆ ಮಾಡಿದೆ, ೨,೯೫.೨೦,೨೪೦ರೂ.ಗಳನ್ನು ನಾವು ದೇವಸ್ಥಾನಗಳಿಗೆ ೧೯೭೫–೭೬ರಲ್ಲಿ ಬಿಡುಗಡೆ ಮಾಡಿದ್ದೇವೆ. ೧೯೭೬–೭೭ರಲ್ಲಿ ೭ ಕೋಟಿ ರೂಪಾಯಿಗಳನ್ನು ಆಯವ್ಯಯದಲ್ಲಿ ಒದಗಿಸಿಕೊಟ್ಟಿದ್ದರೂ ಕೂಡ ೬ ಕೋಟಿ ೩೦ ಲಕ್ಷ ರೂಪಾಯಿಗಳನ್ನು ನಾವು ತಸದೀಕ್ ಅಮೌಂಟ್ ಅನ್ನು ಬಿಡುಗಡೆ ಮಾಡಿದ್ದೇವೆ. ಶೇಕಡಾ ೧೦ ಪರ್ಸೆಂಟ್, ಮಿತವ್ಯಯ ೭೦ ಸಾವಿರ ರೂಪಾಯಿ. ೧೯೭೭–೭೮ರಲ್ಲಿ ೮ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಇದರಲ್ಲಿ ೭ ಕೋಟಿ ೨೦ ಲಕ್ಷ ರೂಪಾಯಿ ತಸದೀಕ್‌ಗೆ ಬಿಡುಗಡೆ ಮಾಡಿದ್ದೇವೆ. ಮಿತವ್ಯಯ ೧೦ ಪರ್ಸೆಂಟ್, ೮೦ ಸಾವಿರ ರೂಪಾಯಿ. ಇದನ್ನು ಖರ್ಚು ಮಾಡಿದ್ದೇವೆ ಎಂದು ಹೇಳಬಯಸುತ್ತೇನೆ ೧೯೭೮–೭೯ರಲ್ಲಿ ಕೂಡ ಸರ್ಕಾರ ೮ ಕೋಟಿ ರೂಪಾಯಿಗಳನ್ನು ಸರ್ಕಾರ ಒದಗಿಸಲು ಉದ್ದೇಶಿಸಲಾಗಿದೆ ಎಂದು ಈ ಸಂದರ್ಭದಲ್ಲಿ ಹೇಳ ಬಯಸುತ್ತೇನೆ. ಕರ್ನಾಟಕ ಭೂ ಸುಧಾರಣಾ ಕಾಯಿದೆ ೧೯೬೧ರ ಅನ್ವಯ, ಸರ್ಕಾರಕ್ಕೆ ವಿಹಿತಗೊಂಡ ದೇವಸ್ಥಾನಗಳ ಜಮೀನುಗಳ ಪರಿಹಾರಕ್ಕೆ 'ವರ್ಷಾಸನ' ಎನ್‌ವಿಟಿ ಕೊಡುವಂತೆ ೫,೩೨೪ ಸಂಸ್ಥೆಗಳಿಗೆ ಲ್ಯಾಂಡ್ 'ರಿಫಾರ್ಮ್ಸ'ನಿಂದ ಬಂದಿದೆ, ಅಂಥವರಿಗೆ ಜಡ್ಜ್‌ಮೆಂಟ್ ಆಗಿದೆ. ಇದರಲ್ಲಿ ೩,೭೯೩ ಸಂಸ್ಥೆಗಳಿಗೆ ನಿಗದಿಮಾಡಿದ್ದೇವೆ ಎನ್‌ವಿಟಿ ಕೊಡುವಂತೆ. ಇದರಲ್ಲಿ ೧,೫೩೧ ಸಂಸ್ಥೆಗಳಿಗೆ ಇನ್ನೂ ನಿಗದಿ ಆಗುತ್ತಾ ಇದೆ. ಸಂಬಂಧಪಟ್ಟ ರೆಕಾರ್ಡ್‌ಗಳನ್ನು ಹಾಜರುಪಡಿಸದೆ ಇದ್ದ ಕಾರಣ ೧,೫೩೧ ಸಂಸ್ಥೆಗಳು ಎನ್‌ವಿಟಿ ಕೊಡಲಿಕ್ಕೆ ಉಳಿದಿದೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ಬೇರೆ ಬೇರೆಯ ಸಂಸ್ಥೆಗಳಿಗೆ ಕೂಡ ಉಳಿದ ವರ್ಷಾಸನ ನಿಗದಿಪಡಿಸಲಿಕ್ಕೆ ನಾವು ಕ್ರಮವನ್ನು ಕೈಗೊಂಡಿದ್ದೇವೆ ಇನ್ನು ತಸದೀಕ್ ವಿಷಯವನ್ನು ಮಾನ್ಯ ಶಿವಣ್ಣನವರು ಹಾಗೂ ಲಕ್ಕಪ್ಪನವರು ಮಾತನಾಡುವಾಗ ಬಹಳ ಕಳಕಳಿಯಿಂದ ಹೇಳಿದರು. ಹೇಳುತ್ತಾ ದೇವಸ್ಥಾನಗಳಲ್ಲಿ ಪೂಜೆ ಪುರಸ್ಕಾರ ಇತ್ಯಾದಿಗಳು ನಡೆಸುವುದಕ್ಕೆ ಆಗುತ್ತಿಲ್ಲ ಎಂದು. ನಡೆಸುವುದಕ್ಕೆ ಕಷ್ಟ ಸಾಧ್ಯತೆ ಇದೆ. ಅದು ಎಲ್ಲರೂ ಮನಗಂಡಿದ್ದಾರೆ. ಭೂ ಶಾಸನ ಬಂದಾಗ ದೇವಸ್ಥಾನಗಳಲ್ಲಿ ಯಾವ ಲ್ಯಾಂಡ್‌ಗಳು ಇದೆ, ಅದು ಹೋದದ್ದರಿಂದ ಎಷ್ಟೋ ದೇವಸ್ಥಾನಗಳಲ್ಲಿ ಒಂದು ದಿನದ ಪೂಜೆಗೆ ಕೂಡ ಅಥವಾ ದೀಪ ಉರಿಸುವುದನ್ನು ಕೂಡ ನಿಲ್ಲಿಸುವ ಪ್ರಸಂಗ ನಮ್ಮಲ್ಲಿ ಹೆಚ್ಚು ಬಂದಿದೆ. ಬಹಳ ಕಷ್ಟದಿಂದ ಅವರು ಪೂಜೆ ಮಾಡಿದರೂ ತಸದೀಕ್ ಸಿಕ್ಕುತ್ತಿದ್ದುದು ಎಷ್ಟು ಅಂದರೆ ೫೦ ಪೈಸೆ, ವರ್ಷಕ್ಕೆ ಕೆಲವೊಂದು ವರ್ಷದಲ್ಲಿ ೫೦ ಪೈಸೆ ಬರುತ್ತಿತ್ತು. ಕೆಲವು ದೇವಸ್ಥಾನಗಳಲ್ಲಿ ೫ ರೂಪಾಯಿ, ಆರು ರೂಪಾಯಿ ೩೦ ರೂಪಾಯಿ ಬರುವಂತಹ ರೀತಿಯಲ್ಲಿ ಎಷ್ಟೋ ದೇವಸ್ಥಾನಗಳಲ್ಲಿ ಇದೆ. ಎಷ್ಟೋ ದೇವಸ್ಥಾನಗಳಲ್ಲಿ ಪೂಜೆ ಮಾಡಲಿಕ್ಕೆ ಕಷ್ಟ ಆಗಿದೆ. ಏನಾದರೂ ಅರ್ಚಕರು ದೇವರಿಗೆ ಪೂಜೆ ಮಾಡಬೇಕೆಂಬ ದೃಷ್ಟಿಯಿಂದ ತನ್ನ ಮನೆಗೆ ತಂದಿರುವ ಅಕ್ಕಿ ಅಥ ೨ ಎಣ್ಣೆ ತೆಗೆದುಕೊಂಡು ಹೋಗಿ ಪೂಜೆಯನ್ನು ಮಾಡುತ್ತಿದ್ದಾರೆ, ಹೀಗಾಗಿ ಕೆಲವು ಕಡೆ ಪೂಜೆಗಳು ರನ್ ಆಗುತ್ತಿದೆ. ಈ ದೃಷ್ಟಿಯಿಂದ ಬಹುಶಃ ಎಲ್ಲಾ ವಿಷಯಗಳನ್ನು ಮನಗಂಡು ನಾವು

ನೋಡಿದಾಗ ಎಷ್ಟೋ ದೇವಸ್ಥಾನಗಳಲ್ಲಿ ವರ್ಷದಿಂದ ವರ್ಷ ಸಾಮಗ್ರಿ ಎಷ್ಟು ಇದೆ, ಪದಾರ್ಥಗಳು ಎಷ್ಟು ಏರಿಕೊಂಡಿದೆ ಎಂದು ಪರಿಶೀಲನೆ ಮಾಡಿದಾಗ ದೇವಸ್ಥಾನದ ಬಗ್ಗೆ ಯಾವ ಮುತುವರ್ಜಿಯನ್ನು ತೆಗೆದುಕೊಳ್ಳಬೇಕಾಗಿತ್ತೋ ಅದನ್ನು ತೆಗೆದುಕೊಂಡಿಲ್ಲ ಎಂದು ಬಹಳ ಬೇಸರದಿಂದ ಹೇಳಲಿಕ್ಕೆ ಬಯಸುತ್ತೇನೆ. ೫೦ ಪೈಸೆ ಸಿಕ್ಕತಕ್ಕಂಥ ಅಥವಾ ೫ ರೂಪಾಯಿ, ೬ ರೂಪಾಯಿ ತಸದೀಕ್ ಅನ್ನು ಏರಿಸುವುದಕ್ಕೆ ಯಾವ ಪ್ರಯತ್ನವನ್ನೂ ಮಾಡಿಲ್ಲ. ಆದರೆ ಮುಂದಿನ ವರ್ಷಕ್ಕೆ ೮೭-೮೮ನೇ ಇಸವಿಯಿಂದ, ತಸದೀಕ್ ಅನ್ನು ದೇವಸ್ಥಾನಗಳಿಗೆ ಕೊಡಬೇಕೆಂಬ ದೃಷ್ಟಿಯಿಂದ ಸುಮಾರು ನಮ್ಮ ೩೦,೨೭೬ ದೇವಸ್ಥಾನಗಳಿಗೆ, ತಸದೀಕ್ ಹಣವನ್ನು ಏರಿಸುವುದಕ್ಕೆ ಪ್ರಯತ್ನ ಮಾಡಿದ್ದೇವೆ. ೨೬,೯೩೫ ದೇವಸ್ಥಾನಗಳಿಗೆ ತಸದೀಕ್ ಹಣವನ್ನು ೫೦ ಪೈಸೆಯಿಂದ ಸಾಧಾರಣವಾಗಿ ಎರಡು ಸಾವಿರದವರೆಗೆ ಬರುತ್ತದೆ. ಆ ತಸದೀಕ್ ಹಣವನ್ನು ಮುಂದಿನ ವರ್ಷದಿಂದ ಎರಡು ಸಾವಿರ ರೂಪಾಯಿಗಳು ಒಂದು ದೇವಸ್ಥಾನಕ್ಕೆ ತಸದೀಕ್ ಹಣ ಬರುವಂತಹ ಕಾರ್ಯಕ್ರಮವನ್ನು ನಾವು ತೆಗೆದುಕೊಳ್ಳುತ್ತೇವೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಈ ದೇವಸ್ಥಾನಗಳ ಬಗ್ಗೆ ನಾವು ಹೊಸದಾಗಿ ತೆಗೆದುಕೊಂಡ ಕಾರ್ಯಕ್ರಮವೆಂದರೆ, ಈ ಧಾರ್ಮಿಕ ಸಂಸ್ಥೆಗಳಿಗೆ ಸೇರಿದಂತೆ ಅನೇಕ ಬೆಲೆಬಾಳುವ ಆಭರಣಗಳು ಮತ್ತು ಜಮೀನುಗಳಿವೆ. ಈ ಆಸ್ತಿಗೆ ಸಂಬಂಧಪಟ್ಟಂತೆ ಎಲ್ಲ ವಿವರಗಳನ್ನು ಪ್ರತಿ ದೇವಸ್ಥಾನದಲ್ಲಿಯೂ ಬರೆದಿಡಬೇಕು, ಅದಕ್ಕಾಗಿ ಒಂದು ಲೆಡ್ಜರನ್ನು (ರಿಜಿಸ್ಟರ್) ಇಡಬೇಕೆಂದು ಹೇಳಿದ್ದೇವೆ. ಇಂತಹ ವಿವರಗಳನ್ನು ಎಲ್ಲ ದೇವಸ್ಥಾನಗಳಿಗೆ ಸಂಬಂಧಪಟ್ಟಂತೆ ತಯಾರು ಮಾಡಲು ನಾವು ಪ್ರತಿಯೊಂದು ಜಿಲ್ಲೆಯಲ್ಲಿಯೂ ಒಂದು ಕಮಿಟಿಯನ್ನು ಮಾಡಿದ್ದೇವೆ. ಈ ಕಮಿಟಿಯಲ್ಲಿ ಮೂರು ಜನರು ಇರುತ್ತಾರೆ. ಈ ಕಮಿಟಿ ಮುಖಾಂತರ ಈ ಕೆಲಸಗಳನ್ನು ಮಾಡಿಸಬೇಕೆಂಬ ಉದ್ದೇಶ ನಮಗಿದೆ. ಈಗ ಬೆಂಗಳೂರು ಜಿಲ್ಲೆಯಲ್ಲಿರುವ ಕೆಲವು ದೇವಸ್ಥಾನಗಳಿಗೆ ಸಂಬಂಧಪಟ್ಟಂತೆ ಇಂತಹ ಒಂದು ಕೆಲಸವನ್ನು ನಾವು ಮಾಡಿ ಪೂರೈಸಿದ್ದೇವೆ. ಈ ದೇವಸ್ಥಾನಗಳಿಗೆ ಸಂಬಂಧಪಟ್ಟಂತೆ ಇರುವ ಆಭರಣಗಳು, ಜಮೀನುಗಳು, ಚರ ಮತ್ತು ಸ್ಥಿರ ಆಸ್ತಿಗಳ ಲೆಕ್ಕವನ್ನು ನಾವು ತೆಗೆದುಕೊಂಡಿದ್ದೇವೆ. ಇದಕ್ಕೆ ಸಂಬಂಧಪಟ್ಟಂತೆ ಒಂದು ರಿಜಿಸ್ಟರ್ ಮೇನ್‌ಟೇನ್ ಮಾಡುವ ಕಾರ್ಯಕ್ರಮವನ್ನು ನಾವು ಜಾರಿಗೆ ತಂದಿದ್ದೇವೆ. ಈ ಕಮಿಟಿಯಲ್ಲಿ ಮುಜರಾಯಿ ಇಲಾಖೆಯ ಅಸಿಸ್ಟೆಂಟ್ ಕಮೀಷನರ್ ಅವರು, ತಹಶೀಲ್‌ದಾರರು ಮತ್ತು ರೆವಿನ್ಯೂ ಇನ್ಸ್‌ಪೆಕ್ಟರ್ ಅವರು ಇರುತ್ತಾರೆ. ಇವರುಗಳು ಸಂಬಂಧಪಟ್ಟ ಗುಮಾಸ್ತರನ್ನು ತಮ್ಮ ಜೊತೆಗೆ ಕರೆದುಕೊಂಡು ಹೋಗಿ ದೇವಸ್ಥಾನಗಳಲ್ಲಿರುವ ಆಸ್ತಿಪಾಸ್ತಿಗಳ ಲೆಕ್ಕವನ್ನು ತೆಗೆದುಕೊಂಡು ಅದನ್ನೆಲ್ಲಾ ಒಂದು ರಿಜಿಸ್ಟರ್‌ನಲ್ಲಿ ಬರೆದಿಡುವಂತಹ ಕೆಲಸವನ್ನು ಮಾಡುತ್ತಾರೆ. ಈಗ ಬೆಂಗಳೂರು ನಗರಪಾಲಿಕೆಯಲ್ಲಿರುವ ಸಂಸ್ಥೆಗಳಿಗೆ ಸೇರಿದ ಆಸ್ತಿಪಾಸ್ತಿಯ ಬಗ್ಗೆ ಈಗಾಗಲೇ ತಪಶೀಲು ನಡೆಸಿದ್ದಾರೆ. ಇನ್ನುಳಿದ ಕಡೆಗಳಲ್ಲಿಯೂ ಸಹ ಆದಷ್ಟು ಬೇಗ ಈ ಕೆಲಸವನ್ನು ಪ್ರಾರಂಭ ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಈ ರಾಜ್ಯದಲ್ಲಿರುವಂತಹ ಪ್ರಸಿದ್ಧ ದೇವಾಲಯಗಳ ಮಾಹಿತಿ ನೀಡುವಂತಹ ಒಂದು ಪುಸ್ತಕವನ್ನು ''ಟೆಂಪಲ್ಸ್ ಆಫ್ ಕರ್ನಾಟಕ'' ಎಂಬ ಸಚಿತ್ರ ಪುಸ್ತಕವನ್ನು ಹೊರತರಲು ನಾವು ಈಗಾಗಲೇ ಕ್ರಮ ತೆಗೆದುಕೊಂಡಿದ್ದೇವೆ. ಈ ಪುಸ್ತಕವನ್ನು ಹೊರತಂದಮೇಲೆ ಪರದೇಶಗಳಿಗೂ ಕಳುಹಿಸಿಕೊಡುತ್ತೇವೆ. ನಮ್ಮಲ್ಲಿ ಇಂತಹ ಉತ್ತಮ ದೇವಸ್ಥಾನಗಳಿವೆ ಎಂಬುದನ್ನು ಎಲ್ಲರಿಗೂ ತೋರಿಸಿಕೊಡುವುದಕ್ಕೋಸ್ಕರವಾಗಿ ಇಂತಹ ಒಂದು ಪುಸ್ತಕವನ್ನು ಹೊರತರುತ್ತಿದ್ದೇವೆ. ಈ ಪುಸ್ತಕದಲ್ಲಿ ೧೦೦-೧೧೦ ದೇವಸ್ಥಾನಗಳ ಫೋಟೋಗಳು ಸಹ ಇರುತ್ತವೆ ಅಷ್ಟೇ ಅಲ್ಲ, ಆ ದೇವಸ್ಥಾನಗಳಿಗೆ ಸಂಬಂಧಪಟ್ಟ ಚರಿತ್ರೆ ಸಹ ಅದರಲ್ಲಿರುತ್ತದೆ. ಆದಷ್ಟು ಬೇಗ ಇದನ್ನು ಹೊರತರಲು ನಾವು ಪ್ರಯತ್ನ ಮಾಡುತ್ತಿದ್ದೇವೆ. ಈ ಕೆಲಸಕ್ಕೆ ಸರ್ಕಾರದ ಹಣವನ್ನು ಉಪಯೋಗ ಮಾಡುತ್ತಿಲ್ಲ. ಪ್ರಮುಖ ದೇವಸ್ಥಾನಗಳ ಮುಖಾಂತರ ಹಣವನ್ನು ಪಡೆದು ಇದರ ಖರ್ಚಿಗೆ ಒದಗಿಸಲಾಗುವುದು. ಆದಷ್ಟು ಬೇಗ ಈ ಪುಸ್ತಕವನ್ನು ಬಿಡುಗಡೆ ಮಾಡುವಂತಹ ಕೆಲಸವನ್ನು ನಾವು ಮಾಡುತ್ತಿದ್ದೇವೆ.

ಇನ್ನು ನಮ್ಮ ರಾಜ್ಯದಲ್ಲಿರುವ ಕೆಲವು ದೇವಸ್ಥಾನಗಳಿಗೆ ಸಾಕಷ್ಟು ಜಮೀನು ಇದ್ದು, ಹಣದ ಅನುಕೂಲತೆಯೂ ಸಹ ಇದೆ. ಇಂತಹ ದೇವಸ್ಥಾನಗಳ ಬಗ್ಗೆ ಒಂದು ಮಾಸ್ಟರ್ ಪ್ಲಾನನ್ನು ತಯಾರು ಮಾಡಬೇಕೆಂಬ ಉದ್ದೇಶ ಇದೆ. ಎಲ್ಲ ದೇವಸ್ಥಾನಗಳಿಗೆ ಸಂಬಂಧಪಟ್ಟಂತೆ ಇಂತಹ ಮಾಸ್ಟರ್ ಪ್ಲಾನನ್ನು ತಯಾರು ಮಾಡುವುದಕ್ಕೆ ಬರುವುದಿಲ್ಲ. ಆದರೆ ಹೆಚ್ಚಿನ ಆದಾಯ ಬರುತ್ತಿರುವ

ದೇವಸ್ಥಾನಗಳಿಗೆ ಬರುವಂತಹ ಯಾತ್ರಾರ್ಥಿಗಳ ಅನುಕೂಲಕ್ಕಾಗಿ ಅತಿಥಿಗೃಹ, ಔಷಧಾಲಯ, ಬಸ್ ನಿಲ್ದಾಣ, ವ್ಯಾಪಾರ ಮಳಿಗೆ, ನೀರಿನ ಸರಬರಾಜು ಇತ್ಯಾದಿ ವ್ಯವಸ್ಥೆಗಳನ್ನು ಮಾಡಲಾಗುವುದು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಕಟೀಲು ಶ್ರೀ ದುರ್ಗಾ ಪರಮೇಶ್ವರಿ ದೇವಸ್ಥಾನ, ಕುಕ್ಕೆ ಶ್ರೀ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನ, ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಸ್ಥಾನ, ಉತ್ತರ ಕನ್ನಡ ಜಿಲ್ಲೆಯಲ್ಲಿರುವಂತಹ ಇಡಗುಂಜಿ ಶ್ರೀ ಗಣಪತಿ ದೇವಸ್ಥಾನ, ಗೋಕರ್ಣ ಶ್ರೀ ಮಹಾಬಲೇಶ್ವರ ದೇವಸ್ಥಾನ, ಶ್ರೀ ಎಲ್ಲಮ್ಮ ದೇವಸ್ಥಾನ, ಸೌಂದತ್ತಿ, ಬೆಳಗಾಂ ಜಿಲ್ಲೆ, ಮೈಸೂರು ಜಿಲ್ಲೆಯಲ್ಲಿರುವ ನಂಜನಗೂಡಿನ ಶ್ರೀ ಶ್ರೀಕಂಠೇಶ್ವರ ದೇವಸ್ಥಾನ, ಶ್ರೀ ಚಾಮುಂಡೇಶ್ವರಿ ದೇವಸ್ಥಾನ, ಮೈಸೂರು, ಹಾಗೂ ದೊಡ್ಡಬಳ್ಳಾಪುರದಲ್ಲಿರುವ ಶ್ರೀ ಘಾಟಿ ಸುಬ್ರಹ್ಮಣ್ಯೇಶ್ವರ ದೇವಸ್ಥಾನಗಳಿಗೆ ಸಂಬಂಧಪಟ್ಟಂತೆ ಮಾಸ್ಟರ್ ಪ್ಲಾನನ್ನು ತಯಾರಿಸಲಾಗುವುದು. ಈ ರೀತಿ ಮಾಸ್ಟರ್ ಪ್ಲಾನನ್ನು ತಯಾರಿಸಿದ ಮೇಲೆ ಆ ದೇವಸ್ಥಾನಗಳಿಂದ ಬರುವಂತಹ ಆದಾಯದಿಂದ ಹಂತಹಂತವಾಗಿ ಅವುಗಳ ಅಭಿವೃದ್ಧಿ ಕಾರ್ಯಕ್ರಮವನ್ನು ಕೈಕೊಳ್ಳಲಾಗುವುದು. ಈ ಬಗ್ಗೆ ಹತ್ತು ವರ್ಷಗಳ ಒಂದು ಸ್ಕೀಮನ್ನು ಹಾಕಿಕೊಂಡು ಇವುಗಳನ್ನು ಅಭಿವೃದ್ಧಿಪಡಿಸಬೇಕೆಂಬ ಉದ್ದೇಶವನ್ನು ನಾವು ಇಟ್ಟುಕೊಂಡಿದ್ದೇವೆ.

ಇನ್ನು ಶ್ರೀ ಮಲೆ ಮಹದೇಶ್ವರಸ್ವಾಮಿ ದೇವಸ್ಥಾನ, ಕೊಳ್ಳೆಗಾಲ ತಾಲ್ಲೂಕ್, ಇದಕ್ಕೆ ಸಂಬಂಧಪಟ್ಟಂತೆ ಮಾಸ್ಟರ್ ಪ್ಲಾನ್ ತಯಾರಾಗಿರುತ್ತದೆ, ಈಗ ಅಲ್ಲಿ ಅಲ್ಪಸ್ವಲ್ಪ ಕೆಲಸಗಳೂ ಸಹ ಆಗುತ್ತಿದೆ.

ಶ್ರೀ ಕೆ.ಎಚ್. ಪಾಟೀಲ್.—ನಾನು ಈ ಕೊಳ್ಳೆಗಾಲದಲ್ಲಿರುವ ದೇವಸ್ಥಾನಕ್ಕೆ ಹೋಗಿದ್ದೆ. ಅಲ್ಲಿ ಬಹಳ ಗಲೀಜು ಇದೆ. ಅಂತಹ ಒಂದು ದೇವಸ್ಥಾನವನ್ನು ತಾವು ಏತಕ್ಕೆ ಇಟ್ಟುಕೊಂಡಿದ್ದೀರಿ ? ಆ ದೇವಸ್ಥಾನದ ಸುತ್ತಮುತ್ತಲು ಇರುವ ಗಲೀಜನ್ನು ತೆಗೆಸುವುದಕ್ಕೆ ಮೊದಲು ತಾವು ಕ್ರಮ ಕೈಕೊಳ್ಳಬೇಕು.

೧-೩೦ ಪಿ.ಎಂ.

ಶ್ರೀ ಕೆ. ಅಮರನಾಥ ಶೆಟ್ಟಿ.—ಹಿರಿಯ ಶಾಸಕರಾದ ಮಾನ್ಯ ಕೆ.ಹೆಚ್. ಪಾಟೀಲ್‌ರವರು ಹೇಳಿದಂಥ ಸೂಚನೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಆದಷ್ಟು ಬೇಗನೆ ಗಲೀಜು ತೆಗೆಸುವಂಥ ಕೆಲಸವನ್ನು ಮಾಡಿಸುತ್ತೇನೆ ಎಂದು ಹೇಳಲಿಕ್ಕೆ ಬಯಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ —ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಮಂತ್ರಿಗಳು ಕೊಲ್ಲೂರು ದೇವಸ್ಥಾನ, ಗೋಕರ್ಣ ದೇವಸ್ಥಾನ, ಕುಕ್ಕೆ ದೇವಸ್ಥಾನ, ಯಲ್ಲಮ್ಮ ದೇವಸ್ಥಾನಕ್ಕೆ ಎಲ್ಲಾ ಮಾಸ್ಟರ್ ಪ್ಲಾನ್ ಮಾಡಿದ್ದೇವೆ ಜೀರ್ಣೋದ್ಧಾರಕ್ಕೆ ಎಂದು ಹೇಳಿದರು ಅದು ಬಹಳ ಒಳ್ಳೆಯ ಕೆಲಸಮಾಡಿ. ನಾನು ಕೇಳುವುದು ಏನೆಂದರೆ, ಕರ್ನಾಟಕ ರಾಜ್ಯದಲ್ಲಿ ಕೆಲವು ಬಡವರ ದೇವರುಗಳಿವೆ. ಹರಿಜನರ ವಾಡಿಯಲ್ಲಿ ಹರಿಜನ ಕೇರಿಯಲ್ಲಿ ಅಥವಾ ಹಿಂದುಳಿದ ವರ್ಗಗಳ ಸ್ಥಳದಲ್ಲಿ, ಲಂಬಾಣಿ ತಾಂಡಗಳಲ್ಲಿ, ಕೇರಿಗಳ ಬಡವರ ದೇವರುಗಳಿವೆ. ಈಗ ಮುಜರಾಯಿ ಇಲಾಖೆಯಿಂದ ಈ ದೇವರುಗಳಿಗೆ ೫ ಪೈಸೆ ಹೋಗುತ್ತಾ ಇಲ್ಲ. ಎಲ್ಲಾ ಜಿಲ್ಲೆಗಳಲ್ಲೂ ಕೂಡ ಈ ರೀತಿ ಇದೆ, ಇಂತಹ ದೇವರುಗಳು ಒಂದೊಂದು ಜಿಲ್ಲೆಯಲ್ಲಿ ಸಾವಿರಾರು ಸಿಗುತ್ತವೆ. ನೀವು ಮಾಸ್ಟರ್ ಪ್ಲಾನ್ ಹಾಕಿ ಆಗ ಆ ದೇವರುಗಳಿಗೆ ಬೆಳಿಗ್ಗೆ ಎದ್ದರೆ ಮುಖ ತೊಳೆಯುವುದಿಲ್ಲ, ಪೌಡರ್ ಹಚ್ಚುವುದಿಲ್ಲ, ಪೂಜೆ ಪುನಸ್ಕಾರ ಏನೂ ಬೇಡವೇ. ಅದಕ್ಕೆ ಹಚ್ಚಿದ ಬಣ್ಣ ಎಲ್ಲಾ ಕಿತ್ತುಕೊಂಡು ಹೋಗಿರುತ್ತದೆ ಎಲ್ಲಾ ಹೋಗಿರುತ್ತದೆ. ಹರಿಜನರು ಕೂಲಿಗೆ ಹೋಗುತ್ತಾರೆ ನೀವು ಆ ದೇವಸ್ಥಾನಗಳನ್ನು ನೋಡುವುದಿಲ್ಲ. ನೀವು ದೊಡ್ಡ ದೊಡ್ಡ ದೇವಸ್ಥಾನಗಳಿಗೆ ಮಾಸ್ಟರ್‌ಪ್ಲಾನ್ ಹಾಕತಕ್ಕವರು. ಬಡವರ ಉದ್ಧಾರ ಮಾಡುವುದಕ್ಕೆ ೨೦ ಪಾಯಿಂಟ್ ಪ್ರೋಗ್ರಾಂ ಇತ್ಯಾದಿ ಮಾಡುತ್ತೇವೆ ಎಂದು ಏನು ಹೇಳುತ್ತೀರೋ ಹಾಗೆಯೇ ಬಡ ದೇವಸ್ಥಾನಗಳನ್ನು ಉದ್ಧಾರ ಮಾಡುವುದಕ್ಕೋಸ್ಕರ ಮಾಸ್ಟರ್ ಪ್ಲಾನ್ ಹಾಕಬೇಕು. ಇರುವ ದೊಡ್ಡ ದೊಡ್ಡ ದೇವಸ್ಥಾನಗಳಿಗೆ ಮಾಸ್ಟರ್‌ಪ್ಲಾನ್ ಹಾಕುವುದಲ್ಲ ಬಡ ದೇವರುಗಳಿಗೆ ಬೆಳಿಗ್ಗೆ ಎದ್ದ ತಕ್ಷಣ ಮುಖ ತೊಳೆದು ಪೌಡರ್ ಹಚ್ಚಿ ಪೂಜೆ ಪುನಸ್ಕಾರ ಮಾಡಬೇಕು. ಬಡವರ ಓಟುಗಳು ಬೇಕು, ಬಡವರ ದೇವರು ಮಾತ್ರ ನಿಮಗೆ ಬೇಡವೇ. ಅದಕ್ಕೆ ಮಾಸ್ಟರ್ ಪ್ಲಾನ್ ಮಾಡುತ್ತೀರೋ ಏನು ಮಾಡುತ್ತೀರಿ ಸ್ವಲ್ಪ ಹೇಳಿ.

ಶ್ರೀ ಕೆ. ಅಮರನಾಥ ಶೆಟ್ಟಿ.—ನಾನು ಆಗಲೇ ಹೇಳಿದ್ದೇನೆ ಅನುದಾನ ಕೊಟ್ಟಿರುವುದರಲ್ಲಿ ಬಹಳಷ್ಟು ಬಡ ದೇವಸ್ಥಾನಗಳನ್ನು ಹುಡುಕಿ ನಾವು ಕೊಟ್ಟಿದ್ದೇವೆ. ಆದರೆ ಈ ದೊಡ್ಡ ದೊಡ್ಡ ದೇವಸ್ಥಾನಗಳಿಗೆ ಮಾಸ್ಟರ್‌ಪ್ಲಾನ್ ಏಕೆ ಮಾಡಿದ್ದೇವೆ ಅಂದರೆ ಅಲ್ಲಿ ಬರುವಂಥ ಆದಾಯದಲ್ಲಿ ಈ ದೇವಸ್ಥಾನಗಳ ಅಭಿವೃದ್ಧಿ ಆಗಬೇಕು ಬೇರೆ ಸಣ್ಣ ದೇವಸ್ಥಾನಗಳು ಕೊಟ್ಟಿರುವಂಥ ಪ್ರಪೋಸಲ್ಸ್ ಏನಿದೆ ಅದಕ್ಕೆ ಸಹಾಯವನ್ನು ಮಾಡುವಂಥ ಕೆಲಸ ದೊಡ್ಡ ದೊಡ್ಡ ದೇವಸ್ಥಾನಗಳಲ್ಲಿದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಸಣ್ಣ ದೇವಸ್ಥಾನಗಳಿಂದ ಪ್ರಪೋಸಲ್ ಬಂದಾಗ ನಮ್ಮ ಬಿಲ್ಲಿನಲ್ಲಿ ಅದಕ್ಕೆ ಕಾಮನ್ ಫಂಡ್ ಎಂದು ಒಂದು ಫಂಡ್ ಮಾಡಿ ದೊಡ್ಡ ದೊಡ್ಡ ದೇವಸ್ಥಾನಗಳಿಂದ ಪರ್ಸೆಂಟೇಜ್ ಹಣವನ್ನೂ ಕೂಡ ಇದರಲ್ಲಿ ಶೇಖರಣೆ ಮಾಡಿಕೊಂಡು ಸಣ್ಣ ದೇವಸ್ಥಾನಗಳು ಯಾವುದು ಇದೆ ಆ ದೇವಸ್ಥಾನಗಳನ್ನು ಅಭಿವೃದ್ಧಿ ಮಾಡಬೇಕು ಎಂದು ಯೋಚನೆಮಾಡಿ ಮಾಡಿದ್ದೇನೆ. ನಾನು ಮೊದಲು ಹೇಳಿದಹಾಗೆ ೫೦ ಪೈಸೆಯಿಂದ ೨ ಸಾವಿರ ರೂಪಾಯಿವರೆಗೆ ಯಾವುದು ಸಣ್ಣ ತಸ್‌ದ್ತೀಕ್ ಬರತಕ್ಕಂಥ ದೇವಸ್ಥಾನಗಳಿವೆ ಅಂತಹ ಸಣ್ಣ ದೇವಸ್ಥಾನಗಳಲ್ಲಿ ಪೂಜೆ, ಪುನಸ್ಕಾರ ನಡೆಯಬೇಕು ಎನ್ನತಕ್ಕಂಥ ಉದ್ದೇಶದಿಂದ ೨ ಸಾವಿರ ರೂಪಾಯಿವರೆಗೆ ತಸ್ದೀಕ್ ಕೊಡುವಂಥ ನಿರ್ಣಯವನ್ನು ನಾವು ಕೈಕೊಂಡಿದ್ದೇವೆ ಎಂದು ಈ ಸಂದರ್ಭದಲ್ಲಿ ಹೇಳುತ್ತಾ ಇದ್ದೇನೆ,

ಶ್ರೀ ಪಟಮಕ್ಕಿ ರತ್ನಾಕರ.—ಈಗ ಮಾನ್ಯ ಬಂಗಾರಪ್ಪನವರು ಏನು ಹೇಳಿದರು, ಆ ದೇವಸ್ಥಾನಗಳನ್ನು ಮುಜರಾಯಿ ಇಲಾಖೆಗೆ ಸೇರಿಸಿಕೊಂಡಿದ್ದೀರಾ. ಎಷ್ಟೋ ದೇವಸ್ಥಾನಗಳನ್ನು ನಿಮ್ಮ ಮುಜರಾಯಿ ಇಲಾಖೆಗೆ ಸೇರಿಸಿಕೊಂಡಿಲ್ಲ ಆ ರೀತಿ ಸೇರಿಸಿಕೊಳ್ಳದೇ ಇರತಕ್ಕಂಥ ದೇವಸ್ಥಾನಗಳಿಗೆ ನೀವು ಹಣ ಕೊಡಲಿಕ್ಕೆ ಸಾಧ್ಯವಿಲ್ಲ, ಆದ್ದರಿಂದ ಬಡವರ ತಾಂಡಾಗಳಲ್ಲಿರತಕ್ಕಂಥ ಅಂತಹ ಜಾಗಗಳಲ್ಲಿರತಕ್ಕಂಥ ದೇವಸ್ಥಾನಗಳನ್ನು ಅವಕ್ಕೆ ಆದಾಯ ಇರಲಿ ಅಥವಾ ಇಲ್ಲದೇ ಇರಲಿ ಆ ದೇವಸ್ಥಾನಗಳನ್ನು ನಿಮ್ಮ ಮುಜರಾಯಿ ಇಲಾಖೆಗೆ ಸೇರಿಸಿಕೊಂಡು ಆ ನಂತರ ಯೋಚನೆ ಮಾಡುವಂಥ ಕೃಪೆ ಮಾಡಬೇಕು.

ಶ್ರೀ ಕೆ, ಅಮರನಾಥ ಶೆಟ್ಟಿ.—ಸಣ್ಣ ದೇವಸ್ಥಾನಗಳು ಮುಜರಾಯಿ ಇಲಾಖೆಗೆ ಸೇರಲಿ ಅಥವಾ ಸೇರದೇ ಇರಲಿ, ಪ್ರಪೋಸಲ್ ಬಂದಾಗ ಅದಕ್ಕೆ ಅನುದಾನವನ್ನು ಕೊಟ್ಟಿದ್ದೇವೆ, ಇನ್ನೂ ಕೊಡುತ್ತಾ ಇದ್ದೇವೆ.

ಶ್ರೀ ಆರ್.ಎನ್. ನಾಯಕ್.—ದೇವರಗಳು ಎಷ್ಟು ಇವೆ ?

ಶ್ರೀ ಕೆ. ಅಮರನಾಥ ಶೆಟ್ಟಿ —ದೇವರು ಎಷ್ಟಿವೆ ಅಂದರೆ ದೇವಸ್ಥಾನಗಳಿಗೆ ಹೋಗಿ ನೋಡಬೇಕು. ನಾನು ಮುಂಚೆ ಹೇಳಿದ್ದೇನೆ. ಎಷ್ಟಿದೆ ಎಂದು ಲೆಕ್ಕ ಕೊಟ್ಟಿದ್ದೇನೆ.

ಶ್ರೀ ಆರ್.ಎನ್. ನಾಯಕ್.—ಬಡ ದೇವರ ಸಂಖ್ಯೆ ಹೇಳುತ್ತೀರಾ ?

ಉಪಾಧ್ಯಕ್ಷರು.—ತಾವು ತಮ್ಮ ಜಾಗದಲ್ಲಿಲ್ಲ.

ಶ್ರೀ ಆರ್.ಎನ್. ನಾಯಕ್.—ದೇವರ ಸಂಖ್ಯೆ ಹೇಳಿ.

ಶ್ರೀ ಬಿ ಎ. ಜೀವಿಜಯ.—ಮಾನ್ಯ ಬಂಗಾರಪ್ಪನವರು ಅವರ ಊರಿನಲ್ಲಿರತಕ್ಕಂಥ ಸಣ್ಣಪುಟ್ಟ ದೇವಸ್ಥಾನಗಳಲ್ಲಿರುವಂಥ ದೇವರುಗಳಿಗೆ ಪೌಡರು ಏನೋಬೇಕು ಎಂದು ಕೇಳುತ್ತಾ ಇದ್ದರು.

ಶ್ರೀ ಕೆ. ಮಲ್ಲಪ್ಪ.—ವಿಭೂತಿ, ಕುಂಕುಮ ಎಂದು ಕೇಳುವುದಕ್ಕೆ ಬರಲಿಲ್ಲ, ಅದಕ್ಕೆ ಹೇಳಿದರು ಅಷ್ಟೆ.

ಶ್ರೀ ಎಸ್. ಬಂಗಾರಪ್ಪ.—ಹೆಣ್ಣು ದೇವರಿಗೆ ಅರಿಶಿಣ, ಕುಂಕುಮ ಇಟ್ಟು ಸ್ವಲ್ಪ ಹೂವು ಮುಡಿಸಬೇಕು. ದೊಡ್ಡ ದೊಡ್ಡ ಗಂಡು ದೇವರಿಗೆ ವಿಭೂತಿ, ನಾಮ ಎಲ್ಲಾ ಹಾಕಿ.

ಶ್ರೀ ಕೆ. ಅಮರನಾಥ ಶೆಟ್ಟಿ.—ಈ ಅನುಭವ ತಮಗೆ ಯಾವಾಗಲಿಂದ ಬಂತು.

ಶ್ರೀ ಕೆ. ಮಲ್ಲಪ್ಪ.—ವಯಸ್ಸಾದ ಮೇಲೆ ಅದು ಬರುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಸಣ್ಣ ಪುಟ್ಟ ದೇವರುಗಳೆಲ್ಲ ಕರೆದುಕೊಂಡು ಬಂದು ರೇಸ್‌ಕೋರ್ಸ್‌ನಲ್ಲಿ ಇಟ್ಟು ಒಂದು ನಿರ್ಣಯಮಾಡಿ ತಮಗೆ ಒಂದು ಕರೆಯನ್ನು ಕೊಡಬೇಕಾಗುತ್ತದೆ.

ಶ್ರೀ ಕೆ. ಅಮರನಾಥ ಶೆಟ್ಟಿ.—ದೇವರುಗಳ ಬಗ್ಗೆ ಸಣ್ಣದಾಗಿ ಮಾತನಾಡುವುದು ಅಷ್ಟು ಸರಿಯಲ್ಲವೆಂದು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ನಮ್ಮ ಪುರಾಣದ ಪ್ರಕಾರ ಲೆಕ್ಕ ಹಾಕಿದರೆ ಸುಮಾರು ೩೩ ಕೋಟಿ ದೇವರುಗಳಿವೆ. ಆ ಪ್ರಕಾರ ನೋಡಿದರೆ ದೇವರುಗಳಲ್ಲಿಯೂ ಕ್ಲಾಸ್ ಒನ್ ಕ್ಲಾಸ್ ಟೂ ಕ್ಲಾಸ್ ತ್ರಿ ಕ್ಲಾಸ್ ಫೋರ್ ಎಂದು ಇದೆ. ಮಾನ್ಯ ಸದಸ್ಯರಾದ ಬಂಗಾರಪ್ಪನವರು ಹೇಳಿದ ಹಾಗೆ ಕ್ಲಾಸ್ ಫೋರ್ ದೇವರುಗಳ ಜಾಸ್ತಿ ಇದೆ. ಕ್ಲಾಸ್ ಒನ್ ಕ್ಲಾಸ್ ಟು, ಕ್ಲಾಸ್ ತ್ರಿ ದೇವರುಗಳಿಗೆ ಅಷ್ಟು ತೊಂದರೆ ಇಲ್ಲ. ಕ್ಲಾಸ್ ಫೋರ್ ದೇವರು ಏನು ಇದೆ ಉದಾಹರಣೆಗೆ ಗಂಗಮ್ಮ, ಮಾರಮ್ಮ, ಈತರಹ ದೇವರುಗಳ ಕಥೆ ಬಹಳ ಕಷ್ಟವಿದೆ.

ಶ್ರೀ ಕೆ. ಅಮರನಾಥ ಶೆಟ್ಟಿ.—ನಾನು ಮೊದಲೆ ಹೇಳಿದ್ದೇನೆ, ದೊಡ್ಡ ಮತ್ತು ಸಣ್ಣ ದೇವಸ್ಥಾನಗಳು ಎಂದು ಹೇಳುವಂತಹ ತಾರತಮ್ಯ ಇಲ್ಲ. ಯಾರು ಪ್ರಪೋಸಲ್ ಕಳುಹಿಸುತ್ತಾರೆ ಆ ದೇವಸ್ಥಾನಗಳಿಗೆ ಸರ್ಕಾರ ಹಣವನ್ನು ಒದಗಿಸುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಆದಾಯ ಬರುವಂತಹ ದೇವಸ್ಥಾನಗಳಿಗೂ ತಾವು ಹಣವನ್ನು ಕೊಡುತ್ತೀರಾ,

ಶ್ರೀ ಕೆ. ಅಮರನಾಥ್ ಶೆಟ್ಟಿ.—ಕುಕ್ಕೆ ಸುಬ್ರಹ್ಮಣ್ಯಸ್ವಾಮಿ, ದೇವಸ್ಥಾನ ಕೊಲ್ಲೂರು ಮೂಕಾಂಬಿಕೆ ದೇವಸ್ಥಾನ ಈತರಹ ಆದಾಯ ಬರತಕ್ಕ ದೇವಸ್ಥಾನಗಳು ಏನು ಇವೆ ಅವುಗಳು ಅವರ ಆದಾಯದ ಮೂಲಕವೇ ಅದಕ್ಕೆ ಬೇಕಾದಂತಹ ಕೆಲಸಗಳನ್ನು ಮಾಡಿಕೊಳ್ಳಬೇಕು. ಅದಕ್ಕೆ ನಾವು ಮಂಜೂರಾತಿ ಕೊಡುತ್ತೇವೆ.

ಶ್ರೀ ಆರ್. ವೆಂಕಟರಾಮಯ್ಯ.—ಗಂಗಮ್ಮ ಮತ್ತು ಮಾರಮ್ಮ ಅಂತಹ ದೇವಸ್ಥಾನಗಳ ೦ ಏನು ಇವೆ ಅಂತಹ ದೇವಸ್ಥಾನಗಳಿಗೂ ತಾವು ಹಣ ಕೊಡುವಂತಹ ವ್ಯವಸ್ಥೆಯನ್ನು ಮಾಡಬೇಕು

ಶ್ರೀ ಕೆ. ಅಮರನಾಥ ಶೆಟ್ಟಿ.—ಸಣ್ಣ ಸಣ್ಣ ದೇವಸ್ಥಾನಗಳು ಯಾವುದು ಇವೆ ಅವುಗಳ ಬಗ್ಗೆಯೂ ಕೂಡ ಪ್ರಪೋಸಲ್ ಬಂದಾಗ ಹಣ ಕೊಡಿಸುವ ಕ್ರಮ ಇದೆ ಎಂದು ಹೇಳಿದ್ದೇನೆ. ತಾವು ಮಾರಮ್ಮ ದೇವಸ್ಥಾನವಿರಲಿ, ಯಾವುದೇ ದೇವಸ್ಥಾನವಿರಲಿ, ತಾವು ಪ್ರಪೋಸಲ್ ಕಳುಹಿಸಿದರೆ ಅದಕ್ಕೆ ನಾವು ಹಣ ಕೊಡತಕ್ಕ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಎಸ್. ಬಂಗಾರಪ್ಪ.—ನಾವು ಪ್ರಪೋಸಲ್ ಕಳುಹಿಸಿಕೊಡತಕ್ಕದ್ದು ಏನು ಇದೆ ನೀವೇ ಪ್ರಪೋಸಲ್ ತರಿಸಿಕೊಳ್ಳಿ.

ಶ್ರೀ ಕೆ. ಅಮರನಾಥ್ ಶೆಟ್ಟಿ.—ಮಾನ್ಯ ಬಂಗಾರಪ್ಪನವರು ಕೊಟ್ಟಂಥ ಸಲಹೆಯನ್ನು ಮನಸ್ಸಿನಲ್ಲಿಟ್ಟು ಕೊಡಿಸಲಿಕ್ಕೆ ಪ್ರಯತ್ನ ಮಾಡುತ್ತೇನೆ. ಮಾನ್ಯ ಅಧ್ಯಕ್ಷರೆ, ನಾಲ್ಕು ಹೊರ ರಾಜ್ಯಗಳಲ್ಲಿ ನಮ್ಮ ರಾಜ್ಯದ ಛತ್ರಗಳನ್ನು ಮಾಡಿದ್ದೇವೆ. ಅದರ ವಿವರಗಳು ಈ ರೀತಿ ಇದೆ.

೧) ಕರ್ನಾಟಕ ರಾಜ್ಯ ಛತ್ರ ತಿರುಮಲಾ	೧) ಗೆಸ್ಟ್ ಹೌಸ್—೮ ಕೊಠಡಿ ೨) ಪ್ರವಾಸಿ ಸೌಧ—೮೮ ಕೊಠಡಿ ೩) ಕಾಟೇಜ್—೧೦ ೪) ಹೊಸ ಕಲ್ಯಾಣ ಮಂಟಪ್ಪ ಕಟ್ಟಡ—೨೪ ಕೊಠಡಿ ೫) ಕಲ್ಯಾಣ ಮಂಟಪ್ಪ—೨ ಕೆ. ಆರ್. ಛತ್ರ—೧೦ ಕೊಠಡಿ
೨) ಕರ್ನಾಟಕ ರಾಜ್ಯ ಛತ್ರ ಮಂತ್ರಾಲಯಂ	೩೩ ಕೊಠಡಿಗಳು ೧ ಕಲ್ಯಾಣ ಮಂಟಪ
೩) ಕರ್ನಾಟಕ ರಾಜ್ಯ ಛತ್ರ ಶ್ರೀ ಶೈಲ	೧೬ ಕೊಠಡಿ ೧ ಊಟದ ಮನೆ

೪) ಕರ್ನಾಟಕ ರಾಜ್ಯ ಛತ್ರ ವಾರಣಾಸಿ ೮ ಕೊಠಡಿ
೨ ದೊಡ್ಡ ಕೊಠಡಿ

ತಿರುಪತಿಯಲ್ಲಿ ಒಂದು ಹಳೆಯ ಛತ್ರವನ್ನು ಕೆಡವಿ ಒಂದು ಹೊಸ ಕಟ್ಟಡವನ್ನು ತಯಾರಿಸಲು ಕ್ರಮಕೈಗೊಳ್ಳಲಾಗಿದೆ. ಒಂದು ಹೊಸ ವಸತಿ ಗೃಹವನ್ನು ಕೊಳಲಿಯಲ್ಲಿ ಕಟ್ಟಲಾಗುತ್ತಿದೆ. ಕರ್ನಾಟಕ ರಾಜ್ಯ ಯಾತ್ರಾರ್ಥಿಗಳ ಅನುಕೂಲಕ್ಕಾಗಿ ಕೇರಳ ರಾಜ್ಯದಲ್ಲಿ ಮದೂರು ಎಂಬಲ್ಲಿ ಒಂದು ವಸತಿ ಗೃಹವನ್ನು ಕಟ್ಟಲಾಗುವುದು. ಮತ್ತು ಪಂಡರಾಪುರ ತುಳಜಾಪುರ ಮತ್ತು ಸೋಲಾಪುರದಲ್ಲಿ ಛತ್ರಗಳನ್ನು ಕಟ್ಟಲು ಪ್ರಸ್ತಾವವು ಪರಿಶೀಲನೆಯಲ್ಲಿದೆ. ಜಾಗ ದೊರಕಿಸಿಕೊಳ್ಳುವುದಕೋಸ್ಕರ ಸಂಬಂಧಪಟ್ಟವರಿಗೆ ಕಾಗದವನ್ನು ಬರೆದಿದ್ದೇವೆ. ನಮಗೆ ಅವರು ಜಾಗ ಕೊಟ್ಟ ಕೂಡಲೇ ಛತ್ರ ಕಟ್ಟಲಿಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳಿ ಇನ್ನು ಖುಷ್ಕಿ ಭೂ ಅಭಿವೃದ್ಧಿ ಕಾರ್ಯಕ್ರಮದ ಬಗ್ಗೆ ಎರಡು ಮಾತುಗಳನ್ನು ಹೇಳಲಿಕ್ಕೆ ಬಯಸುತ್ತೇನೆ.

ಇನ್ನು ಖುಷ್ಕಿ ಭೂಮಿಯ ಬಗ್ಗೆ ಒಂದೆರಡು ಮಾತುಗಳನ್ನು ಆಡಲಿಕ್ಕೆ ಇಚ್ಛೆಪಡುತ್ತೇನೆ. ನಮ್ಮ ರಾಜ್ಯದಲ್ಲಿ ೧೯ ಜಿಲ್ಲೆಗಳಿದ್ದು ಇದರಲ್ಲಿ ಒಂದು ಜಿಲ್ಲೆಯಾದ ಬೆಂಗಳೂರು ಜಿಲ್ಲೆಯಲ್ಲಿ ಕಬ್ಬಿನಾಳ ಜಲಾನಯನ ಪ್ರದೇಶದಲ್ಲಿ ೧೯೮೩-೮೪ ರಲ್ಲಿ ಖುಷ್ಕಿ ಭೂಮಿ ಅಭಿವೃದ್ಧಿ ಯೋಜನೆಯನ್ನು ಪ್ರಾರಂಭ ಮಾಡಿ ವಿಶ್ವಬ್ಯಾಂಕ್‌ನ ನೆರವಿನಿಂದ ನಡೆಸಿಕೊಂಡು ಬರುತ್ತಿದ್ದೇವೆ ೧೯೮೪-೮೫ ರಲ್ಲಿ ಕೂಡ ಇದನ್ನೇ ಮುಂದುವರಿಸಿಕೊಂಡು ಆರ್. ಎಲ್. ಇ. ಜಿ. ಪಿ. ಯೋಜನೆಯ ಅಡಿಯಲ್ಲಿ ಇನ್ನುಳಿದ ೧೮ ಜಿಲ್ಲೆಗಳಲ್ಲಿ ಕೆಲಸವನ್ನು ಮಾಡಿಕೊಂಡು ಬರುತ್ತಿದ್ದೇವೆ. ಈ ಮೇಲ್ಕಂಡ ಜಲಾನಯನದ ಅಭಿವೃದ್ಧಿ ಕಾರ್ಯಕ್ರಮವನ್ನು ಪ್ರತಿಯೊಂದು ರಾಯಸ ವಿಭಾಗಕ್ಕೂ ಒಂದರಂತೆ ಒಟ್ಟು ೪ ಖುಷ್ಕಿ ಭೂ ಅಭಿವೃದ್ಧಿ ಮಂಡಲಿಗಳನ್ನು ೧೯೮೪-೮೫ ರಲ್ಲಿ ಸ್ಥಾಪಿಸಲಾಯಿತು. ಈ ಮಂಡಲಿಯು ಸ್ವಾಯತ್ತತೆಯನ್ನು ಪಡೆದಿರುವುದಿಲ್ಲ. ಈ ಮಂಡಲಿಗೆ ಪ್ರತಿ ಕಂದಾಯ ವಿಭಾಗದ ವಿಭಾಗಾಧಿಕಾರಿಗಳು ಆಡಳಿತಾಧಿಕಾರಿಗಳಾಗಿರುತ್ತಾರೆ. ಈ ಮಂಡಲಿಗೆ ಅಧಿಕಾರೇತರ ಮತ್ತು ಸರ್ಕಾರಿ ಪ್ರತಿನಿಧಿಗಳು ಇರುತ್ತಾರೆ. ಪ್ರತಿಯೊಂದು ಮಂಡಲಿಯಲ್ಲಿ ಅರಣ್ಯ, ಕೃಷಿ, ತೋಟಗಾರಿಕೆ ಮತ್ತು ಸಂಶೋಧನೆ ಇಲಾಖೆಯಿಂದ ಬಂದಂಥ ಹಿರಿಯ ಅಧಿಕಾರಿಗಳು, ಬಹುಮುಖ ತಜ್ಞರು ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ, ಪ್ರತಿಯೊಂದು ಜಿಲ್ಲೆಯಲ್ಲೂ ಒಂದೊಂದು ಜಲಾನಯನದ ತಂಡ ಇರುತ್ತದೆ. ಈ ತಂಡಕ್ಕೆ ವಿಶೇಷ ಜಿಲ್ಲಾಧಿಕಾರಿಗಳು ಯಾರಿರುತ್ತಾರೆ ಅವರು ಇದರ ಜಂಟಿ ನಿರ್ದೇಶನ ಮಂಡಲಿಯ ಯೋಜನೇತರ ವಿಚಾರದಲ್ಲಿ ನಿರ್ದೇಶನ ಮಾಡುತ್ತಿದ್ದಾರೆ. ಯೋಜನಾ ನಿರ್ದೇಶನದ ಅಡಿಯಲ್ಲಿ ಕೃಷಿ, ಅರಣ್ಯ ಮತ್ತು ತೋಟಗಾರಿಕೆ ಇಲಾಖೆಯ ಸಿಬ್ಬಂದಿಯವರು ಕೆಲಸವನ್ನು ನಿರ್ವಹಿಸುತ್ತಿದ್ದಾರೆ. ಜಲಾನಯನ ಪ್ರದೇಶದಲ್ಲಿರತಕ್ಕ ಕಡೆಗಳಲ್ಲಿ ದಿಣ್ಣೆಯಿಂದ ನೀರು ಹಳ್ಳಕ್ಕೆ ಹರಿದು ಬರುತ್ತದೆ. ಈ ರೀತಿ ಹರಿದು ಬಂದಾಗ ಯಾವ ಯಾವ ಜಮೀನಿನಿಂದ ನೀರು ಹರಿದು ಬರುತ್ತದೆ ಅಂಥ ಜಮೀನುಗಳನ್ನು ಅಭಿವೃದ್ಧಿ ಮಾಡುವುದಕ್ಕೋಸ್ಕರ ಕ್ರಮ ತೆಗೆದುಕೊಳ್ಳುತ್ತೇವೆ. ಈ ರೀತಿ ಅಭಿವೃದ್ಧಿ ಮಾಡುವುದಕ್ಕೆ ಭೂಮಿಯನ್ನು ಸೆಲೆಕ್ಟ್ ಮಾಡುವಾಗ ಒಂದೊಂದು ಜಾಗದಲ್ಲಿಸಾಧಾರಣ ೨೫ ಸಾವಿರದಿಂದ ೩೦ ಸಾವಿರ ಹೆಕ್ಟೇರ ವರೆಗೆ ಭೂಮಿಯನ್ನು ತೆಗೆದುಕೊಂಡು ಅಲ್ಲಿ ಖುಷ್ಕಿ ಭೂಮಿ ಅಭಿವೃದ್ಧಿ ಯೋಜನೆಯ ಕಾರ್ಯವನ್ನು ಮಾಡುತ್ತಿದ್ದೇವೆ. ನಮ್ಮ ರಾಜ್ಯದಲ್ಲಿ ಕೇವಲ ಮಳೆಯನ್ನು ಆಧರಿಸಿಯೇ ಬೆಳೆ ಆಗಬೇಕಾಗಿದೆ. ಆದರೆ ಎಲ್ಲಿ ಮಳೆ ಆಗುವುದಿಲ್ಲ ಅಲ್ಲಿ ಬೆಳೆ ಆಗುವುದಕ್ಕೆ ಸಾಧ್ಯವಿಲ್ಲ. ಅಂಥ ಜಾಗವನ್ನು ಅಭಿವೃದ್ಧಿ ಮಾಡುವುದಕ್ಕೆ ಇಡೀ ದೇಶದಲ್ಲಿ ಆದರಲ್ಲೂ ನಮ್ಮ ಕರ್ನಾಟಕ ರಾಜ್ಯದಲ್ಲಿ ಮಾತ್ರ ಕಾರ್ಯಕ್ರಮವನ್ನು ನಾವು ಹಾಕಿಕೊಂಡಿದ್ದೇವೆಂದು ಹೇಳಬಯಸುತ್ತೇನೆ.

ಈ ಅಭಿವೃದ್ಧಿ ಕಾರ್ಯವನ್ನು ಮಾಡುವಾಗ ಗುಡ್ಡದಮೇಲೆ ಬಹಳ ಜೋರಾಗಿ ಮಳೆ ಬಂದಾಗ ಗುಡ್ಡದ ಮೇಲಿನಿಂದ ಮಣ್ಣು ಕೊಚ್ಚಿ ಹೋಗಿ ಅಲ್ಲಿ ತೇವಾಂಶ ಹಾಳಾಗುವುದರಿಂದ ಅಲ್ಲಿ ಯಾವುದೇ ಬೆಳೆಯನ್ನೂ ಬೆಳೆಯುವುದಕ್ಕೆ ಸಾಧ್ಯವಿಲ್ಲ. ಅಂಥ ಪ್ರದೇಶಗಳನ್ನು ನೋಡಿಕೊಂಡು ಅಲ್ಲಿ ಮಣ್ಣು ಕೊಚ್ಚಿ ಹೋಗದಂತೆ ಅಡ್ಡಗಟ್ಟಿ ಅಲ್ಲಿ ಮಣ್ಣು ನಿಲ್ಲುವಂತೆ ಮಾಡುತ್ತೇವೆ. ಇದರಿಂದಾಗಿ ಒಂದುಕಡೆ ಮಣ್ಣು ತುಂಬಿಕೊಳ್ಳುತ್ತದೆ, ಇದರ ಜೊತೆಗೆ ನೀರೂ ಕೂಡ ನಿಂತು ಅಲ್ಲೇ ಇಂಗಿ ತೇವಾಂಶ ಇರುವುದಕ್ಕೆ ಸಾಧ್ಯವಾಗುತ್ತದೆ. ಈ ದೃಷ್ಟಿಯಿಂದ ಕೃಷಿಗೆ ಯೋಗ್ಯವಾದ ಜಾಗ ಯಾವುದು, ಅರಣ್ಯ ಬೆಳೆಸುವುದಕ್ಕೆ ಯೋಗ್ಯವಾದ ಜಾಗ ಯಾವುದು, ವ್ಯವಸಾಯ ಮಾಡುವುದಕ್ಕೆ

ಯೋಗ್ಯವಾದ ಜಾಗ ಯಾವುದು. ತೋಟಗಾರಿಕೆಯನ್ನು ಮಾಡುವುದಕ್ಕೆ ಯೋಗ್ಯವಾದ ಜಾಗ ಯಾವುದು ಎಂಬುದನ್ನು ನೋಡಿಕೊಂಡು ಅದಕ್ಕನುಗುಣವಾಗಿ ನಾವು ಕೆಲಸಮಾಡಿಕೊಂಡು ಖುಷ್ಕಿ ಭೂಮಿಗಳನ್ನು ಏನು ೨೫ ರಿಂದ ೩೦ ಸಾವಿರ ಹೆಕ್ಟೇರ್‌ವರೆಗೆ ಪಡೆದುಕೊಳ್ಳುತ್ತೇವೆ ಅದರಲ್ಲಿ ಪ್ರೈವೇಟ್ ಜಮೀನು ಬಂದರೂ ಕೂಡ ಅದನ್ನೂ ಸಮತಟ್ಟು ಮಾಡಿಕೊಡತಕ್ಕ ಕೆಲಸವನ್ನು ನಾವು ಮಾಡಿಕೊಡುತ್ತಿದ್ದೇವೆ. ಬಂಡ್ ಹಾಕತಕ್ಕ ಕೆಲಸವನ್ನೂ ನಾವು ಮಾಡಿಕೊಡುತ್ತಿದ್ದೇವೆ, ಇದಕ್ಕೆ ಬೇಕಾದ ಸಸಿಗಳನ್ನು ಒದಗಿಸತಕ್ಕ ಕೆಲಸವನ್ನು ರೂಪಿಸಿಕೊಂಡು ನರ್ಸರಿಯನ್ನು ಮಾಡಿಕೊಂಡು ಅದರ ಮುಖಾಂತರ ಒದಗಿಸತಕ್ಕ ಕೆಲಸವನ್ನು ನಾವು ಮಾಡುತ್ತಿದ್ದೇವೆ. ಅರಣ್ಯವನ್ನು ಎತ್ತರವಾಗಿರತಕ್ಕ ಜಾಗದಲ್ಲಿ ಮಾಡಿದಾಗ ಜೋರಾಗಿ ಮಳೆ ಏನಾದರೂ ಬಂದರೆ ಅರಣ್ಯದ ಮಣ್ಣು ಕೊಚ್ಚಿ ಹೋಗದಂತೆ ತಡೆಯುತ್ತದೆ. ಇದರ ಜೊತೆಗೆ ದೊಡ್ಡ ದೊಡ್ಡ ತೋಡುಗಳನ್ನು ಮಾಡುವುದೂ ಕೂಡ ತಪ್ಪುತ್ತದೆ ಆ ಜಾಗದಲ್ಲಿ ತೇವಾಂಶ ಕೂಡ ಉಳಿಯುವುದಕ್ಕೆ ಸಾಧ್ಯವಾಗುತ್ತದೆ. ಇದರ ಜೊತೆಗೆ ಅಲ್ಲಿ ಬಿದ್ದಿರುವಂಥ ತರಗೆಲೆ ಏನಿದೆ ಅದು ಉತ್ತಮ ಗೊಬ್ಬರವಾಗಿ ಪರಿಣಮಿಸುವುದಕ್ಕೆ ಅನುಕೂಲವಾಗುತ್ತದೆ ಅಲ್ಲಿ ನಾವು ಮುಂತಾದ ಮರಗಳನ್ನು ಹಾಕಿಕೊಂಡು ೭ ವರ್ಷಗಳಕಾಲ ಈರೀತಿ ಅಭಿವೃದ್ಧಿಯನ್ನು ಮಾಡಿಕೊಂಡು ಬಂದು ೭ ವರ್ಷಗಳ ನಂತರ ಈ ಸರ್ಕಾರೀ ಜಾಗದಲ್ಲಿ ಏನು ಕಾಡು ಬೆಳೆದಿರುತ್ತದೆ ಅದನ್ನು ಆ ಭಾಗದಲ್ಲಿ ಬರತಕ್ಕ ಮಂಡಲಪಂಚಾಯಿತಿಗಳಿಗೆ ಅದನ್ನು ಬಿಟ್ಟುಕೊಡುತ್ತೇವೆ. ನಂತರ ಆ ಕಾಡಿನ ಸಂಪೂರ್ಣ ಜವಾಬ್ದಾರಿಯನ್ನು ಸಂಬಂಧಪಟ್ಟ ಮಂಡಲ ಪಂಚಾಯಿತಿಯವರೇ ವಹಿಸಿಕೊಂಡು ಅದರಿಂದ ಬರತಕ್ಕ ವರಮಾನವನ್ನೂ ಅವರೇ ತೆಗೆದುಕೊಳ್ಳಬಹುದು. ಇದರಿಂದ ಆ ಮಂಡಲ ಪಂಚಾಯಿತಿಗಳಿಗೆ ಬಹಳ ಅನುಕೂಲವಾಗುತ್ತದೆ, ಅಲ್ಲದೆ ಅವರು ಇದನ್ನು ಅಭಿವೃದ್ಧಿಪಡಿಸಿಕೊಂಡು ಹೋಗುವುದಕ್ಕೂ ಅನುಕೂಲವಾಗುತ್ತದೆ. ಇರತಕ್ಕಂಥ ಜಮೀನು ಏನು ಇದೆ ಅದು ಹಾರ್ಟಿಕಲ್ಚರ್‌ಗೆ ಬರುವಂಥ ಜಮೀನು ಅದರಿಂದ ಇನ್‌ಕಮ್ ಬರತಕ್ಕಂಥದ್ದು ಇರುತ್ತದೆ ಅವುಗಳನ್ನು ಮಂಡಲ್ ಪಂಚಾಯತ್‌ಗಳಿಗೆ ಕೊಡಲಾಗಿದೆ. ಅವರು ಅದನ್ನು ಮುಂದೆ ನಡೆಸಿಕೊಂಡುಹೋಗಿ, ಅದರಿಂದ ಬರತಕ್ಕಂಥ ಇನ್‌ಕಮ್‌ನ್ನು ಮಂಡಲ್ ಪಂಚಾಯತ್‌ಗಳೇ ತೆಗೆದುಕೊಳ್ಳಲಿಕ್ಕೆ ಬರುತ್ತದೆ ಅಗ್ರಿಕಲ್ಚರ್ ಲ್ಯಾಂಡ್ ಸಮತಟ್ಟು ಮಾಡದಿರುವುದು, ಮತ್ತು ಬಂಡ್ ಮಾಡದಿರುವುದು ಏನು ಇರುತ್ತದೆ ಅವುಗಳನ್ನು ಬಂಡ್ ಮಾಡುವ ಸಂದರ್ಭದಲ್ಲಿ ಯಾವ ರೈತರಿಗೆ ಸಂಬಂಧಪಟ್ಟ ಜಾಗ ಇರುತ್ತದೆ ಅದನ್ನು ಏಳು ವರ್ಷಗಳಲ್ಲಿ ಅವನಿಗೆ ವ್ಯವಸಾಯಕ್ಕೆ ಅನುಕೂಲವಾಗುವಂತೆ ಸಮತಟ್ಟುಮಾಡುವುದು ಮತ್ತು ಬಂಡ್ ಮಾಡುವುದು. ಅದನ್ನೆಲ್ಲಾ ಹೇಳಿಕೊಟ್ಟು ರೈತರಿಗೆ ಕೃಷಿ ಮಾಡುವಂಥ ಎಲ್ಲಾ ವಿಷಯಗಳಲ್ಲಿ ಅವನಿಗೆ ಪರಿಜ್ಞಾನ ಕೊಡತಕ್ಕಂಥದ್ದಕ್ಕೆ ನಮ್ಮ ಅಧಿಕಾರಿಗಳು ವ್ಯವಸ್ಥೆ ಮಾಡಿಕೊಡುತ್ತಾರೆ. ಮಳೆ ನೀರಿನಿಂದ ಕೊಚ್ಚಿಕೊಂಡು ಹೋಗಿರುವಂಥ ಮಣ್ಣು ಅಥವಾ ತೇವಾಂಶ ಕಡಿಮೆಯಾಗಿದ್ದು ಅದೆಲ್ಲಾ ತೇವಾಂಶ ಫರ್ಟಿಲಿಟಿ ಬಂದ್ ಜನರಿಗೆ ಉತ್ತಮ ಕೃಷಿಗೆ ಬರಲಿಕ್ಕೆ ಸಾಧ್ಯವಾಗುವಂಥ ಕೆಲಸವನ್ನು ರೈತರಿಗೆ ಮಾಡಿಕೊಟ್ಟು, ಅನುಕೂಲ ಮಾಡಿಕೊಡಲಾಗುವುದು ಈರೀತಿ ಅನುಕೂಲ ಪಡೆದ ರೈತರು ಅವರು ಹರಿಜನ ಗಿರಿಜನರಿರಬಹುದು, ಅಥವಾ ಸ್ಮಾಲ್ ಫಾರ್ಮರ್ಸ್ ಇರಬಹುದು, ಮಾರ್ಜಿನಲ್ ಫಾರ್ಮರ್ಸ್ ಇರಬಹುದು ನಾವು ಮಾಡಿದಂಥ ಖರ್ಚನ್ನು ಹಿಂದೆ ತಿರುಗಿಸಿ ಕೊಡುವಂತಿಲ್ಲ. ಅವರಿಗೆ ಧರ್ಮಾರ್ಥವಾಗಿ ನಾವು ಮಾಡಿಸಿಕೊಡುವಂಥದ್ದಾಗಿದೆ. ಬಿಗ್ ಹೋಲ್ಡರ್ಸ್ ಅಂದರೆ ದೊಡ್ಡ ವ್ಯವಸಾಯಗಾರರಿಗೆ ಜಲಾನಯನದ ಒಳಗೆ ಬಂದಿರತಕ್ಕಂಥ ಜಾಗ ಇದ್ದರೆ ಅವನಿಂದ ೧೫ ವರ್ಷಗಳ ಕಾಲ ಸ್ವಲ್ಪ ಸ್ವಲ್ಪ ಕಂತುಗಳಾಗಿ ಹಣವನ್ನು ವಾಪಸ್ ಕೊಡಬೇಕೆಂಬ ಒಂದು ಯೋಜನೆಯನ್ನು ಇದರಲ್ಲಿ ಹಾಕಿಕೊಂಡಿದ್ದೇವೆ. ಇವರಲ್ಲಿ ವಿವರಗಳು ಈರೀತಿ ಇದೆ. ನಮ್ಮ ರಾಜ್ಯದ ೧೯ ಜಿಲ್ಲೆಗಳಲ್ಲಿ ಜಲಾನಯನಗಳನ್ನು ತೆಗೆದುಕೊಂಡಿದ್ದೇವೆ. ಜಲಾನಯನ ಭೌಗೋಳಿಕ ಕ್ಷೇತ್ರ ೫,೯೫,೩೪೯ ಹೆಕ್ಟೇರುಗಳಲ್ಲಿ ಸಾಗುವಳಿಗೆ ಯೋಗ್ಯವಾಗಿರತಕ್ಕಂಥ ಕ್ಷೇತ್ರ ೧,೮೮,೬೭೯. ೧೯೮೪-೮೫ ರಲ್ಲಿ ಅಭಿವೃದ್ಧಿ ಮಾಡಿರುವಂಥ ಜಾಗ ೪,೦೪೨ ಹೆಕ್ಟೇರ್ಸ್. ೧೯೮೫-೮೬ಕ್ಕೆ ೪೫,೮೬೩ ಹೆಕ್ಟೇರ್ಸ್ ೧೯೮೬-೮೭ರಲ್ಲಿ ೭೭,೯೭೦ ಹೆಕ್ಟೇರ್ಸ್, ೧೯೮೭-೮೮ಕ್ಕೆ ೫೩,೬೭೨ ಹೆಕ್ಟೇರ್ಸ್ ಇಷ್ಟೆಲ್ಲಾ ಖರ್ಚುಮಾಡಲಾಗಿದೆ. ೧೯೮೪-೮೫ಕ್ಕೆ ಕೃಷಿಗೆ ೬೮ ಲಕ್ಷ ೯೪೬ ಸಾವಿರ ರೂಪಾಯಿಗಳು. ಅರಣ್ಯಕ್ಕೆ ೧೮ ಲಕ್ಷ ೭೯೧ ಸಾವಿರ ರೂಪಾಯಿಗಳು. ತೋಟಗಾರಿಕೆಗೆ ೧೯೮೪-೮೫ಕ್ಕೆ ನಾವು ಏನು ಖರ್ಚು ಮಾಡಿಲ್ಲ. ೧೯೮೫-೮೬ಕ್ಕೆ ೧೮೮.೮೩ ಲಕ್ಷ ರೂಪಾಯಿಗಳು ಹಾರ್ಟಿಕಲ್ಚರ್‌ಗೆ ಒಟ್ಟು ೬೫೩.೭೬೭ ಲಕ್ಷ. ಕೃಷಿಗೆ ೧೯೮೬-೮೭ಕ್ಕೆ ೪೫೮.೭೯ ಸಾವಿರ ರೂಪಾಯಿಗಳು ೧೯೮೭-೮೮ಕ್ಕೆ ೫೨೩.೮೯ ಲಕ್ಷ ರೂಪಾಯಿ ಒಟ್ಟು ೧,೨೦೯ ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದ್ದೇವೆ. ಸಿಬ್ಬಂದಿ ವೆಚ್ಚ

ಕಳೆದ ನಾಲ್ಕು ವರ್ಷಗಳಲ್ಲಿ ಅಂದರೆ ೧೯೮೪–೮೫ಕ್ಕೆ ೧೦ ಲಕ್ಷ ರೂಪಾಯಿಗಳು. ೧೯೮೫–೮೬ಕ್ಕೆ ೫೫.೨೫೬ ಲಕ್ಷ, ೧೯೮೬–೮೭ಕ್ಕೆ ೮೬.೮೪೩ ಲಕ್ಷ. ೧೯೮೭–೮೮ಕ್ಕೆ ೧೨೮ ೨೩೦ ಲಕ್ಷ. ಟೋಟಲ್ ೨೮೦.೩೩೦ ಲಕ್ಷ ರೂಪಾಯಿಗಳು. ದಬ್ಬನಾಳ ಇದರಲ್ಲಿ ವಿಶ್ವಬ್ಯಾಂಕ್ ನೆರವಿನಿಂದ ಸಿಬ್ಬಂದಿಗಾಗಿ ೭೯ ಲಕ್ಷದ ೨೨೭ ಸಾವಿರ ರೂಪಾಯಿಗಳು. ಟೋಟಲ್ ೩೫೯.೫೫೦ ಲಕ್ಷ ರೂಪಾಯಿಗಳನ್ನು ಖಂಪ್ಲಿ ಭೂಮಿಯನ್ನು ನಾವು ಅಭಿವೃದ್ಧಿ ಮಾಡಲಿಕ್ಕೆ ಖರ್ಚುಮಾಡಿದ್ದೇವೆಂದು ಈ ಸಂದರ್ಭದಲ್ಲಿ ಹೇಳಿಕೊಂಡು, ಅದರ ಜೊತೆಗೆ ಮಳೆ ಆಶ್ರಯ ರಾಷ್ಟ್ರೀಯ ಅಭಿವೃದ್ಧಿ ಯೋಜನೆಗಾಗಿ ಇದು ಸೆಂಟ್ರಲ್ ಗೌರ್ನಮೆಂಟ್ ಮತ್ತು ಸ್ಟೇಟ್ ಗೌರ್ನಮೆಂಟ್‌ದು ೫೦–೫೦ ಪರ್ಸೆಂಟ್ ನಂತೆ ಈ ಒಂದು ಕೆಲಸವನ್ನೂ ಕೂಡ ನಾವು ತೆಗೆದುಕೊಂಡು ಮಾಡುತ್ತಿದ್ದೇವೆ. ಇದರಲ್ಲಿ ಒಂದು ವರ್ಷಕ್ಕೆ ನಾವು ತೆಗೆದುಕೊಂಡು ಐಡೆಂಟಿಫೈ ಮಾಡಿದಂತ ಜಾಗ ಎಷ್ಟೆಂದರೆ ಮೂರು ಸಾವಿರ ಹೆಕ್ಟೇರುಗಳು. ಇದು ನಾಲ್ಕು ವರ್ಷದ ಸ್ಕೀಮ್, ನಾಲ್ಕು ವರ್ಷಗಳಲ್ಲಿ ಮೂರು ಸಾವಿರ ಹೇಕ್ಟೇರುಗಳನ್ನು ಅಭಿವೃದ್ಧಿ ಮಾಡತಕ್ಕಂಥ ಕಾರ್ಯಕ್ರಮ ವನ್ನು ನಾವು ತೆಗೆದುಕೊಂಡು ಇದರಲ್ಲಿ ಮಳೆ ಬಹಳಷ್ಟು ಮತ್ತು ಕಡಿಮೆ ಬರುವಂಥ ಜಿಲ್ಲೆಗಳು ೬. ಮಧ್ಯಮ ಮಳೆ ಬರುವಂಥ ೭ ಜಿಲ್ಲೆಗಳು, ಟೋಟಲ್ ೧೩ ಜಿಲ್ಲೆಗಳನ್ನು ಈ ಒಂದು ಯೋಜನೆಯ ಅಡಿಯಲ್ಲಿ ನಾವು ತೆಗೆದುಕೊಂಡಿದ್ದೇವೆ.

ಇದರಲ್ಲಿ ವರ್ಷಕ್ಕೆ ೨೫೦ ಹೆಕ್ಟೇರ್ ಹಾಗೆ ಅಭಿವೃದ್ಧಿ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ. ೪ ವರ್ಷದಲ್ಲಿ ಇದನ್ನು ಸಂಪೂರ್ಣ ಅಭಿವೃದ್ಧಿ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ. ಇದರಲ್ಲಿ ಹೆಚ್ಚಿಗೆ ಪ್ರಯತ್ನ ಮಾಡಿರುವುದು ಎಂದರೆ ಯಾವ ನೀರು ಬರುತ್ತದೆ ಅದನ್ನು ಬಂಡ್ ಹಾಕಿ ಉಳಿಸಿ ಕೊಂಡು ರೈತರಿಗೆ ಕೊಡುವ ಕೆಲಸ ಮಾಡಿದ್ದೇವೆ. ಒಂದೇ ಜಾಗದಲ್ಲಿ ಬಂದು ಅದು ಒಬ್ಬರೀಗೆ ಸೇರಿದ್ದಾದರೆ ಅದನ್ನು ಪಂಪ್ ಮಾಡುವ ಕಾರ್ಯ ಮಾಡುತ್ತೇವೆ. ೪ ಜನರಿಗೆ ಸೇರಿದ್ದಾಗಿದ್ದರೆ ಎತ್ತಿ ಕೊಂಡು ಹೋಗಿ ಕೃಷಿ ಮಾಡುವ ಕಾರ್ಯ ಮಾಡಿದ್ದೇವೆ. ಬಂಡ್ ರಿಪೇರಿಗಳಿಗೆ ಹಣ ಕೊಡುತ್ತಿದ್ದೇವೆ. ಲ್ಯಾಂಡ್ ಅಭಿವೃದ್ಧಿ ಮಾಡಲಿಕ್ಕೆ ಒಂದು ಸಾವಿರ ರೂಪಾಯಿಗಳನ್ನು ಮತ್ತು ಕೃಷಿಗೆ ಒಂದು ಸಾವಿರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಈ ಪ್ರಕಾರ ಖರ್ಚು ಮಾಡಿದ ಹಣವನ್ನು ಸ್ಮಾಲ್ ಅಂಡ್ ಮಾರ್ಜಿನಲ್ ಫಾರ್ಮರ್ಸ್ ಮತ್ತು ಹರಿಜನ ಗಿರಿಜನರಿಂದ ವಸೂಲ್ಮಾಡುವುದಿಲ್ಲ. ದೊಡ್ಡ ರೈತರಿಗೆ ವಸೂಲ್ಮಾಗುವಾಗ ಲೆವಲ್ (ಸಮತಟ್ಟು) ಮಾಡಿದ ಒಂದು ಸಾವಿರ ರೂಪಾಯಿ ಹಣವನ್ನು ವಸೂಲ್ಮಾಡುವುದಿಲ್ಲ ಉಳಿದ ಹಣವನ್ನು ವಸೂಲ್ಮಾಡುತ್ತಿದ್ದೇವೆ. ಒಂದು ಸಾವಿರ ರೂಪಾಯಿ ಯನ್ನು ೩ ಕಂತುಗಳಲ್ಲಿ ೫೦ ಪರ್ಸೆಂಟ್ ಕೊಟ್ಟರೆ ಬೇರೆ ಹಣ ಕೊಡಲಿಕ್ಕೆ ಇರುವುದಿಲ್ಲ. ಇಲ್ಲದಿದ್ದರೆ ೧೫ ಕಂತುಗಳಲ್ಲಿ ೧೧ ಪರ್ಸೆಂಟ ಇಂಟರೆಸ್ಟ್ ಪ್ರಕಾರ ಕೊಡಬೇಕಾಗುತ್ತದೆಂದು ದೊಡ್ಡ ರೈತರಿಗೆ ಹೇಳುತ್ತೇವೆ. ೧೯೮೬–೮೭ರಲ್ಲಿ ೨೪೦ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದು ಅದರಲ್ಲಿ ೨೦೫.೩೫ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ೮,೫೭೫ ಹೆಕ್ಟೇರ್ ಪ್ರದೇಶದಲ್ಲಿ ೪೮ ತಾಲ್ಲೂಕು ಗಳಲ್ಲಿ ೪೫ ಜಲಾನಯನ ಅಭಿವೃದ್ಧಿ ಕಾರ್ಯಕ್ರಮಗಳನ್ನು ಮಾಡಿದ್ದೇವೆ. ೧೯೮೭–೮೮ರಲ್ಲಿ ೪೦೦ ಲಕ್ಷ ರೂಪಾಯಿಗಳನ್ನು ಒದಗಿಸಿದ್ದು ೩೭೨.೮೨ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ೧೭,೮೧೫ ಹೆಕ್ಟೇರ್ ಪ್ರದೇಶದಲ್ಲಿ ೫೦ ತಾಲ್ಲೂಕುಗಳಲ್ಲಿ ೪೭ ಜಲಾನಯನ ಅಭಿವೃದ್ಧಿ ಕಾರ್ಯಕ್ರಮ ಗಳನ್ನು ಕೈಗೊಂಡಿದ್ದೇವೆ. ೧೯೮೮–೮೯ಕ್ಕೆ ೫೪೮.೧೮ ಲಕ್ಷ ರೂಪಾಯಿಗಳನ್ನು ಈ ಯೋಜನೆಗಾಗಿ ನಿಯೋಜಿಸಿದ್ದು ೬೨ ತಾಲ್ಲೂಕುಗಳಲ್ಲಿ ೫೯ ಜಲಾನಯನ ಅಭಿವೃದ್ಧಿ ಕಾರ್ಯಕ್ರಮಗಳನ್ನು ತೆಗೆದುಕೊಂಡು ೨೧,೮೮೫ ಹೆಕ್ಟೇರ್ ಪ್ರದೇಶವನ್ನು ಅಭಿವೃದ್ಧಿ ಪಡಿಸಲು ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ. ಇದರ ವಿವರ ಯಾವಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಎಂಬುದು ಈಗ ಹೇಳುವುದು ಬೇಡವೆಂದು, ಈ ಬೇಡಿಕೆಯನ್ನು ಮಂಜೂರ್ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ರಾಜೂಗೌಡ.—ಎಲ್ಲೆಲ್ಲಿ ಮುಜರಾಯಿ ದೇವಸ್ಥಾನಗಳಿವೆ ಅಲ್ಲಿರತಕ್ಕ ಧರ್ಮದರ್ಶಿಗಳ ಸಮಿತಿಗೆ ಆಯಾಯ ಕ್ಷೇತ್ರದ ಶಾಸಕರನ್ನು ಪದನಿಮಿತ್ತ ಧರ್ಮದರ್ಶಿಗಳಾಗಿ ಮಾಡಲಿಕ್ಕೆ ವ್ಯವಸ್ಥೆ ಮಾಡುತ್ತೀರಾ ? ದೇವಸ್ಥಾನದಲ್ಲಿರತಕ್ಕ ಚಿನ್ನ ಮತ್ತು ಬೆಳ್ಳಿಗಳನ್ನು ಹರಾಜು ಮಾಡಿ ಅದರಿಂದ ಬರತಕ್ಕ ದುಡ್ಡನ್ನು ದೇವಸ್ಥಾನದ ಅಭಿವೃದ್ಧಿಗೆ ಖರ್ಚು ಮಾಡುತ್ತೀರಾ ? ಇನ್ನು ಮುಂದೆ ಚಿನ್ನದ ಕವಚ, ವಜ್ರದ ಕಿರೀಟ, ಚಿನ್ನದ ರಥ ಮಾಡುವ ಕೆಲಸಕ್ಕೆ ಇತಿಶ್ರೀ ಹಾಡಿ ಆ ಹಣವನ್ನು ದೇವಸ್ಥಾನಗಳ ಜೀರ್ಣೋದ್ಧಾರಕ್ಕೆ ಉಪಯೋಗಿಸುತ್ತೀರಾ ? ಮತ್ತು ಆ ಕ್ಷೇತ್ರದಲ್ಲಿರತಕ್ಕ ಒಂದೆರಡು ಹಳ್ಳಿಗಳನ್ನು ದತ್ತು ತೆಗೆದುಕೊಂಡು ಅವುಗಳ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತೀರಾ ? ತಿರುಪತ್ತಿ

ದೇವಸ್ಥಾನದಲ್ಲಿ ೨೦ ಕಿಲೋಮೀಟರ್ ದೂರ ಸಾರಾಯಿ, ಬ್ರಾಂದಿಗಳ ಮಾರಾಟವನ್ನು ನಿಷೇಧ ಮಾಡಿದ್ದಾರೆ. ಅದೇ ರೀತಿ ಮಹದೇಶ್ವರ ಬೆಟ್ಟದಲ್ಲೂ ಮಾಡುತ್ತೀರಾ ? ಮಹದೇಶ್ವರ ಬೆಟ್ಟದಲ್ಲಿ ಸುಮಾರು ೨೦೦ ಗುಡಿಸಲು ವಾಸಿಗಳಿದ್ದಾರೆ, ಅವರಿಗೆ ಬೇರೆ ಕಡೆ ಸ್ಥಳ ಒದಗಿಸಿಕೊಡಬೇಕಾಗಿದೆ. ಆದ್ದರಿಂದ ಅವರಿಗೆ ಆವಶ್ಯವಾದ ಮನೆಗಳನ್ನು ಕಟ್ಟಲಿಕ್ಕೆ ವ್ಯವಸ್ಥೆ ಮಾಡಿ ಅವರನ್ನು ಆ ಸ್ಥಳದಿಂದ ಬಿಡಿಸಲಿಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಕೆ. ಅಮರನಾಥ ಶೆಟ್ಟಿ.—ಮಾನ್ಯ ಸದಸ್ಯರು ಇಷ್ಟೊಂದು ಪ್ರಶ್ನೆಗಳನ್ನು ಒಂದೇ ಸಾರಿ ಕೇಳಿರುವುದರಿಂದ ಅವರ ಎಲ್ಲಾ ಸಲಹೆಗಳನ್ನು ಪರಿಶೀಲಿಸುತ್ತೇನೆಂದು ಹೇಳಬಯಸುತ್ತೇನೆ.

ಶ್ರೀ ಮಾಲೀಕಯ್ಯ ಗುತ್ತೇದಾರ್.—ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಗುಲ್ಬರ್ಗದಲ್ಲಿ ಪ್ರಸಿದ್ಧವಾದ ದತ್ತಾತ್ರೇಯ ದೇವಸ್ಥಾನ ಇದೆ. ಅದರ ಪಕ್ಕದಲ್ಲೇ ಭೀಮಾ ನದಿ ಇದೆ. ಅಲ್ಲಿ ಬೇಸಿಗೆ ಕಾಲದಲ್ಲಿ ನೀರು ಬತ್ತಿಹೋಗುವುದರಿಂದ ಯಾತ್ರಿಕರಿಗೆ ನೀರಿಗೆ ತುಂಬಾ ತೊಂದರೆಯಾಗುತ್ತಿದೆ. ಆದ್ದರಿಂದ ಬ್ಯಾರೇಜ್ ಮಾಡಿ ಯಾತ್ರಿಕರಿಗೆ ನೀರು ಸಿಗುವಂತೆ ಮಾಡಬೇಕು. ಕುಡಿಯುವ ನೀರಿನ ವ್ಯವಸ್ಥೆ ಜೊತೆಗೆ ಸ್ನಾನದ ಘಟ್ಟಗಳನ್ನು ಮಾಡಬೇಕು. ಮುಜರಾಯಿ ಇಲಾಖೆಯಿಂದ ಈ ವ್ಯವಸ್ಥೆಯನ್ನು ಮಾಡಲಿಕ್ಕೆ ಸಾಧ್ಯ ಇದೆಯೋ ಎಂದು ಕೇಳುತ್ತೇನೆ.

ಶ್ರೀ ಧರ್ಮಸಿಂಗ್.—ಗುಲ್ಬರ್ಗದಲ್ಲಿ ದತ್ತಾತ್ರೇಯ ದೇವಸ್ಥಾನ ಎಂದು ಪ್ರಸಿದ್ಧವಾದ ದೇವಸ್ಥಾನ ಇದೆ. ಅದರ ಬಗ್ಗೆ ಅವರು ಕೇಳುತ್ತಿದ್ದಾರೆ.

ಶ್ರೀ ಕೆ. ಅಮರನಾಥಶೆಟ್ಟಿ.—ಅಲ್ಲಿಂದ ಪ್ರೊಪೋಸಲ್ ತರಿಸಿ ಅದಕ್ಕೆ ಬೇಕಾದ ಅನುಕೂಲತೆಗಳನ್ನು ಮಾಡಲು ಪ್ರಯತ್ನ ಮಾಡುತ್ತೇನೆ.

ಶ್ರೀ ಮಾಲೀಕಯ್ಯ ಗುತ್ತೇದಾರ್.—ಕಮಿಟಿಯಲ್ಲಿ ಪ್ರೊಸೀಡಿಂಗ್ಸ್ ಮಾಡಿ ಈಗಾಗಲೇ ಕಳುಹಿಸಿದ್ದಾರೆ.

ಶ್ರೀ ಕೆ. ಅಮರನಾಥ ಶೆಟ್ಟಿ.—ಬಂದಿದ್ದರೆ ಖಂಡಿತ ಪರಿಶೀಲನೆ ಮಾಡಿ ಅನುಕೂಲ ಮಾಡಿಕೊಡುವುದಕ್ಕೆ ಪ್ರಯತ್ನ ಪಡುತ್ತೇನೆ ಎಂದು ಹೇಳುತ್ತೇನೆ.

ಶ್ರೀ ವೀರಪ್ಪ ಸ್ವಾಮಿ.—ರಾಜ್ಯದ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಹೈದರಾಬಾದ್ ಕರ್ನಾಟಕಕ್ಕೆ ಹಣ ಕೊಡದೆ ಯಾವರೀತಿ ಅನ್ಯಾಯ ಮಾಡುತ್ತಿದ್ದಾರೋ ಅದೇರೀತಿ ನಮ್ಮ ಭಾಗದ ಮಂದಿರಗಳಿಗೂ ಹೆಚ್ಚಿನ ಹಣ ಕೊಡುತ್ತಿಲ್ಲ. ಮನವಿಸಲ್ಲಿಸಿದರೂ ಕೊಡುತ್ತಿಲ್ಲ. ಆದ್ದರಿಂದ ಉದಾರ ಮನಸ್ಸಿನಿಂದ ನಮ್ಮ ಕಡೆ ಲಕ್ಷ್ಯ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಅಮರನಾಥ ಶೆಟ್ಟಿ.—ಅದನ್ನು ಕೊಡಿಸುತ್ತೇನೆ.

ಶ್ರೀ ಡಿ.ಎ. ಚಿನ್ನಪ್ಪ.—ಕೊಡಗಿನಲ್ಲಿ ಬಹಳಷ್ಟು ದೇವಸ್ಥಾನಗಳಿವೆ. ತಲಕಾವೇರಿ ಎಂಬಲ್ಲಿ ಪ್ರಮುಖವಾದ ದೇವಸ್ಥಾನ ಇದೆ. ಅದಕ್ಕೆ ಬಹಳಷ್ಟು ಆಸ್ತಿ ಇತ್ತು. ಅಲ್ಲಿರುವ ಎಲ್ಲಾ ದೇವಸ್ಥಾನಗಳಿಂದ ಸುಮಾರು ೭೫೦ ಎಕರೆಯಷ್ಟು ಆಸ್ತಿ ಇತ್ತು. ಗದ್ದೆ ಇತ್ತು. ಇನಾಂ ಅಬಾಲಿಷನ್ ಆಕ್ಟ್ ಬಂದಮೇಲೆ ಅದೆಲ್ಲಾ ಹೋಗಿ ಇವತ್ತು ಆ ದೇವರುಗಳೆಲ್ಲಾ ಬಡವರಾಗಿದ್ದಾರೆ. ಭಾಗಮಂಡಲ ಮತ್ತು ತಲಕಾವೇರಿ ದೇವಸ್ಥಾನಗಳಿಗೆ ಹೆಚ್ಚು ಗ್ರ್ಯಾಂಟ್ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಕಾವೇರಿ ಕರ್ನಾಟಕದ ಬಹಳ ಮುಖ್ಯವಾದ ಜೀವನದಿ. ಆದ್ದರಿಂದ ಆ ಭಾಗಕ್ಕೆ ಮಾಸ್ಟರ್ ಪ್ಲಾನ್ ಮಾಡಿದೆ. ಮಾನ್ಯ ಮಂತ್ರಿಗಳು ತಮ್ಮ ಜಿಲ್ಲೆಯಾದ ದಕ್ಷಿಣ ಕನ್ನಡಕ್ಕೆ ೩೮ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅಲ್ಲಿ ಕೊಟ್ಟಿರತಕ್ಕದು ಜಾಸ್ತಿ ಆಯಿತು. ಅದನ್ನು ಕಡಿಮೆ ಮಾಡಿ ನಮ್ಮಂಥ ಜಿಲ್ಲೆಗೆ ಹಂಚಬೇಕೆಂದು ವಿನಂತಿಸುತ್ತೇನೆ.

ಶ್ರೀ ಕೆ. ಅಮರನಾಥ ಶೆಟ್ಟಿ.—ತಲಕಾವೇರಿ ಮತ್ತು ಭಾಗಮಂಡಲ ದೇವಸ್ಥಾನಗಳು ಪ್ರಸಿದ್ಧಿಯಾದ ದೇವಸ್ಥಾನಗಳು. ನಾನು ಸ್ವತಃ ಅಲ್ಲಿಗೆ ಹೋಗಿದ್ದೇನೆ. ಭಾಗಮಂಡಲ ದೇವಸ್ಥಾನದ ಅಭಿವೃದ್ಧಿ ಕಾರ್ಯಕ್ರಮಕ್ಕೆ ಪ್ಲಾನ್ ಮತ್ತು ಎಸ್ಟಿಮೇಟ್ ಮಾಡಿ ಕಳುಹಿಸಿ ಎಂದು ಡೆಪ್ಯುಟಿ ಕಮಿಷನರ್‌ಗೆ ಹೇಳಿದ್ದೇನೆ. ಆದರೆ ಅದು ಇಷ್ಟರವರೆಗೆ ಮುಟ್ಟಿಲ್ಲ. ತಲಕಾವೇರಿ ಮತ್ತು ಭಾಗಮಂಡಲದ ಬಗ್ಗೆ ಅವರಿಂದ ಪ್ಲಾನ್ ಮತ್ತು ಎಸ್ಟಿಮೇಟ್ ಬಂದಮೇಲೆ ಸೌಲಭ್ಯ ಒದಗಿಸಿಕೊಡುವುದಕ್ಕೆ

ಪ್ರಯತ್ನ ಮಾಡುತ್ತೇನೆ. ಡಿಸ್ಟ್ರಿಬ್ಯೂಷನ್ ಮಾಡುವಾಗ ದಕ್ಷಿಣ ಕನ್ನಡ ಜಿಲ್ಲೆಗೆ ಹೆಚ್ಚಿಗೆ ಕೊಟ್ಟಿದ್ದೀರಿ ಎಂದು ಹೇಳಿದ್ದಾರೆ. ಮೊನ್ನೆ ಒಂದು ಪ್ರಶ್ನೆಗೆ ಉತ್ತರ ಕೊಡುತ್ತಾ ಆ ಬಗ್ಗೆ ಸರಿಯಾದ ಉತ್ತರವನ್ನು ಕೊಟ್ಟಿದ್ದೇನೆ. ಆ ಮಾಹಿತಿಯನ್ನು ತಮಗೂ ಒದಗಿಸುತ್ತೇನೆ.

ಶ್ರೀ ಎಂ. ಶಿವಣ್ಣ.—ಸನ್ಮಾನ್ಯ ಅಧ್ಯಕ್ಷರೆ. ಈ ದೇಶದಲ್ಲಿ ಎಲ್ಲಿಯುವರೆಗೆ ದೇವರುಗಳಿರುತ್ತದೋ ಅಲ್ಲಿಯುವರೆಗೆ ಜಾತೀಯತೆ ತುಂಬಿ ತುಳುಕಾಡುತ್ತದೆ. ಈ ದೇಶದಲ್ಲಿ ಬಡತನ, ಅಜ್ಞಾನ ತುಂಬಿದೆ ದೇವರಿಂದ ಇಲ್ಲಿಯುವರೆಗೆ ಯಾವ ಪ್ರಯೋಜನವೂ ಆಗಲಿಲ್ಲ. ಆದರೂ ಕೂಡ ಪರಿಶಿಷ್ಟ ವರ್ಗದವರ ವಿಷಯದಲ್ಲಿ ಒಂದು ಬೇಡಿಕೆ ಇದೆ. ಶೇಕಡ ೧೮ರ ಪ್ರಕಾರವಾಗಿ ಎಲ್ಲಾ ಮುಜರಾಯಿ ದೇವಸ್ಥಾನಗಳಲ್ಲಿ ಪರಿಶಿಷ್ಟ ವರ್ಗದವರ ನೇಮಕಾತಿ ಮಾಡಬೇಕೆಂಬ ಬೇಡಿಕೆ ಇದೆ. ಮಾನ್ಯ ಸಚಿವರು ಹಿಂದೆ ಉತ್ತರ ಕೊಡುವಾಗ ಅನೇಕ ಜಿಲ್ಲೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ವರ್ಗದವರನ್ನು ನೇಮಕ ಮಾಡಿದ್ದೇವೆ ಎಂದು ಹೇಳಿದ್ದಾರೆ. ಎಲ್ಲಾ ಜಿಲ್ಲೆಗಳಲ್ಲಿರುವ ಮುಜರಾಯಿ ದೇವಸ್ಥಾನಗಳಲ್ಲಿ ಈ ರೀತಿ ನೇಮಕ ಮಾಡುತ್ತೀರಾ ಎಂದು ಕೇಳಬಯಸ್ತೇನೆ.

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ನಿನ್ನೆ ದಿವಸ ಶಿವಣ್ಣನವರು ಮಾತನಾಡುವಾಗ ಈ ಸರ್ಕಾರಕ್ಕೆ ಮೆಜಾರಿಟಿ ಇಲ್ಲ, ಪ್ರಶ್ನೆ ಕೇಳುವುದಿಲ್ಲ ಎಂದು ಹೇಳಿದ್ದರು. ಇವತ್ತು ಮೆಜಾರಿಟಿ ಬಂದಿದೆ ಎಂದು ಗೊತ್ತಾಯಿತಾ ?

ಶ್ರೀ ಕೆ. ಅಮರನಾಥ ಶೆಟ್ಟಿ.—ಮಾನ್ಯ ಶಿವಣ್ಣನವರ ಸೂಚನೆಯನ್ನು ನಾನು ಗಮನದಲ್ಲಿಟ್ಟು ಕೊಂಡು ಪರಿಶೀಲನೆ ಮಾಡುತ್ತೇನೆ.

ಶ್ರೀ ಎಂ. ಕೆ. ಕುಲಕರ್ಣಿ.—ಅಧ್ಯಕ್ಷರೇ, ವಾರಣಾಸಿಯಲ್ಲಿ ಕರ್ನಾಟಕದ ಒಂದು ಛತ್ರ ಇದೆ. ಅದು ಬಹಳ ಜೀರ್ಣವಾಗಿದ್ದು ಅದಕ್ಕೆ ಮತ್ತೆ ಬೇರೆ ಪ್ಲಾನ್ ಮಾಡಿ ಹೊಸದಾಗಿ ಕಟ್ಟಿಸಬೇಕೆಂದು ಇದ್ದೀರೆಂದು ತಿಳಿದುಬಂತು. ಇದಕ್ಕೆ ಹಣ ಕೂಡ ಸ್ಯಾಂಕ್ಷನ್ ಆಗಿದೆ. ಇನ್ನೂ ಏನಾಗಿದೆ ಎಂದು ತಿಳಿದಿಲ್ಲ. ಬಹಳ ದಿವಸಗಳಿಂದ ಇದು ಹಾಗೆಯೇ ಉಳಿದಿದೆ.

ಶ್ರೀ ಕೆ. ಅಮರನಾಥ ಶೆಟ್ಟಿ.—ವಾರಣಾಸಿಯಲ್ಲಿರತಕ್ಕ ಛತ್ರದ ಕಟ್ಟಡವನ್ನು ರಿನೋವೇಷನ್ ಮಾಡಬೇಕೆಂದು ಹಣ ಸ್ಯಾಂಕ್ಷನ್ ಮಾಡಲಾಗಿದೆ. ಪ್ಲಾನ್ ಮತ್ತು ಎಸ್ಟಿಮೇಟ್ ಕೂಡಾ ಆಗಿದೆ. ಆದರೆ ಅಲ್ಲಿನ ಸರ್ಕಾರದವರಿಗೆ ಬರೆದು ೩ ವರ್ಷಗಳಾದರೂ ಇನ್ನೂ ಅವರಿಂದ ಉತ್ತರ ಬಂದಿಲ್ಲ. ಮೂರು ವರ್ಷಗಳಿಂದ ಬರೆಯುತ್ತಲೇ ಇದ್ದೇವೆ. ಈಗ ಕರ್ನಾಟಕದಿಂದಲೇ ಯಾರನ್ನಾದರೂ ಒಬ್ಬರನ್ನು ಎಂಗೇಜ್ ಮಾಡಿ ವಾರಣಾಸಿಗೆ ಹೋಗಿ ಕಟ್ಟಿಸುವ ಕೆಲಸವನ್ನು ಮಾಡುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ಇವತ್ತು ದೊಡ್ಡ ದೊಡ್ಡ ದೇವಸ್ಥಾನಗಳು ಇರುತ್ತವೆ. ಮತ್ತೆ ಹಳ್ಳಿಗಳಲ್ಲಿ ಹರಿಜನರ ದೇವಸ್ಥಾನಗಳು ಇದ್ದು ಇವು ಬಣ್ಣ ನೋಡಿ, ಕುಂಕುಮ ನೋಡಿ, ಕುಪ್ಪಸ, ಸೀರೆ ನೋಡಿ ಬಹಳ ವರ್ಷಗಳಾಗಿವೆ. ಇಂತಹ ದೇವಸ್ಥಾನಗಳ ದುರಸ್ತಿಗೆ ಯಾವ ರೀತಿ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ? ಮತ್ತೆ ಸಿರಸಿಯ ಬನವಾಸಿಯಲ್ಲಿ ಮಧುಕೇಶ್ವರ ದೇವಸ್ಥಾನ ಇದೆ. ಇದಕ್ಕೆ ಬಹಳ ವರ್ಷದ ಚರಿತ್ರೆ ಇದ್ದು ಇದರ ದುರಸ್ತಿ ಬಗ್ಗೆ ಏನು ಕಾರ್ಯಕ್ರಮ ಹಾಕಿ ಕೊಳ್ಳುತ್ತೀರಿ. ಸಿದ್ದಾಪುರದ ಬಿಳಗಿಯಲ್ಲಿ ಹಳೇ ಕಾಲದ ರಾಜರ ಕಾಲದ ಬಸದಿಗಳು ಇವೆ. ಇವುಗಳ ಉದ್ಧಾರಕ್ಕೆ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ ?

ಶ್ರೀ ಕೆ. ಅಮರನಾಥ ಶೆಟ್ಟಿ.—ಅಧ್ಯಕ್ಷರೇ, ದೇವಸ್ಥಾನಗಳಲ್ಲಿ ಹರಿಜನರ ದೇವಸ್ಥಾನ, ಪಟ್ಟಣದ ದೇವಸ್ಥಾನ ಎನ್ನುವ ಬೇಧಭಾವ, ತಾರತಮ್ಯ ಇಲ್ಲ. ಆದರೆ ಯಾವ ದೇವಸ್ಥಾನಗಳ ಬಗ್ಗೆ ಮುಂದೆ ಬರುತ್ತಾರೋ ಅಂತಹ ದೇವಸ್ಥಾನಗಳಿಗೆ ಹಣವನ್ನು ಒದಗಿಸಿ ರಿಪೇರಿ ಕೆಲಸದ ಬಗ್ಗೆ ಕ್ರಮ ಕೈಗೊಳ್ಳುತ್ತೇವೆ. ಇನ್ನು ದೊಡ್ಡ ದೊಡ್ಡ ದೇವಸ್ಥಾನಗಳ ಬಗ್ಗೆ ಬಿಲ್‌ನಲ್ಲಿ ಹೇಳಿರುವಂತೆ ಹಣವನ್ನು ಶೇಖರಣೆ ಮಾಡಿ ಸಣ್ಣ ದೇವಸ್ಥಾನಗಳು ಏನಿವೆ ಅವಕ್ಕೆ ಒದಗಿಸುವ ಕಾರ್ಯಕ್ರಮ ಮಾಡುತ್ತೇವೆ. ಇನ್ನು ತಸ್ತೀಕ್ ಸಿಗುವ ದೇವಸ್ಥಾನಗಳಿಗೆ ವರ್ಷಕ್ಕೆ ೨ ಸಾವಿರ ರೂಪಾಯಿ ಹಣವನ್ನು ಒದಗಿಸುತ್ತೇವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಬನವಾಸಿ ದೇವಸ್ಥಾನದ ಬಗ್ಗೆ ನಮಗೆ ಹೇಳಬೇಕೆಂದರೆ ಈ ಬಗ್ಗೆ ಇರುವ ತೊಂದರೆ ಎಂದರೆ ಇದು ಆರ್ಕಿಯಾಲಾಜಿಕಲ್ ಡಿಪಾರ್ಟ್‌ಮೆಂಟ್ ಅಧೀನದಲ್ಲಿ ಇರುವುದರಿಂದ

ನಾವು ಹೆಚ್ಚಿನ ಕೆಲಸವನ್ನು ಅಲ್ಲಿ ಮಾಡುವುದಕ್ಕಾಗುವುದಿಲ್ಲ. ಒಂದು ಮೂರ್ತಿಯ ಯಾವುದೇ ಭಾಗ ತುಂಡಾದರೂ ಅದನ್ನು ಸರಿ ಮಾಡುವುದಕ್ಕೆ ಆ ಇಲಾಖೆಯವರು ನಮಗೆ ಬಿಡುವುದಿಲ್ಲ. ಮತ್ತೆ ತುಂಡಾದ ಮೂರ್ತಿಗೆ ಪೂಜೆ ಇಲ್ಲ ಎಂಬುದು ತಮಗೆಲ್ಲಾ ತಿಳಿದೇ ಇದೆ. ಈ ದೇವಸ್ಥಾನ ಆ ಇಲಾಖೆಯ ಅಧೀನದಲ್ಲಿ ಇರುವುದರಿಂದ ಹೆಚ್ಚಿನ ಕಾರ್ಯಕ್ರಮವನ್ನು ಮಾಡುವುದಕ್ಕೆ ಆಗಿಲ್ಲ. ಈ ಬಗ್ಗೆ ನಾವು ಆ ಇಲಾಖೆಯವರಿಗೆ ಬರೆದು ನಮಗೆ ಸಂಬಂಧಪಟ್ಟ ಹಾಗೆ ಏನು ಕಾರ್ಯಕ್ರಮ ಮಾಡುವುದಕ್ಕೆ ಸಾಧ್ಯವೋ ಅದನ್ನು ಮಾಡಿಸಿಕೊಡುತ್ತೇನೆಂದು ಹೇಳುತ್ತೇನೆ.

SMT. MUKTHARUNNISA.—Sir, the then Minister for Muzrai had given an assurance on the floor of the House that he will take action to construct a medium type of hostel on Chamundeshwari hill because the devotees come from far off places. There is no accommodation. They have to go to Mysore to spend the night and have to come back. There is no accommodation on the hill. There is no water facility also for the devotees. Whatever revenue that you are getting from the tourist department if you spend that amount it will be enough. The then Minister had promised in the presence of the Godess that he will construct small shops for the people. They are sitting in rain and selling. Colour is not given to that Mantap which is outside and it requires repairs also. I request the Hon'ble Minister to give a categorical reply.

೨–೦೦ ಪಿ. ಎಂ.

ಶ್ರೀ ಕೆ. ಅಮರನಾಥ ಶೆಟ್ಟಿ.—ಮಾನ್ಯ ಶಾಸಕಿಯವರು ಈಗಂತೂ ಅಲ್ಲ, ನಾನು ಟೂರಿಸಂ ಮಂತ್ರಿಯಾಗಿದ್ದಾಗಲೂ ಮೈಸೂರು ಚಾಮುಂಡೇಶ್ವರಿ ದೇವಸ್ಥಾನದ ಬಗ್ಗೆ ಸಾಕಷ್ಟು ಹೇಳಿದ್ದರು. ಸ್ಮಾಲ್ ಚೌಲ್ಟ್ರೀಸ್ ಮೀಡಿಯಂ ವರ್ಗದವರಿಗೆ ಬೇಕು, ಇಲ್ಲದಿದ್ದರೆ ಮೈಸೂರಿಗೆ ಅವರು ಬಂದು ಹೋಗುವುದಕ್ಕೆ ತೊಂದರೆಯಾಗುತ್ತದೆ ಎನ್ನುವ ವಿಷಯವನ್ನು ಅವರು ತಿಳಿಸಿದ್ದರು. ಈಗ ವಾಟರ್ ಸಪ್ಲೈ ವಿಷಯವನ್ನು ಹೇಳಿದ್ದಾರೆ. ಮತ್ತು ಅಭಿವೃದ್ಧಿ ಮಾಡಲಿಕ್ಕೆ ಅಲ್ಲಿಯೇ ಹಣ ಇದೆ, ಬೇರೆ ಹಣ ತೆಗೆದುಕೊಳ್ಳಬೇಕಾಗಿಲ್ಲ ಎಂದು ಹೇಳಿದ್ದಾರೆ. ಚಾಮುಂಡೇಶ್ವರಿ ಬೆಟ್ಟದಲ್ಲಿ ಈ ಒಂದು ಕೆಲಸ ಮಾಡಬೇಕೆಂದು ನಾವು ಇಷ್ಟರಲ್ಲೇ ಒಂದು ಮಾಸ್ಟರ್ ಪ್ಲಾನ್ ಅನ್ನು ಮಾಡಿದ್ದೇವೆ. ಆದರೆ ಒಂದು ಏನಾಗಿದೆ ಎಂದರೆ 'ನೆಹರೂ ಲೋಕ' ಎಂದು ಹೇಳಿಕೊಂಡು ಈ ಬೆಟ್ಟದ ಭಾಗವನ್ನು ಅದಕ್ಕೆ ಸೇರಿಸಿಕೊಂಡಿದ್ದರಿಂದ ನಮಗೆ ಮಾಡಲಿಕ್ಕೆ ಸ್ವಲ್ಪ ಕಷ್ಟವಾಗಿದೆ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ವಾಟರ್ ಸಪ್ಲೈ ವಿಷಯದಲ್ಲಿ ಆಡಳಿತ ಮಂಡಳಿಯವರಿಗೆ ಹೇಳಿ ಆದಷ್ಟು ಬೇಗ ಮಾಡಿಸಲಿಕ್ಕೆ ಪ್ರಯತ್ನ ಮಾಡುತ್ತೇನೆ. ಇನ್ನೊಂದು ಅಂಶವನ್ನು ಹೇಳಿದರು. ಏನೆಂದರೆ ಅಲ್ಲಿ ಹೂವು ಮಾರುವವರು ಇದ್ದಾರೆ. ಅವರಿಗೆ ಮಾರಾಟಕ್ಕೆ ಜಾಗ ಮಾಡಿಕೊಡಿ ಎಂದು ಹೇಳಿದ್ದಾರೆ. ಆದರೆ ಮಾಸ್ಟರ್‌ಪ್ಲಾನ್‌ನಲ್ಲಿ ಅವರಿಗೆ ಸಣ್ಣ ಸಣ್ಣ ಶೆಡ್‌ಗಳನ್ನು ಹಾಕಿಕೊಡುವಂಥ ಏರ್ಪಾಡನ್ನು ನಾವು ಮಾಡಿದ್ದೇವೆ. ಆದಷ್ಟು ಬೇಗ ಅಲ್ಲಿ ಇರುವಂಥ ಕಂಜಸ್ಟೆಡ್ ಜಾಗವನ್ನು ಬದಲಾಯಿಸಿ ಬೇರೆ ಕಡೆಗೆ ಮಾಡಿಕೊಡುವಂಥ ಕಾರ್ಯಕ್ರಮ ಕೈಗೊಳ್ಳಲು ಸಮಿತಿಯವರನ್ನು ಕರೆದು ಹೇಳುತ್ತೇನೆ ಎನ್ನುವ ಭರವಸೆಯನ್ನು ಕೊಡುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ನೂರಾರು ಬಡ ಅರ್ಚಕರು ಇದ್ದಾರೆ. ಅವರಿಗೆ ಪಟ್ಟಾ ಪೂರ್ತಿಯಾಗಿ ಕೊಟ್ಟಿಲ್ಲ. ಅದನ್ನು ಯಾವಾಗ ಕೊಡುತ್ತೀರಿ ? ಆಮೇಲೆ ತಾವು ಏನು ಮಾಡಿದ್ದೀರಿ ಎಂದರೆ ಈ ಚಾಮುಂಡೇಶ್ವರಿ, ಕುಕ್ಕೆ ಸುಬ್ರಹ್ಮಣ್ಯಸ್ವಾಮಿ ನಂಜುಂಡಸ್ವಾಮಿ ಎಲ್ಲರೂ ಕೂಡ ವೀರಶೈವ ದೇವರುಗಳಿಗೆ ಕೊಟ್ಟಿದ್ದೀರಿ ಅವರು ಐ. ಪಿ. ಎಸ್. ಕೇಡರ್ ಇದ್ದಹಾಗೆ ಈ ವೈಷ್ಣವ ದೇವರುಗಳು ಐ. ಎ. ಎಸ್. ಕೇಡರ್ ಇದ್ದ ಹಾಗೆ. ಅವರಿಗೆ ಕೋಪ ಬಂದರೆ ನಿಮಗೆ ಗೊತ್ತು.

ಬಹಳ ಪವರ್‌ಫುಲ್ ಇದ್ದಾರೆ. ಡಿಸ್ಟ್ರಿಬ್ಯೂಶನ್ ಮಾಡುವಾಗ ಸಮಾನವಾಗಿ ಮಾಡಿ ಎಂದು ನನ್ನ ಪ್ರಾರ್ಥನೆ.

ಶ್ರೀ ಕೆ. ಅಮರನಾಥ ಶೆಟ್ಟಿ.—ಪಟ್ಟಾ ವಿಷಯದಲ್ಲಿ ನಾನು ಆಗಲೇ ಉತ್ತರ ಕೊಟ್ಟಿದ್ದೆ. ೩,೧೫೨ ಮತ್ತು ೧,೫೬೩ ಇದು ೩೦ ಸಾವಿರದಲ್ಲಿ ಉಳಿದರತಕ್ಕಂಥಾದ್ದು. ಇದನ್ನು ನಾಲ್ಕು ತಿಂಗಳ ಒಳಗಡೆ ಮಾಡಿಕೊಡುತ್ತೇನೆ ಎಂದು ಹೇಳಿದ್ದೆ.

ಇನ್ನೊಂದು ಏನೆಂದರೆ, ದೇವಸ್ಥಾನಗಳಿಗೆ ಹಣ ಒದಗಿಸುವಾಗ, ಭೇದಭಾವ ಮಾಡಿಲ್ಲ. ಬಂದಿರತಕ್ಕ ಪ್ರಪೋಸಲ್ಸ್ ಮೇಲೆ ಹಣ ಒದಗಿಸಲಾಗಿದೆ. ವೈಷ್ಣವ ದೇವಸ್ಥಾನ, ವೀರಶೈವ ದೇವಸ್ಥಾನ ಎಂದು ನಾವು ಯಾವುದನ್ನೂ ಪರಿಗಣನೆ ಮಾಡಿಲ್ಲ. ಇನ್ನು ಮಾನ್ಯ ಶಿವನಂಜಪ್ಪನವರು ನಿನ್ನೆ ಒಂದು ಮಾತು ಹೇಳಿದರು. ಕರ್ನಾಟಕ ಹೊರಗಿನ ಛತ್ರಗಳಿಗೆ, ಕರ್ನಾಟಕದವರನ್ನೇ ನೇಮಿಸಬೇಕೆಂದು ಹೇಳಿದರು. ಈ ಛತ್ರಗಳಲ್ಲಿ ಕೆಲಸ ಮಾಡುವವರು ಸರ್ಕಾರಿ ನೌಕರರು ಅಲ್ಲ, ಇವರಿಗೆ ಕೊಡತಕ್ಕ ಸಂಬಳ ಕೂಡ ಬಹಳ ಕಡಿಮೆ ಇದೆ. ಆ ದೇವಸ್ಥಾನದ ಆದಾಯ ನೋಡಿಕೊಂಡು ಅವರಿಗೆ ಸಂಬಳ ಕೊಡಲಾಗುವುದು. ಹೊರಗಿನ ಛತ್ರಗಳಿಗೆ ಕರ್ನಾಟಕದವರು ಬರುವುದಿದ್ದರೆ, ಅವರಿಗೆ ಪ್ರಥಮ ಪ್ರಾಶಸ್ತ್ಯ ಕೊಡುತ್ತೇನೆ. ಇನ್ನು ದೇವಸ್ಥಾನದ ಹಣವನ್ನು ಸರ್ಕಾರದವರು ಉಪಯೋಗ ಮಾಡಿಲ್ಲ. ನಿನ್ನೆ ಈ ವಿಷಯ ಹೇಳಿದ್ದೇನೆ, ಇವತ್ತು ಹೇಳುತ್ತೇನೆ. ದೇವಸ್ಥಾನದ ಆದಾಯ ಏನಿದೆ, ಅದನ್ನು ಬ್ಯಾಂಕಿನಲ್ಲಿ ಇಟ್ಟಿದ್ದೇವೆ. ಸರ್ಕಾರಕ್ಕೆ ಯಾವುದನ್ನೂ ಕೊಟ್ಟಿಲ್ಲವೆಂದು ಇನ್ನೊಮ್ಮೆ ಈ ಸಂದರ್ಭದಲ್ಲಿ ಹೇಳುತ್ತೇನೆ. ದೇವಸ್ಥಾನದ ಬಗ್ಗೆ, ಧಾರ್ಮಿಕ ವಿಧಿಗಳ ಬಗ್ಗೆ ಸರ್ಕಾರ ಹಸ್ತಕ್ಷೇಪ ಮಾಡುತ್ತದೆ ಎಂದು ಹೇಳಿದ್ದಾರೆ. ಖಂಡಿತವಾಗಿಯೂ ಮಾಡುವುದಿಲ್ಲ. ಅವ್ಯವಹಾರಗಳು ಯಾವುದಾದರೂ ದೇವಸ್ಥಾನಗಳಲ್ಲಿ ಆಗಿದೆ ಎಂಬುದನ್ನು ತಿಳಿದುಕೊಂಡು ಸರ್ಕಾರ ಮಧ್ಯೆ ಪ್ರವೇಶಿಸುತ್ತದೆಂದು ಹೇಳುತ್ತೇನೆ. ಮಾನ್ಯ ಬಸವಲಿಂಗಪ್ಪನವರು ಎರಡು ವಿಷಯಗಳನ್ನು ಹೇಳಿದ್ದಾರೆ. ಮುಸ್ಲಿಮರ ಹೊರತು ಎಲ್ಲಾ ಹಿಂದೂ ಜನರಿಗೆ ಈ ಇಲಾಖೆ ಇದೆಯೆಂದೂ, ಇದು ಸಂವಿಧಾನಕ್ಕೆ ವಿರುದ್ಧವಾಗಿದೆ, ಸೆಕ್ಯುಲರ್‌ಗೆ ವಿರೋಧವಾಗಿದೆ, ಆದ್ದರಿಂದ ಸರ್ಕಾರದವರು ಇದನ್ನು ನಡೆಸಬಾರದು, ಸಮಾಜ ಬದಲಾವಣೆಯಾಗಬೇಕು, ಎಲ್ಲರಿಗೂ ಸರ್ವಧರ್ಮ ಆಗಬೇಕು ಎಂದು ಹೇಳಿದರು. ಅದಕ್ಕೆ ಉತ್ತರ ಹೇಳುವುದಾದರೆ, ಈ ಮುಸ್ಲಿಮರಿಗೋಸ್ಕರವೇ ಬೇರೆ ಕಾಯಿದೆ, ಮತ್ತು ವಕ್ಫ್ ಮಂಡಲಿ ಇರುವುದರಿಂದ, ಇಲ್ಲಿ ಇದು ಅನ್ವಯವಾಗುವುದಿಲ್ಲ......

ಶ್ರೀ ಕೆ. ಎಚ್. ಪಾಟೀಲ್.—ಹಿಂದೂ ದೇವಾಲಯದಲ್ಲಿ ಮುಸ್ಲಿಮರು ಪ್ರವೇಶ ಮಾಡಬಾರದು ಎಂದು ಇಲ್ಲ......

ಶ್ರೀ ಕೆ. ಅಮರನಾಥಶೆಟ್ಟಿ.—ದೇವಸ್ಥಾನದಲ್ಲಿ ಪೂಜೆ ಮಾಡುವುದಕ್ಕೆ ಯಾರೇ ಬರಲಿ, ಅಡೆತಡೆ ಮಾಡಿಲ್ಲ. ರಾಜ್ಯಾಂಗ ವಿರೋಧಿ ಕೆಲಸವನ್ನು ಸರ್ಕಾರ ಮಾಡಿಲ್ಲ, ಎಲ್ಲಾ ಜಾತಿ ಮತಗಳಿಗೂ ಅವಕಾಶ ಮಾಡಿಕೊಟ್ಟಿದ್ದೇವೆ. ದೇವಸ್ಥಾನಗಳ ಜೀರ್ಣೋದ್ಧಾರಕ್ಕೆ ಸಹಾಯ ಮಾಡುವಾಗ, ಸರ್ಕಾರ ಏನೇನೂ ತಾರತಮ್ಯ ಮಾಡಿಲ್ಲ, ಇದರಲ್ಲಿ ಭೇದಭಾವ ಮಾಡುವ ಪ್ರಶ್ನೆಯೇ ಇಲ್ಲ. ೧೯೫೦ರ ಸಾರ್ವಜನಿಕ ನ್ಯಾಸಗಳ ಅಧಿನಿಯಮ ಮುಂಬೈ ಕರ್ನಾಟಕಕ್ಕೆ ಅನ್ವಯಿಸುತ್ತದೆ. ಏಕರೂಪ ಕಾಯ್ದೆ ತರುವ ಉದ್ದೇಶ ಸರ್ಕಾರಕ್ಕೆ ಇದೆ.

ಶ್ರೀ ಎಸ್. ಹೆಚ್. ಕೌಜಲಗಿ.—ಉತ್ತರ ಕರ್ನಾಟಕದಲ್ಲಿರುವಂಥ ಶ್ರೀ ಕ್ಷೇತ್ರ ಸೊಗಲ ಸೋಮೇಶ್ವರ ದೇವಸ್ಥಾನ ಬಹಳ ಪುರಾತನ ದೇವಸ್ಥಾನ. ಇಲ್ಲಿಗೆ ಪ್ರತಿದಿವಸ ಸಾವಿರಾರು ಜನರು ಯಾತ್ರಿಕರು ಬರುತ್ತಿದ್ದಾರೆ. ಇಲ್ಲಿ ಇಳಿದುಕೊಳ್ಳುವುದಕ್ಕೆ ಯಾವುದೇ ವ್ಯವಸ್ಥೆ ಇಲ್ಲ. ಈ ಬಗ್ಗೆ ಮಾನ್ಯ ಮಂತ್ರಿಗಳು ಒಂದು ಮಾಸ್ಟರ್ ಪ್ಲಾನ್ ಮಾಡಿಸಬೇಕು. ಅಲ್ಲಿಗೆ ಬರತಕ್ಕಂಥ ಯಾತ್ರಿಕರು, ಅಲ್ಲಿ ತಂಗುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ,

ಶ್ರೀ ಕೆ. ಅಮರನಾಥಶೆಟ್ಟಿ.—ಈ ಸಲಹೆಯನ್ನು ಗಮನದಲ್ಲಿಟ್ಟುಕೊಂಡು ಪರಿಶೀಲನೆ ಮಾಡುತ್ತಾ ಇದ್ದೇವೆ.

ಶ್ರೀ ಬಿ. ಸ್ವಾಮಿರಾವ್.—ಅಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿ ದೇವರ ಹೆಸರಿನಲ್ಲಿರತಕ್ಕ ಜಮೀನನ್ನು, ಶ್ಯಾನುಭೋಗರು, ಪಟೇಲರು ಮತ್ತು ಈಗಿನ ವಿಲೇಜ್ ಅಕೌಂಟೆಂಟ್‌ಗಳು ಸೇರಿ

ರಾಮದೇವರು ಎಂದು ಇದ್ದರೆ, ಇದನ್ನು ರಾಮಭಟ್ಟರು ಎಂದೋ ಅಥವಾ ರಾಮಪ್ಪಗೌಡ ಎಂದೋ ಸೇರಿಸಿ, ಖಾತೆ ಬದಲಾವಣೆ ಮಾಡಿದ್ದಾರೆ. ಇದರ ಬಗ್ಗೆ ತನಿಖೆ ಮಾಡಿದ್ದೀರಾ. ಮತ್ತೆ ಧರ್ಮದರ್ಶಿ ಸಮಿತಿಯಲ್ಲಿ ಇರತಕ್ಕ ಸದಸ್ಯರು ಒಳ್ಳೆಯವರಾಗಿರಬೇಕು, ಪ್ರಾಮಾಣಿಕರಾಗಿ ಇರಬೇಕು. ಆದರೆ ಕ್ರಿಮಿನಲ್ ಮೊಕದ್ದಮೆಯಲ್ಲಿ ಸೇರಿದ್ದವರನ್ನೂ ಕೂಡ ಹಾಗೆಯೇ ಇಟ್ಟಿದ್ದೀರಿ. ಉದಾಹರಣೆಗೆ, ಹೊಸನಗರ ತಾಲ್ಲೂಕಿನಲ್ಲಿರುವ ಕರಿಕಾರಿ ಸಿದ್ಧಿವಿನಾಯಕ ಟೆಂಪಲ್‌ಗೆ ನೇಮಿಸಿರುವ ಧರ್ಮದರ್ಶಿಯ ಮೇಲೆ ಕ್ರಿಮಿನಲ್ ಮೊಕದ್ದಮೆ ಇದ್ದು ಅವರು ಅಪರಾಧಿ ಎಂದು ಗೊತ್ತಾಗಿದ್ದರೂ ಕೂಡಾ ಅವರನ್ನೇ ಮುಂದುವರಿಸುತ್ತಿದ್ದಾರಲ್ಲ ಇದು ನಿಜವೇ ?

ಶ್ರೀ ಕೆ. ಅಮರನಾಥ ಶೆಟ್ಟಿ.—ದೇವರ ಹೆಸರಿನಲ್ಲಿದ್ದ ದೇವಸ್ಥಾನದ ಭೂಮಿಗಳನ್ನು ಬೇರೆಯವರ ಹೆಸರಿಗೆ ಮಾಡಿಕೊಂಡಿದ್ದರೆ, ರಾಮದೇವರ ಹೆಸರಿನಲ್ಲಿದ್ದ ಭೂಮಿಯನ್ನು ರಾಮಭಟ್ಟರು, ಧೂಮ ಭಟ್ಟರು ಎಂಬ ಹೆಸರಿನಲ್ಲಿ ಮಾಡಿದ್ದರೆ. ಅಂತಹದರ ಬಗ್ಗೆ ಮಾನ್ಯ ಸ್ವಾಮಿರಾವ್ ಅವರಿಗೆ ಸರಿಯಾದ ಮಾಹಿತಿ ಇದ್ದರೆ ಅದನ್ನು ನನಗೆ ಕೊಟ್ಟರೆ ಆ ವಿಷಯದಲ್ಲಿ ಕ್ರಮ ತೆಗೆದುಕೊಳ್ಳುವುದಕ್ಕೆ ಬರುತ್ತದೆ. ಸಿದ್ಧಿವಿನಾಯಕ ದೇವಸ್ಥಾನಕ್ಕೆ ಟ್ರಸ್ಟಿಯಾಗಿ ನೇಮಕ ಆದವರ ಮೇಲೆ ಕ್ರಿಮಿನಲ್ ಮೊಕದ್ದಮೆ ಇದೆ ಎಂದು ಹೇಳಿದರು, ಅದು ನನ್ನ ಗಮನಕ್ಕೆ ಇನ್ನೂ ಬಂದಿಲ್ಲ. ಕೆಲವು ಕಡೆಗಳಲ್ಲಿ ಟ್ರಸ್ಟಿಯನ್ನು ಅಲ್ಲಿಯ ಡೆಪ್ಯುಟಿ ಕಮಿಷನರ್‌ರವರು ಮಾಡುತ್ತಾರೆ. ಇನ್ನು ಕೆಲವು ಕಡೆಗಳಲ್ಲಿ ಅಸಿಸ್ಟೆಂಟ್ ಕಮಿಷನರ್‌ರವರು ಮಾಡುತ್ತಾರೆ. ಈ ಒಂದು ದೃಷ್ಟಿಯಿಂದ ಅದನ್ನು ನನಗೆ ಕಳುಹಿಸಿದಲ್ಲಿ ಕೂಡಲೇ ಅದನ್ನು ಪರಿಶೀಲಿಸುತ್ತೇನೆಂದು ಹೇಳುತ್ತೇನೆ.

ಶ್ರೀ ಬಿ. ಸ್ವಾಮಿರಾವ್.—ನಾಲ್ಕಾರು ಪತ್ರಗಳನ್ನು ನಾನೇ ಬರೆದಿದ್ದೇನೆ.

ಉಪಾಧ್ಯಕ್ಷರು.—ಬೇಡಿಕೆಗಳ ಮೇಲಿನ ಚರ್ಚೆ ಮುಕ್ತಾಯವಾಯಿತು. ಈಗ ಪ್ರಸ್ತಾವನೆಯನ್ನು ಮತಕ್ಕೆ ಹಾಕುತ್ತೇನೆ.

"ಪ್ರಸ್ತಾಪ ಏನೆಂದರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೬೪ಕ್ಕೆ ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆ ಸಂಖ್ಯೆ ೫೪ ಮತ್ತು ಬೇಡಿಕೆ ಸಂಖ್ಯೆ ೨ ಇವುಗಳಿಗೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಮಂಜೂರಾದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿ ನಮೂದು ಮಾಡಿದ ಮೊತ್ತವನ್ನು ಈ ಸಭೆಯು ಮಂಜೂರು ಮಾಡುವುದು."

ಪ್ರಸ್ತಾವನೆ ಅಂಗೀಕಾರವಾಯಿತು ಮತ್ತು ಬೇಡಿಕೆಗಳಿಗೆ ಮಂಜೂರಾತಿ ದೊರಕಿತು.

(ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಬೇಡಿಕೆಗಳ ವಿವರಗಳನ್ನು ಈ ಕೆಳಗೆ ನಮೂದಿಸಲಾಗಿದೆ.)

ಬೇಡಿಕೆ ಸಂಖ್ಯೆ ೨– ಖುಷ್ಕಿ ಭೂಮಿ ಅಭಿವೃದ್ಧಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೬೪ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಖುಷ್ಕಿ ಭೂಮಿ ಅಭಿವೃದ್ಧಿ ಸಂದಾಯ ಮಾಡುವಲ್ಲಿ ೬,೦೩ ೯೫,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಬೇಡಿಕೆ ಸಂಖ್ಯೆ ೫೪– ಮತೀಯ ಮತ್ತು ಧರ್ಮಾದಾಯ ಸಂಸ್ಥೆಗಳು ಇತ್ಯಾದಿ.

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೬೪ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮತೀಯ ಮತ್ತು ಧರ್ಮಾದಾಯ ಸಂಸ್ಥೆಗಳು ಇತ್ಯಾದಿ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೦,೮೭,೭೨,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.